. ನಾಗಲೋಟಿಮಠ: ವ್ಯಕ್ತಿ-ವಿಚಾರ-ಸಾಧನೆ

ಮನೆಮಂದಿಗೆಲ್ಲ ಮುದ ನೀಡುವ ಮಾಸಿಕ

ಕಸ್ತೂರಿ

ಎಪ್ರಿಲ್ ೧೯೯೬






ಕಾಶದಲ್ಲಿ
ದ್ಬಾಂಧವರು
ಪುಸ್ತಕ ವಿಭಾಗ

ಪುನರ್ಜನ್ಮದ ಸತ್ಯಕಥೆ
ಸರ್ಪ ಸಂಗಿನಿ

ಬೆಲೆ: ರೂ. ೬-೦೦



ನಯವಾದ ಹೊಳಪಿನ
ಕೇಶರಾಶಿಗೆ
ಆರೋಮ ಶಾಂಪು
ಉಪಯೋಗಿಸಿ
ಸೊಗಸಾದ ಕೂದಲು ನಿಮ್ಮ ಸೌಂದರ್ಯವನ್ನು ಹೆಚ್ಚಿಸುತ್ತದೆ. ನಿಮ್ಮ ಮುಖ ಸೌಂದರ್ಯಕ್ಕೆ ಸೊಗಸಾದ ನೋಟವನ್ನು ತರುವುದು. ಆರೋಮ ನಿಮ್ಮ ತಲೆಕೂದಲನ್ನು ಮೋಹಕ ಮತ್ತು ಮನಸೆಳೆಯುವಂತೆ ಮಾಡುವುದು. ಆರೋಮವನ್ನು ಉಪಯೋಗಿಸಿ ನಿಮ್ಮ ಕೇಶರಾಶಿಯನ್ನು ನಿಮ್ಮಷ್ಟೆ ಸುಂದರವಾಗಿಸುತ್ತದೆ.
ಆರೋಮ ಕ್ರೀಮ್ - ಆಧಾರಿತ ಶಾಂಪೂ ಮೂರು ಬಗೆಯಲ್ಲಿ ದೊರಕುವುದು. ಹೆನ್ನಾ, ಪ್ರೋಟೀನ್ ಮತ್ತು ಆಂಟಿಡ್ಯಾನ್‌ಡ್ರಾಫ್.
ಸ್ಯಾಚೇಟ್‌ಗಳಲ್ಲೂ ಸಹ ದೊರೆಯುತ್ತದೆ.
Aroma
Aroma
Aroma
Aroma
PROTEIN
ಕ್ರೀಮ್
ರೂಪದಲ್ಲಿಯೂ
ಶಾಂಪು
Manufactured by:
AROMA COSMETICS PVT. LTD. HYDERABAD
C & F Agents, LIVEM PHARMA, Hari Complex, 27 A Main,
39th Cross, 9th Block, Jaya Nagar,
BANGALORE - 560 069. Phone : 6656264.
Aroma, hair with healthy care.
ANEJA ADVTG./ACPL 2/96

ಕಸ್ತೂರಿ

ಕನ್ನಡ ಡೈಜೆಸ್ಟ್

ಲೋಕ ಶಿಕ್ಷಣ ಟ್ರಸ್ಟಿನ ಹೆಮ್ಮೆಯ ಕಾಣಿಕೆ

ವ್ಯವಸ್ಥಾಪಕ ಸಂಪಾದಕ:
ಕೆ. ಶಾಮರಾವ್

ಸಂಪಾದಕ:
ಎಸ್.ವಿ. ಜೋಶಿ

ಸಹಸಂಪಾದಕ:
ವೆಂಕಟನಾರಾಯಣ

ನಿರ್ವಹಣೆ:
ಗೋಪಾಲ ವಾಜಪೇಯಿ
ಶ್ರೀಕಾಂತ ಮಳಗಿ

ಕಲೆ:
ಪಿ.ಆರ್. ಪಾಟೀಲ
ಎಂ.ಎಸ್. ಶಶಿಧರ

ಮುಖಪುಟ:
ಸರ್ಪಸಂಗಿನಿ
ಚಿತ್ರಕೃಪೆ:
'ಸ್ಪುಟ್ನಿಕ್'

ಕಸ್ತೂರಿ ಕಾರ್ಯಾಲಯ,
ಕೊಪ್ಪೀಕರ ರಸ್ತೆ,
ಹುಬ್ಬಳ್ಳಿ-೫೮೦ ೦೨೦.

ನಿರುದ್ಯೋಗ ಸಮಸ್ಯೆ ಬೃಹದಾಕಾರವಾಗಿ ಬೆಳೆದ ಇಂದಿನ ಸಂದರ್ಭದಲ್ಲಿ ನಮ್ಮ ಮುಂದೆ ಇರುವ ಪ್ರಶ್ನೆಗಳು ಮುಖ್ಯವಾಗಿ ಎರಡು: ಈ ಸಮಸ್ಯೆ ಈ ಪ್ರಮಾಣದಲ್ಲಿ ಬೆಳೆಯುವುದು ಅವಶ್ಯವಿತ್ತೆ? ಎನ್ನುವುದು ಒಂದಾದರೆ, ನಿರುದ್ಯೋಗ ಈ ಪ್ರಮಾಣದಲ್ಲಿ ಬೆಳೆಯಲು ಇಂದಿನ ಶೈಕ್ಷಣಿಕ ವ್ಯವಸ್ಥೆ ಕಾರಣವಲ್ಲವೆ? ಎನ್ನುವುದು ಮತ್ತೊಂದು.


ವಾಸ್ತವವಾಗಿ ಇಂದಿನ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಪಠ್ಯಕ್ರಮದ ಬಹುದೊಡ್ಡ ಪಾಲು ವಾಸ್ತವ ಪ್ರಪಂಚದಿಂದ ಬಲುದೂರ ಎನ್ನುವುದು ಶಿಕ್ಷಣ ತಜ್ಞರು ಕಂಡುಕೊಂಡ ತಥ್ಯ. ಪಠ್ಯಕ್ರಮದಲ್ಲಿ ತಾತ್ವಿಕ ವಿಷಯಗಳು ಅನವಶ್ಯವೆಂದಲ್ಲ, ಆದರೆ ಇಂದಿನ ಸನ್ನಿವೇಶದಲ್ಲಿ ವ್ಯಾವಹಾರಿಕ ಪ್ರಪಂಚಕ್ಕೆ ಹತ್ತಿರವಾದ ವಿಷಯಗಳನ್ನೇ ಪಠ್ಯಕ್ರಮ ಹೆಚ್ಚು ಹೆಚ್ಚಾಗಿ ಹೊಂದಿರಬಾರದೆ? ಎನ್ನುವುದು ಇಲ್ಲಿರುವ ಮುಖ್ಯ ಪ್ರಶ್ನೆ.

ಎಸ್‌ಎಸ್‌ಎಲ್‌ಸಿ ಆದ ನಂತರ ವೃತ್ತಿಪರ ತರಗತಿಗಳನ್ನು ಸೇರಲು ಅವಕಾಶವಿದೆಯೇನೋ ನಿಜ. ಆದರೆ ಹನ್ನೆರಡನೆಯ ವಯಸ್ಸಿಗೇ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಬಾಲಕರಿಗಾಗಿ ವಿದ್ಯುತ್ತಿನ ಉಪಕರಣಗಳ ರಿಪೇರಿ, ರೇಡಿಯೋ-ಟೆಲಿವಿಜನ್ ರಿಪೇರಿ, ಸಾಮಾನ್ಯಮಟ್ಟದ ಕಂಪ್ಯೂಟರುಗಳ ನಿರ್ವಹಣೆ, ರೆಫ್ರಿಜಿರೇಟರ್, ಏರ್‌ಕಂಡೀಷನರುಗಳ ನಿರ್ವಹಣೆ, ಮುದ್ರಣಯಂತ್ರಗಳನ್ನು ನಡೆಸುವುದು, ಬೇಕರಿ ಪದಾರ್ಥಗಳ ತಯಾರಿಕೆ ಮುಂತಾದ ಒಂದೇ ವರ್ಷಕ್ಕೆ ಸೀಮಿತವಾದ ತರಗತಿಗಳನ್ನು ಕನ್ನಡ ಮಾಧ್ಯಮದ ಮೂಲಕ ಪ್ರಾರಂಭಿಸಿದರೆ ಅವರು ಅದನ್ನು ಅರಗಿಸಿಕೊಳ್ಳಲಿಕ್ಕಿಲ್ಲವೆ?

ಆಗ ಬಡ ವಿದ್ಯಾರ್ಥಿಗಳು ಇದನ್ನೇ ಉಪವೃತ್ತಿಯಾಗಿಸಿಕೊಂಡು ಮಾಧ್ಯಮಿಕ ಶಿಕ್ಷಣವನ್ನು ಮುಂದುವರೆಸಿಯಾರು. ಇಲ್ಲವೆ ಜೀವನಯಾಪನೆಗಾಗಿ ಆ ವೃತ್ತಿಯನ್ನೇ ಅವಲಂಬಿಸಿಯಾರು. ಹಣದ ಅನುಕೂಲವಿರುವ, ಕಲಿಯುವ ಉತ್ಸಾಹವಿರುವ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿಯ ನಂತರ ಪದವಿ ವರ್ಗಕ್ಕೋ ಡಿಪ್ಲೊಮಾ ವರ್ಗಕ್ಕೋ ಹೋದಾರು.

ಆದರೆ ಇಂದಿನ ದಿನಗಳಲ್ಲಿ ಎಲ್ಲರಿಗೂ ಸರಕಾರಿ ನೌಕರಿಯ ಮೇಲೆಯೇ ಕಣ್ಣು. ವಿಜ್ಞಾನದ ಪದವೀಧರರೇ ಆಗಲಿ, ಸಮಾಜಶಾಸ್ತ್ರ, ಭಾಷಾಶಾಸ್ತ್ರಗಳಂತಹ ಜಟಿಲ ವಿಷಯಗಳಲ್ಲಿ ಪದವಿ, ಸ್ನಾತಕೋತ್ತರ ವಿದ್ಯಾರ್ಹತೆಯನ್ನು ಪಡೆದವರೇ ಆಗಲಿ, ಬ್ಯಾಂಕು, ಎಲ್‌ಐಸಿಯಂತಹ ಸಂಸ್ಥೆಗಳಲ್ಲಿ ಕರಣಿಕರಾಗಿ ದುಡಿಯಲು ನಾ ಮುಂದು ತಾ ಮುಂದು ಎಂದು ಮುಗಿಬೀಳುವುದು ಇಂದು ಸರ್ವೇಸಾಮಾನ್ಯ. ಈ ನೌಕರಿಗಳು ಆರ್ಥಿಕವಾಗಿ ಆಕರ್ಷಕವಾಗಿರಬಹುದಾದರೂ ನಿಜಕ್ಕೂ ತೃಪ್ತಿಯನ್ನು ತಂದುಕೊಡುತ್ತವೆಯೇ? ಎನ್ನುವುದು ಎಲ್ಲರೂ ಯೋಚಿಸಬೇಕಾದ ವಿಷಯ. ಕೇವಲ ಹಣವೊಂದನ್ನೇ ಮಾನದಂಡವನ್ನಾಗಿ ಮಾಡಿಕೊಳ್ಳುವ ಮನೋಭಾವವನ್ನು ಜನಸಾಮಾನ್ಯರು ತೊರೆಯುವವರೆಗೆ, ವ್ಯಾವಹಾರಿಕ ರಂಗಕ್ಕೇ ಹೆಚ್ಚು ಒತ್ತುಕೊಡುವ ಶಿಕ್ಷಣವ್ಯವಸ್ಥೆ ರೂಪುಗೊಳ್ಳುವವರೆಗೆ ನಿರುದ್ಯೋಗ ಸಮಸ್ಯೆಯೆನ್ನುವುದು ಇರುವಂಥಾದ್ದೆ.

• *ವ್ಯವಸ್ಥಾಪಕ ಸಂಪಾದಕ*



ಸಹಚಿಂತನ

ಔದಾರ್ಯದಲ್ಲಿ ದೋಷ

'ಕಸ್ತೂರಿ'ಯ ಮಾರ್ಚ್ ಸಂಚಿಕೆಯಲ್ಲಿ ಸುಪ್ರಸಿದ್ಧ ಗಾಯಕ ಪಿ. ಕಾಳಿಂಗರಾಯರ ಔದಾರ್ಯವನ್ನು ತೋರಿಸುವ ಒಂದು ಘಟನೆಯನ್ನು ಶಾಂತಾ ಎಸ್. ನಾಯಕ್ ಅವರು ಬರೆದಿದ್ದಾರೆ. ಇದರಲ್ಲಿ ಕಾಳಿಂಗರಾಯರು ತಮ್ಮನ್ನು ಮಂಗಳೂರಿನ ಪಾಂಡೇಶ್ವರದವರು ಎಂದು ಪರಿಚಯಿಸಿಕೊಂಡ ಪ್ರಸ್ತಾಪ ಬರುತ್ತದೆಯಾದರೂ ಅದನ್ನು ನಂಬುವುದು ಕಷ್ಟ. ಮಂಗಳೂರಿನಲ್ಲಿ ಒಂದು ಪಾಂಡೇಶ್ವರವಿರುವುದಾದರೂ ಅದು ಕಾಳಿಂಗರಾಯರ ಊರಲ್ಲ. ಕಾಳಿಂಗರಾಯ ಹುಟ್ಟೂರು ಉಡುಪಿ ತಾಲ್ಲೂಕಿನ ಉತ್ತರಭಾಗದಲ್ಲಿರುವ ಪಾಂಡೇಶ್ವರ. ಇದು ಒಂದು ಗ್ರಾಮ. ಇವರ ತಂದೆ ಪುಟ್ಟಯ್ಯನವರು ತಮ್ಮ ಕಾಲದ ಅತ್ಯಂತ ಪ್ರಸಿದ್ಧ ಯಕ್ಷಗಾನ ಕಲಾವಿದರು. ಹಳೆಯ ತಲೆಮಾರಿನ ಜನ ಇಂದಿಗೂ ಪುಟ್ಟಯ್ಯನವರನ್ನು ನೆನಪಿಸಿಕೊಳ್ಳುತ್ತಾರೆ. ಕಾಳಿಂಗರಾಯರ ಮಡದಿ ಪಕ್ಕದ ಊರಾದ ಇತಿಹಾಸ ಪ್ರಸಿದ್ಧ ಬಾರಕೂರಿನವರು.

ನಾನು ಚಿಕ್ಕವನಾಗಿದ್ದಾಗ ಕಾಳಿಂಗರಾಯರು ಊರಿಗೂ ನಮ್ಮ ಮನೆಗೂ ಬಂದಿದ್ದರು. ಆಗ ನನ್ನ ಅಜ್ಜ "ಕಾಳಿಂಗಾ, ಒಂದು ಒಳ್ಳೆಯ ಹಾಡನ್ನು ಹಾಡೋ" ಅಂದಾಗ ಅವರು ಯಾವ ಹಮ್ಮು-ಬಿಮ್ಮು ಇಲ್ಲದೆ ಹಾಡನ್ನು ಹಾಡಿ ಎಳೆಗಾಯಿ ನೀರನ್ನು ಕುಡಿದು ನನ್ನ ಅಜ್ಜನಿಗೆ ವಂದಿಸಿ ಹೋದುದು ನನಗೆ ಇನ್ನೂ ನೆನಪಿದೆ.

ಬಿ.ಎನ್. ಜೋಶಿ, ಮಂಗಳೂರು

ಗಮನಕ್ಕೆ ಬಾರದ ಸಂಗತಿಗಳು

ಫೆಬ್ರವರಿ ಸಂಚಿಕೆಯಲ್ಲಿ 'ಹೀಗಿದ್ದರು ರಾಜಗುರು' ಚೆನ್ನಾಗಿ ಮೂಡಿಬಂದಿದೆ. ಆದರೂ ಆ ಲೇಖನದಲ್ಲಿ ಇನ್ನೂ ಒಂದೆರಡು ಸಂಗತಿಗಳು ಸೇರ್ಪಡೆಗೊಂಡಿದ್ದರೆ ಚೆನ್ನಾಗಿರುತ್ತಿತ್ತು.

ಮೊದಲನೆಯದಾಗಿ ರಾಜಗುರುವಿಗೂ ಕರ್ನಾಟಕಕ್ಕೂ ಇರುವ ಘನಿಷ್ಠ ಸಂಬಂಧ. ಎತ್ತಣ ಮಾಮರ, ಎತ್ತಣ ಕೋಗಿಲೆ ಎನ್ನುವಂತೆ ಉತ್ತರದ ರಾಜಗುರು ದಕ್ಷಿಣದ ಕರ್ನಾಟಕದ ಚಿಕ್ಕ ಪಟ್ಟಣವಾದ ಬಾಗಲಕೋಟೆಯಲ್ಲಿ ಡಾ. ನಾ.ಸು. ಹರ್ಡೀಕರರು ಸ್ಥಾಪಿಸಿದ್ದ ಸೇವಾದಳದಲ್ಲಿ ಬಿನ್ ಇಯತ್ತೆಯ ಹುಡುಗರಿಗೆ ಡ್ರಿಲ್ ಕಲಿಸುತ್ತಿದ್ದರು. ರಾಜಗುರು ಬಾಗಲಕೋಟೆಯಿಂದಲೇ ಪಂಜಾಬಿಗೆ ಹೋಗಿ, ಭಗತ್‌ಸಿಂಗ್, ಸುಖದೇವ ಜತೆ ಸೇರಿಕೊಂಡು ಪಂಜಾಬಿನ ಗವರ್ನರ್‌ನನ್ನು ಕೊಲೆಮಾಡಿದರು. ಈ ಅಪರಾಧಕ್ಕಾಗಿಯೇ ಆ ಮೂವರಿಗೂ ಗಲ್ಲು ಶಿಕ್ಷೆಯಾಗಿತ್ತು.

ಇಂತಹ ರಾಜಗುರುವಿನ ಕೈಯಲ್ಲಿ ಕಲಿತಿದ್ದ ಡಾ. ರಾ.ಯ. ಧಾರವಾಡಕರರು ರಾಜಗುರುವಿನ ವ್ಯಕ್ತಿತ್ವವನ್ನು ಹೀಗೆ ವರ್ಣಿಸಿದ್ದಾರೆ: "ಉತ್ತರ ಹಿಂದುಸ್ತಾನದ ರಾಜಗುರು ತುಂಬಾ ಉಗ್ರಸ್ವಭಾವದವರು. ಅವರ ಮುಖ ನೋಡಿದರೇ ಹೆದರಿಕೆ ಬರುತ್ತಿತ್ತು. ಅವರ ಮುಖದ ಮೇಲೆ ಜೋಳ ಒಗೆದರೆ ಅರಳಾಗಿ ಹೊರಬರುವಂತಿತ್ತು.... ಡಾ. ಹರ್ಡೀಕರರ ಹೈರಾರ್ಕಿಯಲ್ಲಿ ಈ ಮನುಷ್ಯನಿಗೆ ಉನ್ನತವಾದ ಸ್ಥಾನವಿತ್ತು. ಯಾರೇ ದೊಡ್ಡವರು ಸೇವಾದಳವನ್ನು ಸಂದರ್ಶಿಸಿದರೂ ಮೊದಲು ಇವರ ಭೇಟಿಯನ್ನು ಮಾಡಿಸುತ್ತಿದ್ದರು. ಈ ಮನುಷ್ಯನೂ ಬಂದವರ ಬಾಲಾಗಸಿಯಾಗಿ ಅಡ್ಡಾಡದೆ ತಾನಾಯಿತು, ತನ್ನ ಪಾಡಾಯಿತು ಎಂಬ ರೀತಿಯಲ್ಲಿ ಇರುತ್ತಿದ್ದ..."

ಇಂತಹ ರಾಜಗುರು ವಾಸಿಸುತ್ತಿದ್ದ ಸೇವಾದಳ ಕಟ್ಟಡ ಬಾಗಲಕೋಟೆಯಲ್ಲಿ ತನ್ನ ಹಳೆಯ ರೋಮಾಂಚಕ ಕಥೆಯನ್ನು ಹೋಗಿಬರುವವರಿಗೆಲ್ಲ ಹೇಳುತ್ತ ನಿಂತಿದೆಯಾದರೂ ಅದರ ಸ್ಥಿತಿ ಮಾತ್ರ ಜರಾಜೀರ್ಣ ಬಟ್ಟೆಯಂತಿದೆ.

ಚಿದಂಬರ ಇನಾಮದಾರ, ಬಾಗಲಕೋಟೆ.

ಲಘು ಶಸ್ತ್ರಚಿಕಿತ್ಸೆ

ಮಾರ್ಚ್ ಸಂಚಿಕೆಯಲ್ಲಿ ಡಾ. ಜಿ.ಜಿ. ದೇವಧರ್ ಬರೆದ 'ಲಘು ಶಸ್ತ್ರಚಿಕಿತ್ಸೆಯ ಆದ್ಯ ಪ್ರವರ್ತಕ' ಎಂಬ ಬರಹ ಮಾಹಿತಿಪೂರ್ಣವಾಗಿತ್ತು. ಇಂದಿನ ಪರಿಸ್ಥಿತಿಯಲ್ಲಿ ಡಾ. ಸೆಮ್ ಕಂಡುಹಿಡಿದಂತಹ ಶಸ್ತ್ರಚಿಕಿತ್ಸೆ ಸ್ತ್ರೀಯರಿಗೊಂದು ವರದಾನವಾಗಬಹುದು. ಆದರೆ ನಕಲಿ ವೈದ್ಯರೂ ಈ ವಿಧಾನವನ್ನು ಅನುಸರಿಸಲು ಮುಂದಾದರೆ ಮಾತ್ರ ತುಂಬಾ ಕಷ್ಟ.

ಶ್ರೀಮತಿ ಹೊರಟಮನೆ, ಹಳುವಳ್ಳಿ.

ಆಹಾರವೇ ಔಷಧವಾದಾಗ

'ಯಾವ ರೋಗಕ್ಕೆ ಯಾವ ಆಹಾರ?'(ಕಸ್ತೂರಿ ಮಾರ್ಚ್, ೯೬) ತುಂಬಾ ಉಪಯುಕ್ತವಾಗಿದೆ. ಇಂತಹ ಲೇಖನಗಳು ನಿಮ್ಮ ಮಾಸಿಕದಲ್ಲಿ ಪ್ರತಿ ತಿಂಗಳೂ ಬರಲಿ ಎಂದು ಆಶಿಸುವ ಬಹುಮಂದಿಯಲ್ಲಿ ನಾನೂ ಒಬ್ಬ.

ಸಿ.ಇ. ಬಸವಣ್ಣಪ್ಪ, ಹೊನ್ನಾಳಿ.

ಅವ್ವ

ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾದ 'ಅವ್ವ' ಚೆನ್ನಾಗಿ ಮೂಡಿಬಂದಿದೆ. ತಾಯಿ-ತಂದೆಯರ ಮಧುರತೆ, ಹೆಂಡತಿಯ ಹಿಂದಿನ ಪಾತ್ರ, ತಂದೆಯ ಕೊರಗು, ಮಗನ ತಪ್ಪು ಎಲ್ಲವನ್ನೂ ನೈಜವಾಗಿ ಚಿತ್ರಿಸಲಾಗಿದೆ. ಕಥೆಯ ಅಂತ್ಯವಂತೂ ಪ್ರತಿಯೊಬ್ಬ ಓದುಗನನ್ನು ಮಂತ್ರಮುಗ್ಧನನ್ನಾಗಿ ಮಾಡುತ್ತದೆ.

ಶಂಕರ ಮುತ್ತಣ್ಣವರ, ಯಡಹಳ್ಳಿ.

ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾದ ಬಾಳಾಸಾಹೇಬ ಲೋಕಾಪುರರ "ಅವ್ವ" ಕಥೆಯನ್ನು ಓದುವಾಗ, ೧೯೭೦ರಲ್ಲಿ ತೀರಿಕೊಂಡ ನನ್ನವ್ವನ ನೆನಪು ಮರುಕಳಿಸಿ ಕಣ್ಣಂಚಿನಲ್ಲಿ ನೀರು ನುಸುಳಿತು. ನನ್ನವ್ವ ಕೂಡ ಹೀಗೆ ತಾನು ಬಾಳಿ ಬದುಕಿದ ಊರನ್ನು ಬಿಟ್ಟು ನನ್ನ ಹಿರಿಯಣ್ಣ ನೌಕರಿ ಮಾಡುತ್ತಿದ್ದ ಊರಿನಲ್ಲಿ ಸತ್ತಳು. ಕಥೆಯಲ್ಲಿನ ಅವ್ವನಿಗೂ ನನ್ನವ್ವನಿಗೂ ಏನೇನೂ ವ್ಯತ್ಯಾಸವೇ ಇಲ್ಲವೆನಿಸಿತು.

ಅನ್ನದಾನಿ ಆಲೂರ, ಬೆಳಗಾವಿ.

ಇನ್ನೂ ಗೊತ್ತಾಗಿಲ್ಲವೆ?

ಫೆಬ್ರವರಿ ಸಂಚಿಕೆಯ 'ನೆನಪು ನೆರಳಿ'ನಲ್ಲಿ ಪ್ರಕಟವಾದ ಎಸ್.ಎ. ರಾಮಚಂದ್ರರ ಉಂಗುರದ ಪ್ರಕರಣವು ನಡೆದು ಇಪ್ಪತ್ತು ವರ್ಷಗಳಾದರೂ ಅವರ ಮನೆಯವರಿಗೆ ಗೊತ್ತಿಲ್ಲದ್ದು ನಿಜಕ್ಕೂ ಆಶ್ಚರ್ಯಕರ. ಏಕೆಂದರೆ ಈಗಾಗಲೆ ಅವರು ಹಲವಾರು ಪತ್ರಿಕೆಗಳಲ್ಲಿ ಈ ಬಗ್ಗೆ ಬರೆದಿದ್ದಾರೆ. ಅವರ ಮನೆಯವರಿಗೆ ಈ ಬಗ್ಗೆ ಈಗಲಾದರೂ ತಿಳಿದಿದೆ ಎಂದು ಆಶಿಸೋಣವೆ?

ಎಸ್.ಎಮ್. ಜೋಶಿ, ಅಥರ್ಗಾ.

ಧರ್ಮರಾಯನ ಸಂಸಾರ

ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾದ, ಶ್ರೀ. ಹಾ. ಅವರಿಂದ ಸಂಗ್ರಹಿಸಲ್ಪಟ್ಟ ಡಾ. ಶಿವರಾಮ ಕಾರಂತರ 'ಧರ್ಮರಾಯನ ಸಂಸಾರ' ಬಹು ಸುಂದರವಾಗಿ ಮೂಡಿಬಂದಿದೆ. ಜೀವನದಲ್ಲಿ ಬಡತನ-ಸಿರಿತನದಿಂದ ಉಂಟಾಗುವ ಪರಿಣಾಮದ ಜೊತೆಗೆ, ಹಿಂದಿನ ತಲೆಮಾರಿನವರ ನಡೆವಳಿಕೆಯ ಪ್ರಭಾವವು ಮುಂದಿನ ಜನಾಂಗದ ಮೇಲೆ ಯಾವ ರೀತಿಯಿಂದ ಆಗುವುದೆಂಬುದನ್ನು ಸುಂದರವಾಗಿ ಚಿತ್ರಿಸಲಾಗಿದೆ.

ರೂಪಾ ಮರಿಗೇರಿ, ಬೆಳಗಾವಿ.

ಇನ್ನಷ್ಟು ಮಾಹಿತಿ

ಮಾರ್ಚ್ ಸಂಚಿಕೆಯ ಮುಖಪುಟ ತುಂಬಾ ಸುಂದರವಾಗಿತ್ತು. ಆದರೆ ಮುಖಪುಟ ಲೇಖನ ಮೂರು ಪುಟಕ್ಕೆ ಸೀಮಿತವಾಗಿದ್ದು ನನ್ನನ್ನು ನಿರಾಶೆಗೊಳಿಸಿತು. ಆ ಲೇಖನದಲ್ಲಿ ಒಂದು ಮುಖ್ಯವಾದ ವಿಷಯ ಬಿಟ್ಟುಹೋಗಿದೆ.

The Fall of A Sparrow ದಲ್ಲಿ ಸಲೀಂ ಅಲಿ ಅವರು ತಮ್ಮ ಹಿತ ಚಿಂತಕರಿಗೂ ತಮಗೆ ತುಂಬಾ ಪ್ರೋತ್ಸಾಹ ಕೊಟ್ಟ ಹಿರಿಯಣ್ಣ ಹಮೀದರಿಗೂ ಕೃತಜ್ಞತೆ ಸಲ್ಲಿಸಿದ್ದಾರೆ. ಆದರೆ ಸಲೀಂ ಅಲಿ ಅವರನ್ನು ದೂರುವವರೂ ಕೆಲವರಿದ್ದರು ಬರೋಡಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಅಬ್ಬಾಸ್ ತಯ್ಯಬ್‌ಜಿ ಸಲೀಂ ಅವರನ್ನು ಕುರಿತು, "ಹಕ್ಕಿಗಳನ್ನು ಗಮನಿಸುತ್ತಾ ಕಾಲಕಳೆಯುವುದು ಮೈಗಳ್ಳತನಕ್ಕೆ ಒಂದು ಕುಂಟು ನೆಪ," ಎಂದು ತೆಗಳಿದ್ದರು. ಆದರೆ ಇವರ ಕೆಲಸಗಳು ಫಲಕೊಟ್ಟಾಗ ನ್ಯಾಯಾಧೀಶರು ಬದುಕಿರಲಿಲ್ಲ. ಅದಕ್ಕಾಗಿ ಸಲೀಂ ಅವರು, "ಈಗ ಅವರು

(ಆರನೇ ಪುಟಕ್ಕೆ)

ಅಂತರಂಗ

ಮದನ ಕಾಮನ ಕಥೆಗಳು

೮

ಹುಂಜನಾಗಿದ್ದ ಹುಡುಗ
ಕುದುರೆಯಾಗಿ ನಿಂತ...

.....೧೦೭

ಸ್ಥಿರ ಶೀರ್ಷಿಕೆಗಳು

ಬೆಳಕಿಂಡಿ

ಆತ್ಮಸಂಯಮ ಮತ್ತು ಮನೋನಿಗ್ರಹಗಳು ಮನುಷ್ಯನನ್ನು ಸಫಲಜೀವಿಯನ್ನಾಗಿ ಮಾಡುತ್ತವೆ.

-ವಿವೇಕಾನಂದ

ಮಕ್ಕಳನ್ನು ಪ್ರೀತಿಸುವುದಕ್ಕೆ ಎರಡು ಕಾರಣಗಳು- ಮಕ್ಕಳು ಇರುವುದು ಒಂದು, ಇಲ್ಲದಿರುವುದು ಮತ್ತೊಂದು.

ಪ್ರೀತಿಸದೇ ಇರುವುದಕ್ಕೂ ಇವೇ ಕಾರಣಗಳು.

-ಬೀಚಿ

ಇದು ಬದುಕುವ ಜನವೆ? ಬದುಕಲು ಬಯಸುವ ಜನವೆ? ಬದುಕಲು ಬೇಕಾದ ಹಠವುಳ್ಳವರೆ ಇವರು?

-ಡಾ. ಶಿವರಾಮ ಕಾರಂತ

ಜೀವನವು ಸಾರ್ಥಕವಾಗುವುದು ಅದಕ್ಕೆ ವರ್ಷಗಳನ್ನು ಕೂಡಿಸುವುದರಿಂದಲ್ಲ, ಆ ವರ್ಷಗಳಿಗೆ ಜೀವ ತುಂಬುವುದರಿಂದ.

-ಅಲೆಕ್ಸಿಸ್ ಕ್ಯಾರೆಲ್

ಪ್ರಪಂಚದಲ್ಲಿ ಮನುಷ್ಯನು ಶೂರನೂ, ಸುರೂಪಿಯೂ, ಗುಣವಂತನೂ, ವಾಚಾಳಿಯೂ, ಧನುರ್ವಿದ್ಯಾವಿದನೂ, ಸಕಲಶಾಸ್ತ್ರ ಪಂಡಿತನೂ ಆಗಿದ್ದರೂ ಒಂದು ವೇಳೆ ಆತ ಧರ್ಮವಿಹೀನನಾಗಿದ್ದರೆ ಜನಗಳಲ್ಲಿ ಮಾನವನ್ನೂ, ಕೀರ್ತಿಯನ್ನೂ ಹೊಂದಲಾರನು.

-'ಪಂಚತಂತ್ರ'ದಲ್ಲಿ ವಿಷ್ಣುಶರ್ಮ

ಪುಸ್ತಕ ವಿಭಾಗ

ಆಕಾಶದಲ್ಲಿ ಆಪದ್ಬಾಂಧವರು...

ಸಂಗ್ರಹ: **ಗೋವಾ**

.....೧೧೯

ಆರೋಗ್ಯದಂಗಳ

ಟ್ಯೂಬೆಕ್ಟಮಿ ಶಸ್ತ್ರಕ್ರಿಯೆ

ಡಾ. ಎಚ್. ಗಿರಿಜಮ್ಮ

.....೧೪೫

(ಮೂರನೇ ಪುಟದಿಂದ)

ಇರುತ್ತಿದ್ದರೆ, ಮೈಗಳ್ಳತನವೂ ಎಂತಹ ಫಲಕೊಟ್ಟಿತು ಎನ್ನುವುದನ್ನು ತಿಳಿಯುತ್ತಿದ್ದರು,'' ಎಂದಿದ್ದರು.

ಪಿ. ರಾಜೇಶ ಐತಾಳ, ಸುರತ್ಕಲ್

ಸುಂದರ ಮುಖಪುಟದ ಮಾರ್ಚ್ ಸಂಚಿಕೆಯಲ್ಲಿ ಮೂಡಿಬಂದ ಎಚ್.ಆರ್. ಸುರೇಶ್ ಅವರ 'ಪಕ್ಷಿ ಸಂಗಾತಿಯ ಜನ್ಮಶತಾಬ್ದಿ' ಲೇಖನ ಸಂಗ್ರಹ ಯೋಗ್ಯ. ಪಕ್ಷಿಗಳ ಬಗ್ಗೆ ಸಣ್ಣ ವಯಸ್ಸಿನಲ್ಲಿಯೇ ಇಷ್ಟು ಕಾಳಜಿ ವಹಿಸಿ ಪ್ರೇಮದಿಂದ ಕಂಡವರು ಮತ್ತೊಬ್ಬರಿರಲಿಕ್ಕಿಲ್ಲ.

ಸಂಜಯ ಎಚ್.ಡಿ., ಕೋಣನಕೇರಿ.

ಮಾರ್ಚ್ ಸಂಚಿಕೆಯ ಮುಖಪುಟ ಪಕ್ಷಿ ಸಂಗಾತಿ ಸಲೀಂ ಅಲಿ ಹಾಗೂ ಮತ್ತು ಪರಿಸರ ಪ್ರೇಮಿ, ಸಾಹಿತಿ ಡಾ. ಶಿವರಾಮ ಕಾರಂತರ ಭಾವಚಿತ್ರದೊಂದಿಗೆ ಮಧು ಶೇಖರಣೆಯನ್ನು ಮಾಡುತ್ತಿರುವ ಪಕ್ಷಿಯ ಚಿತ್ರದಿಂದ ಒಡಗೂಡಿದ್ದು ಚಿನ್ನಕ್ಕೆ ಪುಟವಿದ್ದಂತಾಗಿದೆ.

ಶೈಲಜ ಎಸ್.ಎಲ್. ಶಿವಮೊಗ್ಗ.

ನಾಗರಿಕತೆಯ ಅಡ್ಡಾದಿಡ್ಡಿ ಬೆಳವಣಿಗೆ

ಮಾರ್ಚ್ ಸಂಚಿಕೆಯ 'ಚಿಂತನ' ನಿಜಕ್ಕೂ ತುಂಬಾ ಮಾರ್ಮಿಕವಾದದ್ದು. ಕೇವಲ ನಾಲ್ಕಾರು ಗೆರೆಗಳ ಒಂದು ಚಿತ್ರದಿಂದಲೇ ನಮ್ಮ ಭಾವೀ ಭಾರತದ ಆಧಾರಸ್ತಂಭಗಳು ಎತ್ತವಾಲುತ್ತಿವೆ ಎನ್ನುವುದನ್ನು ಹೇಳಿಬಿಟ್ಟಿದ್ದೀರಿ. ಈ ಟೀವಿಯ ಠೀವಿಯಿಂದ ಎಂತೆಂತಹ ಪ್ರಮಾದಗಳು ಜರುಗುತ್ತಿವೆ ಅಲ್ಲವೆ? ಅಸಂಗತವಾಗಿ ಬರುವ ಧಾರಾವಾಹಿಗಳಿಂದಾಗಿ ಇಡೀ ಪೀಳಿಗೆಯೇ ಹಾಳಾಗುತ್ತಿದೆ. ರಾಮಾಯಣ, ಮಹಾಭಾರತಗಳಂತಹ ಒಳ್ಳೆಯ ಧಾರಾವಾಹಿಗಳು ಮೂಡಿಬರುವುದು ಅಪರೂಪ ಕ್ಕೊಮ್ಮೆ.

ಕಲ್ಲೇಶ್ ಕುಂಬಾರ್, ಹಾರೂಗೇರಿ.

ಲೇಖಕರಿಗೆ ಸೂಚನೆ

- 'ಕಸ್ತೂರಿ'ಗಾಗಿ ಕಳಿಸುವಂಥ ಲೇಖನಗಳು ಕಾಗದದ ಒಂದೇ ಮಗ್ಗುಲಲ್ಲಿ ಸ್ಫುಟವಾಗಿ ಬರೆದಂಥವಾಗಿರಲಿ. ನಿಮ್ಮ ಹೆಸರು-ವಿಳಾಸಗಳು ಸ್ಪಷ್ಟವಾಗಿರಲಿ. ಅನುವಾದ, ರೂಪಾಂತರ, ಆಧಾರಿತ ಲೇಖನಗಳಾದರೆ ಮೂಲ ಲೇಖಕ-ಪ್ರಕಾಶಕರ ವಿಳಾಸ, ಅನುಮತಿ ಪತ್ರಗಳನ್ನು ಜತೆಗೆ ಲಗತ್ತಿಸಿ.
- ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಲೇಖನಗಳ ಸಂಗಡವೆ ಅಗತ್ಯ ಅಂಚೆಚೀಟಿ ಲಗತ್ತಿಸಿದ ಲಕೋಟೆಯನ್ನಿಡಿ.
- ಚುಟುಕು, ಪುಟಕೊನೆಯ ಕಿರುಲೇಖನ, ನೆನಪು ನೆರಳಿನಲ್ಲಿ ಮುಂತಾದವುಗಳ ಕುರಿತು ಪತ್ರವ್ಯವಹಾರ ಮಾಡಲಾಗುವುದಿಲ್ಲ.
- ಲೇಖನದ ಕಾರ್ಬನ್ ಅಥವಾ ಝೆರಾಕ್ಸ್ ಪ್ರತಿಯನ್ನು ಕಳಿಸಲೇಬೇಡಿ.
- ಸ್ವೀಕೃತ ಲೇಖನಗಳನ್ನು ಯಥಾವಕಾಶ ಪ್ರಕಟಿಸಿ ಸೂಕ್ತ ಗೌರವಧನವನ್ನು ನೀಡಲಾಗುವುದು.

ಚಂದಾದಾರರಿಗೆ ಸೂಚನೆ

- 'ಕಸ್ತೂರಿ' ಪ್ರತಿ ತಿಂಗಳ ೧ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳಿನ ೨ನೆಯ ದಿನಾಂಕದೊಳಗೆ ನಿಮಗೆ ತಲುಪದಿದ್ದಲ್ಲಿ ಚಂದಾದಾರರು ತಮ್ಮ ಟಪ್ಪಾಲು ಕಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಈ ಸಂಬಂಧದಲ್ಲಿ ಪತ್ರವ್ಯವಹಾರ ಮಾಡುವಾಗ, ವಿಳಾಸ ಬದಲಾವಣೆಯ ಸಂದರ್ಭದಲ್ಲಿ ದಯವಿಟ್ಟು ಚಂದಾ ನಂಬರು ಸ್ಫುಟವಾಗಿ ನಮೂದಿಸಿರಬೇಕಾದ್ದು ಅತ್ಯವಶ್ಯಕ.

ಪತ್ರವ್ಯವಹಾರ ವಿಳಾಸ:
ಪ್ರಸಾರಾಂಗ ವ್ಯವಸ್ಥಾಪಕ,
ಕಸ್ತೂರಿ. ಪೊ.ಬಾ. ನಂ. ೩೦,
ಹುಬ್ಬಳ್ಳಿ-೫೮೦ ೦೨೦.

ಚಂದಾ ದರಗಳು

ಬಿಡಿ ಸಂಚಿಕೆ	ರೂ.	೬-೦೦
೬ ತಿಂಗಳಿಗೆ ಅಂಚೆ ವೆಚ್ಚ ಸೇರಿ	ರೂ.	೩೫-೦೦
೧ ವರ್ಷಕ್ಕೆ ಅಂಚೆ ವೆಚ್ಚ ಸೇರಿ	ರೂ.	೭೦-೦೦
೨ ವರ್ಷಕ್ಕೆ ಅಂಚೆ ವೆಚ್ಚ ಸೇರಿ	ರೂ.	೧೩೦-೦೦

ಕಸ್ತೂರಿ

ವರ್ಷ: ೪೦ ಎಪ್ರಿಲ್ ೧೯೯೬ ಸಂಚಿಕೆ: ೮

ಅಂತರಂಗ ಶುದ್ಧಿ: ಬಹಿರಂಗ ಶುದ್ಧಿ

ಜಗತ್ತಿನ ತಾಪತ್ರಯಗಳಿಂದ ಬೇಸತ್ತ ಒಬ್ಬನು ಸಂತ ಮಾರ್ಟಿನ್ನನೆಡೆ ಹೋಗಿ, "ಶರಣಾರ್ಥಿಯಾಗಿ ಬಂದಿದ್ದೇನೆ. ನೀವೇ ರಕ್ಷಿಸಬೇಕು ಪ್ರಭು," ಎಂದು ಬೇಡಿಕೊಂಡ.

"ಮೊದಲು ಸ್ವಚ್ಛವಾಗಿ ಬಾ" ಅಂದ ಸಂತ.

"ಸರಿ" ಎಂದು ಆಗಂತುಕ ಸ್ನಾನ ಮಾಡಲು ಹೋದದ್ದೇ ತಡ, ಸಂತ ಮಾರ್ಟಿನ್ ಆಶ್ರಮದಲ್ಲಿ ಕಸಗುಡಿಸುವಾಕೆಯನ್ನು ಕರೆದು ಅವಳ ಕಿವಿಯಲ್ಲಿ ಮೆಲ್ಲಗೆ ಏನೇನೋ ಹೇಳಿದ.

ಆಗಂತುಕ ಸ್ನಾನಮಾಡಿ ಬರುವುದಕ್ಕೂ ಈಕೆ ಕಸಗುಡಿಸುತ್ತಾ ಬರುವುದಕ್ಕೂ ಸರಿ ಹೋಯಿತು. ಅವಳು ಜೋರಾಗಿ ಗುಡಿಸುತ್ತಿದ್ದುದರಿಂದ ಸ್ವಲ್ಪ ಕಸ ಆಗಂತುಕನ ಮೇಲೂ ಬಿದ್ದು ಆತ ಸಿಟ್ಟಿನಿಂದ ಅವಳನ್ನು ಅಟ್ಟಿಸಿಕೊಂಡು ಹೋದ.

ಆದರೆ ಆಕೆ ಸಿಗಬೇಕಲ್ಲ?

ಆಶ್ರಮಕ್ಕೆ ಬಂದಾತ ಅವಳನ್ನು ಶಪಿಸುತ್ತಾ ಎರಡನೆಯ ಬಾರಿಗೆ ಸ್ನಾನ ಮಾಡಿಬರಲು ಹೋದ.. ಈ ಸಲ ಆತ ಸ್ನಾನಮಾಡಿ ಬರುವಾಗ ಕೆಲಸದಾಕೆಯ ಪೊರಕೆ ಅವನನ್ನು ಮುಟ್ಟಿತು.

ಮೈಲಿಗೆಯಾದದ್ದಕ್ಕೆ ಆಗಂತುಕನಿಗೆ ಸಿಟ್ಟು ಬಂತು. ಆದರೂ ಅವಳನ್ನು ಹೊಡೆಯಲು ಹೋಗುವ ಮಟ್ಟಕ್ಕೇನೂ ಈ ಸಲ ಸಿಟ್ಟು ಏರಲಿಲ್ಲ. ಪ್ರಾರಬ್ಧವನ್ನು ಹಳಿಯುತ್ತಾ ಮೂರನೆಯ ಸಲ ಸ್ನಾನ ಮಾಡಲು ಹೋದ.

ಈ ಸಲ ಕಸಗುಡಿಸುವಾಕೆ ಬುಟ್ಟಿಪೂರ್ತಿ ಕಸವನ್ನೇ ಆತನ ಮೇಲೆ ಸುರಿದಳು. ಆಗಂತುಕನಿಗೆ ಈಗ ಜ್ಞಾನೋದಯವಾಗಿದ್ದರಿಂದ ಸ್ವಲ್ಪವೂ ಸಿಟ್ಟು ಬರಲಿಲ್ಲ. "ತಾಯಿ, ಇಂದು ನೀನೇ ನನ್ನ ಕಣ್ಣು ತೆರೆಯಿಸಿದೆ. ನಿನ್ನಿಂದಾಗಿಯೇ ನಾನು ಅಹಂಕಾರ ಹಾಗೂ ಕ್ರೋಧಗಳನ್ನು ಸಂಯಮದಲ್ಲಿರಿಸಿಕೊಂಡೆ. ಇನ್ನು ಮೇಲೆ ಎಂದೂ ಅವು ನಿಯಂತ್ರಣ ತಪ್ಪಲಾರವು," ಎಂದು ಆಶ್ರಮಕ್ಕೆ ಆಶ್ರಯವನ್ನು ಅರಸಿ ಬಂದಾತ ಕೈಮುಗಿದ.

"ಅಂತರಂಗ ಶುದ್ಧಿಯಾದ ನಂತರ ಬಹಿರಂಗ ಶುದ್ಧಿ. ಈಗ ಮತ್ತೊಮ್ಮೆ ಸ್ನಾನಮಾಡಿ ಬಾ. ಈ ಆಶ್ರಮಕ್ಕೆ ನಿನ್ನಂಥವರೇ ಬೇಕು. ಇನ್ನು ಮೇಲೆ ಹಾಯಾಗಿ ಇಲ್ಲಿಯೆ ಇದ್ದುಬಿಡು" ಅಂದ ಸಂತ ಮಾರ್ಟಿನ್.

('ಪ್ರಬುದ್ಧ ಭಾರತ'ದಿಂದ)

ಮತ್ತೆ ಬಾ ವನಕೆ ವಸಂತ....

ಚೈತ್ರ ಹಾಗೂ ವೈಶಾಖ ಮಾಸಗಳು ಸೇರಿ ವಸಂತನನ್ನು ನಿರ್ಮಿಸುತ್ತವೆ. ಹಿಂದೂ ಪಂಚಾಂಗದ ಪ್ರಕಾರ ಚೈತ್ರ ಹೊಸ ವರ್ಷದ ಮೊದಲ ಮಾಸ. ಹಿಂದೂಗಳಲ್ಲಿ ಚೈತ್ರದಿಂದ ಫಾಲ್ಗುಣದವರೆಗೆ ಇರುವ ಹನ್ನೆರಡು ತಿಂಗಳು. ವಸಂತದಿಂದ ಶಿಶಿರದವರೆಗಿನ ಆರು ಋತುಗಳು. ಹನ್ನೆರಡು



ಚಿದಂಬರ ಇನಾಮದಾರ

ಹುಣ್ಣಿಮೆ, ಅಮಾವಾಸ್ಯೆಗಳು, ನಕ್ಷತ್ರ, ತಿಥಿ, ಅಯನ, ಪಕ್ಷಗಳು ಅತ್ಯಂತ ಸುಂದರವಾದ ಹೆಸರನ್ನು ಹೊಂದಿವೆ. ಈ ಎಲ್ಲ ಹೆಸರುಗಳನ್ನು ಸೇರಿಸಿ ಬರೆದರೆ ಒಂದು ಮಧುರ ಕಾವ್ಯ ರಚನೆಯ ಅನುಭವವಾಗುತ್ತದೆ.

ಫಾಲ್ಗುಣ ಮಾಸದ ಕೊನೆಯ ಪಾದದಲ್ಲಿ ಬಿಸಿಲಿನ ಅನುಭವ ಅರಿವಿಗೆ ಬರತೊಡಗುತ್ತದೆ. ಶಿಶಿರದ ಚಳಿಗಾಳಿ ಬಿಸಿಲಿನ ಅಡಿಯಲ್ಲಿ ತನ್ನ ಮೈ ಕಾಸಿಕೊಳ್ಳುತ್ತ ನಿಧಾನವಾಗಿ ಮಂಜಿನಂತೆ ಕರಗತೊಡಗುತ್ತದೆ.

ಫಾಲ್ಗುಣ ಸುಗ್ಗಿಯ ಮಾಸ. ಕಾರಣ ಹಳ್ಳಿಯ ಹೆಣ್ಣು ಗಂಡುಗಳಿಗೆ ಬಿಡುವಿಲ್ಲದ ದುಡಿತ. ಆದರೆ ನಗರದ ಗೃಹಿಣಿಯರಿಗೆ ಯಾವುದೇ ದೊಡ್ಡ ಹಬ್ಬಗಳಿಲ್ಲದ ಆಲಸ್ಯದ ಮಾಸ. ಇಂತಹ ಫಾಲ್ಗುಣದ ಬೆನ್ನೇರಿ ಬರುವುದು ಚೈತ್ರ!

ಚೈತ್ರ ಬರುವುದು ವಸಂತ ಉದಯವಾಗುತ್ತಿರುವುದರ ಸೂಚನೆ. ಏಕೆಂದರೆ ಚೈತ್ರದ ಗರ್ಭದಿಂದ ವಸಂತ ಮೂಡಿ ಬರುತ್ತಾನೆ. ಚೈತ್ರಕ್ಕೆ ವಸಂತನ ಕಳೆ ಇರುತ್ತದೆ. ಆದ್ದರಿಂದಲೇ ಚೈತ್ರ ಬರುವದು ಅನಾವೃಷ್ಟಿಯಲ್ಲಿ ವೃಷ್ಟಿಯಾದಂತೆ. ಬಡವನಿಗೆ ನಿಧಿ ದೊರೆತಂತೆ.

ನಮ್ಮ ಪ್ರಾಚೀನ ಸಂಸ್ಕೃತ ಹಾಗೂ ಹಳಗನ್ನಡ ಕವಿಗಳು ಚೈತ್ರನನ್ನು ಸ್ವಾಗತಿಸಿ, ವರ್ಣಿಸಿ ಹೇರಳ ಕಾವ್ಯಗಳನ್ನು ಬರೆದಿದ್ದಾರೆ. ಚೈತ್ರದಲ್ಲಿ ಫಾಲ್ಗುಣಕ್ಕಿಂತಲೂ ಬಿಸಿಲು ಹೆಚ್ಚಾಗುತ್ತದೆ. ದೇಹ, ಮನಸ್ಸು ಬಿಸಿಲಿನ ತಾಪಕ್ಕೆ ಬಸವಳಿದರೂ ಚೈತ್ರದ ಆಗಮನದಿಂದ ನಿಸರ್ಗದಲ್ಲಾಗುವ ಬದಲಾವಣೆ ಕಂಡು ಮನಸ್ಸು ಪ್ರಸನ್ನಗೊಳ್ಳುತ್ತದೆ. ಚೈತ್ರಕ್ಕೆ ನಿಸರ್ಗ ಬಹಳ ತ್ವರಿತವಾಗಿ ಸ್ಪಂದಿಸುತ್ತದೆ. ಏಕೆಂದರೆ, ಋತುಗಳಿಗೆ ತಕ್ಕಂತೆ ಪ್ರಕೃತಿಯ ಲಯ ಹಾಗೂ ಕುಣಿತಗಳೂ ಬದಲಾಗುವುದರಿಂದ ವಸಂತದ ಬರುವಿಕೆಯಿಂದ ಪ್ರಕೃತಿ ಅರಳಿ ನಿಂತು ನಗುಮೊಗದಿಂದ ಸ್ವಾಗತಕ್ಕೆ ಸಿದ್ಧವಾಗುತ್ತದೆ.

ಋತುಗಳು ಕಾಲದ ಮಾತುಗಳು. ತನ್ನ ಮಾತುಗಳನ್ನು ಕಾಲ ನಿಸರ್ಗದಲ್ಲಿ ಬದಲಾವಣೆ ತರುವುದರ ಮೂಲಕ ಆಡುತ್ತಾನೆ. ಋತು ಬದಲಾದಂತೆ ನಿಸರ್ಗ ಬದಲಾಗುತ್ತದೆ. ನಿಸರ್ಗ ಬದಲಾದಂತೆ ಅದಕ್ಕೆ ಮನುಷ್ಯನ ದೇಹ ಸಹ ಹೊಂದಿಕೊಳ್ಳತೊಡಗುತ್ತದೆ. ಆದ್ದರಿಂದ ಕಾಲದ ಬದಲಾವಣೆಗೆ ಮನುಷ್ಯನ ದೇಹ ಸಹ ಸ್ಪಂದಿಸುತ್ತದೆ. ಪಶು, ಪಕ್ಷಿ, ಆಕಾಶ, ಗಿಡ, ಮರ, ಬಳ್ಳಿಗಳು ಋತು ಬದಲಾವಣೆಯ ಸಂಕೇತವಾಗಿರುತ್ತವೆ. ಇವುಗಳಲ್ಲಿ ಆಗುವ ಮಾರ್ಪಾಡಿನಿಂದ ಋತು ಬದಲಾವಣೆಯನ್ನು ಅರಿಯಬಹುದಾಗಿದೆ.

ಎಲೆ ಎಲೆ ಮಾಮರ, ಸೊಬಗಿನ ಚಾಮರ!

ಆದ್ದರಿಂದಲೇ ಚೈತ್ರ ಬಂದರೆ, ಮಾವಿನ ಮರಗಳು ತಮ್ಮ ಸಂಪೂರ್ಣ ವೈಭವದಿಂದ ಮೆರೆಯ ಹತ್ತುತ್ತವೆ. ಬಯಲು ಸೀಮೆಯಲ್ಲಿ, ಹಚ್ಚಹಸುರಿನ

> ಋತುರಾಜನ ಆಗಮನಕ್ಕೆ
> ಕಾತೊರೆಯದ ಮನಸ್ಸಾವುದು!

ಹಚ್ಚಡ ಹೊಚ್ಚಿಕೊಂಡಂತೆ ಕೆಲಸಾರೆ ಹಸುರಿನ ಗರ್ಭ ಒಡೆದು ಹೊರಸೂಸುವ ಕಪ್ಪು ಮಿಶ್ರಿತ ಗಾಢ ಹಸುರಿನ, ಬಿಡಿಸಿಟ್ಟ ಕೊಡೆಗಳಂತೆ ದೂರದಿಂದ ನುಣ್ಣಗೆ ಕಾಣುವ ಮಾವಿನ ಮರಗಳು ಚೈತ್ರನ ಆಗಮನವನ್ನು ನಯನಮನೋಹರವಾಗಿ ಸೂಚಿಸುತ್ತಿರುತ್ತವೆ.

ಕನ್ನಡ ಕವಿಗಳೊಬ್ಬರು 'ಎಲೆ ಎಲೆ ಮಾಮರ ಸೊಬಗಿನ ಚಾಮರ' ಎಂದು ಸೊಗಸಾಗಿ ಹಾಡಿದ್ದಾರೆ. ಮಾಮರದಲ್ಲಿ ಹೊಸ ತಳಿರು, ಹೊಸ ಹೂ, ಮಿಡಿಕಾಯಿಗಳು ಅರಳತೊಡಗಿದರೆ ಚೈತ್ರ ಬರುತ್ತಿದ್ದಾನೆ ಎಂತಲೇ ಅರ್ಥ.

ಬಿರುಬಿಸಿಲಿನಲ್ಲಿ ಇಂತಹ ದಟ್ಟ ನೆರಳಿನ ಮಾಮರದ ಬುಡದಲ್ಲಿ ಕುಳಿತು, ರುಚಿ-ರುಚಿಯಾದ ಬುತ್ತಿ ಉಣ್ಣುತ್ತ ಹರಿಯುತ್ತಿರುವ ಕಿರುತೊರೆಯ ಸಿಹಿ ನೀರು ಕುಡಿಯುತ್ತ ತನ್ನ ಮಡದಿಯೊಂ

ದಿಗೆ ಚೇಷ್ಟೆಗೆ ಇಳಿದಿರುವ ರೈತ ಎಂತಹ ಸುಖಿ!

ಮಾಮರ ನೆರಳು ನೀಡುವಂತೆ ಅದರ ಪರಿಮಳ ಘ್ರಾಣೇಂದ್ರಿಯವನ್ನು ಆಹ್ಲಾದಗೊಳಿಸುತ್ತದೆ. ವಸಂತನ ದೂತನಂತೆ ಬರುವ ಚೈತ್ರ ತನ್ನೊಡೆಯನ ಆಗಮನದ ವಾರ್ತೆಯನ್ನು ದಶದಿಕ್ಕುಗಳಿಗೆ ಹರಡುತ್ತಾನೆ. ಇದರಿಂದ ಪ್ರಕೃತಿಯಲ್ಲಿ ನವಚೈತನ್ಯ ಒಡಮೂಡುತ್ತದೆ.

ಅರಳಿ ಹಸುರಾಗಿ ನಿಂತ ಮಾವಿನ ತೋಪುಗಳಲ್ಲಿ ಕೋಗಿಲೆಗಳ ಕೂಜನ ಪ್ರಾರಂಭವಾಗುತ್ತದೆ. ಗಿಡಮರಗಳ ನೆತ್ತಿಗಳಲ್ಲಿ ಹೂಗಳು ಬಿರಿತು ಅರಳಿನಿಂತು ಪರಿಮಳ ಬೀರಲು ಪ್ರಾರಂಭಿಸುತ್ತವೆ. ಪೊದೆ ಪೊದೆಗಳು ಹಸಿರಾಗಿ ಮೈದುಂಬಿ ನಿಲ್ಲುತ್ತದೆ. ಮಾವು ಹಾಗೂ ಕೋಗಿಲೆಗಳು ವಸಂತನ ಆಗಮನದ ನಿಜ ಆನಂದ ಅನುಭವಿಸುತ್ತವೆ.

ಮಾವಿನ ಮರಕ್ಕೆ ಸಂಸ್ಕೃತದಲ್ಲಿ ಚೂತವೃಕ್ಷ ಎಂದು ಹೆಸರು. ಚಾತಕಪಕ್ಷಿ ಬೆಳದಿಂಗಳಿಗಾಗಿ ಕಾಯುವಂತೆ ಈ ಚೂತವೃಕ್ಷ ಚೈತ್ರಕ್ಕಾಗಿ ಕಾಯುತ್ತದೆ. ಚೈತ್ರ ಈ ಚೂತವೃಕ್ಷದ ಬಾಳಿಗೆ ಎಲ್ಲ ರೀತಿಯ ಹೊಸತನ ತರುತ್ತದೆ. ಈ ಕಲ್ಪನೆಯನ್ನು ಸಾಕಾರಗೊಳಿಸಲೆಂದೇ ಲಕ್ಷ್ಮೀಶ ಕವಿ ತನ್ನ ಕಾವ್ಯನಾಮವನ್ನು 'ಕವಿ ಚೂತವನ ಚೈತ್ರ' ಎಂದು ಇಟ್ಟುಕೊಂಡುದು.

ಚೈತ್ರದ ಮಾವಿನ ನಳನಳಿಸುವ ಬೆಡಗನ್ನು, ಹಸಿರೆಲೆಯ ಸೊಬಗನ್ನು, ಹೂಗಳ ಚೆಲುವನ್ನು, ಮಿಡಿಕಾಯಿಗಳ ಹುಳಿ ಮಿಶ್ರಿತ ಒಗರಿನ ರುಚಿಯನ್ನು ಕವಿಗಳು ವರ್ಣಿಸಿ, ವರ್ಣಿಸಿ, ಸೋತಿದ್ದಾರೆ. ಮಾವನ್ನು ಕುರಿತು ನಾಡೋಜ ಪಂಪ ಅತೀವ ಅಭಿಮಾನದಿಂದ "ತಳಿರೊಳ್ ನೀನೇ ಬೆಡಂಗನ್ಯೆ..." ಎಂದು ಪ್ರಾರಂಭಿಸಿ "ಪ್ರಿಯ ಚೂತರಾಜ ನಿನ್ನಂತೆ ಚೆನ್ನಂಗಳೆ..." ಎಂದೂ ಸ್ತುತಿಸಿದ್ದಾನೆ.

ಕಾಡಿನಿಂದ ನಾಡಿಗೆ

ಈ ಚೈತ್ರದ ಚೆಲುವು ಕೇವಲ ಕಾಡಿಗಷ್ಟೇ ಅಲ್ಲ ನಾಡಿಗೂ ಬರುತ್ತದೆ. ನಾಡಿನಿಂದ ಬೀಡಿಗೂ ಬರುತ್ತದೆ.

ಚೈತ್ರದ ಗೌರಿ ಮನೆ ಮನೆಯಲ್ಲಿ ಕಂಗೊಳಿಸುತ್ತಾಳೆ. ಹೂವೀಳ್ಯದ ಸಡಗರದಲ್ಲಿ ಸುವಾಸಿನಿಯರು ಓಡಾಡತೊಡಗುತ್ತಾರೆ. ಇದೇ ಸಮಯದ ರಾಮನವಮಿ ಹಾಗೂ ಹಣಮಜಯಂತಿಗಳಂದು ಎಲ್ಲರಿಗೂ ಪಾನಕ, ಕೋಸಂಬರಿಗಳ ಸಮಾರಾಧನೆ ಆಗುತ್ತದೆ.

ಅಲ್ಲಲ್ಲಿ ನಡೆಯುವ ವಸಂತ ಪೂಜೆಯಲ್ಲಿ ಪಾನಕ, ಮಜ್ಜಿಗೆ, ಮೊಸರವಲಕ್ಕಿಗಳ ಉಪಾಹಾರ ಸಿಗುತ್ತದೆ.

ಬಿಸಿಲಿಗೆ ಬೇಯುವ ಜನ ಕೈಯಲ್ಲಿ ತೋಯಿಸಿದ ತಣ್ಣಗಿನ ಬಿದಿರಿನ ಬೀಸಣಿಕೆ ಹಿಡಿದು ನಿಧಾನವಾಗಿ ಗಾಳಿ ಹಾಕಿಕೊಳ್ಳತೊಡಗುತ್ತಾರೆ. ಇಂದು ಫ್ಯಾನ್‌ಗಳಿದ್ದರೂ ಕರೆಂಟ್ ಇಲ್ಲದಿರುವುದರಿಂದ ಈಗಲೂ ಬಿದಿರು ಬೀಸಣಿಕೆ ಎಲ್ಲರ ಅಗತ್ಯ!

ವೈಶಾಖದ ಶಾಖ

ಈ ರೀತಿ ತನ್ನ ಕಾಲ ಗುಣ ಮಹಿಮೆಯಿಂದ ನಿಸರ್ಗವನ್ನೆಲ್ಲ ರಮಣೀಯವಾಗಿಸುವ ಚೈತ್ರ ನಿಧಾನವಾಗಿ ಸರಿಯುತ್ತ ವೈಶಾಖಕ್ಕೆ ಇಂಬುಕೊಡುತ್ತದೆ. ವೈಶಾಖದ ಶಾಖ ಎಲ್ಲೆಡೆ ಏರತೊಡಗುತ್ತದೆ. ಈ ಮಾಸ ಅರ್ಧ ಬಿಸಿಲು, ಅರ್ಧ ಮಳೆಗಾಲದ ಮಾಸ. ಈ ಸಮಯದಲ್ಲಿ ಬಯಲು ಸೀಮೆಯ ರೈತರು ಹೊಲಗಳನ್ನು ಹರಗಲು ಪ್ರಾರಂಭಿಸುತ್ತಾರೆ. ಕಾಳಿದಾಸ ತನ್ನ ಮೇಘದೂತದಲ್ಲಿ 'ಸದ್ಯಃ ನೇರೋತ್ಕಾರ್ಷಣ ಸುರಭಿ ಕ್ಷೇತ್ರ ಮಾರುಹ್ಯ ಮಾಲಂ' ಎಂದು ಹೇಳುವಾಗ 'ನೇರೋತ್ಕಾರ್ಷಣ ಸುರಭಿ' ಎಂಬುದು ಆ ಹರಗಿದ ಹೊಲಗಳಿಂದ ಹೊರಹೊಮ್ಮುವ ನರುಗಂಪೇ ಆಗಿದೆ.

ಕಪ್ಪಾದ ಹೊಲಗಳು ಬಡುವಿನ ಮೂಲಕವಾಗಿ ಕೊರೆದಿದ್ದ ತುಣುಕುಗಳಂತೆ ಕಾಣುತ್ತವೆ. ವೈಶಾಖದ ಬಿಸಿಲಿನ ಶಾಖದಿಂದಾಗಿ ಮಧ್ಯಾಹ್ನದ ನಂತರ ಆಕಾಶದಲ್ಲಿ ಕಪ್ಪು ಮೋಡಗಳು ದಟ್ಟೈಸುತ್ತ ಘನಸ್ಪನನಿನಾದ ಮಾಡತೊಡಗುತ್ತವೆ. ಅಲ್ಲದೆ ಉರಿಯುತ್ತಿರುವ ಸೂರ್ಯನಿಗೆ ಅಡ್ಡ ಬಂದು ಸೂರ್ಯನನ್ನು ಕೊಚ್ಚಿಹಾಕಿ ಹಗಲಿನಲ್ಲೇ ರಾತ್ರಿಯಂತೆ ಕತ್ತಲೆ ಕವಿಸುತ್ತವೆ.

ಆಗ ಪಡುವಣದಿಂದ ಬೀಸಿ ಬರುವ ಗಾಳಿ ದಣಿದ ದೇಹ ಮನಸ್ಸುಗಳಿಗೆ ತಂಪನ್ನೆರೆಯುತ್ತದೆ. ದಪ್ಪ ದಪ್ಪ ಹನಿಗಳು ಆಕಾಶದಿಂದ ಉದುರತೊಡಗುತ್ತವೆ. ಹನಿಗಳಿಂದ ಕಾಯ್ದ ನೆಲ ಬಿಸಿಯುಸಿರು ಬಿಡುವಂತೆ ಹವೆ ಮೇಲಕ್ಕೇಳತೊಡಗುತ್ತದೆ.

ತೊಯ್ಯುವ ನೆಲದಿಂದ ಹೊರಹೊಮ್ಮುವ ಘಮ್ಮ ನೆಂತು ಮಣ್ಣಿನ ವಾಸನೆ ಅಪೂರ್ವವಾದ ಆಕರ್ಷ ಣೆಯನ್ನುಂಟು ಮಾಡುತ್ತದೆ. ರಪ್ಪ ರಪ್ಪೆಂದು ಪ್ರಾರಂಭವಾಗುವ ಮಳೆ ಬರಬರುತ್ತ ಧಾರಾಕಾರ ವಾಗಿ ಗುಡುಗು ಮಿಂಚುಗಳೊಂದಿಗೆ ಸುರಿಯತೊ ಡಗುತ್ತದೆ. ಆಗ ಆಯಾಸಗೊಂಡವನಿಗೆ ಹಾಸಿಗೆ ಹಾಸಿಕೊಟ್ಟಂತೆ ಮನಸ್ಸು ಪ್ರಫುಲ್ಲವಾಗುತ್ತದೆ. ಸುರಿದ ನೀರು ಹೊಲಗಳಲ್ಲಿ ಇಂಗಿ, ಉಳಿದ ನೀರು ಹರಿದು, ಕೆರೆ, ಕುಂಟೆ, ಹೊಳೆ, ಹಳ್ಳಗಳನ್ನೆಲ್ಲ ತುಂಬಿಸಿ ಹರಿಯುತ್ತದೆ. ಪ್ರಕೃತಿದೇವಿ ಮಿಂದು ಹಸಿರುಟ್ಟು ನಿಂತಂತೆ ಎಲ್ಲೆಡೆ ಸ್ವಚ್ಛ ತಿಳಿಯಾದ ಕಳೆ ಹೊರಹೊಮ್ಮತೊಡಗುತ್ತದೆ.

ವೈಶಾಖ ಮಾಸ ಲಗ್ನದ ಮಾಸ ಎಂದೇ ಹೆಸರಾಗಿರುವುದರಿಂದ ಊರಿನಲ್ಲಿಯ ಜನರೂ ಲಗ್ನ, ಮುಂಜಿವೆ, ಜವಳ ಇತ್ಯಾದಿಗಳಲ್ಲಿ ಸಂತೋ ಷದಿಂದ ಓಡಾಡುತ್ತಿರುತ್ತಾರೆ. ಇದು ರೈತರಿಗೆ ಬಿಡುವಿನ ಸಮಯವಾದ್ದರಿಂದ ಜಾತ್ರೆ, ಉತ್ಸವ, ಮೊದಲಾದ ಸಂಭ್ರಮಗಳೂ ನಡೆದಿರುತ್ತವೆ.

ಋತುರಾಜ ವಸಂತ!

ಹೀಗೆ ಚೈತ್ರ ಹಾಗೂ ವೈಶಾಖಗಳೆರಡೂ ಜನರಿಗೂ ಪ್ರಕೃತಿಗೂ ಕೂಡಿಯೇ ನಲಿವನ್ನು ತಂದಿರುತ್ತವೆ. ಈ ಚೈತ್ರ-ವೈಶಾಖ ಕಟ್ಟಿಕೊಂಡೇ ಬರುವ ವಸಂತ ಋತುರಾಜ! ಆದ್ದರಿಂದ ಕವಿಗಳು ಅವನನ್ನು ಮುಕ್ತ ಕಂಠದಿಂದ ಹಾಡಿ ಹೊಗಳಿದ್ದಾರೆ. ಆಂಗ್ಲ ಕವಿ ವರ್ಡ್ಸ್‌ವರ್ಥ್ ಸಹ ತನ್ನ 'ಸ್ಪ್ರಿಂಗ್' ಕವನದಲ್ಲಿ ವಸಂತನನ್ನು ಶ್ಲಾಘಿಸಿದ್ದಾನೆ. ಅವನ ವೈಭವದ ವರ್ಣನೆ ಮಾಡಿದ್ದಾನೆ. ಅದನ್ನೇ ಬಿ.ಎಂ.ಶ್ರೀ. ಅವರು "ವಸಂತ ಬಂದ, ಋತುಗಳ ರಾಜ ತಾ ಬಂದ" ಎಂದು ಕನ್ನಡದಲ್ಲಿ ಹಾಡಿದ್ದಾರೆ.

ವಸಂತ ಬಂದಾಗ ಪ್ರಕೃತಿಯ ಕುಣಿತದ ಲಯವೇ ಬದಲಾಗುವುದರಿಂದ ಮತ್ತು ಅವನ ಆಗಮನದಿಂದ ಹೊಸ ಉಲ್ಲಾಸ ಜೀವನಕ್ಕೆ ಬರು ವುದರಿಂದ ವಸಂತ ಆಶೆಯ ಸಂಕೇತವಾಗಿದ್ದಾನೆ. ಭಗವಂತನ ಕೃಪೆಯಿಂದ ಕೊರಡು ಕೊನರುವಂತೆ ವಸಂತನಿಂದಾಗಿ ಒಣಗಿದ ಜೀವನ ಮತ್ತೆ ಚಿಗು ರುತ್ತದೆ.

ವಸಂತ ಪ್ರಣಯವನ್ನು ಉದ್ದೀಪನಗೊಳಿಸು ತ್ತಾನೆ. ಏಕೆಂದರೆ ಆತ ಮದನನ ಸ್ನೇಹಿತ. ಹೆಣ್ಣು-ಗಂಡುಗಳು ವಸಂತನ ಸಂವೇದನೆಯನ್ನು ಉತ್ಕಟವಾಗಿ ಅನುಭವಿಸುತ್ತಾರೆ. 'ಹೆಣ್ಗಳ ಕುಣಿ ಸುತ ನಿಂದ' ಎಂದು ಕವಿ ಹೇಳಿದುದು ವಸಂತನ ಶೃಂಗಾರಮುಖದ ವರ್ಣನೆ.

ಕಾಳಿದಾಸನಂತೂ ವಸಂತನನ್ನು ವರ್ಣಿಸಿ ಹಾಡಿದ್ದೇ ಹಾಡಿದ್ದು. ಅವನ ಮೊದಲ ಕಾವ್ಯ 'ಋತು ಸಂಹಾರ'ದಲ್ಲಿಯೇ ವಸಂತನ ಕುರಿತ ಅದ್ಭುತ ಕಲ್ಪನೆ ಇದೆ. ಮೂಲತಃ ಕಾಳಿದಾಸ ವಸಂತದ ಕವಿ. "ವಸಂತಯೋಧ ಸಮುವಾಗತಃ ಪ್ರಿಯೇ" ಎಂದು ಹೇಳಿ ವಸಂತನನ್ನು ಏಕಕಾಲಕ್ಕೆ ವೀರ ಶೃಂಗಾರ ನಾಯಕನನ್ನಾಗಿ ಮಾಡಿದ್ದಾನೆ.

ವಸಂತ ಬಂದರೆ ಹೂಗಳೂ ಹೆಂಗಳೂ ಕೂಡಿಯೇ ಅರಳುತ್ತವೆ. ನಾಡೋಜ ಪಂಪ ಸಹ ವಸಂತನ ಆರಾಧಕ. ಅವನ ಬನವಾಸಿ ಕಲ್ಪನೆಯಲ್ಲಿ ವಸಂತನ ಪ್ರಭಾವವಿದೆ. ಪ್ರಾರಂಭದಲ್ಲೇ "ತೆಂಕಣ ಗಾಳಿ ಸೋಂಕಿದೊಡೆ" ಎಂದು ಹೇಳುವ ಮಾತಿ ನಲ್ಲಿ ವಸಂತ ಮಾಸದ ಅಸ್ತಿತ್ವ ಕಾಣುತ್ತದೆ.

ಹೀಗೆ ವಸಂತನ ಆಗಮನದಿಂದ ಪ್ರಕೃತಿಯಲ್ಲಿ ಚೈತನ್ಯದ ಪೂಜೆ ನಡೆಯುತ್ತದೆ. ನಾಡಿನಲ್ಲಿ ಸಂಭ್ರ ಮದ ಹಿಗ್ಗು ತುಂಬುತ್ತದೆ. ಭಗವಂತನು ಗೀತೆ ಯಲ್ಲಿ ಋತುಗಳಲ್ಲಿ ತಾನು ವಸಂತ ಎಂದು ಹೇಳಿದ್ದು ಹಿಂದುಗಳಿಗೆ ವಸಂತ ಭಗವತ್‌ಸ್ವರೂಪಿ ಯಾಗಿ ಕಾಣುವುದಕ್ಕೆ ಕಾರಣವಾಗಿದೆ. ಅಂತೆಯೇ ಆತ ಪೂಜ್ಯ! ವರ್ಷದ ಪ್ರಾರಂಭದಲ್ಲಿ ಬರುವ ವಸಂತನನ್ನು ಪೂಜಿಸುತ್ತ ವರ್ಷವಿಡೀ ಬದುಕಬಲ್ಲ ಚೈತನ್ಯವನ್ನು ಹಿಂದುಗಳು ಪಡೆಯುತ್ತಾರೆ. ಈ ಚೈತನ್ಯತತ್ವ ಮುಂದಿನ ಐದೂ ಋತುಗಳಲ್ಲಿಯೂ ಮುಂದುವರೆಯುತ್ತದೆ.

ವಸಂತದ ಬಿರುಬಿಸಿಲ್ಲಿನಲ್ಲೂ ಎಲ್ಲ ತರಹದ ಮಲ್ಲಿಗೆಗಳು, ದಾಸವಾಳ, ಪಾರಿಜಾತ, ಶಂಖಪುಷ್ಪಿ, ಗುಲಾಬಿಗಳು ಬುಟ್ಟಿ ಬುಟ್ಟಿ ಅರಳುತ್ತವೆ. ಮೂಗಿನ ತುಂಬ ತಂಪು ಬೀರುತ್ತವೆ.

ವಸಂತನ ಆಗಮನದಿಂದ ಆಗುವ ಈ ಸಂಜೀ ವಿನಿ ಸ್ಪರ್ಶಕ್ಕಾಗಿ ಪ್ರಕೃತಿ ಕಾದುನಿಂತಿರುತ್ತಾಳೆ. ವರ್ಷವಿಡೀ ದಣಿವಿನಿಂದ ಸೋತು ಹೋದ ಅವಳ ಜೀವ ಧ್ವನಿ "ಮತ್ತೆ ಬಾ ವನಕ್ಕೆ ವಸಂತ" ಎಂದು ಮೆಲು ಧ್ವನಿಯಲ್ಲಿ ಹಾಡುತ್ತಿರುತ್ತದೆ. *



ಡಾ. ನಾಗಲೋಟಿಮಠ:

ವ್ಯಕ್ತಿ-ವಿಚಾರ-ಸಾಧನೆ

ದಾರಿಯಲ್ಲಿ ಅರ್ಧ ಗಂಟೆಗೂ ಹೆಚ್ಚು ಕಾಲ ಆತ್ಮೀಯ ಸಂವಾದ ನಡೆಸಿ, ಅಪ್ಪಟ ದೇಶಿ ಪದಗಳ ಹೊಳೆಯನ್ನೇ ಹರಿಸಿ, ಬೀಳ್ಕೊಡುವಾಗ, "ಮನೀಗೆ ಬರ್ರೆಲಾ... ಆರಾಮಾಗಿ ಮಾತಾಡೂಣು..." ಎಂದು ಆಹ್ವಾನಿಸಿಯೇ ಅವರು ಹೊರಡುವುದು. ಅಂತೂ ಅವರ ಮನೆಗೆ (ಸದ್ಯ ಹುಬ್ಬಳ್ಳಿಯಲ್ಲಿ ಸರಕಾರಿ ನಿವಾಸ) ಹೋದರೆ ಅವಾಕ್ಕಾಗುತ್ತೀರಿ.

"ಒಳಗೆ ಬರ್ರೆಲಾ... ಅಲ್ಲೇ ಯಾಕ ನಿಂತ್ರಿ?" ಎಂಬ ಧ್ವನಿ ಮತ್ತೆ ನಿಮ್ಮ ಹೆಜ್ಜೆಗಳ ಲಜ್ಜೆಯನ್ನು ಕಿತ್ತೊಗೆಯುತ್ತದೆ. ನೇರ ಅಡಿಗೆ ಮನೆಗೇ ನಡೆಯುತ್ತೀರಿ.

ಅವರು ಅಡಿಗೆಯ ತಯಾರಿಯಲ್ಲಿ!

ಸುತ್ತ ಚಿಕ್ಕ ಚಿಕ್ಕ ಪಾಲಿಥಿನ್ ಚೀಲಗಳಲ್ಲಿ ಅಕ್ಕಿ ಬೇಳೆ ಇತ್ಯಾದಿ ಇತ್ಯಾದಿಗಳ ನಡುವಿನಿಂದ ಅವರು ನಿಮ್ಮನ್ನು ಹಾಲ್‌ಗೆ ಕರೆದೊಯ್ಯುತ್ತಾರೆ. ಅವರನ್ನು ಅನುಸರಿಸುವಾಗ ಒಂದೆಡೆ ಕಾಣುವ ಚಾಪೆ, ದಿಂಬು, ಮಡಿಚಿದ ಚಾದರಗಳಿರುವ ಜಾಗವೇ ಅವರ ಬೆಡ್‌ರೂಮ್. ಇನ್ನೊಂದೆಡೆ ಕಟ್ಟಿರುವ

ನೈಲಾನ್ ಹಗ್ಗಕ್ಕೆ ನೇತುಬಿದ್ದ ಬಟ್ಟೆಗಳು ಕಂಡರೆ, ಅದೇ ಅವರ ಡ್ರೆಸಿಂಗ್ ರೂಮು! ಹೀಗೆ ಅವರ ಮಾತುಕತೆ, ಬದುಕಿನ ರೀತಿಯಲ್ಲೆಲ್ಲ ಸರಳತೆಯ ನಿದರ್ಶನಗಳು ಸಿಕ್ಕುತ್ತಲೇ ಹೋಗುತ್ತವೆ.

"ನಾ ಕೆಲಸಾ ಸುರೂ ಮಾಡಿದ್ದs ಈ ಡಿಪಾರ್ಟ್‌ಮೆಂಟಿನ ಕಸಾ ಗುಡಸೂದ್ರಿಂದ. ನೆಲಾ ಒರಸೂದ್ರಿಂದ... ಆ ಮ್ಯಾಲ ಅಟೆಂಡರು-ಟೆಕ್ನೀಷಿಯನ್ನು ಅಂಥೇಳಿ ಅನುಭವ ಗಳಿಸಿಕೋತ ಬಂದೆ..."- ಡಾ. ಸ.ಜ. ನಾಗಲೋಟಿಮಠ ತಮ್ಮನ್ನು ತಾವು ಪರಿಚಯಿಸಿಕೊಳ್ಳುತ್ತಾರೆ.

ನೌಕರಿಗೆ ಸೇರಿದ ಮೊದಲ ದಿನವೇ ಡಾ. ರಾಮಪ್ರಸಾದ್ ಇವರನ್ನು ನಾನಾ ರೀತಿಯ ಪರೀಕ್ಷೆಗಳಿಗೆ ಒಡ್ಡಿ ಒಂದು ವಾರದ ಮೇಲೆ ಪೆಥಾಲಜಿ ವಿಭಾಗದ ಕೆಲಸ ವಹಿಸಿಕೊಟ್ಟದ್ದನ್ನು ಡಾ. ನಾಗಲೋಟಿಮಠ ಕೃತಜ್ಞತೆಯಿಂದ ನೆನೆಯುತ್ತಾರೆ.

ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಈಗ 'ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ' (ಕಿಮ್ಸ್) ಎಂದು ಸ್ವಾಯತ್ತ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಲು ಅಣಿಯಾಗಿದೆ. ಡಾ. ನಾಗಲೋಟಿಮಠ ಅದರ ಮೊದಲ ನಿರ್ದೇಶಕರು. ಇದೇ ಕಾಲೇಜಿನಲ್ಲಿ ಕಲಿತು, ಕೆಲಸ ಮಾಡಿ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು-ಪ್ರಖ್ಯಾತಿಯನ್ನು ಪಡೆದು ಈಗ ಇದೇ ಸಂಸ್ಥೆಯ ಮುಖ್ಯಸ್ಥರಾಗಿ ಬಂದಿರುವುದು ಒಂದು ರೀತಿಯಲ್ಲಿ ಸಾಂಕೇತಿಕವೆ. ಸರಕಾರಿ ಸಂಸ್ಥೆಯಾಗಿದ್ದ ಈ ಆರೋಗ್ಯಧಾಮ ಅನೇಕ ನ್ಯೂನತೆಗಳಿಂದ ಬಳಲುತ್ತಿತ್ತು. ಅವ್ಯವಸ್ಥೆಯ ಆಗರವೂ ಆಗಿತ್ತು. ಡಾ. ನಾಗಲೋಟಿಮಠ ಸದ್ಯ ಆ ನ್ಯೂನತೆಗಳನ್ನೆಲ್ಲ ನಿವಾರಿಸಿ, ನಿಜಕ್ಕೂ ಅದನ್ನೊಂದು ಆದರ್ಶ ಸಂಸ್ಥೆಯಾಗಿ ಬೆಳೆಸುವಲ್ಲಿ ಮಗ್ನರಾಗಿದ್ದಾರೆ. ಕೇವಲ ಆದೇಶವಿತ್ತು ಕೂತುಬಿಡುವ ಜಾಯಮಾನದವರಲ್ಲ ಡಾ. ನಾಗಲೋಟಿಮಠ. ಎಲ್ಲರಿಗಿಂತ ಮೊದಲು ಕೆಲಸ ಶುರು ಮಾಡಿ ಆ ಮೇಲೆ ಉಳಿದವರನ್ನು ಹೆಗಲೆಣೆಯಾಗಿ ನಿಲ್ಲುವಂತೆ ವಿನಂತಿಸಿಕೊಳ್ಳುವಂಥವರು. ಹೀಗೆ ಸಹಾಯ ಹಸ್ತವನ್ನು ಚಾಚುವಂತೆ ಅವರು ನಗರದ ಸಾಮಾಜಿಕ ಸೇವಾ ಸಂಸ್ಥೆಗಳನ್ನೂ, ದಾನಿಗಳನ್ನೂ ಕೇಳಿಕೊಳ್ಳುವುದನ್ನು ತಮ್ಮ ದಿನಚರಿಯ ಒಂದು ಅಂಗವನ್ನಾಗಿ ಮಾಡಿಕೊಂಡಿದ್ದಾರೆ.

ಬದುಕಿನಲ್ಲಿ ಸುಖಕ್ಕಿಂತ ದುಃಖ-ನೋವು-ಅವಮಾನಗಳನ್ನೇ ಹೆಚ್ಚಾಗಿ ಉಂಡಿರುವವರು ಡಾ. ನಾಗಲೋಟಿಮಠ. ಇಂಥದರಿಂದ ಜರ್ಜರಿತಗೊಂಡು ವೈದ್ಯಕೀಯ ನೆರವು ಕೋರಿ ಬರುವಂಥವರಿಗೆ ಅತ್ಯುತ್ತಮ ಸೇವೆ ಸಲ್ಲಿಸಲು 'ಕಿಮ್ಸ್' ಸದಾ ಸಿದ್ಧವಾಗಿರಬೇಕು ಎಂಬುದು ಇವರ ಮಹದಾಶೆ.

ಅಂದು ಒಂದೊಪ್ಪತ್ತಿನ ತುತ್ತು ಅನ್ನದಿಂದಲೂ ವಂಚಿತಗೊಂಡು, ಹಸಿವೆ-ನೀರಡಿಕೆ ಮರೆತು ಜ್ಞಾನ ದಾಹವನ್ನು ಹಿಂಗಿಸಿಕೊಳ್ಳಲು ಅಹೋರಾತ್ರಿ ಶ್ರಮಿಸಿ ಗೆದ್ದ ಈ ವೈದ್ಯ ಇಂದು ಲೆಕ್ಕವಿಲ್ಲದಷ್ಟು ಜನಕ್ಕೆ ಪ್ರಾಣದಾನ ಮಾಡಿದ್ದಾರೆ. 'ಪ್ರಾಣದಾನ'ದ



ದಾಸೋಹವನ್ನೇ ನಡೆಸುತ್ತಲಿದ್ದಾರೆ.

ಬಡತನದಲ್ಲೇ ಬೆಳೆದುಬಂದ ಅವರಿಗೆ ಈಗ ಎಲ್ಲವೂ ಇದೆ: ಐಶ್ವರ್ಯ, ಅಂತಸ್ತು, ಅಧಿಕಾರ ಮುಖ್ಯವಾಗಿ ಜನಪ್ರಿಯತೆ ಹಾಗೂ ಗೌರವ. ಆದರೆ ಐಶ್ವರ್ಯ, ಅಂತಸ್ತು, ಅಧಿಕಾರಗಳು ಇವರನ್ನೆಂದೂ ಅಂಧರನ್ನಾಗಿಸಿಲ್ಲ. ನಿಷ್ಠೆಯ ಬದುಕಿಗೆ ಕಾಲ್ತೊಡಕೂ ಆಗಿಲ್ಲ.

ಇಂದಿಗೂ ವೇಷ, ಭಾಷೆ, ಆಹಾರ, ವಿಹಾರ ಎಲ್ಲದರಲ್ಲಿಯೂ ಅಪ್ಪಟ ದೇಶೀ ವ್ಯಕ್ತಿಯಾಗಿಯೇ ಉಳಿದದ್ದು ಈ ಅಂತಾರಾಷ್ಟ್ರೀಯ ಖ್ಯಾತಿಯ ವೈದ್ಯನ ವಿಶೇಷತೆ. ಸರಳತೆ ಸಜ್ಜನಿಕೆಗಳು ಅವರ ಬದುಕಿನ ಉಸಿರಾಗಿವೆ.

ಡಾ. ನಾಗಲೋಟಿಮಠರ ಈ ಅಪ್ಪಟ 'ದೇಶಿ'ತನವೇ ರೋಗಿಗಳಲ್ಲಿ ಹೊಸ ಭರವಸೆ ತುಂಬುತ್ತದೆ. ಮೃದು ಮಾತು, ಹಿತವಚನಗಳೇ ಅರ್ಧ ರೋಗವನ್ನು ಕಿತ್ತೆಸೆಯುತ್ತವೆ. ಇನ್ನರ್ಧ ಚಿಕಿತ್ಸೆಯ ಚಮತ್ಕಾರ.

'ಕಾಯಕವೇ ಕೈಲಾಸ'ವೆಂಬುದರಲ್ಲಿ ಇವರಿಗೆ ಅಪಾರ ನಂಬಿಕೆ. ಹಣೆಗೆ ವಿಭೂತಿ ಧರಿಸಿ ಹೊರಟರೆಂದರೆ ರೋಗಿಗಳಿಗೆ ಸಾಕ್ಷಾತ್ ಮೃತ್ಯುಂಜಯನೇ ಎದುರು ನಿಂತು ಅಭಯಹಸ್ತ ತೋರುತ್ತಲಿರುವಂತೆ ಭಾಸ.

ಕೂಲಿನಾಲಿ ಮಾಡಿ ಮಗನ ಉಜ್ವಲ ಭವಿಷ್ಯಕ್ಕೆ ಜೀವ ತೇಯ್ದ ತಮ್ಮ ತಂದೆ-ತಾಯಿಯರ ಪರಿಶ್ರಮ ಈ ವೈದ್ಯರ ಬದುಕಿನಲ್ಲಿ ಅಗಾಧ ಪ್ರಭಾವ ಬೀರಿದೆ. (ಡಾ. ಸದಾಶಿವಯ್ಯ ಜಂಬಯ್ಯ ನಾಗಲೋಟಿಮಠ ಅಪ್ಪ-ಅಮ್ಮನ ಪಾಲಿಗೆ 'ಸದು').

ಬಡತನದಿಂದ ಬೇಸತ್ತ ಜಂಬಯ್ಯ ಒಂದು ದಿನ ಊರು ಬಿಟ್ಟರು. ಬಸ್ಸಿಗೂ ಹಣವಿಲ್ಲದ್ದರಿಂದ ಹೊಳೆಆಲೂರ ಬಳಿಯ ಶಿರೋಳದಿಂದ ೩೦ ಮೈಲು ದೂರದ ಗದುಗಿಗೆ ಕುಟುಂಬ ಸಮೇತ (ಪತ್ನಿ ಹಂಪಮ್ಮ, ಮಗ ಸದು ಹಾಗೂ ಇಬ್ಬರು ಹೆಣ್ಣುಮಕ್ಕಳು) ಕಾಲ್ನಡಿಗೆಯಲ್ಲಿಯೇ ವಲಸೆ ಹೊರಟರು.

ಗದುಗಿನಲ್ಲಿ ಮುದ್ರಣಾಲಯವೊಂದರಲ್ಲಿ ಚಾಕರಿಗೆ ನಿಂತ ಜಂಬಯ್ಯನವರಿಗೆ ಜನರ ಪರಿಚಯ ಸಾಕಷ್ಟಾಯಿತು. ಈ ಪರಿಚಯ ಅಭಿಮಾನವಾಗಿ ಮಾರ್ಪಟ್ಟು, ರಬಕವಿ, ಬನಹಟ್ಟಿ ಜನ ಒತ್ತಾಯದಿಂದ ರಬಕವಿಗೆ ಕರೆಸಿಕೊಂಡೇಬಿಡುವಂತಾಯಿತು. ಅಲ್ಲಿ ಜೋತಾವರ ಎಂಬುವರ ಪ್ರೆಸ್ಸಿನಲ್ಲಿ ನೌಕರಿ. ಪ್ರಾಮಾಣಿಕ ದುಡಿತಕ್ಕೆ ಫಲವಿದ್ದೇ ಇದೆ. ಜಂಬಯ್ಯ ಅವರಿಗೆ ಬನಹಟ್ಟಿಯಲ್ಲಿ ಸ್ವಂತ ಪ್ರೆಸ್

ಸತ್ತವರ ಸಾಲಿನಲ್ಲಿ ಸದೂ...

ಕಷ್ಟಕಾರ್ಪಣ್ಯದಲ್ಲಿ ಸತ್ತು ಬದುಕಿಯೂ ಸೈಯೆನಿಸಿಕೊಂಡ ಡಾ. ಎಸ್.ಜೆ. ನಾಗಲೋಟಿಮಠ ಅವರು ಒಂದು ಸಂದರ್ಭದಲ್ಲಿ ನಿಜವಾಗಿಯೂ 'ಸತ್ತು' ಶವಗಳ ಸಾಲಿನಲ್ಲಿ ಮಲಗಿದ ಪ್ರಸಂಗ ಬಲು ರೋಮಾಂಚಕಾರಿ.

ಅವರು ಬೆಂಗಳೂರಿನಿಂದ ಒಂದು ಸಲ ಖಾಸಗಿ ಐಷಾರಾಮಿ ಬಸ್ಸಿನಲ್ಲಿ ಬೆಳಗಾವಿಗೆ ವಾಪಸ್ಸಾಗುತ್ತಿದ್ದರು. ಬಸ್ಸಿನ ಎರಡನೇ ಸೀಟನಲ್ಲಿ ಕುಳಿತಿದ್ದ ಅವರ ಎದುರಿನಲ್ಲಿಯೇ 'ವಿಡಿಯೋ' ಇತ್ತು.

ಒಂದನೇ ಸೀಟನಲ್ಲಿ ಕುಳಿತಿದ್ದ ವಿದ್ಯಾರ್ಥಿ "ಸಾರ್, ದಯವಿಟ್ಟು ನೀವು ಈ ಸೀಟನಲ್ಲಿ ಕುಳಿತರೆ ನಾನು ಅಲ್ಲಿ ಕುಳಿತು ವಿಡಿಯೋ ನೋಡಲು ಅನುಕೂಲ" ಎನ್ನುತ್ತಿದ್ದಂತೆಯ ಡಾ. ನಾಗಲೋಟಮಠ ಅವನಿಗೆ ಜಾಗಬಿಟ್ಟುಕೊಟ್ಟರು. ತುಮಕೂರು ದಾಟುತ್ತಿದ್ದಂತೆಯೇ ನಿದ್ದೆ ಹೋದರು.

ತಂಪು ಹವೆ, ಬೀಸುಗಾಳಿಗೆ ಎಚ್ಚರಗೊಂಡ ಡಾ. ನಾಗಲೋಟಮಠ ಹೌಹಾರಿದರು. ಬಸ್ಸಿನಲ್ಲಿರಬೇಕಾದ ತಾವು ಬಟಾಬಯಲಿನಲ್ಲಿ ಮಲಗಿದ್ದು ಹೇಗೆ? ಸುತ್ತಲೂ ಕಗ್ಗತ್ತಲು. ದೂರದ ಗಿಡವೊಂದರಲ್ಲಿ ತೂಗುತ್ತಿದ್ದ ಕಂದೀಲಿನ ಮಿಣಿ ಮಿಣಿ ಬೆಳಕು.

ತಮ್ಮನ್ನು ತಾವೇ ನೋಡಿಕೊಂಡರೆ, ಮೈ-ಕೈಗೆ ಗಾಯ, ತಲೆಭಾರ, ಕಣ್ಣು ತೆಗೆಯಲೂ ತೊಂದರೆ. ನಿಧಾನಿಸಿ ಎದ್ದು ಕುಳಿತು ಸುತ್ತಲೂ ದೃಷ್ಟಿ ಹರಿಸಿದಾಗ ಏಳೆಂಟು ಶವಗಳು!

ಡಾ. ನಾಗಲೋಟಮಠ ಎದ್ದು ಕುಳಿತಿದ್ದನ್ನು ನೋಡುತ್ತಲೇ ಓರ್ವ ಸರ್ದಾರ್‌ಜಿ ಓಡಿ ಬಂದ. "ಅರೆ! ಆಪ್ ಮರಾ ನಹಿ?" ಎಂದ. ಡಾ. ನಾಗಲೋಟಮಠ "ಅರೇ ಭಾಯಿ, ಯೇ ಸಬ್ ಕ್ಯಾ ಹೈ? ಮೈ ಕಹಾಂ ಹೂಂ? ಕ್ಯಾ ಹೋಗಯಾ?" ಎಂದು ಕೇಳಿದರು.

ಆಗ ಸರ್ದಾರ್‌ಜಿ ಬಸ್ಸು ಅಪಘಾತಕ್ಕೀಡಾದದ್ದನ್ನೂ ಡಾ. ನಾಗಲೋಟ ಮಠರ ಹಿಂದು ಮುಂದಿನವರೆಲ್ಲ ಮೃತಪಟ್ಟದ್ದನ್ನೂ ಹೇಳಿ, "ನೀವೂ ಸತ್ತಿದ್ದೀರಿ ಎಂದೇ ಭಾವಿಸಿ ಶವಗಳ ಸಾಲಿನಲ್ಲಿ ಮಲಗಿಸಿದ್ದೆವು" ಎಂದ.

ನಾಗಲೋಟಮಠರು ಪಕ್ಕದ ಶವವನ್ನು ದಿಟ್ಟಿಸಿದಾಗ ದಂಗಾದರು. ಅದು ವಿಡಿಯೋ ನೋಡಲೆಂದು ತಮ್ಮ ಸೀಟನಲ್ಲಿ ಕುಳಿತಿದ್ದ ವಿದ್ಯಾರ್ಥಿಯ ಶವ!

ಪ್ರಾರಂಭಿಸಲು ಜೋತಾವರ ಪ್ರೋತ್ಸಾಹಿಸಿದರು

ತಮ್ಮ ಮಗ 'ಸದು' ಇಂಗ್ಲಿಷ್‌ನಲ್ಲಿ ಪತ್ರ ಬರೆಯುವಂತಾಗಬೇಕೆನ್ನುವುದೇ 'ಬಸವೇಶ್ವರ ಪ್ರಿಂಟಿಂಗ್ ಪ್ರೆಸ್' ಮಾಲೀಕ ಜಂಬಯ್ಯನವರ ಏಕೈಕ ಇಚ್ಛೆ.

ಆರನೇ ತರಗತಿವರೆಗೆ ಮಾತ್ರ ಓದಿದ್ದ ಜಂಬಯ್ಯ ಈ ಇಚ್ಛೆಯಿಂದಲೇ ಮಗನಿಗೆ ಒಳ್ಳೆಯ ಮೂಲ ಶಿಕ್ಷಣ ಕೊಡಿಸಿದರು. ಪರಿಣಾಮವಾಗಿ 'ಸದು' ಇಂಗ್ಲಿಷ್ ವಿಷಯದಲ್ಲಿ ಕೇಂದ್ರಕ್ಕೆ ಮೊದಲ ಸ್ಥಾನ ಪಡೆದು ಮೆಟ್ರಿಕ್ ಪಾಸಾದರು.

ಆದರೂ ಈತ ಅಂಗ್ರೇಜಿಯಲ್ಲಿ ಪತ್ರ ಬರೆಯ ಬಲ್ಲನೇ? ಎಂಬ ಸಂಶಯ ಜಂಬಯ್ಯನವರಿಗೆ. ಮಗನಿಂದ ಪತ್ರ ಬರೆಯಿಸಿ ಅದನ್ನು ಊರಿನಲ್ಲಿಯ ಶಿಕ್ಷಕರೊಬ್ಬರಿಗೆ ತೋರಿಸಿದರು. ಆ ಶಿಕ್ಷಕರು ಸದೂನ ಇಂಗ್ಲಿಷ್ ಬಗ್ಗೆ ಪ್ರಶಂಸಿಸಿದಾಗ ಜಂಬಯ್ಯನವರಿಗೆ ಏನೋ ವಿಚಿತ್ರ ಜಂಬ! ಜತೆಗೆ ತಾವು ಪಟ್ಟ ಕಷ್ಟಗಳನ್ನೆಲ್ಲ ನೆನೆದು ಅತ್ತುಬಿಟ್ಟರು. ಮುಂದೆ ಸದು ಕೆ.ಎಲ್.ಇ. ಸಂಸ್ಥೆಯ ಆಜೀವ ಸದಸ್ಯ ಚನ್ನಮಲ್ಲಪ್ಪ ಅಬಕಾರಿ ಎಂಬುವವರ ನೆರವಿನಿಂದ ಹುಬ್ಬಳ್ಳಿಯ ಪಿ.ಸಿ. ಜಾಬಿನ್ ಕಾಲೇಜು ಸೇರಿದರು. ಆದರೆ ವೈದ್ಯಕೀಯ ಶಿಕ್ಷಣಕ್ಕೆ ಆಯ್ಕೆಗೊಂಡು ಕೆ.ಎಂ.ಸಿ.ಗೆ. ಕಾಲಿಟ್ಟರು.

ವಿಧಿಗೆ ಏನು ಮುನಿಸೋ... ತಂದೆಗೆ ಕ್ಷಯ ಗಂಟುಬಿತ್ತು. ರೋಗ ಉಲ್ಬಣಗೊಂಡಾಗ, ಸದು ತನ್ನ ಓದನ್ನು ಬದಿಗೊತ್ತಿ ತಂದೆಯನ್ನು ಮಿರಜ್‌ಗೆ ಕರೆದೊಯ್ದರೂ ಪ್ರಯೋಜನವಾಗಲಿಲ್ಲ. ೧೯೭೧ರಲ್ಲಿ ತಂದೆಯ ಸಾವಿನೊಂದಿಗೆ 'ಸದು'ವನ್ನು ಕಷ್ಟಗಳು ಸುತ್ತಲಿಂದ ಮುತ್ತಿದವು.

ತಂದೆ ಬದುಕಿದ್ದಾಗ 'ಸದು'ಗೆ ಬಡತನದ ಅನುಭವವೇ ಇರಲಿಲ್ಲ. ಕೂಲಿ-ಗೀಲಿಯಿಂದ ಆರಂ

ಅಂತೂ ಸಾವರಿಸಿಕೊಂಡು ಎದ್ದಾಗ ಅವರಲ್ಲಿನ ವೈದ್ಯ ಜಾಗೃತಗೊಂಡ. ಅಂಥದರಲ್ಲೆ ನೆರವು ನೀಡಲು ಮುಂದಾದರು. ತೀವ್ರ ಗಾಯದಿಂದಾದ ನೋವು ಅತಿಯಾಯಿತು. ಇನ್ನೊಂದು ಬಸ್ಸು ಹಿಡಿದು ದಾವಣಗೆರೆ ತಲುಪಿದರು.

ಮೈ-ಕೈ-ತಲೆಯಿಂದ ಹರಿಯುತ್ತಿದ್ದ ರಕ್ತದೊಡನೆ ಹೇಗೋ ಏನೋ ಬಾಪೂಜಿ ಆಸ್ಪತ್ರೆಗೆ ಬಂದರು. ರಾತ್ರಿ ಪಾಳಿಯ ನರ್ಸ್ ಗಮನಿಸದಂತೆಯೇ ಇದ್ದುಬಿಟ್ಟಾಗ ಡಾ. ನಾಗಲೋಟಮಠ ದೀನರಾಗಿ ತಮ್ಮ ಪರಿಚಯದ ವೈದ್ಯರೊಬ್ಬರನ್ನು ಫೋನಿನಲ್ಲಿ ಸಂಪರ್ಕಿಸಲಾದರೂ ಅನುಮತಿ ನೀಡಲು ಆಕೆಯನ್ನು ಕೇಳಿಕೊಂಡರು.

ದೊಡ್ಡ ಉಪಕಾರ ಮಾಡುವಂತೆ ನರ್ಸ್ ಸಮ್ಮತಿಸಿದಳು. ನಾಗಲೋಟ ಮಠರು ಅಲ್ಲಿಯ ತಮ್ಮ ವೈದ್ಯ ಶಿಷ್ಯನೊಡನೆ ಮಾತನಾಡಿ ತಮ್ಮ ಕತೆ ಹೇಳಿಕೊಂಡರು.

ಕೆಲವೇ ನಿಮಿಷಗಳಲ್ಲಿ ಅವರ ಶಿಷ್ಯ ಹಾಜರಾದ. ಚಕಚಕನೆ ಚಿಕಿತ್ಸೆಗೆ ವ್ಯವಸ್ಥೆ ಮಾಡಿದ.

ಅದಾಗಲೇ ಪತ್ರಿಕೆಗಳಿಗೆ ಹೋಗಿದ್ದ ತಮ್ಮ ಸಾವಿನ ಸುದ್ದಿ ಮನೆಯವರನ್ನು ಎದೆಗೆಡಿಸುವ ಮುನ್ನವೇ ಬೆಳಗಾಂವಿ ಸೇರಲು ಬಯಸಿ ಕೂಡಲೇ ಟ್ಯಾಕ್ಸಿ ಮಾಡಿಕೊಂಡು ಹೊರಟರು.

ಬ್ಯಾಂಡೇಜು ಕಟ್ಟಿದ ಮುಖ. ರಕ್ತಸಿಕ್ತ ಬಟ್ಟೆಬರೆಗಳು. ಇವರನ್ನು ನೋಡಿದ ಮಗನಿಗೆ ತಂದೆಯ ಗುರುತೂ ಸಿಗಲಿಲ್ಲ. ಯಾರೋ ಏನೋ ಎಂದುಕೊಂಡು ಬಾಗಿಲು ಹಾಕಿಕೊಳ್ಳುತ್ತಿದ್ದಾಗ, "ನಾನಪ್ಪಾ, ನಿಮ್ಮ ತಂದೆ" ಎಂದು ಕೂಗಿ ಹೇಳಿಕೊಳ್ಳಬೇಕಾಯಿತು.

ಅಷ್ಟರಲ್ಲಿ ಬೆಳಗಾಗಿತ್ತು. ನಸುಕಿನಲ್ಲಿ ತಾವು ತೆಗೆದುಕೊಳ್ಳಬೇಕಾಗಿದ್ದ ಕ್ಲಾಸಿನ ಹೊತ್ತಾಗಿತ್ತು. ಅತ್ತ ಧಾವಿಸಿದರು. ಆ ಮೇಲೆಯೇ ಅವರು ಚಿಕಿತ್ಸೆ ಪಡೆದದ್ದು.

ಹದಿನೇಳು ವರ್ಷಗಳ ಹಿಂದೆ ನಡೆದ ಈ ಘಟನೆಯ ಕುರಿತು ಹೇಳುವ ಡಾ. ನಾಗಲೋಟಮಠ "ದೇವರೇ ಕಾದ ಅಲ್ಲವೇ?" ಎಂದು ಕೇಳುತ್ತಾರೆ.

ಸ.ಜ.ನಾ. ಹೆಜ್ಜೆಗಳು

ಡಾ. ಸ.ಜ. ನಾಗಲೋಟಿಮಠ (ಜನನ: ೨೦-೭-೧೯೪೦) ಎಸ್.ಎಸ್.ಸಿ.ಯಲ್ಲಿ ಕೇಂದ್ರಕ್ಕೇ ಮೊದಲ ರ್‍ಯಾಂಕ್ ಪಡೆದು ಬಂಗಾರದ ಪದಕ ಗಳಿಸಿದ್ದು ೧೯೫೯ ರಲ್ಲಾದರೆ, ಚಿನ್ನದ ಪದಕದೊಂದಿಗೆ ಎಂ.ಬಿ.ಬಿ.ಎಸ್. ಪದವೀಧರನಾದದ್ದು ೧೯೬೫ ರಲ್ಲಿ.

೧೯೬೯ ರಲ್ಲಿ ಡಿ.ಸಿ.ಪಿ., ೧೯೭೦ ರಲ್ಲಿ ಎಂ.ಡಿ. (ಪೆಥಾಲಜಿ, ಮೈಕ್ರೊ) ಹಾಗೂ ೧೯೯೩ ರಲ್ಲಿ ಎಫ್.ಐ.ಸಿ. ಪರೀಕ್ಷೆಗಳನ್ನು ಪೂರೈಸಿಕೊಂಡರು.

೧೧೨ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧ ಮಂಡಿಸಿರುವ ಡಾ. ಸ.ಜ.ನಾ. ಕನ್ನಡದಲ್ಲಿ ೩೦ ಹಾಗೂ ಅಂಗ್ರೇಜಿಯಲ್ಲಿ ೧೨ ಪುಸ್ತಕಗಳನ್ನು ಹೊರತಂದಿದ್ದು ವಿದೇಶಿ ಪ್ರಕಟನೆಗೂ ಸಾಹಿತ್ಯ ನೀಡಿದ್ದಾರೆ.

ಹತ್ತು ಅಂತಾರಾಷ್ಟ್ರೀಯ ವೈದ್ಯಕೀಯ ಸಮಾವೇಶಗಳಲ್ಲಿ ಪ್ರಬಂಧ ಮಂಡಿಸಲು ಆಮಂತ್ರಿತರಾದ ಡಾ. ನಾಗಲೋಟಿಮಠ, ಬೆಳಗಾವಿಯ ಜೆ.ಎನ್.ಎಂ.ಸಿ.ಯಲ್ಲಿ ಪ್ರಾರಂಭಿಸಿದ ಪೆಥಾಲಜಿ ಮ್ಯೂಜಿಯಂ ಏಶಿಯಾ ಖಂಡದಲ್ಲಿಯೇ ಅತ್ಯುತ್ತಮ ಎಂದು ಪ್ರಶಸ್ತಿ ಪಡೆದರೆ, ವಿಜಾಪುರದ ಬಿ.ಎಲ್.ಡಿ.ಈ.ಎ. ಮೆಡಿಕಲ್ ಕಾಲೇಜಿನಲ್ಲಿ ಇವರು ಸ್ಥಾಪಿಸಿದ ಸ್ಪೋನ್ ಮ್ಯೂಜಿಯಮ್ಮಿಗೆ ದೇಶದಲ್ಲಿಯೇ ದೊಡ್ಡದೆಂಬ ಖ್ಯಾತಿ.

ಅಂತಾರಾಷ್ಟ್ರೀಯ ಪೆಥಾಲಜಿ ಅಕಾಡಮಿಯ ಭಾರತ ಘಟಕದ ಕಾರ್ಯದರ್ಶಿ, ಭಾರತೀಯ ಪೆಥಾಲಜಿ ಹಾಗೂ ಮೈಕ್ರೊಬಯಾಲಜಿ ಜರ್ನಲ್ ಹಾಗೂ ಭಾರತೀಯ ಸಿಟೋಲಾಜಿ ಜರ್ನಲ್ಲಿನ ಪ್ರಧಾನ ಸಂಪಾದಕರಾಗಿಯೂ ಇವರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಭಿಸಿ ಮುದ್ರಣಾಲಯದ ಮಾಲೀಕ ಪದವಿಯವರೆಗೆ ಮುಟ್ಟಿದ್ದ ಜಂಬಯ್ಯ ಮೂರು ಮನೆಗಳನ್ನು ಕಟ್ಟಿದ್ದರು. ನೀರಾವರಿಯ ದ್ರಾಕ್ಷಿ ತೋಟದ ಮಾಲೀಕರೂ ಆಗಿದ್ದರು.

ಇಂಥ ಜಂಬಯ್ಯ ಸತ್ತ ಮೇಲೆ ಅವರ ಮಿತ್ರರು ಶತ್ರುಗಳಾದರು. ಹಿತೈಷಿಗಳಂತೆ ನಟಿಸಿ, ಲೌಕಿಕ ವ್ಯವಹಾರ ತಿಳಿಯದ 'ಸದು'ನಿಂದ ಅನೇಕ ಕಾಗದ ಪತ್ರಗಳ ಮೇಲೆ ಸಹಿ ಹಾಕಿಸಿಕೊಂಡು ಅವರ ಮನೆ, ತೋಟಗಳನ್ನೆಲ್ಲ ಕಬಳಿಸಿದರು. ಅಷ್ಟೇ ಅಲ್ಲ, ಸದುನ ಕುಟುಂಬಕ್ಕೆ ಯಾರೂ ಸಾಲ ಕೊಡಬಾರದೆಂದು ಡಂಗುರವನ್ನೂ ಹಾಕಿಸಲಾಯಿತಂತೆ.

ಪರಿಸ್ಥಿತಿ ಬಿಗಡಾಯಿಸಿಹೋಯಿತು.

"ಒಂದು ಕಾಲಕ್ಕೆ ಯಾವ ದ್ರಾಕ್ಷಿ ತೋಟದ ಯಜಮಾನಿಯಾಗಿದ್ದಳೋ ಅದೇ ತೋಟಕ್ಕೆ ದಿನಕ್ಕೆ ೧೨ ಆಣೆ ಕೂಲಿಯ ಕೆಲಸಕ್ಕೆ ನನ್ನವ್ವ ಹೋಗತೊಡಗಿದಳು'' ಎಂದು ನೆನೆಯುವಾಗ ಡಾ. ನಾಗಲೋಟಿಮಠರ ಕಣ್ಣುಗಳು ಹನಿಗೂಡುತ್ತವೆ. ಆ ಮಹಾತಾಯಿ ಈಗಿಲ್ಲ. "ಇರಬೇಕಿತ್ತು'' ಎಂದು ಭಾವುಕರಾಗುತ್ತಾರೆ ಡಾ. ನಾಗಲೋಟಿಮಠ.

ಇಂಥ ಸಂದರ್ಭದಲ್ಲಿ ಒಮ್ಮೆ ಡಾ. ನಾಗಲೋಟಿಮಠ ಹೇಗಾದರೂ ಮಾಡಿ ವೈದ್ಯಕೀಯ ಅಧ್ಯಯನ ಮುಗಿಸಬೇಕೆಂಬ ಹುಚ್ಚಿನಲ್ಲಿ ತಮ್ಮನ್ನೇ ತಾವು ಮಾರಿಕೊಳ್ಳಲು ಸಜ್ಜಾಗಿಬಿಟ್ಟ.

ಹುಬ್ಬಳ್ಳಿಯ ಚರ್ಚ್ ಒಂದಕ್ಕೆ ಹೋಗಿ ಅಲ್ಲಿಯ ಪಾದ್ರಿಯನ್ನು ಕಂಡರು. ತಮ್ಮ ಪ್ರತಿಭೆಯ ಬಗ್ಗೆ ಹೇಳಿಕೊಂಡು ವೈದ್ಯಕೀಯ ಅಭ್ಯಾಸ ಮುಂದುವರೆಸಲು ನೆರವಾಗುವುದಾದರೆ ತಾವು ಕ್ರಿಶ್ಚಿಯನ್ ಧರ್ಮ ಸ್ವೀಕರಿಸುವುದಾಗಿ ತಿಳಿಸಿದರು. ಆದರೆ ಅದೇಕೋ ಆ ಪಾದ್ರಿ ಇದಕ್ಕೆ ಸಮ್ಮತಿಸಲಿಲ್ಲ.

ತಂದೆ ಇದ್ದಾಗ, ತಮಗೆ ಕನ್ಯೆಯನ್ನು ಕೊಡಲು ಇವರಲ್ಲಿಗೆ ಎಡತಾಕಿದ್ದ ಕನ್ಯಾಪಿತೃಗಳ ಮನೆಗಳಿಗೆ ಅಲೆದಾಡಿ "ನಿಮ್ಮ ಮಗಳನ್ನು ಮದುವೆ ಮಾಡಿಕೊಳ್ಳಲು ಬಂದಿರುವೆ. ನನ್ನ ಓದಿಗೆ ಸಹಾಯ ಮಾಡಿ'' ಎಂದು ಗೋಗರೆದರು ಸದು.

ಈ ದರಿದ್ರ ನಾರಾಯಣನನ್ನು ಯಾರು ಆದರಿಸಬೇಕು?

ಆದರೆ ಹುಬ್ಬಳ್ಳಿಯ ಬಳ್ಳಾರಿಮಠ ಎಂಬುವವರ ಪರಿಚಯವಾಯಿತು. ಅವರಿಗೊಬ್ಬ ಮಗಳು.

ಭಾರತೀಯ ಪೆಥಾಲಜಿ ಹಾಗೂ ಮೈಕ್ರೋಬಯಲಾಜಿ ತಜ್ಞರ ಸಂಘದ ಕಾರ್ಯದರ್ಶಿಯಾಗಿರುವ ಇವರು ಭಾರತೀಯ ವೈದ್ಯಕೀಯ ಪರಿಷತ್ತಿನ ಸದಸ್ಯರಾಗಿದ್ದಾರೆ.

ಅಂತಾರಾಷ್ಟ್ರೀಯ ಪೆಥಾಲಜಿ ಪರಿಷತ್ತಿನ ಭಾರತೀಯ ಘಟಕದ ಅಧ್ಯಕ್ಷ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಅಧ್ಯಕ್ಷ, ಭಾರತೀಯ ಪೆಥಾಲಜಿ ತಜ್ಞರ ಕಾಲೇಜಿನ ಕಾರ್ಯದರ್ಶಿ, ಭಾರತೀಯ ಪೆಥಾಲಜಿ ಹಾಗೂ ಮೈಕ್ರೋಬಯಾಲಜಿ ತಜ್ಞರ ಸಂಘದ ಅಧ್ಯಕ್ಷರಾಗಿಯೂ ಅಮೂಲ್ಯ ಸೇವೆ ನಿರ್ವಹಿಸಿದ್ದಾರೆ.

ಪ್ರಶಸ್ತಿಗಳು:

ಹರಿ ಓಂ ಆಶ್ರಮ ಅಲೆಂಬಿಕ್ ಸಂಶೋಧನೆಯ ರಾಷ್ಟ್ರೀಯ ಪ್ರಶಸ್ತಿ (೧೯೮೬), ಡಾ. ಬಿಸಿ ರಾಯ್ ರಾಷ್ಟ್ರೀಯ ಪ್ರಶಸ್ತಿ (೧೯೮೯), ಡಾ. ಬಿ.ಕೆ.ಐಕಟ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ (೧೯೯೩) ಮುಂತಾದವು ಡಾ. ನಾಗಲೋಟಿಮಠರನ್ನು ಅರಸಿಕೊಂಡು ಬಂದಿವೆ.

ಚಂಡಿಗಢ, ಉದಯಪುರ, ದಿಲ್ಲಿ, ಗುಜರಾತ್, ಮುಂಬಯಿ ಮುಂತಾದೆಡೆಯ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಗೌರವ ಪ್ರಾಧ್ಯಾಪಕರಾಗಿಯೂ ಜ್ಞಾನದಾನ ಗೈದವರು ಇವರು.

೧೯೯೧ ರಲ್ಲಿ ಅಮೆರಿಕ (ಎರಡು ಬಾರಿ) ಸಿಂಗಾಪುರ, ಹಾಂಗ್‌ಕಾಂಗ್, ಕೆನಡಾ; ೧೯೯೨ ರಲ್ಲಿ ಸ್ಪೇನ್, ಜರ್ಮನಿ, ಸ್ವಿಝರ್‌ಲ್ಯಾಂಡ್, ಲಕ್ಸೆಂಬರ್ಗ್, ಫ್ರಾನ್ಸ್, ಇಟಲಿ, ಇಂಗ್ಲೆಂಡ್; ೧೯೯೫ ರಲ್ಲಿ ಚೀನಾ ಪ್ರವಾಸ ಅವರ ಮಹತ್ವಪೂರ್ಣ ವಿದೇಶ ಯಾತ್ರೆಗಳು.

೧೧ ವರ್ಷದ ಶಾಂತಾ.

"ನೀವು ಹೂಂ ಎಂದರೆ ನಿಮ್ಮ ಮಗಳನ್ನು ನಾನು ಮದುವೆಯಾಗುವೆ. ಹುಡುಗಿಯನ್ನು ನಾನು ನೋಡಿಲ್ಲ. ಹೇಗೇ ಇರಲಿ, ನಾನು ಪ್ರೀತಿಯಿಂದ ನೋಡಿಕೊಳ್ಳುವೆ" ಎಂದು ಡಾ. ನಾಗಲೋಟಿಮಠ ದೈನ್ಯರಾಗಿ ಕೇಳಿಕೊಂಡರು.

ಮದುವೆ ನಡೆದೇ ಹೋಯಿತು. ತಾವು ಮೊದಲ ನಿರ್ಧರಿಸಿದ್ದಂತೆ ಪದವಿ ಪಡೆದ ನಂತರವೇ ಸಂಸಾರಕ್ಕೆ ನಾಂದಿ ಹಾಕಿದರು.

ಶಾಂತಾ ಹೆಚ್ಚು ಕಲಿತವರಲ್ಲ. ನಾಲ್ಕನೇ ವರ್ಗದವರೆಗೆ ಓದಿರುವ ಈ ಮಹಿಳೆ ಇಂದು ಸ್ವಪರಿಶ್ರಮದಿಂದ ಇಂಗ್ಲಿಷ್‌ನಲ್ಲಿ ಮಾತಾಡಬಲ್ಲವರಾಗಿದ್ದಾರೆ. ಕಾರು ಡ್ರೈವಿಂಗ್‌ನಲ್ಲೂ ಪಾರಂಗತೆ. "ನಾನು ಬೆಳಗಾವಿಗೆ ಹೋದಾಗ ನನ್ನ ಹೆಂಡತಿಯೇ ನನಗೆ ಡ್ರೈವರ್" ಎಂದು ಡಾ. ನಾಗಲೋಟಿಮಠ ಚೇಷ್ಟೆಯಿಂದ ಹೇಳುತ್ತಾರೆ.

ತಮ್ಮ ಓದಿನ ಅವಧಿಯಲ್ಲಿ ಎಂಜಿನಿಯರಿಂಗ್ ಕಾಲೇಜಿನ ಮಿತ್ರ ಶಂಭು ವಿಜಾಪುರ ತೋರಿಸಿದ ಭ್ರಾತೃ ವಾತ್ಸಲ್ಯವನ್ನು ಡಾ. ನಾಗಲೋಟಿಮಠ ಸದಾ ನೆನೆಯುತ್ತಾರೆ.

"ನನ್ನ ಓದನ್ನು ಒಂದು ಹಂತಕ್ಕೆ ತಲುಪಿಸಲು ಗೆಳೆಯರನೇಕರು ಕಾರಣರಾಗಿದ್ದಾರೆ. ಹಾಗೆ ನೋಡಿದರ ಅವರೆಲ್ಲ ನನ್ನ ಹಾಗೆ ದರಿದ್ರರೇ. ಆದರೆ ವಿಶಾಲ ಹೃದಯಿಗಳು. ಮದುವೆಗೆ ಉಡುಗೊರೆಯಾಗಿ ಒಬ್ಬೊಬ್ಬ ಮಿತ್ರನೂ ಸ್ಟೆಥಾಸ್ಕೋಪ್, ಪುಸ್ತಕ, ಇಂಜಕ್ಷನ್ ಸಿರಿಂಜ್, ಅಂಗಿ, ಪ್ಯಾಂಟ್ ನೀಡಿ ಜೀವದಾನ ಮಾಡಿದ್ದಾರೆ ಎಂದು ಕೃತಜ್ಞರಾಗಿ ಹೇಳುತ್ತಾರೆ ಡಾ. ನಾಗಲೋಟಿಮಠ. ಕೇವಲ ಎರಡು ಅಂಗಿ, ಎರಡು ಪ್ಯಾಂಟ್‌ಗಳ ಮೇಲೆ ಎಂ.ಬಿ.ಬಿ.ಎಸ್. ಮುಗಿಸಿದ ಈ ಸರಳ ಜೀವಿ ವೈದ್ಯ ಇಂದು ಅಂತಾರಾಷ್ಟ್ರೀಯ ಖ್ಯಾತಿ ಪಡೆದರೂ ಉಡುಗೆ-ತೊಡುಗೆಗಳ ವಿಷಯದಲ್ಲಿ ನಿರ್ಮೋಹಿ

ವಿದ್ಯಾರ್ಥಿ ಜೀವನದ ಕೊನೆಯ ಹಂತದಲ್ಲಿದ್ದಾಗ ತಾಯಿಯ ಕ್ಯಾನ್ಸರ್ ರೋಗ ಉಲ್ಬಣಗೊಂಡಿತ್ತು. ಅಂಥ ಸ್ಥಿತಿಯಲ್ಲಿಯೇ ಮುಂಬಯಿಗೆ ಕರೆದೊಯ್ದರು ಸದು. ತಮ್ಮ ವಸತಿ ವ್ಯವಸ್ಥೆಗೆ ಹ

ಬಂಗಾರದ ಗಟ್ಟಿ

ಮೆಟ್ರಿಕ್ಕಿನಲ್ಲಿ ನಾಗಲೋಟಿಮಠರಿಗೆ ಇಂಗ್ಲಿಷ್ ಕಲಿಸಿದವರು ಎನ್.ಎಸ್. ಕುಲಕರ್ಣಿ ಎಂಬ ಹಿರಿಯ ಶಿಕ್ಷಕರು. ಮೆಟ್ರಿಕ್ ಪರೀಕ್ಷೆಯಲ್ಲಿ ಬನಹಟ್ಟಿ ಕೇಂದ್ರಕ್ಕೇ ಮೊಟ್ಟಮೊದಲಿಗರಾಗಿ ಉತ್ತೀರ್ಣರಾಗಿ ಚಿನ್ನದ ಪದಕ ದೊರಕಿಸಿಕೊಂಡ ಮಗನೊಂದಿಗೆ ಜಂಬಯ್ಯನವರು ಕುಲಕರ್ಣಿ ಮಾಸ್ತರರ ಬಳಿ ಹೋದರು. ಜೇಬಿನಲ್ಲಿಟ್ಟುಕೊಂಡು ತಂದಿದ್ದ ಎರಡು ತೊಲ ಚಿನ್ನವನ್ನು ಮಗನಿಗೆ ಕೊಟ್ಟು, "ಹೂಂ. ಇದನ್ನು ಮಾಸ್ತರ ಪಾದಕ್ಕಿಟ್ಟು ನಮಸ್ಕಾರಾ ಮಾಡು" ಎಂದರು. ಕುಲಕರ್ಣಿ ಮಾಸ್ತರರು ಆ ಚಿನ್ನವನ್ನು ದೂರ ತಳ್ಳಿ, ಸದುವನ್ನು ಅಪ್ಪಿಕೊಂಡು, "ನೀನs ಒಂದು ಬಂಗಾರದ ಗಟ್ಟಿ ನನಗ. ನಿನ್ನ ಮುಂದ ಇದಕ್ಕೆಲ್ಲಿ ಕಿಮ್ಮತ್ತು?" ಎಂದುಬಿಟ್ಟರಂತೆ.

ಬಡವರಿಂದ ಬಂದ ಹಣ...

"**ಈ** ಸಮಾಜಕ್ಕೆ ಏನರೆ ಉಪಯೋಗ ಆಗ್ತಿದ್ರ ಅದು ಬಡವರಿಂದ ಮಾತ್ರ" ಎನ್ನುವುದು ಡಾ. ನಾಗಲೋಟಿಮಠ ಅವರ ದೃಢ ನಂಬಿಕೆ. ಅನುಭವ ಕೂಡ. ಬೆಳಗಾವಿಯಲ್ಲಿ ತಾವು ಆರಂಭಿಸಿದ ವಿಜ್ಞಾನ ಕೇಂದ್ರಕ್ಕೆ ಅದೇ ಜಿಲ್ಲೆಯ ಯಮಕನಮರಡಿಯ ಶ್ರೀಗಳು ಭಕ್ತರಿಂದ ಸಂಗ್ರಹಿಸಿದ ನಾಕಾಣೆ-ಎಂಟಾಣೆಗಳ ಫಂಡಿನಿಂದ ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳ ದೇಣಿಗೆ ನೀಡಿದ್ದನ್ನು ಅವರು ಉದಾಹರಿಸುತ್ತಾರೆ.

ಇಲ್ಲದ್ದರಿಂದ ಹಗಲು ಹೊತ್ತು ರೈಲ್ವೆ ನಿಲ್ದಾಣದಲ್ಲಿ, ರಾತ್ರಿ ಹೊತ್ತು ಆಸ್ಪತ್ರೆಯಲ್ಲಿ ತಾಯಿಯ ಪಲ್ಲಂಗದ ಕೆಳಗೆ (ಕಳ್ಳತನದಿಂದ) ಕಳೆದು ತಾಯಿ ಸೇವೆ ಮಾಡಿದರು. ಆದರೆ ತಾಯಿಯದು ಕೇವಲ ಕೆಲವು ತಿಂಗಳುಗಳ ಬದುಕು ಎಂಬುದು ಗೊತ್ತಿತ್ತು. "ತಾಯಿ ಕೊನೆಯುಸಿರೆಳೆದಾಗ ನಾನು ನಿಜವಾಗಿಯೂ ಅನಾಥನಾದೆ" ಎಂದು ಆ ದಿನಗಳನ್ನು ನೆನೆಯುತ್ತಾರೆ.

ಒಬ್ಬ ತಂಗಿ ಆಗಲೇ ಗಂಡನ ಮನೆ ಸೇರಿದ್ದಳು. ಇನ್ನೊಬ್ಬ ತಂಗಿಯನ್ನು ಕಾಲೇಜೊಂದಕ್ಕೆ ಸೇರಿಸಿ ಹುಬ್ಬಳ್ಳಿಯಲ್ಲಿಯೇ ಹಾಸ್ಟೆಲ್‌ನಲ್ಲಿಟ್ಟು ತಮ್ಮ ಪರೀಕ್ಷೆಯತ್ತ ಗಮನ ಹಾಕಿದರು.

ಹಗಲು- ರಾತ್ರಿ ಓದಿ, ಬಂಗಾರದ ಪದಕದೊಡನೆ ಎಂ.ಬಿ.ಬಿ.ಎಸ್. ಮುಗಿಸಿದ ಸದುಗೆ ಕೆ.ಎಂ.ಸಿ.ಯಲ್ಲಿಯೇ ಲೆಕ್ಚರರ್ ಹುದ್ದೆ ಕಾದಿತ್ತು.

ಅಂಗರಚನಾ ಶಾಸ್ತ್ರ (ಅನಾಟಮಿ) ವಿಭಾಗದಲ್ಲಿ ಲೆಕ್ಚರರ್ ಆಗಬೇಕಿದ್ದ ಸದು ಆಗಿನ ಫಿಜಿಷಿಯನ್ ಡಾ. ಎನ್.ಕೆ. ಚನ್ನಪ್ಪ ಅವರ ಅಭಿಲಾಷೆಯಂತೆ ಪೆಥಾಲಜಿ (ರೋಗನಿದಾನ ಶಾಸ್ತ್ರ)ವಿಭಾಗಕ್ಕೆ ಸೇರ್ಪಡೆಗೊಂಡರು.

ಪೆಥಾಲಜಿ ವಿಭಾಗದಲ್ಲಿನ ಅವರ ಅನುಭವ ಹೊಸ ಮಜಲು ಮುಟ್ಟಿಸಲು ನೆರವಾಯಿತು. ೧೯೬೭ರಿಂದ ನಾಲ್ಕು ವರ್ಷಗಳವರೆಗಿನ ಕೆ.ಎಂ.ಸಿ. ನೌಕರಿ ಅವಧಿಯಲ್ಲಿ ಎಂ.ಡಿ. ಪದವಿ ಪಡೆದ ಡಾ. ನಾಗಲೋಟಿಮಠರಿಗೆ ಸರಕಾರಿ ನೌಕರಿಗಿಂತ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುವತ್ತಲೇ ಹೆಚ್ಚು ಆಸಕ್ತಿ.

ಬೆಳಗಾವಿಯ ಹಿರಿಯ ವೈದ್ಯ ಡಾ. ಜೀರಗೆ ಅವರು ಅಸಿಸ್ಟೆಂಟ್ ಪ್ರೊಫೆಸರ್ ಎಂದು ಜವಾಹರಲಾಲ್ ನೆಹರೂ ವೈದ್ಯಕೀಯ ಕಾಲೇಜಿಗೆ ಆಹ್ವಾನ ನೀಡಿದಾಗ ಇವರಿಗೆ ಬಯಸಿದ್ದು ತಂತಾನೆ ಬಂದೊದಗಿದಂತಾಯಿತು.

ಇಲ್ಲಿಯ ಸೇವಾವಧಿಯಲ್ಲಿ ಡಾ. ವೈ.ಎನ್. ಭೆಂಡೆ, ಡಾ. ಪಾರ್ಥಸಾರಥಿ, ಡಾ. ಡಿ.ಜಿ. ರೆಡ್ಡಿ, ಡಾ. ಶ್ರೀರಾಮಾಚಾರ್ಯ, ಡಾ. ಘೋರ್ಪಡೆ, ಡಾ. ರಾಮಪ್ರಸಾದ್, ಚಂಡೀಗಢದ ಡಾ. ಐಕಟ್ ಮುಂತಾದವರ ಸ್ನೇಹ, ಸಂಪರ್ಕ, ಮಾರ್ಗದರ್ಶನಗಳು ಡಾ. ನಾಗಲೋಟಿಮಠ ಅವರಿಗೆ ಸದಾ ಕಾಲದ ಬೆಳಕು. ಒಂದು ಸಂದರ್ಭದಲ್ಲಿ ಕೆಲವೊಂದು ಕಾರಣಗಳಿಂದ ಬೇಸತ್ತು ಡಾ. ನಾಗಲೋಟಿಮಠರು ರಾಜೀನಾಮೆ ಪತ್ರವನ್ನು ಡಾ. ಜೀರಗೆ ಅವರಿಗೆ ನೀಡಿದಾಗ, "ತಮ್ಮಾ ನಾನಂತೂ ನಿನ್ನ ಕೈಯಾಗ ತುಂಬಿದ ತಾಟು ಕೊಟ್ಟೇನಿ; ಉಣ್ತೀಯೋ ಅಥವಾ ಚೆಲ್ಲಿ ಹೋಕ್ತಿಯೋ ನೀನs ವಿಚಾರ

ಮಾಡು" ಎಂದು ಶಾಂತಚಿತ್ತರಾಗಿ ಹೇಳಿದಾಗ ಡಾ. ನಾಗಲೋಟಿಮಠ ತಣ್ಣಗಾಗಿ ಕೆಲಸಕ್ಕೆ ಮರಳಿದ್ದರು.

ಇದೇ ಕಾಲಕ್ಕೆ ಆಕಸ್ಮಿಕವಾಗಿ ಪರಿಚಯವಾದ ಡಾ. ವಿ.ಎಸ್. ಮೆಟಗುಡ್ಡ ಮಠ ಅವರು ಸಹ ನಾಗಲೋಟಿಮಠರ ಬದುಕಿನಲ್ಲಿ ಹೊಸ ಅಧ್ಯಾಯವನ್ನೇ ನಿರ್ಮಿಸಲು ಕಾರಣರಾದರು.

ಸುದೀರ್ಘ ಕಾಲದವರೆಗಿನ ಬೆಳಗಾವಿಯ ಜೆ.ಎನ್.ಎಂ.ಸಿ. ಸೇವೆಯಲ್ಲಿ ಡಾ. ನಾಗಲೋಟಿಮಠ ನಿರ್ವಹಿಸಿದ ಸೇವೆ ವೈದ್ಯಕೀಯ ರಂಗದಲ್ಲಿಯೇ ಹೊಸ ದಾಖಲೆಗೆ ನಾಂದಿಯಾಯಿತು. ಅವರು ಸ್ಥಾಪಿಸಿ ಬೆಳೆಸಿದ ಪೆಥಾಲಜಿ ಮ್ಯೂಜಿಯಂ ಏಷ್ಯಾ ಖಂಡದಲ್ಲಿಯೇ ಅತ್ಯುತ್ತಮ ಎಂಬ ಪ್ರಶಸ್ತಿ ಪಡೆದಿದ್ದೇನು ಕಡಿಮೆ ಸಾಧನೆಯೇ?

ಬೆಳಗಾವಿಯ ನಂತರ ವಿಜಾಪುರ, ಮೈಸೂರುಗಳಲ್ಲಿ ಕಾರ್ಯನಿರ್ವಹಿಸಿದ ಡಾ. ನಾಗಲೋಟಿಮಠ ಇದೀಗ ಉತ್ತರ ಕರ್ನಾಟಕದ ಹೆಮ್ಮೆಯ ವೈದ್ಯಕೀಯ ಸಂಸ್ಥೆ ಕೆ.ಎಂ.ಸಿ.(ಕಿಮ್ಸ್)ಯ ನಿರ್ದೇಶಕರಾಗಿ ಸರಕಾರದಿಂದ ನೇಮಕಗೊಂಡಿದ್ದಾರೆ.

ಒಂದು ಕಾಲಕ್ಕೆ ಕೇವಲ ಈ ಸಂಸ್ಥೆಯ ಒಂದು ವಿಭಾಗವನ್ನು ಚೊಕ್ಕಟಗೊಳಿಸಿದ್ದರು ಡಾ. ನಾಗಲೋಟಿಮಠ. ಆದರೆ ಈಗ ಅವರ ಸ್ಪರ್ಶಕ್ಕಾಗಿ ಪೂರ್ತಿಯಾಗಿ 'ಕಿಮ್ಸ್' ಕಾತರದಿಂದ ಕಾಯುತ್ತಿದೆ.

☆ ☆ ☆



'ಯಮಲೋಕಕ್ಕೆ ಕರದೊಯ್ಯಲು 'ವಾರಂಟ್' ತಂದಿದ್ದೀರೇನ್ರಿ?''

ಕೃಷ್ಣನ ಆರಾಧನೆ: ಎಷ್ಟು ಪ್ರಾಚೀನ ?

(ಆಧಾರ: ಜೈನೇಂದ್ರ ವಾತ್ಸ್ಯಾಯನರ ಲೇಖನ)

ಅನೇಕ ಕೃಷ್ಣರು ಆಗಿಹೋಗಿದ್ದಾರೆಂಬ ವಾದ ಪುರಾತತ್ವ ಶಾಸ್ತ್ರಜ್ಞರದು...

● ಶ್ರೀಕಾಂತ

ವಾಸುದೇವ-ಕೃಷ್ಣನ ಉಪಾಸನೆ ಎಂದು ಪ್ರಾರಂಭವಾಯಿತೆಂಬ ಬಗೆಗಾಗಲಿ ಹೇಗೆ ವಿಕಾಸಗೊಂಡಿತೆಂಬ ಬಗೆಗಾಗಲಿ ವಿದ್ವಾಂಸರಲ್ಲೇ ಏಕಮತ್ಯವಿಲ್ಲ. ಆದರೂ ಪುರಾತತ್ವಶಾಸ್ತ್ರ ಒದಗಿಸುವ ಸಾಕ್ಷ್ಯಾಧಾರಗಳಿಂದ ಅದು ಯಾವಾಗ ಆರಂಭವಾಯಿತೆಂಬುದನ್ನು ನಿರ್ಧರಿಸಬಹುದು. ಚಿತ್ತೂರ್ಗಡದ ಬಳಿಯಿರುವ ಘೋಷುಂಡಿಯಲ್ಲಿ ದೊರೆತ ಶಿಲಾಶಾಸನ ಕ್ರಿಸ್ತಪೂರ್ವ ಒಂದು ಅಥವಾ ಎರಡನೆ ಶತಮಾನಕ್ಕೆ ಸೇರಿದ್ದು. ಅದರಲ್ಲಿ ಸರ್ವತಾಕ ಗಂಬಾತ ತನ್ನನ್ನು ವಾಸುದೇವ ಹಾಗೂ ಸಂಕರ್ಷಣನ ಭಕ್ತನೆಂದು ಕರೆದುಕೊಂಡ ಉಲ್ಲೇಖ ಬರುತ್ತದೆ. ತನ್ನನ್ನಾತ ಭಗವಾನನೆಂದೂ ಅಶ್ವಮೇಧಯಾಜಿಯೆಂದೂ ಕರೆದುಕೊಂಡಿದ್ದರಿಂದ ಸರ್ವತಾಕ ಯಾವನೋ ಬ್ರಾಹ್ಮಣರಾಜನಾಗಿದ್ದನೆಂದು ಊಹಿಸಬಹುದು.

ಆ ಶಿಲಾಲೇಖನದಲ್ಲಿ ಸಂಕರ್ಷಣ ಹಾಗೂ-ವಾಸುದೇವರ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆಯಲ್ಲದೆ ಸಂಕರ್ಷಣ ವಾಸುದೇವರನ್ನು ಭಗವತ್, ಅನಿಹತ್ ಹಾಗೂ ಸರ್ವೇಶ್ವರನೆಂದೂ ಕರೆಯಲಾಗಿದೆ. ಅಲ್ಲಿ ಈ ದೇವತೆಗಳ ಮೂರ್ತಿಗಳ ನಿರ್ಮಾಣಕ್ಕೆ ಅಗತ್ಯವಾದ ಶಿಲೆಯ ಬಗ್ಗೆ ಚರ್ಚಿಸಲಾಗಿದೆಯಲ್ಲದೆ ಅದನ್ನು 'ನಾರಾಯಣವಾಟಕಾ' ಎಂದೂ ಹೆಸರಿಸಲಾಗಿದೆ. (ಸಂಕರ್ಷಣ-ವಾಸುದೇವಾಭ್ಯಾಂ ಪೂಜಾಶಿಲಾ ಪ್ರಕಾರೋ ನಾರಾಯಣವಾಟಕಾ) ಕ್ರಿಸ್ತಪೂರ್ವ ಎರಡನೆ ಶತಮಾನಕ್ಕೆ ಸೇರಿದ ಶಿಲಾಸ್ತಂಭವೊಂದು ಬೇಸನಗರದಲ್ಲಿದೆ. ಈ ಸ್ತಂಭದ ಮೇಲೊಂದು ಗರುಡಧ್ವಜ. ಸ್ತಂಭದ ಮೇಲೆಯೆ ಶಿಲಾಲೇಖನ. ಕಾಲನ ಪ್ರತಾಡನದಿಂದ ಸ್ತಂಭದ ಮೇಲ್ಭಾಗ ಜೀರ್ಣಿಸಿ ಹೋಗಿದ್ದರೂ ಶಿಲಾಲೇಖದ ಅಕ್ಷರಗಳಿನ್ನೂ ಮಾಸಿಲ್ಲ. ಶುಂಗವಂಶದ ದೊರೆ ಭಾಗಭದ್ರನ ಕಾಲದಲ್ಲಿ ಈ ಸ್ತಂಭ ನಿರ್ಮಾಣಗೊಂಡಿತೆಂದೂ ತಕ್ಷಶಿಲೆಯ ಹೀಲಿಯೋಡೋರಸ್ ಗ್ರೀಕ್ ದೊರೆ ಆ್ಯಂಟಿಲಿಕಿಟ್‌ನ ರಾಯಭಾರಿಯಾಗಿ ಭಾಗಭದ್ರನ ಆಸ್ಥಾನದಲ್ಲಿದ್ದನೆಂದೂ ಈ ಶಿಲಾಲೇಖ ತಿಳಿಸುತ್ತದಲ್ಲದೆ ಹೀಲಿಯೋಡೋರಸ್ ವೈಷ್ಣವಧರ್ಮವನ್ನು ಸ್ವೀಕರಿಸಿದ್ದರ ಕುರಿತೂ ಪ್ರಸ್ತಾಪಿಸುತ್ತದೆ. ಅದರ ಪ್ರಕಾರ ಹೀಲಿಯೋಡೋರಸ್ ತನ್ನನ್ನು ಭಾಗವತ ಸಂಪ್ರದಾಯಕ್ಕೆ ಸೇರಿದವನೆಂದೂ ವಾಸುದೇವನ ಭಕ್ತನೆಂದೂ ಕರೆದುಕೊಳ್ಳುತ್ತಿದ್ದನಂತೆ.

ನಾನಾಘಾಟಿನಲ್ಲೊಂದು ಶಿಲಾಲೇಖನವಿದೆ. ಕ್ರಿಸ್ತಪೂರ್ವ ಮೊದಲನೆ ಶತಮಾನದಲ್ಲಿ ಆಳಿದ ಸಾತವಾಹನ ಕುಲಕ್ಕೆ ಸೇರಿದ ಮೊದಲನೆಯ ಸಾತಕರ್ಣಿಯ ಹೆಂಡತಿ ನಾಗಾನಿಕೆಯು ಪ್ರತಿಷ್ಠಾಪಿಸಿದ್ದು. ಶಿಲಾಲೇಖ ಅನೇಕ ದೇವದೇವತೆಗಳ ಪ್ರಾರ್ಥನೆಯಿಂದ ಆರಂಭವಾಗುತ್ತದೆ. ಈ ದೇವದೇವತೆಗಳ ಪಟ್ಟಿಯಲ್ಲಿ ಸಂಕರ್ಷಣ-ವಾಸುದೇವರೂ ಸೇರಿದ್ದಾರೆ. ಕ್ರಿಸ್ತಶಕ ಆದೇ ಆಗ ಪ್ರಾರಂಭವಾಗುತ್ತಿದ್ದ ಕಾಲದಲ್ಲಿ ಘೋಟಾಷನೆಂಬ ಶಕವಂಶದ ದೊರೆ ಸ್ಥಾಪಿಸಿದ ಶಿಲಾಲೇಖನ ಮಥುರೆಯಲ್ಲಿದ್ದು, ಭಗವತ್ ವಾಸುದೇವರ ಮಹಾಸ್ಥಾನದಲ್ಲಿ ತೋರಣ, ದೇವಕುಲ ಇತ್ಯಾದಿಗಳನ್ನು ಪ್ರತಿಷ್ಠಾಪಿಸಿದ ಉಲ್ಲೇಖ ಅದರಲ್ಲಿದೆ. (ವಸುನಾ

ಭಗವತೋ ವಾಸುದೇವಸ್ಯ ಮಹಾಸ್ಥಾನ [ಕೇದೇವಕು] ಲಂ ತೋರಣಂ ವೇ [ದಿಕಾ ಪ್ರತಿ]ಷ್ಠಾಪಿತಂ ತರ್ಮ್) ಇವೆಲ್ಲವನ್ನೂ ನೋಡಲಾಗಿ ಕ್ರಿಸ್ತಶಕ ಮೊದಲನೆಯ ಶತಮಾನದ ವೇಳೆಗೆ ವಾಸುದೇವ ಸಂಕರ್ಷಣರ ಉಪಾಸನೆ ಎಲ್ಲ ಕಡೆಗೆ ಹಬ್ಬಿತ್ತೆಂದೂ ಗುಪ್ತರ ಕಾಲದ ಸುಮಾರಿಗೆ ಉತ್ಕಟತೆಯ ಹಂತವನ್ನು ತಲಪಿತ್ತೆಂದೂ ಸುಲಭವಾಗಿ ಭಾವಿಸಬಹುದು.

ಮಹಾಭಾರತದಂತಹ ಸಾಹಿತ್ಯಕ ಕೃತಿಯಲ್ಲಂತೂ ಸರಿಯೆ, ಪಾಣಿನಿಯ ಅಷ್ಟಾಧ್ಯಾಯಿಯಲ್ಲಿಯೂ ಈ ಕುರಿತು ಉಲ್ಲೇಖಗಳು ದೊರೆಯುತ್ತವೆ. ಪತಂಜಲಿಯ 'ಮಹಾಭಾಷ್ಯ'ದಲ್ಲಿಯೂ ವಾಸುದೇವ-ಕೃಷ್ಣರ ಬಗ್ಗೆ ಉಲ್ಲೇಖವಿದೆ. ಕ್ಷತ್ರಿಯ ವಾಸುದೇವ ಹಾಗೂ ದೇವತಾ ವಾಸುದೇವರನ್ನು ಕುರಿತು ಅಲ್ಲೊಂದು ಪ್ರಸ್ತಾಪ ಬರುತ್ತದೆಯಾದರೂ ಅವರಿಬ್ಬರೂ ಬೇರೆ ಬೇರೆ ಕುಲಕ್ಕೆ ಸೇರಿದವರು; ಆದ್ದರಿಂದ ಅವರಿಬ್ಬರೂ ಬೇರೆ ಬೇರೆ ಎಂದು ಭಾವಿಸುವುದಕ್ಕೆ ಕಾರಣವಿಲ್ಲವೆಂದು ಇತಿಹಾಸಕಾರರು ಹೇಳುತ್ತಾರೆ. ಅಲ್ಲಿನ ಸಂದರ್ಭವನ್ನು ಪರಿಗಣಿಸಿದಾಗ ಅದು ಕ್ಷತ್ರಿಯರ ಹೆಸರೆಂದೂ ಅದೇ ಕಾಲಕ್ಕೆ ದೇವರ ಹೆಸರೆಂದೂ ವೇದ್ಯವಾಗುತ್ತದೆ. ಪ್ರಾಚೀನ ಪಾಲಿ ಗ್ರಂಥವಾದ 'ಅಂಗುತ್ತರ ನಿಕಾಯ'ದಲ್ಲಿ ಆ ಕಾಲದ ಧಾರ್ಮಿಕ ವಿಚಾರಗಳನ್ನು ಕುರಿತ ಚರ್ಚೆ ಬರುತ್ತದೆಯಾದರೂ ವಾಸುದೇವನ ಪೂಜೆಯ ಉಲ್ಲೇಖವಿಲ್ಲ. ಉಪಲಬ್ಧವಿರುವ ಇನ್ನೊಂದು ಪಾಲಿಗ್ರಂಥವೆಂದರೆ 'ನಿದ್ದೇಶ.' ಬೌದ್ಧ ಸಾಹಿತ್ಯದಲ್ಲಿ ಬುದ್ಧವಚನಕ್ಕಿರುವಷ್ಟೇ ಮಹತ್ವ ಈ ಪುಸ್ತಕಕ್ಕೆ. ಆದರೆ 'ನಿದ್ದೇಶ' ಎಷ್ಟು ಪ್ರಾಚೀನವಾಗಿದೆಯೆಂಬ ಬಗ್ಗೆಯೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಡಾ. ಭಾಂಡಾರಕರರ ಪ್ರಕಾರ ಈ ಪುಸ್ತಕ ಕ್ರಿಸ್ತಪೂರ್ವ ನಾಲ್ಕನೆಯ ಶತಮಾನದಲ್ಲಿ ರಚಿತವಾಗಿದ್ದರೆ ಇನ್ನು ಅನೇಕ ವಿದ್ವಾಂಸರ ಪ್ರಕಾರ 'ನಿದ್ದೇಶ'ದ ಕಾಲ ಕ್ರಿಸ್ತಪೂರ್ವ ಒಂದನೆಯ ಶತಮಾನಕ್ಕಿಂತ ಹಿಂದೆ ಸರಿಯುವುದಿಲ್ಲ. ಅನೇಕ ದೇವ-ದೇವತೆಗಳ ಪೂಜಾವಿಧಾನ ಇದರಲ್ಲಿದ್ದು ವಾಸುದೇವ ಹಾಗೂ ಬಲದೇವರ ಪೂಜೆಯ ಬಗ್ಗೆ ಇಲ್ಲಿ ವಿವರವಾಗಿ ಬಂದಿರುವುದು ಮಹತ್ವದ್ದು.

ಇವೆಲ್ಲ ಪ್ರಮಾಣಗಳನ್ನು ಗಮನಿಸಿದಾಗ ಪಾಣಿನಿಯ ಕಾಲದಲ್ಲಿ ಅಂದರೆ ಕ್ರಿಸ್ತಪೂರ್ವ ಐದು ಅಥವಾ ಆರನೆಯ ಶತಮಾನದ ಸುಮಾರಿಗೆ ವಾಸುದೇವನ ಪೂಜೆ ಪ್ರಚಲಿತವಾಗಿತ್ತು ಎಂದು ಸುಲಭವಾಗಿ ಗ್ರಹಿಸಬಹುದು. ಆದರೆ ವಾಸು



ದೇವ-ಕೃಷ್ಣರ ಪೂಜೆ ಎಂದಿನಿಂದ ಪ್ರಾರಂಭವಾಯಿತೆನ್ನುವುದನ್ನಾಗಲಿ ಈ ದೇವರ ಪರಿಕಲ್ಪನೆ ಹೇಗೆ ವಿಕಾಸಗೊಂಡಿತೆನ್ನುವುದನ್ನಾಗಲಿ ನಿಶ್ಚಿತವಾಗಿ ಹೇಳುವುದು ಕಷ್ಟ. ವಾಸುದೇವನೆಂಬಾತ ಬಹುಶಃ ವೃಷ್ಣಿವಂಶಕ್ಕೆ ಸೇರಿದವನಾಗಿರಬೇಕು. ಒಂದು

ಬೌದ್ಧ ಜಾತಕಕತೆಯನ್ನು ಗಮನಿಸಿದರೆ ಕೃಷ್ಣ ಎನ್ನುವುದು ಮೂಲತಃ ಒಂದು ಗೋತ್ರದ ಹೆಸರಾಗಿರಲೂಬಹುದು ಎನ್ನುವುದು ಡಾ. ಭಾಂಡಾರಕರರ ಅನುಮಾನ.

ಋಗ್ವೇದದ ಎಂಟನೆಯ ಮಂಡಲದಲ್ಲಿಯ ಒಂದು ಸೂಕ್ತದಲ್ಲಿ ಬರುವ ಋಷಿಯ ಹೆಸರು ಕೃಷ್ಣ. ಆತ ಆಂಗೀರಸನ ಕುಲಕ್ಕೆ ಸೇರಿದವ. 'ಕೃಷ್ಣ' ಹಾಗೂ 'ರಣ' ಶಬ್ದಗಳಿಂದ ಕಾರ್ಷ್ಣಾರ್ಣಾಯ ಹಾಗೂ ರಾಮಾಯಣ ಗೋತ್ರಗಳ ಹೆಸರುಗಳನ್ನು ಸೃಷ್ಟಿಸಲಾಯಿತೆಂದು ಪಾಣಿನಿಯ ಗ್ರಂಥ ಹೇಳುತ್ತದೆ. ಇವೆರಡೂ ಬ್ರಾಹ್ಮಣ ಗೋತ್ರಗಳು. ಕೃಷ್ಣನು ದೇವಕಿಯ ಪುತ್ರನೆಂದೂ ಘೋರ ಆಂಗೀರಸನ ಶಿಷ್ಯನೆಂದೂ ಛಾಂದೋಗ್ಯೋಪನಿಷತ್ತು ಹೇಳುತ್ತದೆ. ಕ್ಷತ್ರಿಯರಲ್ಲಿ ತಮ್ಮ ಹೆಸರಿನೊಡನೆ ಬ್ರಾಹ್ಮಣ ಗೋತ್ರವನ್ನೂ ಸೇರಿಸಿಕೊಳ್ಳುವ ಪರಂಪರೆ ಪ್ರಾಚೀನ ಕಾಲದಲ್ಲಿದ್ದುದರಿಂದ 'ವಾಸುದೇವ-ಕೃಷ್ಣ' ಎಂಬ ಹೆಸರು ಪ್ರಚಾರಕ್ಕೆ ಬಂತು ಎಂದು ಭಾಂಡಾರಕರರು ಹೇಳುತ್ತಾರಾದರೂ ಅದನ್ನು ಒಪ್ಪುವುದು ಕಷ್ಟ. ಅದು ಒಬ್ಬನದೇ ಹೆಸರಾಗಿರಬಹುದು ನಿಜ. ಆದರೆ ಕೃಷ್ಣ ಎನ್ನುವುದು ವಾಸುದೇವನ ಮೈಬಣ್ಣವನ್ನು ಸೂಚಿಸುತ್ತಿರಬಾರದೇಕೆ? ಅಥವಾ ತಂದೆ-ತಾಯಿಗಳ ಹೆಸರನ್ನು ನಾಮಕರಣ ಸಮಾರಂಭದಲ್ಲಿ ಇಡುವ ಪದ್ಧತಿ ಪ್ರಾಚೀನ ಭಾರತದಲ್ಲಿದ್ದುದರಿಂದ, ಪುರಾಣಗಳಲ್ಲಿ ಬಂದ ಹಾಗೆ ವಾಸುದೇವನ ಹೆಸರು, ತಂದೆ ವಸುದೇವನ ಹೆಸರನ್ನು ಆಧರಿಸಿರಬಾರದೇಕೆ?

ಕ್ರಿಸ್ತಪೂರ್ವ ನಾಲ್ಕನೆಯ ಶತಮಾನದ ಸುಮಾರಿಗೆ ವಾಸುದೇವ ಕೃಷ್ಣನ ಪೂಜೆ ಪ್ರಚಲಿತವಾಗಿತ್ತೆಂದೂ ಉತ್ತರ ಭಾರತದಲ್ಲಿ- ಅದರಲ್ಲೂ ವಿಶೇಷವಾಗಿ ಮಥುರೆಯ ಸುತ್ತಮುತ್ತಲಿನ ಪ್ರದೇಶದಲ್ಲಿ- ಕೃಷ್ಣನ ಪೂಜೆ ವ್ಯಾಪಕವಾಗಿ ನಡೆಯುತ್ತಿತ್ತೆಂದೂ ಮೆಗಾಸ್ಥನೀಸನ ವೃತ್ತಾಂತಗಳಿಂದ ಗೊತ್ತಾಗುತ್ತದೆ. ಕೇವಲ ಪೌರಾಣಿಕ ಸಾಹಿತ್ಯದಲ್ಲಷ್ಟೇ ಅಲ್ಲ, ವೈದಿಕ ಸಾಹಿತ್ಯದಲ್ಲೂ ಕೃಷ್ಣನ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಅಲ್ಲಿ ಆತ ಯೋಧರನ್ನು ಕಲೆ ಹಾಕಿ ಯಮುನಾನದಿಯ ತೀರದಲ್ಲಿ ಇಂದ್ರನೊಂದಿಗೆ ಯುದ್ಧಕ್ಕಿಳಿದದ್ದನ್ನು ವಿವರವಾಗಿ ಚಿತ್ರಿಸಲಾಗಿದೆ. ಪಾರಿಜಾತ ಪ್ರಸಂಗದಲ್ಲಾಗಲಿ ಗೋವರ್ಧನಗಿರಿಯ ವೃತ್ತಾಂತದಲ್ಲಾಗಲಿ ಕೃಷ್ಣನನ್ನು ಇಂದ್ರನಿಗೆ ವಿರೋಧವಾಗಿ ಚಿತ್ರಿಸಲಾಗಿದೆಯಾದ್ದರಿಂದ ವೈದಿಕ ಕೃಷ್ಣನಿಗೂ ಪೌರಾಣಿಕ ಕೃಷ್ಣನಿಗೂ ಏನಾದರೂ ಸಂಬಂಧ ಇದ್ದಿರಬೇಕೆಂದು ಅನ್ನಿಸದೆ ಇರುವುದಿಲ್ಲ.

ಹೀಗೆ ಭಾರತೀಯ ಸಾಹಿತ್ಯದಲ್ಲಿ ಕೃಷ್ಣನ ಪರಂಪರೆ ಸುದೀರ್ಘವಾಗಿದೆ. ಋಗ್ವೇದದಲ್ಲಿ ಒಬ್ಬ ಐತಿಹಾಸಿಕ ವ್ಯಕ್ತಿಯಾಗಿ ಕಾಣಿಸಿಕೊಂಡ ಆತ ಮಹಾಭಾರತದ ವೇಳೆಗೆ ದೈವತ್ವಕ್ಕೇ ಏರುತ್ತಾನೆ. ಇದನ್ನೆಲ್ಲ ಗಮನಿಸಿದರೆ ಕೃಷ್ಣಪರಂಪರೆ ಕ್ರಿಸ್ತಪೂರ್ವ ಏಳರಿಂದ ಆರನೆಯ ಶತಮಾನದಷ್ಟು ಹಳೆಯದು ಎಂದೇ ಹೇಳಬೇಕಾಗುತ್ತದೆ. ವಾಸುದೇವ ಕೃಷ್ಣ ಪರಿವಾರದ ಮಹತ್ವದ ವ್ಯಕ್ತಿಯಾಗಿದ್ದ; ಆದ್ದರಿಂದ ಅವನ ಆರಾಧನೆ ಪ್ರಾರಂಭವಾಯಿತು ಎಂದು ಹೇಳುವುದಾಗಲಿ, ಆತ ಒಂದು ಧಾರ್ಮಿಕ ಆಂದೋಲನವನ್ನು ಪ್ರಾರಂಭಿಸಿದ್ದರಿಂದ ಅವನನ್ನು ಪೂಜಿಸುವ ಪರಂಪರೆ ಪ್ರಾರಂಭಗೊಂಡಿತು ಎಂದು ಹೇಳುವುದಾಗಲಿ, ಭಕ್ತಿಪರಂಪರೆಯ ಅಧ್ವರ್ಯವಾಗಿದ್ದ ಆತ ಏಕೇಶ್ವರವಾದಿಯಾದುದರಿಂದ ಜನರು ಅವನನ್ನು ದೈವತ್ವಕ್ಕೇರಿಸಿದರು ಎಂದು ಹೇಳುವುದಾಗಲಿ ಅಪಕ್ವವಾದ ವಿಚಾರವೇ ಆಗುತ್ತದೆ. ಇದರರ್ಥ ಇವೆಲ್ಲ ಸತ್ಯಕ್ಕೆ ದೂರವಾದುವುಗಳೆಂದು ತಳ್ಳಿಹಾಕುವಂತಹವುಗಳಲ್ಲ. ಆತ ಧಾರ್ಮಿಕ ಆಂದೋಲನದ, ಭಕ್ತಿಪರಂಪರೆಯ ಅಧ್ವರ್ಯುವಾಗಿರಲೂಬಹುದು; ಏಕೇಶ್ವರವಾದಿಯಾಗಿರಲೂಬಹುದು. ಆದರೆ ಸಮಾಜದಲ್ಲಿ ಅವನ ಪ್ರಭಾವ ಎಷ್ಟು ಪ್ರಖರವಾಗಿತ್ತೆಂದರೆ ಮುಂದೆ ಕಾಲಾಂತರದಲ್ಲಿ ಬೇರೆ ಬೇರೆ ದೇವತೆಗಳನ್ನು ಆರಾಧಿಸುವವರೂ ಇಷ್ಟದೇವತೆಯೊಡನೆ ಅವನನ್ನು ತಾದಾತ್ಮಗೊಳಿಸಿಕೊಂಡ ಫಲವಾಗಿ ಕೃಷ್ಣನ ಆರಾಧನೆಯ ಪರಂಪರೆ ಅಖಂಡ ಭಾರತದಲ್ಲಿ ಅವಿಚ್ಛಿನ್ನವಾಗಿ ನಡೆದುಕೊಂಡು ಬಂದಿರಲೂ ಸಾಕು.

ಕನ್ನಡ ಕಥೆ

ಅನಾವರಣ

ಟಿ.ಬಿ. ಗುರುನಂಜಯ್ಯ

"ಕೆಲವೇ ದಿನ ಅವಕಾಶ ನೀಡಿ, ರಂಗಯ್ಯನವರೇ, ನಿಮ್ಮ ಬಾಡಿಗೆ ಹಣವೆಲ್ಲಾ ಕಟ್ಟಿಬಿಡ್ತೀವಿ. ನಮ್ಮ ಪರಿಸ್ಥಿತಿ ನಿಮಗೆ ತಿಳಿಯದೆ? ನಮ್ಮ ಯಜಮಾನರು ನೌಕರಿ ಮಾಡುತ್ತಿದ್ದ ಫ್ಲೈವುಡ್ ಕಾರ್ಖಾನೆ ಮುಚ್ಚಿ ಹತ್ತು ತಿಂಗಳಾಯ್ತು. ಬೇರೆ ಕಡೆ ಉದ್ಯೋಗಕ್ಕೆ ಪ್ರಯತ್ನ ಮಾಡ್ತಾ ಇದ್ದಾರೆ. ನೀವು ಈಗ ತಾಳಿಕೊಳ್ಳದೆ ಹೋದರೆ ಮತ್ಯಾರು ತಾಳಿಕೊಳ್ಳಬಲ್ಲರು? ನೀವೇ ಹೇಳಿ. ಕೈ ಮುಗಿದು ಕೇಳಿಕೊಳ್ಳುತ್ತೇನೆ, ಸ್ವಲ್ಪ ಕಾಲಾವಕಾಶ ನೀಡಿ," ಎಂದು ಗೋಗರೆದಳು ರಮಾ ಮನೆಯ ಮಾಲಿಕ ರಂಗಯ್ಯನವರ ಮುಂದೆ.

"ಎಷ್ಟು ತಿಂಗಳು ಕಾಯುವುದು ರಮಾದೇವಿಯವರೆ? ನನಗೂ ಸಂಸಾರ, ಮಕ್ಕಳು-ಮರಿ ಎಲ್ಲಾ ಇದ್ದಾರೆ. ನಾವು ವಠಾರದಲ್ಲಿ ವಸೂಲಾಗುವ ಬಾಡಿಗೆಯಿಂದಲೇ ಜೀವನ ನಡೆಸಬೇಕು. ನನಗೂ ನೌಕರಿಯಿಲ್ಲ, ನಾನೂ ನಿವೃತ್ತಿಯಾಗಿರುವವ. ಹಾಗೂ ಹೀಗೂ ನಾಲ್ಕು ತಿಂಗಳು ತಳ್ಳಿದೆ. ಈಗ ನನಗೂ ತೊಂದರೆಯಾಗಿದೆ. ಮಕ್ಕಳ ಪರೀಕ್ಷೆಗೆ ಫೀಸ್ ಕಟ್ಟಬೇಕಾಗಿದೆ. ಇನ್ನು ಮೂರು ದಿನಗಳಲ್ಲಿ ಹಣ ತುಂಬದೇ ಹೋದಲ್ಲಿ ನನ್ನ ಎರಡು ಮಕ್ಕಳು ಈ ವರ್ಷದ ಪರೀಕ್ಷೆಗೆ ಕೂಡುವಹಾಗಿಲ್ಲ, ಅವರನ್ನು ಮನೆಯಲ್ಲಿ ಹಾಗೆಯೇ ಕೂರಿಸಿಕೊಳ್ಳಲು ಸಾಧ್ಯವೇ? ನೀವೇ ಹೇಳಿ. ನಿಮ್ಮ ಮೂರು ತಿಂಗಳ ಅಡ್ವಾನ್ಸ್, ಯಾವಾಗಲೋ ತೀರಿಹೋಯಿತು. ಇನ್ನು ಕಾಯುವ ತಾಳ್ಮೆ ನನಗಿಲ್ಲ, ಬ್ಯಾಂಕ್ ಉದ್ಯೋಗಿಯೊಬ್ಬರು ಬಾಡಿಗೆ ಜಾಸ್ತಿ ಕೊಡಲು ತಯಾರಿದ್ದಾರೆ. ನೀವು ಖಾಲಿ ಮಾಡಿದ ತಕ್ಷಣ ಎಂಟು ತಿಂಗಳ ಅಡ್ವಾನ್ಸ್ ಕೊಡಲು ಸಹ ತಯಾರಿದ್ದಾರೆ. ಅವರು ನಾಳೆ ಬರಲಿದ್ದಾರೆ. ನಾನು ನಾಳೆ ಸಂಜೆಯತನಕ ಕಾಯುತ್ತೇನೆ. ಅಷ್ಟರೊಳಗೆ, ಬಾಡಿಗೆ ಹಣ ಪಾವತಿ ಮಾಡದೇಹೋದಲ್ಲಿ ನಮ್ಮ ಜನರಿನ್ನಿಟ್ಟು ನಿಮ್ಮ ಸಾಮಾನನ್ನೆಲ್ಲಾ ಮನೆಯಿಂದ ಹೊರಗೆ ಹಾಕಿಸಿ, ಬೇರೆಯವರಿಗೆ ಬಾಡಿಗೆ ಕೊಡಬೇಕಾಗುತ್ತದೆ. ನಿಮಗಿದು ಕೊನೆಯ ಅವಕಾಶ. ನಿಮ್ಮ ಯಜಮಾನರು ಬಂದರೆ ತಿಳಿಸಿಬಿಡಿ," ಎಂದು ಹೇಳುತ್ತಾ, ಮನೆಯ ಮಾಲಕ ರಂಗಯ್ಯನವರು ಸಿಟ್ಟಿನಿಂದ ವಾಪಸಾಗುತ್ತಿದ್ದುದನ್ನು ರಮಾ ಅಸಹಾಯಕಳಾಗಿ ನೋಡುತ್ತಾ ನಿಂತಳು. ತಾನು ಮನೋಹರನನ್ನು ಮದುವೆಯಾಗಿ ಬಂದಾಗಿನಿಂದ ಕಳೆದುಹೋದ ದಿನಗಳ ಚಿತ್ರಣ ಅವಳ

> **ಮೂರ್ಛಿತ ವ್ಯಕ್ತಿಯ ಜೇಬಿನ ಪರ್ಸಿನಲ್ಲಿ ಸಿಕ್ಕಿದ್ದ ಚೀಟಿಯನ್ನು ಮನೋಹರ ತೆಗೆದು ಓದಲಾರಂಭಿಸಿದ.**

ಮನಃಪಟಲದ ಮೇಲೆ ಒಮ್ಮೆಲೆ ಮೂಡಿ ಕಣ್ಣುಗಳಲ್ಲಿ ನೀರು ತುಂಬಿಬಂತು.

ರಮಾ ಮದುಮಗಳಾಗಿ ಮನೋಹರನ ಮನ ತುಂಬಿ, ಅವನು ತನ್ನ ಮನೆ ತುಂಬಿಸಿಕೊಂಡಾಗ, ಮನೋಹರ ಧಾರವಾಡದ ಪ್ಲೈವುಡ್ ಕಾರ್ಖಾನೆಯಲ್ಲಿ ಸೂಪರ್‌ವೈಸರ್ ಆಗಿ ಕೆಲಸ ಮಾಡುತ್ತಿದ್ದ. ಕೈತುಂಬಾ ಸಂಬಳ. ಯಾವುದಕ್ಕೂ ಕೊರತೆ ಇರಲಿಲ್ಲ. ಅವರ ಪಾಲಿಗೆ ತುಂಬಾ ಆನಂದದ ದಿನಗಳು ಅವು. ಹೀಗಿರುವಾಗಲೇ ಅವನ ತಂದೆ ತಾಯಿಗಳು ದೈವಾಧೀನರಾದರು. ಅವರ ಆಸ್ಪತ್ರೆ ಖರ್ಚು- ತಿಥಿ ಇವುಗಳಿಗೆಲ್ಲಾ ಮನೋಹರ ಧಾರಾಳವಾಗಿಯೇ ಹಣ ಖರ್ಚು ಮಾಡಿದ್ದ. ಮುದ್ದಾದ ಎರಡೇ ಮಕ್ಕಳು. ಮಗಳು 'ಪ್ರೀತಿ'. ಮಗ 'ಶ್ರೇಯಸ್'. ಮಕ್ಕಳಿಬ್ಬರೂ ಬೆಳೆದದ್ದೇ ಗೊತ್ತಾಗಲಿಲ್ಲ. ಮನೋಹರ ಕೆಲಸ ಮಾಡುತ್ತಿದ್ದ ಕಾರ್ಖಾನೆಯ ಆಡಳಿತದವರು, ತಮ್ಮ ನೌಕರರಿಗೆ ಕೈತುಂಬಾ ಸಂಬಳ-ಸವಲತ್ತುಗಳನ್ನು ಒದಗಿಸಿದ್ದರು. ಕಾರ್ಮಿಕ ಮತ್ತು ಮಾಲಿಕರ ಬಾಂಧವ್ಯ ಚೆನ್ನಾಗಿಯೇ ಇತ್ತು. ಆದರೆ ಮೂರು ವರ್ಷಗಳ ಹಿಂದೆ ಅರಣ್ಯ ಇಲಾಖೆ ತನ್ನ ಧೋರಣೆ ಬದಲಾಯಿಸಿ ಕಂಪನಿಗೆ ೯೯ ವರ್ಷಗಳ ಕಾಲ ಲೀಸ್ ಮೇಲೆ ನೀಡಿದ್ದ ಅರಣ್ಯ ಭಾಗವನ್ನು ತನ್ನ ವಶಕ್ಕೆ ತೆಗೆದುಕೊಂಡಿತ್ತು. ಸರಕಾರ ನಿಷೇಧಿಸಿದ್ದರಿಂದ ಬೇರೆ ಕಡೆಯಿಂದಲೂ ಮರ ಕಡಿದು ತರುವಹಾಗಿರಲಿಲ್ಲ. ಹಾಗಾಗಿ, ಕಾರ್ಖಾನೆಗೆ ಬೇಕಾಗಿದ್ದ ಕಟ್ಟಿಗೆ ಸರಬರಾಜು, ಏಕಾ-ಏಕಿ ನಿಂತುಹೋಗಿತ್ತು. ಕಂಪನಿಯವರು, ಮಲೇಷಿಯಾದಿಂದ ಮರದ ದಿಮ್ಮಿಗಳನ್ನು ತರಿಸಿ, ಸ್ವಲ್ಪ ದಿನ ಉತ್ಪಾದನೆ ಮುಂದುವರೆಸಿದ್ದರು. ನಂತರ ಅದರ ಸರಬರಾಜಿಗೂ ಕುತ್ತು ಬಂತು. ಮಲೇಷಿಯಾದಿಂದ ಸರಬರಾಜಾಗುತ್ತಿದ್ದ ಮರದ ಬೆಲೆ ಒಮ್ಮೆಲೆ ಎರಡುಪಟ್ಟು ಜಾಸ್ತಿಯಾಯಿತು. ಆದರದಲ್ಲಿ ಕೊಂಡು ಕಂಪನಿ ವಿಪರೀತ ನಷ್ಟ ಅನುಭವಿಸಬೇಕಾಯಿತು. ಬೇರೆ ಕಡೆ ಬೇಕಾದ ಮರದ ದಿಮ್ಮಿಗಳು ಸಿಕ್ಕದಂತಾಯಿತು. ಹೀಗಾಗಿ ಕಾರ್ಖಾನೆಯ ಉತ್ಪಾದನೆಗೆ ಧಕ್ಕೆ ಬಂದು ಆಗಾಗ ಕಾರ್ಖಾನೆ ಸ್ಥಗಿತಗೊಳ್ಳತೊಡಗಿತು. ಆಡಳಿತ ವರ್ಗದವರು ವಿಧಿಯಿಲ್ಲದೆ ಲೇ-ಆಫ್ ಘೋಷಿಸಿ, ಸ್ವಲ್ಪ ದಿನ ಕಾರ್ಖಾನೆಯನ್ನು ಮುಂದುವರಿಸಿದರು. ಆದರೂ ಕಂಪನಿಯ ನಷ್ಟ ದಿನೇ ದಿನೇ ಏರುತ್ತಾ ಹೋಯಿತು. ಕಾರ್ಖಾನೆಯನ್ನು ಇನ್ನು ಮುಂದುವರೆಸುವುದು ಸಾಧ್ಯವಿಲ್ಲ ಎಂದಾದಾಗ ಆಡಳಿತ ವರ್ಗ ಒಂದು ದಿನ ಅದನ್ನು ಮುಚ್ಚಿಯೇ ಬಿಟ್ಟಿತು. ಸುಮಾರು ೧೫ ವರ್ಷ ಐಷಾರಾಮ ಜೀವನ ನಡೆಸಿದ್ದ ಮನೋಹರ ಈಗ ಅನೇಕ ತಿಂಗಳವರೆಗೆ ಸಂಬಳವಿಲ್ಲದೇ ಬೀದಿಗೆ ಬಿದ್ದಿದ್ದ.

ಆಗ ಕಂಡಿದ್ದು No Vacancy ಬೋರ್ಡುಗಳನ್ನೇ.

ಆ ವೇಳೆಗೆ ಹೆಂಡತಿಯ ಮೈಮೇಲಿನ ಆಭರಣಗಳೆಲ್ಲಾ, ಮಾರವಾಡಿಯ ಅಂಗಡಿ ಸೇರಿದ್ದವು.

ಆ ದಿನ ಮನೋಹರ ಮನೆಗೆ ತಡವಾಗಿ ಬಂದಾಗ ರಮಾ ಅವನನ್ನು ತರಾಟೆಗೆ ತೆಗೆದುಕೊಂಡಳು.

"ಏನ್ರೀ, ನೀವು ಎಷ್ಟು ಹೊತ್ತಿಗೆ ಮನೆಗೆ ಬರೋದು? ರಂಗಯ್ಯ ಬಂದು ಬಾಡಿಗೆ ಹಣಕ್ಕೆ ತಗಾದೆ ಮಾಡಿ ಹೋದ. ನಾಳೆ ಹಣ ಚುಕ್ತಾ ಮಾಡದಿದ್ರೆ, ಮನೆ ಸಾಮಾನನ್ನೆಲ್ಲಾ ಹೊರಗೆ ಹಾಕಿಸಿ, ಬೇರೆಯವರಿಗೆ ಕೊಡ್ತೀನಿಂತ ಹೆದರಿಸಿ ಬೇರೆ ಹೋಗಿದ್ದಾನೆ. ಈಗೇನು ವ್ಯವಸ್ಥೆ ಮಾಡ್ತೀರಾ? ಇದ್ದ ಬಂಗಾರವೆಲ್ಲಾ ಮಾರಿಯಾಯ್ತು. ಇನ್ನು ಉಳಿದಿರುವುದು ನಾನೊಬ್ಬಳೆ; ಬೇಕಿದ್ರೆ ನನ್ನನ್ನೂ ಸತ್ಯಹರಿಶ್ಚಂದ್ರನಂತೆ ಯಾರಿಗಾದರೂ ಮಾರಿಬಿಡಿ. ನಿಮ್ಮನ್ನು ಮದುವೆಯಾಗಿದ್ದಕ್ಕೆ ಋಣ ತೀರಿಸಿದಂತಾಗುತ್ತೆ."

ರಮಾ, ತನ್ನಲ್ಲಿ ಅಡಗಿದ್ದ ಸಿಟ್ಟು, ಹತಾಶೆ ಆಕ್ರೋಶಗಳನ್ನು ಒಮ್ಮೆಲೆ ತೂರಿಕೊಂಡಿದ್ದಳು. ಅವಳ ಕೂರಲಗಿನ ಮಾತುಗಳು ಮನೋಹರನ ಹೃದಯವನ್ನು ಚುಚ್ಚಿ ಗಾಸಿಗೊಳಿಸಿದ್ದವು. ಮನೋಹರ ಮೌನವಾಗಿ ಏನೋ ಯೋಚಿಸಿ, ಊಟ ಸಹ ಮಾಡದೆ, ತನ್ನ ಹಳೇ ಸ್ನೇಹಿತ ಪ್ರಕಾಶನನ್ನು ನೋಡಲು ಹೊರಟ.

ಪ್ರಕಾಶ ಕ್ಲಬ್ಬಿನಿಂದ ಇನ್ನೂ ಬಂದಿರಲಿಲ್ಲ. ಅವನಿಗಾಗಿ ಅವನ ಮನೆಯ ಹತ್ತಿರವೇ ಕಾಯುತ್ತಾ

.ಂತ ಮನೋಹರ. ಸುಮಾರು ಹತ್ತು ಗಂಟೆಗೆ ಪ್ರಕಾಶ ಬಂದ. ತನ್ನ ಫಿಯಟ್ ಕಾರಿನ ಬಾಗಿಲು ತೆಗೆದು ಕೆಳಗಿಳಿಯುತ್ತಲೆ ಮನೋಹರನನ್ನು ಕಂಡು, "ಏನು ಮನೋಹರ? ಎಷ್ಟೊತ್ತಾಯ್ತು ಬಂದು? ಯಾವುದೋ ಪಾರ್ಟಿಯಲ್ಲಿ ಸಿಕ್ಕಿಹಾಕಿ ಕೊಂಡೆ ಕಣಯ್ಯ. ಅದಕ್ಕೆ ಸ್ವಲ್ಪ ತಡವಾಯ್ತು. ಏನು ವಿಷಯ? ಇಷ್ಟು ಹೊತ್ತಿನಲ್ಲಿ ಬಂದಿದ್ದಿಯಲ್ಲ?" ಎಂದ.

"ಪ್ರಕಾಶ, ಈಗ ನಾನು ಬಹಳ ತೊಂದರೆಯಲ್ಲಿದ್ದೀನಿ. ನಮ್ಮ ಕಾರ್ಖಾನೆ ಮುಚ್ಚಿ ಆರು ತಿಂಗಳ ಮೇಲಾಯ್ತು. ಹೆಂಡತಿ ಮೈಮೇಲಿನ ಒಡವೆಗಳನ್ನೆಲ್ಲಾ ಮಾರಿಯಾಯ್ತು. ಸಾಮಾನೆಲ್ಲಾ ಹೊರಕ್ಕೆ ಹಾಕಿಸಿ ಬೇರೆಯವರಿಗೆ ಬಾಡಿಗೆ ಕೊಟ್ಟು ಬಿಡ್ತೀನಂತ, ಮನೆಯ ಮಾಲಕ ಹೆದ್ರಿಸಿದ್ದಾನೆ. ಅವನು ಗೂಂಡಾಗಳನ್ನಿಟ್ಟು ಆ ಕೆಲಸ ಖಂಡಿತ ಮಾಡುವ ಮನುಷ್ಯನೇ. ನಾನು ಈ ಹಿಂದೆ ನಿನಗೆ ನಿನ್ನ ಕಷ್ಟದ ದಿನಗಳಲ್ಲಿ ಐದು ಸಾವಿರ ಕೊಟ್ಟಿದ್ದೆ. ಕಷ್ಟದ ಸಮಯದಲ್ಲಿ ಕೇಳೋಣಾಂತ ಸುಮ್ಮನಿದ್ದೆ. ಎರಡು ಬಾರಿ ನಿನಗಾಗಿ ಕಾಯ್ದು ವಾಪಸಾದೆ. ನಿನ್ನನ್ನು ನೋಡುವುದೇ ಕಷ್ಟವಾಗಿದೆ. ನೀನು ಈ ಹಣ ಕೊಟ್ಟಲ್ಲಿ ನನಗೆ ಅರ್ಜೆಂಟಾಗಿ ಹಣ ಬೇಕಾಗಿದೆ. ನೀನು ಈ ಹಣ ಕೊಟ್ಟಲ್ಲಿ ನಮ್ಮ ಮರ್ಯಾದೆ ಉಳಿಯುತ್ತದೆ. ಇಲ್ಲದಿದ್ದಲ್ಲಿ ನಾಳೆ ನಾವು ಬೀದಿ ಪಾಲಾಗೋದು ಖಂಡಿತ. ದಯವಿಟ್ಟು ಆ ಐದು ಸಾವಿರ ರೂ.ನ ಈ ದಿನ ಕೊಡು," ಎಂದು ಗೋಗರೆದ ಮನೋಹರ.

"ನೋಡು ಮನೋಹರ, ನಿನ್ನಿಂದ ಹಣ ಪಡೆದಿದ್ದ ನಿಜ. ನಾನು ಹಣ ಸಿದ್ಧ ಮಾಡಿಕೊಂಡಿದ್ದಾಗ ನೀನು ಬರಲೇಯಿಲ್ಲ. ಆದರೆ ಈಗಲೇ ಹಣಬೇಕೆಂದರೆ ಹೇಗೆ ಕೊಡಲಿ? ಒಂದು ವಾರ ಕಾಲಾವಕಾಶವಾದಲ್ಲಿ ನಿನ್ನ ಹಣ ಕೊಡುತ್ತೇನೆ. ಈ ದಿನ ನನ್ನಲ್ಲಿ ಹಣವಿಲ್ಲ. ಇಷ್ಟಕ್ಕೂ ಮನೆಯ ಹತ್ತಿರ ಬಂದು ನಮ್ಮ ವಾಚ್‌ಮನ್ ಘೂರ್ಕನ ಮುಂದೆ ನೀನು ಹಣ ಕೇಳೋದೇ? ನೀನು ಮತ್ತೆ ಇಲ್ಲಿಗೆ



ಬರಲೇಬೇಡ. ನಿನ್ನ ಜುಜುಬಿ ಐದು ಸಾವಿರಾನ ಮುಂದಿನವಾರ ನಾನೇ ಕಳಿಸ್ತೇನೆ. ಈಗ ನೀನು ಮನೆಗೆ ಹೋಗು. ನನ್ನ ತಲೆ ತಿನ್ನಬೇಡ," ಎಂದು ಕೊಸರಿಕೊಂಡು ಪ್ರಕಾಶ ಮನೆಯೊಳಗೆ ಹೋಗುತ್ತಾ, "ವಾಚ್‌ಮನ್, ಗೇಟಿಗೆ ಬೀಗ ಹಾಕು," ಎಂದ. ಬಹಳ ಭರವಸೆ ಇಟ್ಟುಕೊಂಡು ಬಂದಿದ್ದ ಮನೋಹರನಿಗೆ, ಬೆಟ್ಟದಿಂದ ಪ್ರಪಾತಕ್ಕೆ ತಳ್ಳಿದಂತಾಗಿತ್ತು.

"ನಾನು ಎಂತಹ ಕಷ್ಟದ ಸಮಯದಲ್ಲಿ ಪ್ರಕಾಶನಿಗೆ ಸಹಾಯಮಾಡಿದ್ದೆ. ಇವನೊಬ್ಬ ಕೃತಘ್ನ" ಎಂದಿತ್ತು ಅವನ ಮನಸ್ಸು.

ಪ್ರಕಾಶ ಮತ್ತು ಮನೋಹರ ಪ್ರಾರಂಭದ ದಿನಗಳಲ್ಲಿ ಅದೇ ಪ್ಲೈವುಡ್ ಕಾರ್ಖಾನೆಯ ಉದ್ಯೋಗಿಗಳು. ಪ್ರಕಾಶ್ ಕ್ಯಾಶ್ ಸೆಕ್ಷನ್ ನೋಡಿ ಕೊಳ್ಳುತ್ತಿದ್ದ.

ಅಬಾರ್ಷನ್ ಆದ ಪ್ರಯುಕ್ತ ಒಮ್ಮೆ ತನ್ನ ಹೆಂಡತಿಯನ್ನು ಹತ್ತಿರದ ನರ್ಸಿಂಗ್ ಹೋಂಗೆ ಸೇರಿಸಿದ್ದ. ಡಾಕ್ಟರ್ ಬಿಲ್ ಐದು ಸಾವಿರವಾಗಿತ್ತು. ವಿಪರೀತ ರಕ್ತಸ್ರಾವವಾಗಿ ಸಾವಿನ ಅಂಚಿನಲ್ಲಿದ್ದ ತನ್ನ ಪತ್ನಿಯನ್ನು ವೈದ್ಯರು ಬಹಳ ಕಷ್ಟಪಟ್ಟು ಉಳಿಸಿದ್ದರು. ಅವನಲ್ಲಿ ಹಣವಿರಲಿಲ್ಲ. ಅದಕ್ಕಾಗಿ ಆತ ಯಾರನ್ನು ಕೇಳಲೂ ಇಲ್ಲ. ಆದಿನ ಕ್ಯಾಷ್ ನಿಂದ ಐದು ಸಾವಿರ ತೆಗೆದು ಡಾಕ್ಟರಿಗೆ ಪಾವತಿ ಮಾಡಿ, ಹೆಂಡತಿಯನ್ನು ಮನೆಗೆ ಕರೆದು ತಂದಿದ್ದ. ಮಾರನೆಯ ದಿನ ಆ ಐದು ಸಾವಿರ ಬ್ಯಾಂಕಿಗೆ ಜಮಾ ಮಾಡಬೇಕಿತ್ತು. ಏನೂ ತೋಚದೆ, ಸ್ನೇಹಿತ ಮನೋಹರನನ್ನು ಕ್ಯಾಂಟೀನ್ ಕಡೆ ಕರೆದೊಯ್ದು,

"ಮನೋಹರ, ನಿನ್ನೆ ಬಿಲ್ ತೀರಿಸಲು ಕ್ಯಾಷ್ ನಿಂದ ಐದು ಸಾವಿರ ತೆಗೆದು ಡಾಕ್ಟರಿಗೆ ಕೊಟ್ಟು ಬಿಟ್ಟೆ. ಈ ದಿನ ಆ ಐದು ಸಾವಿರಾನ ಬ್ಯಾಂಕಿಗೆ ಕಟ್ಟಲೇಬೇಕಾಗಿದೆ. ನನ್ನಲ್ಲಿ ಬೇರೆ ಹಣವಿಲ್ಲ. ಬೇರೆ ಯವರನ್ನು ಕೇಳಿದರೆ ಗುಟ್ಟು ಹೊರಬಿದ್ದು, ಮ್ಯಾನೇ ಜರಿಗೆ ಗೊತ್ತಾಗಿ ಬಿಟ್ಟರೆ ನನ್ನ ನೌಕರಿಗೆ ಕುತ್ತು ಬರಬಹುದೆಂಬ ಭಯ. ನಾನು ಕೆಲಸ ಕಳೆದು ಕೊಂಡಲ್ಲಿ ನಾನಷ್ಟೇ ಅಲ್ಲ, ನನ್ನ ಹೆಂಡತಿಯೂ ಬೀದಿಪಾಲಾಗುವುದು ಖಂಡಿತ. ನೀನು ನನ್ನ ಏಕೈಕ ಸ್ನೇಹಿತ. ನಿನ್ನಲ್ಲಿ ಭಿಕ್ಷೆ ಬೇಡುತ್ತಿದ್ದೇನೆ. ಈಗ ನೀನು ಹೇಗಾದರೂ ಮಾಡಿ ನನಗೆ ಐದು ಸಾವಿರ ಸಾಲ ನೀಡಿ ನನ್ನ ನೌಕರಿ ಉಳಿಸು. ನೀನು ಸಹಾಯಮಾ ಡಲೇಬೇಕು. ಇಲ್ಲಾ ಎನ್ನಬೇಡ," ಎಂದು ಆರ್ತ ನಾಗಿ ಪ್ರಕಾಶ ಬೇಡಿದ್ದ.

ಮನೋಹರನ ಆರ್ಥಿಕ ಪರಿಸ್ಥಿತಿ ಆಗ ಸ್ವಲ್ಪ ಉತ್ತಮವಾಗಿತ್ತು. ಸ್ನೇಹಿತನನ್ನು ಪಾರುಮಾಡಲು ನಿರ್ಧರಿಸಿ, ಆತ ಐದು ಸಾವಿರ ರೂಪಾಯಿಗಳ ನ್ನಾಗ ನೀಡಿದ್ದ.

"ಬಹಳ ಥ್ಯಾಂಕ್ಸ್, ಮನೋಹರ, ನಿನ್ನ ಸಹಾ ಯವನ್ನು ಈ ಜನ್ಮದಲ್ಲೇ ಮರೆಯಲಾರೆ. ಸ್ವಲ್ಪ ದಿನಗಳಲ್ಲೇ ಹಣ ಜೋಡಿಸಿ ಕೊಡುತ್ತೇನೆ." ಎಂದು ಹೇಳಿದ್ದ ಪ್ರಕಾಶ.

"ಈಗ ಅದರ ಯೋಚನೆ ಬೇಡ ಪ್ರಕಾಶ, ಮೊದಲು ಬ್ಯಾಂಕಿಗೆ ಹಣ ತುಂಬು. ನನಗೆ ಬೇಕಾದಾಗ ಕೇಳುತ್ತೇನೆ," ಎಂದಿದ್ದ ಮನೋಹರ.

ಇದಾದ ಒಂದು ವರ್ಷದಲ್ಲೇ ಪ್ರಕಾಶನಿಗೆ ಲಾಟರಿಯಲ್ಲಿ ಹತ್ತು ಲಕ್ಷ ಬಂದಿತ್ತು. ನಂತರ ಪ್ರಕಾಶ ಕಾರ್ಖಾನೆಯ ನೌಕರಿ ಬಿಟ್ಟು ಯಾವುದೋ ದೊಡ್ಡ ಕಂಪನಿಯ ಏಜೆನ್ಸಿ ಹಿಡಿದಿದ್ದ. ಒಳ್ಳೆಯ ಲಾಭ ಬರಲಾರಂಭಿಸಿತು.

ಮುಂದೆ ಸ್ವಂತ ಬಂಗಲೆ ಕಟ್ಟಿಸಿ, ಕಾರು ತೆಗೆದುಕೊಂಡ. ಒಂದು ಕಾಲದಲ್ಲಿ ನಿಕೃಷ್ಟನಾಗಿದ್ದ ಆತ ಈಗ ಸಮಾಜದ ದೃಷ್ಟಿಯಲ್ಲಿ ಒಬ್ಬ ಆಢ್ಯ ನಾಗಿದ್ದ.

"ನಿನಗೆ ಹಣದ ತೊಂದರೆ ಆದಾಗ ಬಾ, ಆಗ ನಾನು ಬಡ್ಡಿ ಲೆಕ್ಕ ಹಾಕಿ, ಹಣ ವಾಪಸ್ಸು ಮಾಡ್ತೇನೆ," ಎಂದು ಆತ ಮನೋಹರನಿಗೆ ಹೇಳಿದ. ಆದರೆ ತಾನಾಗಿಯೇ ಸಾಲ ತೀರಿಸುವ ಯತ್ನವನ್ನೇ ಮಾಡಿರಲಿಲ್ಲ.

ಮನೋಹರನ ಮನಸ್ಸು ಈಗ ರೋಸಿಹೋ ಗಿತ್ತು.

ಬದಲಾವಣೆ ಬಯಸುವುದು ಮನುಷ್ಯನ ಸಹಜ ಪ್ರವೃತ್ತಿ. ಆದರೆ ಹಣ ಬಂದೊಡನೆಯೇ ಆತ ತನ್ನ ಹಿಂದಿನ ಸ್ಥಿತಿಯನ್ನು ಮರೆತು ಸಮಾ

ಜದಲ್ಲಿ ಹೊಸ ಅಂತಸ್ತನ್ನೇ ಪಡೆಯುತ್ತಾನೆ. ಹಳೆಯ ಸ್ನೇಹಿತರೆಲ್ಲಾ ದೂರವಾಗಿ, ಹೊಸ ಸ್ನೇಹಿತರು ಬರುತ್ತಾರೆ. ಮಾತನಾಡುವ ಶೈಲಿ, ಓಡಾಡುವಾಗಿನ ಗತ್ತು, ಇವೆಲ್ಲಾ ಬದಲಾಗುತ್ತವೆ. ಆಗ ಕೃತಕ ಬದುಕಿನ ಹಾದಿ ಹಿಡಿಯುತ್ತಾನೆ ಮನುಷ್ಯ ಎಂದೆಲ್ಲಾ ಯೋಚಿಸುತ್ತಾ ಮನೋಹರ ಹತ್ತಿರದ ಪಾರ್ಕಿನ ಬಳಿ ಹೋಗಿ ಕುಳಿತ. ರಾತ್ರಿ ಹತ್ತುಗಂಟೆ ದಾಟಿತ್ತು. ಬೀಟಿನಲ್ಲಿದ್ದ ಪೊಲೀಸ್ ಇವನನ್ನು ಕಂಡು,

"ಯಾರೋ ಅದು? ಇಷ್ಟೊತ್ತಿನಲ್ಲಿ ಪಾರ್ಕಿನಲ್ಲಿ ಕುಳಿತಿರೋದು?" ಎಂದ.

ಮನೋಹರ ಗಾಬರಿಯಾದರೂ ತೋರಿಸಿಕೊಳ್ಳದೆ,

"ಇಲ್ಲೇ ಪಕ್ಕದ ಬೀದಿಯಲ್ಲಿದ್ದೇನೆ ಕಾನ್ಸ್ಟೇಬಲ್ ಸಾಹೇಬರೇ, ಊಟಮಾಡಿ ಒಂದು ಸುತ್ತು ವಾಕಿಂಗ್ ಬಂದಿದ್ದೆ ಅಷ್ಟೇ," ಎಂದ.

"ನಿಮ್ಮಂಥವರೆಲ್ಲಾ ಇಷ್ಟೊತ್ತಿನಲ್ಲಿ ಇಂಥಲ್ಲಿ ಬರಬಾರದು. ಈಗ ಮನೆಗೆ ಹೋಗಿ. ಇಲ್ಲಿ ಒಬ್ಬೊಬ್ಬರೆ ಸಿಕ್ಕಿದವರನ್ನು ಕಳ್ಳರು ದೋಚಿದ್ದು ನಿಮಗೆ ತಿಳಿದಿಲ್ಲೇನ್ರಿ?" ತನ್ನ ಕೋಲಿನಿಂದ ಕಲ್ಲಿಗೆ ಕಟ-ಕಟ ಶಬ್ದ ಮಾಡುತ್ತಾ ಮುಂದೆ ನಡೆದ ಕಾನ್ಸ್ಟೇಬಲ್.

ಏನೂ ತೋಚದೇ ಮನೋಹರ ಮುಂದೆ ನಡೆದ. ಹೆಂಡತಿಯ ಮಾತುಗಳು ಅವನ ಕಿವಿಯಲ್ಲಿ ಇನ್ನೂ ತೆರೆಗಳಂತೆ ಅಪ್ಪಳಿಸುತ್ತಿದ್ದವು. 'ನನ್ನನ್ನು ಮಾರಿಬಿಟ್ಟು, ನಿಮ್ಮ ತಾಪತ್ರಯ ತೀರಿಸಿಕೊಳ್ಳಿ' ಎಂದಳಲ್ಲಾ ನಾನು ಅಷ್ಟು ಹೇಡಿಯಾದೆನೆ? ಇದಕ್ಕಿಂತ ಸಾವೇ ಮೇಲು ಎಂದೆಲ್ಲಾ ಯೋಚಿಸುತ್ತಾ ಮುಂದಿನ ಸರ್ಕಲ್ ಹತ್ತಿರ ಬಂದ. ಲೈಟು ಕಂಬದ ಕೆಳಗಿನ ಅರೆಗತ್ತಲಲ್ಲಿ ಯಾರೋ ಮಲಗಿರುವುದು ಕಾಣಿಸಿತು. ಹತ್ತಿರ ಹೋಗಿ ನೋಡಿದ್ದ. ಬಿದ್ದ ವ್ಯಕ್ತಿಯ ಜೇಬಿನಿಂದ ಪರ್ಸ್ ಅರ್ಧ ಹೊರಬಂದು ಇಣುಕುತ್ತಿತ್ತು. ಮನೋಹರನ ಬುದ್ಧಿ ಚುರುಕಾಗಿ ಕೆಲಸ ಮಾಡಿತು. ಏನೋ ಯೋಚನೆ ಮಾಡಿ, ಸುತ್ತ-ಮುತ್ತ ನೋಡಿ, ಯಾರೂ ಇಲ್ಲ ಎಂದು ಖಚಿತಪಡಿಸಿಕೊಂಡು, ಕೆಳಗೆ ಬಿದ್ದವನ ಜೇಬಿನಿಂದ ಪರ್ಸನ್ನು ಮೆತ್ತಗೆ ಎಳೆದುಕೊಂಡು ತನ್ನ ಜೇಬಿಗೆ ಸೇರಿಸಿಕೊಂಡವನೆ ಅಲ್ಲಿಂದ ಕಾಲುಕಿತ್ತ. ಮನೆಯ ಹತ್ತಿರ ಬಂದು ಲೈಟಿನ ಬೆಳಕಿನಲ್ಲಿ ಪರ್ಸ್ ತೆಗೆದು ನೋಡಿದ. ಪರ್ಸಿನಲ್ಲಿ ನೂರು ರೂಪಾಯಿಗಳ ಐವತ್ತು ನೋಟುಗಳು! ಒಟ್ಟು ಐದು ಸಾವಿರ! ಮನೋಹರನ ಕಣ್ಣುಮಿಂಚಿತು. "ಸದ್ಯ, ಒಳ್ಳೆ ಟೈಮಿನಲ್ಲಿ ಹಣ ಸಿಕ್ತಲ್ಲಾ" ಎಂದು ಯೋಚಿಸುತ್ತಾ ಮನೆಯ ಮಾಲಿಕನ ಮನೆಗೆ ಬಂದು ಕಾಲಿಂಗ್ ಬೆಲ್ ಒತ್ತಿದ. ರಂಗಯ್ಯ ಒಳಗಿನಿಂದ ಬಾಗಿಲು ತೆಗೆದು, ಮನೋಹರನನ್ನು ಕಂಡೊಡನೆಯೇ,

"ಮತ್ಯಾಕಯ್ಯಾ ನೀನು ಬಂದೆ? ನಾನಾಗಲೇ ನಿನ್ನ ಹೆಂಡತಿಯ ಹತ್ತಿರ ತಿಳಿಸಿ ಬಂದಿದ್ದೇನೆ. ನಾಳೆ ಸಂಜೆಯೊಳಗೆ ಹಣಕಟ್ಟು- ಇಲ್ಲವೇ ಮನೆ ಖಾಲಿಮಾಡು," ಅಂದ.

"ರಂಗಯ್ಯನವರೇ, ನಿಮ್ಮನ್ನು ಕಾಲಾವಕಾಶ ಕೇಳಲು ಬಂದಿಲ್ಲ. ಈಗ ನಾನು ಬಂದಿರೋದು ನಿಮ್ಮ ಮೂರು ಸಾವಿರ ಬಾಡಿಗೆ ಹಣ ಕೊಡೋಕೆ. ತಗೊಳ್ಳಿ ನಿಮ್ಮ ಹಣ. ನಾಳೆ ರಶೀದಿ ಕೊಡಿ ಪರವಾಗಿಲ್ಲ," ಎನ್ನುತ್ತಾ ಮನೋಹರ ನೋಟುಗಳನ್ನು ಎಣಿಸಿ ಮೂರು ಸಾವಿರ ನೀಡಿದ. ಈ ಮಧ್ಯೆ ನೋಟುಗಳ ಎಳೆದಾಟದಲ್ಲಿ ಪರ್ಸಿನಲ್ಲಿದ್ದ ಚೀಟಿಯೊಂದು ಕೆಳಗೆ ಬಿದ್ದುದನ್ನು ಕಂಡು ಮನೋಹರ ಅದನ್ನು ಎತ್ತಿಕೊಂಡು ಜೇಬಿಗಿಳಿಸಿ ಮನೆಯ ಕಡೆ ನಡೆದ.

ಮನೆಯ ಬಾಗಿಲು ತೆಗೆದ ರಮಾಳನ್ನು ನೋಡುತ್ತಾ, "ನಿನ್ನನ್ನು ಮಾರಿ ನಾನು ನನ್ನ ಜೀವನ ನಡೆಸುವಂಥ ಸ್ಥಿತಿ ನನಗಿನ್ನೂ ಬಂದಿಲ್ಲ ರಮಾ, ಅಂಥ ಸ್ಥಿತಿ ಬಂದಾಗ ನಾನೇ ನಿನಗೆ ತಿಳಿಸುತ್ತೇನೆ. ಈಗ ಹಣ ಜೋಡಿಸಿ, ರಂಗಯ್ಯನವರಿಗೆ ಬಾಕಿ ಕಟ್ಟಿಬಂದಿದ್ದೇನೆ. ಇದೋ, ಖರ್ಚಿಗೆ ಸಾವಿರ ಇಟ್ಟುಕೋ. ಮತ್ತೊಮ್ಮೆ ಹಾಗೆ ಮಾತನಾಡಬೇಡ. ಹಾಗೂ ಹಣ ಎಲ್ಲಿಂದ ತಂದ್ರಿ ಎಂದು ಕೇಳಬೇಡ," ಎನ್ನುತ್ತಾ ಅವಳ ಕೈಗೆ ನೀಡಿದ.

"ಸಾರೀ ಕಂದ್ರೆ, ನನಗೆ ಬಹಳ ಬೇಸರವಾ

ಗಿತ್ತು. ಏನೋ ಅಂದುಬಿಟ್ಟೆ. ನನ್ನನ್ನು ಕ್ಷಮಿಸಿಬಿಡಿ, ಮತ್ತೊಮ್ಮೆ ಹಾಗೆನ್ನುವುದಿಲ್ಲ. ಬನ್ನಿ, ಊಟ ಮಾಡ್ರಿ" ಎಂದು ಊಟಕ್ಕೆ ಕರೆದಳು ರಮಾ.

"ನನಗೆ ಊಟ ಮಾಡುವ ಮನಸ್ಸಿಲ್ಲ, ರಮಾ. ನೀನು ಮಲಗಿಕೋ, ನಾನು ಸ್ವಲ್ಪ ಓದುತ್ತಾ ಕುಳಿತಿರುತ್ತೇನೆ," ಎಂದು ಟೇಬಲ್ ಲ್ಯಾಂಪಿನ ಹತ್ತಿರ ಹೋಗಿ, ಪರ್ಸಿನಲ್ಲಿ ಸಿಕ್ಕಿದ್ದ ಚೀಟಿಯನ್ನು ತೆಗೆದು ಓದಲಾರಂಭಿಸಿದ.

ನನ್ನ ಪರ್ಸು ಸಿಕ್ಕಿದವರಿಗೆ–

"ನಾನು ಸತ್ತಿಲ್ಲ. ನನಗೆ ಮೂರ್ಛೆ ರೋಗವಿದೆ, ಹೀಗಾಗಿ ನಾನು ಆಗಾಗ್ಗ ಹೀಗೆ ಬಿದ್ದು ನರಳುತ್ತಿರುತ್ತೇನೆ. ನನ್ನನ್ನು ತಕ್ಷಣವೇ 'ಅರುಣಾ ನರ್ಸಿಂಗ್ ಹೋಂ'ಗೆ ಸೇರಿಸಿ ಪುಣ್ಯಕಟ್ಟಿಕೊಳ್ಳಿ. ಅವರು ನನ್ನ ವೈದ್ಯರು. ನೀವು ಮಾಡಿದ ಸಹಾಯಕ್ಕಾಗಿ ಈ ಪರ್ಸಿನಲ್ಲಿರುವ ಹಣ ನಿಮ್ಮದು. ನಿಮ್ಮ ಸಹಾಯ ಮರೆಯಲಾರೆ.

—ಸದಾಶಿವರಾಯ

ಓದಿದ ನಂತರ, ಮನೋಹರನ ಚಿತ್ತ ಕಲಕಿತ್ತು.

"ನಾನು ಎಂತಹ ಅನ್ಯಾಯ ಮಾಡಿದೆ! ದೇವರು ನನಗೆ ಸದಾಶಿವರಾಯ ಎನ್ನುವರ ಮೂಲಕ ಸಹಾಯ ಮಾಡಿದ. ಆದರೆ ಅವರಿಂದ ಉಪಯೋಗ ಪಡೆದ ನಾನು, ಬಿದ್ದಿದ್ದ ವ್ಯಕ್ತಿಯ ಬಗ್ಗೆ ಯೋಚಿಸದೇ ಕಳ್ಳನಂತೆ ಓಡಿಬಂದೆ. ಈಗಲಾದರೂ ಅಲ್ಲಿಗೆ ಹೋಗಿ ಏಕೆ ಸಹಾಯ ಮಾಡಬಾರದು?" ಅಂದುಕೊಂಡ.

ಮನೋಹರ ಬಟ್ಟೆಬದಲಾಯಿಸಿಕೊಂಡು, ಆ ವ್ಯಕ್ತಿ ಬಿದ್ದಿದ್ದ ಸ್ಥಳಕ್ಕೆ ಹೋಗಿ ನೋಡಿದ. ಅಲ್ಲಿ ನಾಲ್ಕಾರು ಜನ ನಿಂತಿದ್ದರು. 'ಏನು ವಿಷಯ?' ಎಂದು ಅವರಲ್ಲೊಬ್ಬನನ್ನು ವಿಚಾರಿಸಿದ.

"ಇಲ್ಲಿ ಒಬ್ಬಾತ ಸತ್ತು ಬಿದ್ದಿದ್ದ. ಎರಡು ನಿಮಿಷಗಳ ಕೆಳಗೆ, ಪೊಲೀಸರು ಬಂದು ಅಂಬ್ಯುಲೆನ್ಸಿನಲ್ಲಿ ಆಸ್ಪತ್ರೆಗೆ ಕೊಂಡೊಯ್ದರು," ಎಂದು ಉತ್ತರ ಬಂತು.

ಮನೋಹರ ಯೋಚಿಸಿ, ಹತ್ತಿರವಿದ್ದ 'ಬಾರ್'ನಿಂದ ಪೊಲೀಸ್ ಸ್ಟೇಷನ್‌ಗೆ ಫೋನ್‌ಮಾಡಿದ.

"ಹಲೋ, ಸರ್ಕಲ್ ಇನ್‌ಸ್ಪೆಕ್ಟರ್ ಸ್ಪೀಕಿಂಗ್, ಯಾರ್ರಿ ಮಾತಾಡ್ತಿರೋದು?"



"ಈ ವರ್ಷ ಅಪಘಾತದಲ್ಲಿ ಎಷ್ಟೊಂದು ಜನ ಬಲಿಯಾಗಿದ್ದಾರೆ. ಆದರೂ ನಮ್ಮ ಬಲಿ ತಪ್ಪಲಿಲ್ಲ"

"ನಾನು, ಮನೋಹರ ಅಂತ ಸಾರ್, ಅರ್ಜೆಂಟ್ ಆಗಿ ನಿಮಗೆ ಒಂದು ಮೆಸೇಜ್ ತಿಳಿಸಬೇಕಾಗಿದೆ ಸಾರ್."

"ಅದೇನು ಬೇಗ ಹೇಳ್ರಿ, ನಾನು ಈಗ ಆಸ್ಪತ್ರೆಗೆ ಬೇಗ ಹೋಗಬೇಕಾಗಿದೆ."-

"ಸಾರ್, ಸ್ವಲ್ಪ ಹೊತ್ತಿನ ಹಿಂದೆ ಆ ಸರ್ಕಲ್‌ನ ಹತ್ತಿರ ಬಿದ್ದಿದ್ದ ಓರ್ವ ವ್ಯಕ್ತಿಯನ್ನು ಆಸ್ಪತ್ರೆಗೆ ಕೊಂಡೊಯ್ದರಲ್ಲಾ ಸಾರ್, ಆ ವ್ಯಕ್ತಿ ಸತ್ತಿಲ್ಲ ಸಾರ್, ಮೂರ್ಛೆ ರೋಗದಿಂದ ಬಿದ್ದಿದ್ದಾರೆ. ದಯವಿಟ್ಟು ಅವರನ್ನು ಅರುಣಾ ನರ್ಸಿಂಗ್ ಹೋಂಗೆ ಸೇರಿಸಿ ಸಾರ್"-

"ಮನೋಹರ್, ನೀವು ಯಾರೋ ಗೊತ್ತಿಲ್ಲ. ಆ ವ್ಯಕ್ತಿ ಸತ್ತಿಲ್ಲಾಂತ ನಿಮಗೆ ಹೇಗೆ ಗೊತ್ತು? ಆ ವ್ಯಕ್ತಿ ಸತ್ತಿದ್ದಾನೆಂದು ಡಾಕ್ಟರೇ ಹೇಳಿದ್ದಾರೆ. ನೀವು ತಕ್ಷಣವೇ ಸರ್ಕಾರಿ ಆಸ್ಪತ್ರೆಗೆ ಬನ್ನಿ. ಆ ವ್ಯಕ್ತಿಯನ್ನು ನೋಡಿ, ತಿಳಿಸಿ. ನಾನು ಅಲ್ಲಿ ಕಾದಿರುತ್ತೇನೆ," ಎಂದರು ಇನ್‌ಸ್ಪೆಕ್ಟರು.

ಆಸ್ಪತ್ರೆ ಕಡೆ ಹೆಜ್ಜೆ ಇಟ್ಟ ಮನೋಹರನ ಮನಸ್ಸಿನಲ್ಲಿ ಗೊಂದಲ ಪ್ರಾರಂಭವಾಗಿತ್ತು. ಮನೋವೈಜ್ಞಾನಿಕ 'ಯೂಂಗ'ನ ಅನಿಸಿಕೆಯಂತೆ, ಮಾನವನ ಮನಸ್ಸಿಗೆ ಎರಡು ಮುಖಗಳು. ಒಂದು ಬಿಳಿಯ ಮನಸ್ಸು, ಮತ್ತೊಂದು ಕಪ್ಪು ಮನಸ್ಸು. ಈ ಎರಡೂ ಪರಸ್ಪರ ವಿರುದ್ಧ ದಿಕ್ಕಿನಲ್ಲೇ ಯೋಚಿಸುತ್ತಿರುತ್ತವೆ. 'ಬಿಳಿ' ಮುಖದ ಮನಸ್ಸು ಯಾವಾಗಲೂ ಸಕಾರಾತ್ಮಕವಾಗಿ ಯೋಚಿಸಿದರೆ ಕಪ್ಪು ಮುಖದ ಮನಸ್ಸು ನಕಾರಾತ್ಮಕವಾಗಿಯೇ ಯೋಚಿಸುತ್ತದೆ. ಹೀಗಾಗಿ, ಮನಸ್ಸಿನಲ್ಲಿ ಪ್ರತಿಯೊಂದು ಯೋಚನೆಯೂ ದ್ವಂದ್ವರೂಪವಾಗಿ ಕಂಡುಬರುತ್ತದೆ. ಕೊನೆಗೆ ಯಾವುದರ ಆಕ್ರಮಣ ಜಾಸ್ತಿಯಾಗುತ್ತದೆಯೋ ಅದರ ಪ್ರಭಾವದಂತೆ ನಮ್ಮ ಮನಸ್ಸು ಪ್ರತಿಕ್ರಿಯಿಸುತ್ತದೆ. ಅದರಂತೆಯೆ ಕ್ರಿಯೆಗಳು ಮತ್ತು ಫಲಿತಾಂಶಗಳು ಕಂಡುಬರುತ್ತವೆ. ಇಂಥ ಒಂದು ತುಮುಲ ಮನೋಹರನ ಮನಸ್ಸಿನಲ್ಲಿ ನಡೆದಿತ್ತು.

ಅವನ ಕಪ್ಪು ಮನಸ್ಸು ಹೇಳಿತು-

"ಈಗ ನೀನು ಇನ್‌ಸ್ಪೆಕ್ಟರ್‌ನ್ನು ಭೇಟಿಮಾಡಿದಲ್ಲಿ ಇದು ಕೊಲೆ ಎಂದು ಪರಿಗಣಿಸಿ, ನಿನ್ನನ್ನೇ ಅಪರಾಧಿಯನ್ನಾಗಿ ಮಾಡಿ, ಹಣಕ್ಕೋಸ್ಕರ ಕೊಲೆ ಮಾಡಿದ್ದೀಯಾ, ಎಂದು ನಿನ್ನನ್ನೇ ಅರೆಸ್ಟ್ ಮಾಡಿ ಜೈಲಿಗೆ ತಳ್ಳಬಹುದು. ಹಾಗಾದಲ್ಲಿ ನಿನ್ನ ಹೆಂಡತಿ ಮಕ್ಕಳ ಗತಿ ಏನು? ನಿನ್ನ ಸಾಮಾಜಿಕ ಅಂತಸ್ತು ಮತ್ತು ಗೌರವವೇನಾಗಬಹುದು? ಇವೆಲ್ಲವನ್ನೂ ಯೋಚಿಸಿದ್ದೀಯಾ?"

"ನಾನೇಕೆ ಹೆದರಬೇಕು? ಹೇಗೂ, ಆತನ ಪರ್ಸಿನಲ್ಲಿದ್ದ ಚೀಟಿಯಲ್ಲಿನ ನಿಜಾಂಶವನ್ನು ತಿಳಿಸಿದಲ್ಲಿ ಇನ್‌ಸ್ಪೆಕ್ಟರು. ವ್ಯಕ್ತಿಯನ್ನು ಮತ್ತೊಮ್ಮೆ ವೈದ್ಯರಿಂದ ಪರೀಕ್ಷಿಸಿ ಆ ವ್ಯಕ್ತಿ ಬದುಕಿದಲ್ಲಿ ನಿಜಾಂಶ ಹೊರಬಂದು ಯಾವ ಸಮಸ್ಯೆಯೂ ಬರಲಾರದು. ನೀನು ಹೆದರದೇ ಮುಂದುವರೆ. ಆ ವ್ಯಕ್ತಿಗೆ ಈಗ ನೀನು ಸಹಾಯ ಮಾಡಬೇಕಾದ್ದು, ನಿನ್ನ ಧರ್ಮ"- ಎಂದಿತ್ತು ಶ್ವೇತಮುಖ.

"ಅಯ್ಯೋ! ಮೂರ್ಖ! ಇನ್‌ಸ್ಪೆಕ್ಟರ್ ಹೇಳಿಕೆಯಂತೆ, ಆ ವ್ಯಕ್ತಿ ಈಗಾಗಲೇ ಸತ್ತು ಹೋಗಿದ್ದಾನೆ. ಪೊಲೀಸರು ಯಾರನ್ನೂ ನಂಬುವ ಜನವಲ್ಲ. 'ಧರ್ಮ-ಗಿರ್ಮ' ಎಂದು ನೀನು ಅಲ್ಲಿಗೆ ಹೋಗಿ ಸಿಕ್ಕಿಹಾಕಿಕೊಂಡಲ್ಲಿ ನಿನ್ನ ಬದುಕಿನ ಕಥೆ ಮುಗಿಯಿತೆಂದೇ ತಿಳಿ. ನಿನ್ನ ಮುಂದಿನವಾಸ, ಜೈಲಿನಲ್ಲೇ, ಮನೆಯಲ್ಲಲ್ಲ. ಇದು ಖಂಡಿತ. ನಿನ್ನಲ್ಲಿರುವ ವ್ಯವಹಾರಜ್ಞಾನ ಉಪಯೋಗಿಸಿ, ಪೊಲೀಸರಿಂದ ದೂರವಿರು. ಸತ್ತವನು ಹೋದ. ಮತ್ತೆ ಎದ್ದು ಬಂದು ನಿನ್ನ ಪರವಾಗಿ ಸಾಕ್ಷಿ ನುಡಿಯಲಾರ. ಪಾಪ-ಪುಣ್ಯದ ಚಿಂತೆ ಈಗ ಬೇಡ. ಸುಮ್ಮನೇ ಮನೆಗೆ ಹೋಗು, ನಿನ್ನ ತಾಪತ್ರಯ ಸದ್ಯಕ್ಕೆ ತೀರಿದಂತಾಗಿದೆ" ಎಂದು ಉತ್ತರ ಹೇಳಿತು ಕಪ್ಪು ಮನಸ್ಸು.

"ತಾಳು-ತಾಳು, ಅಷ್ಟೇಕೆ ತವಕ! ನೀನು ಮುಂಚಿನಿಂದಲೂ ಧರ್ಮಭೀರು. ನಿನ್ನ ತಾಯಿ, ನೀನು ಚಿಕ್ಕವನಾಗಿದ್ದಾಗ ಹೇಳುತ್ತಿದ್ದುದನ್ನು ಆಗಲೇ ಮರೆತುಬಿಟ್ಟೆಯಾ? ಮನುಷ್ಯ ಯಾವಾಗಲೂ ತನ್ನ 'ಧರ್ಮ' ಬಿಡಬಾರದು. ಇಲ್ಲಿ ಧರ್ಮವೆಂದರೆ ಪರರಿಗೆ ಮತ್ತು ನೊಂದವರಿಗೆ 'ಹಿತ' ಬಯಸುವುದೆಂದರ್ಥ. ನೀನು ಸದಾಶಿವರಾಯರಿಂದ

ಸಹಾಯ ಪಡೆದಿದ್ದೀಯ. ಹಣ ಪಡೆದ ಮೇಲೆ, ಆ ಚೀಟಿಯಲ್ಲಿ ಬರೆದಿರುವಂತೆ, ಅವರನ್ನು ವೈದ್ಯಕೀಯ ಪರೀಕ್ಷೆಗೆ ಕರೆದೊಯ್ಯಬೇಕಾದ್ದು ನಿನ್ನ ಈಗಿನ ಧರ್ಮವೆಂದು ತಿಳಿ. ಕೇವಲ ಹಣಕ್ಕೋಸ್ಕರ ಅಧರ್ಮಿಯಾಗಬೇಡ. ಅದು ನಿನಗೆ ಹಿತವಲ್ಲ. ಈಗಲೂ ತಡವಾಗಿಲ್ಲ. ಧೈರ್ಯವಾಗಿ ಇನ್‌ಸ್ಪೆಕ್ಟರಿಗೆ ಇದ್ದುದನ್ನು ಇದ್ದಹಾಗೆ ಹೇಳು. ಅವರು ನಿನ್ನನ್ನು ಖಂಡಿತವಾಗಿ ನಂಬುತ್ತಾರೆ. ನಿನ್ನಲ್ಲಿ ಆತ್ಮವಿಶ್ವಾಸವಿರಲಿ. ನೆನಪಿಡು, 'ಕೊಲೆಮಾಡಿದವನಿಗೆ ತಾನೇ ಪೊಲೀಸರ ಹತ್ತಿರ ಹೋಗಿ ತಿಳಿಸುವಷ್ಟು ಧೈರ್ಯವಾಗಲಿ ಅಥವಾ ನೈತಿಕ ಸ್ಥೈರ್ಯವಾಗಲಿ ಇರುವುದಿಲ್ಲ. ಈಗ, ನೀನು ಆಸ್ಪತ್ರೆಗೆ ಹೋಗು,'' ಎಂದಿತು ಅವನ ಶ್ವೇತ ಮನಸ್ಸು.

ಮನೋಹರ ಯೋಚಿಸಿ, ಧೈರ್ಯ ತಂದುಕೊಂಡು, ಆಸ್ಪತ್ರೆಯ ಕಡೆ ಹೊರಟ. ಅಲ್ಲಿ ಹೋದೊಡನೆಯೇ ಸರ್ಕಲ್ ಇನ್‌ಸ್ಪೆಕ್ಟರನ್ನು ಭೇಟಿ ಮಾಡಿ, ಮತ್ತೊಮ್ಮೆ ತನ್ನ ಪರಿಚಯ ಮಾಡಿಕೊಂಡು, ಅವರಿಗೆ ನಿಜಾಂಶವನ್ನು ವಿವರವಾಗಿ ತಿಳಿಸಿದ. ಅವರು ಚೀಟಿಯನ್ನು ಗಂಭೀರವಾಗಿ ಓದಿಕೊಂಡು, ಏನೋ ಯೋಚಿಸಿ, "ಮನೋಹರ್, ಇಲ್ಲಿ ಬನ್ನಿ. ನೀವು ನೋಡಿದವ್ರು ಇವರೇ ಏನು ನೋಡಿ ಹೇಳಿ,'' ಎಂದು ದೇಹದ ಮೇಲೆ ಮುಚ್ಚಿದ್ದ ಬಿಳಿ ಬಟ್ಟೆಯನ್ನು ಸರಿಸಿ ತೋರಿಸಿದರು.

"ಹೌದು ಸಾರ್, ಇವರೇ ಅಲ್ಲಿ ಬಿದ್ದಿದ್ದ ವ್ಯಕ್ತಿ. ಇವರ ಜೇಬಿನಿಂದಲೇ ನಾನು ಪರ್ಸ್ ತೆಗೆದದ್ದು. ಈಗಲೂ ಒಮ್ಮೆ ವೈದ್ಯರಿಂದ ಪರೀಕ್ಷಿಸಿ, ಅವರಿನ್ನೂ ಸತ್ತಿಲ್ಲವೆಂದೇ ನನ್ನ ನಂಬಿಕೆ.''

"ಮಿ. ಮನೋಹರ್ ವೈದ್ಯರು ಈಗಾಗಲೇ ಈ ವ್ಯಕ್ತಿ ಮರಣಿಸಿದ್ದಾನೆಂದು ಘೋಷಿಸಿ ಸರ್ಟಿಫಿಕೇಟ್ ಸಹ ನೀಡಿದ್ದಾರೆ. ಈಗ ನೀವೇ ಏಕೆ, ಹಣಕ್ಕೋಸ್ಕರ ಕೊಲೆ ಮಾಡಿರಬಾರದೆಂಬ ಸಂಶಯ ನನಗಿದೆ. ನಡೆಯಿರಿ ಪೊಲೀಸ್ ಸ್ಟೇಷನ್ನಿಗೆ.''

"ಇಲ್ಲ ಇನ್‌ಸ್ಪೆಕ್ಟರ್, ನಾನು ಖಂಡಿತವಾಗಿಯೂ ಕೊಲೆ ಮಾಡಿಲ್ಲ. ಹಣ ತೆಗೆದುಕೊಂಡಿದ್ದು ನಿಜ. ಆ ವ್ಯಕ್ತಿಗೆ ಸಹಾಯ ಮಾಡಲೆಂದೇ ನಿಮ್ಮ ಹತ್ತಿರ ಬಂದೆ. ದಯವಿಟ್ಟು, ನನ್ನ ಮಾತು ನಂಬಿ. ನಾನು ಕೊಲೆಗಾರನಲ್ಲ.''

"ನಿಮ್ಮ ಹೇಳಿಕೆಯನ್ನು ಪೊಲೀಸ್ ಸ್ಟೇಶನ್ನಿನಲ್ಲಿ ಕೊಡುವಿರಂತೆ ನಡೆಯಿರಿ,'' ಎಂದು ಮನೋಹರನನ್ನು ಕರೆದುಕೊಂಡು, ಸ್ಟೇಷನ್ನಿಗೆ ಬಂದು, ಅಲ್ಲಿಂದ ಮತ್ತಾರಿಗೋ ಫೋನ್ ಮಾಡಿ ಅಲ್ಲಿಗೆ ತಕ್ಷಣವೇ ಬರುವಂತೆ ತಿಳಿಸಿದರು. ಮುಂದಿನ ಹದಿನೈದು ನಿಮಿಸಗಳಲ್ಲಿ ಸದಾಶಿವರಾಯರು ಸ್ಟೇಷನ್ ಒಳಗೆ ಬಂದು, ಇನ್‌ಸ್ಪೆಕ್ಟರಿಗೆ ಹಸ್ತಲಾಘವ ನೀಡಿ, ಅವರು ತೋರಿಸಿದ ಕುರ್ಚಿಯಲ್ಲಿ ಕುಳಿತರು.

"ಸದಾಶಿವರಾಯರೇ, ಇದೇ ಏನು ನಿಮ್ಮ ಕಳೆದುಹೋದ ಪರ್ಸು; ನೋಡಿ ಹೇಳಿ?'' ಎಂದು, ಮನೋಹರನಿಂದ ಪಡೆದಿದ್ದ ಪರ್ಸನ್ನು ತೋರಿಸಿದರು.

ಸದಾಶಿವರಾಯರು, ಆ ಪರ್ಸನ್ನು ಒಮ್ಮೆ ಪರೀಕ್ಷಿಸಿ, "ಹೌದು, ಇನ್‌ಸ್ಪೆಕ್ಟರೆ, ಇದೇ ನನ್ನ ಪರ್ಸು. ಇದರಲ್ಲಿ ಐದು ಸಾವಿರ ರೂಪಾಯಿಗಳ ಸಂಗಡ, ಒಂದು ಚೀಟಿಯನ್ನು ಸಹ ಇಟ್ಟಿದ್ದೆ. ನಾನೇನಾದರೂ ಮೂರ್ಛೆ ಹೋಗಿ ಅಪರಿಚಿತ ಸ್ಥಳದಲ್ಲಿ ಬಿದ್ದಲ್ಲಿ, ಕಂಡವರು ನನ್ನನ್ನು ನರ್ಸಿಂಗ್ ಹೋಂಗೆ ಸೇರಿಸಿ, ಅದರಲ್ಲಿದ್ದ ಹಣವನ್ನು ತೆಗೆದುಕೊಳ್ಳುವಂತೆ ತಿಳಿಸಿದ್ದೆ. ಈಗ ಪರ್ಸು ಹೇಗೆ ಸಿಕ್ಕಿತು?''

"ರಾಯರೇ, ಇವರು ಮನೋಹರ್ ಅಂತ. ಇವರಿಗೇ ನಿಮ್ಮ ಪರ್ಸು ಸಿಕ್ಕಿದ್ದು. ಆದರೆ ನಡೆದ ವಿಷಯವೇ ಬೇರೆಯಾಗಿದೆ. ನಿಮ್ಮ ಪರ್ಸು ಕದ್ದಿದ್ದು ಮನೋಹರನಲ್ಲ. ಅದನ್ನು ನಿಮ್ಮಿಂದ ಎಗರಿಸಿದ್ದು ರಸ್ತೆಯಲ್ಲಿ ಹೃದಯಾಘಾತದಿಂದ ತೀರಿಕೊಂಡ ವ್ಯಕ್ತಿ. ಆತ ಕುಪ್ರಸಿದ್ಧ ಕಳ್ಳ. ಅನೇಕ ಸಲ ಜೈಲಿಗೆ ಹೋಗಿಬಂದವ. ಅವನು ಹೃದ್ರೋಗದಿಂದ ನರಳುತ್ತಿದ್ದ. ಒಮ್ಮೆ ಜೈಲಿನಲ್ಲಿದ್ದಾಗ ನಾವೇ ಆತನಿಗೆ ಶುಶ್ರೂಷೆ ನೀಡಿದ್ದೆವು. ಅವನು ನಿಮ್ಮಿಂದ ಪರ್ಸು ಕದ್ದು ಹೋಗುತ್ತಿರುವಾಗ ದಾರಿಯಲ್ಲೇ ಸತ್ತಿದ್ದಾನೆ. ಅದೇ ಸಮಯಕ್ಕೆ ಮನೋಹರ ಅಲ್ಲಿಗೆ ಬಂದಿದ್ದಾರೆ. ಆತನ ಜೇಬಿನಿಂದ ಪರ್ಸ್ ತೆಗೆದು

ಕೊಂಡು ಹೋಗಿ, ಮನೆಯಲ್ಲಿ ಆ ಚೀಟಿಯನ್ನು ಓದಿಕೊಂಡು, ಮಾನವೀಯತೆ ದೃಷ್ಟಿಯಿಂದ ಬಿದ್ದಿದ್ದ ವ್ಯಕ್ತಿಗೆ ಸಹಾಯ ಮಾಡಲು ನನ್ನಲ್ಲಿಗೆ ಬಂದಿದ್ದಾರೆ. ಇವರು ಬಂದು ಚೀಟಿ ತೋರಿಸಿ, ಎಲ್ಲವನ್ನೂ ವಿವರಿಸಿದ ತಕ್ಷಣವೇ ನನಗೆ ಎಲ್ಲಾ ಹೊಳೆದಿತ್ತು. ಹೀಗಾಗಿರಬಹುದೆಂದು ಊಹಿಸಿ ನಿಮ್ಮನ್ನು ಕರೆಸಿದೆ. ಇದು ನಡೆದ ಸಂಗತಿ. ಇವರು ಐದು ಸಾವಿರದಲ್ಲಿ, ನಾಲ್ಕು ಸಾವಿರ ರೂಪಾಯಿಗಳನ್ನು ಈಗಾಗಲೇ ತಮ್ಮ ತಾಪತ್ರಯ ತೀರಿಸಿಕೊಳ್ಳಲು ಖರ್ಚು ಮಾಡಿದ್ದಾರೆ. ಈಗ, ಏನು ಮಾಡಬೇಕು ಹೇಳಿ?" ಎಂದರು ಇನ್‌ಸ್ಪೆಕ್ಟರು.

"ಸಾರ್, ಈ ಹಣ ಸಹ ಬೇಕಾಗಿರಲಿಲ್ಲ. ಆದರೆ ಸದ್ಯದ ಪರಿಸ್ಥಿತಿ ನನ್ನನ್ನು ತಾನಾಗಿಯೇ ಕಣ್ಣಿಗೆ ಬಿದ್ದ ಪರ್ಸ್‌ನ್ನು ತೆಗೆದುಕೊಳ್ಳುವಂತೆ ಪ್ರೇರೇಪಿಸಿತು. ಈಗ ನಿಮ್ಮ ಹಣ ಉಪಯೋಗಿಸಿದ್ದೇನೆ ನಿಜ. ಒಂದು ಸಾವಿರ ಉಳಿದಿದೆ. ಅದನ್ನು ತೆಗೆದುಕೊಳ್ಳಿ. ಉಳಿದ ಹಣ ನನಗೆ ಕೆಲಸ ಸಿಕ್ಕಿದ ಮೇಲೆ ಖಂಡಿತ ವಾಪಸುಮಾಡುತ್ತೇನೆ. ಇದಕ್ಕೆ ನಮ್ಮ ಇನ್‌ಸ್ಪೆಕ್ಟರವರೇ ಸಾಕ್ಷಿ" ಎಂದ ಮನೋಹರ.

"ಮನೋಹರ, ನಿಮ್ಮ ಮನೋಧರ್ಮ ನನಗೆ ಖಂಡಿತ ಹಿಡಿಸಿತು. ಈಗ, ನನ್ನ ಐದು ಸಾವಿರ ರೂಪಾಯಿಗಳು ನಿಮಗೇ ಸೇರಿದ್ದು. ಅದನ್ನು ಕೇಳುವ ಹಕ್ಕು ನನಗಿಲ್ಲ. ಒಂದು ವೇಳೆ, ನಾನೇ ಅಲ್ಲಿ ಬಿದ್ದಿದ್ದರೆ ನೀವು ಖಂಡಿತ ಸಹಾಯ ಮಾಡುತ್ತಿದ್ದಿರಿ. ಹಣ ನೀವೇ ಇಟ್ಟುಕೊಳ್ಳಿ. ನಿಮ್ಮ ಪ್ರಾಮಾಣಿಕತೆಯನ್ನು ಯಾರಾದರೂ ಮೆಚ್ಚಬೇಕಾದ್ದೇ. ಹಣ ಹಿಂದಿರುಗಿಸುವ ಯೋಚನೆ ಮಾಡಬೇಡಿ. ನಮ್ಮಲ್ಲಿ ಒಂದು ಔಟ್-ಹೌಸ್ ಖಾಲಿ ಇದೆ. ಅಲ್ಲಿಗೆ ಬಂದು ಬಿಡಿ. ಬಾಡಿಗೆ ಬೇಡ. ಅಲ್ಲದೇ ನಮ್ಮ ಮಾರಾಟ ಸಂಸ್ಥೆಯ ಹಣಕಾಸಿನ ವ್ಯವಹಾರವನ್ನು ನೀವೇ ನೋಡಿಕೊಳ್ಳಿ. ನಿಮಗೆ ಐದು ಸಾವಿರ ಸಂಬಳ. ನಮಗೂ ಮನೆಯಲ್ಲಿ ಮಕ್ಕಳಿಲ್ಲ. ಇದ್ದ ಇಬ್ಬರು ಗಂಡು ಮಕ್ಕಳೂ ಅಮೇರಿಕದಲ್ಲಿದ್ದಾರೆ. ನಾಳೆಯೇ ಅಲ್ಲಿ ಬಂದು ಬಿಡಿ," ಎಂದರು ರಾಯರು.

"ನೀವು ನಿಜವಾಗಿಯೂ ಪ್ರತ್ಯಕ್ಷ ದೇವರು ಸಾರ್, ಎಂಥ ಕಷ್ಟಕಾಲದಲ್ಲಿ ನನ್ನ ಕೈ ಹಿಡಿದು ಮುಂದಿನ ದಾರಿ ತೋರಿಸಿದ್ದೀರಿ! ನಿಮಗಾಗಿ ಖಂಡಿತವಾಗಿಯೂ ನಿಷ್ಠೆಯಿಂದ ದುಡಿಯುತ್ತೇನೆ," ಎಂದ ಮನೋಹರ.

ಇನ್‌ಸ್ಪೆಕ್ಟರ್ ಮನೋಹರನ ಬೆನ್ನು ತಟ್ಟುತ್ತಾ, "ಮಿ. ಮನೋಹರ್, ನಿಮಗೆ ದೇವರು ಒಳ್ಳೆಯದು ಮಾಡಲಿ. ನಿಮ್ಮ 'ಧರ್ಮ' ನಿಮ್ಮನ್ನು ಕಾಪಾಡಿದೆಯೆಂದು ತಿಳಿಯಿರಿ. ಮುಂದೆ ರಾಯರಿಗೆ ಆತ್ಮೀಯರಾಗಿ ಶುದ್ಧ ಹಸ್ತದಿಂದ ದುಡಿದು ಒಳ್ಳೇ ಹೆಸರನ್ನು ಪಡೆದುಕೊಳ್ಳಿ. Good luck" ಎಂದು ಇಬ್ಬರನ್ನೂ ಬೀಳ್ಕೊಟ್ಟರು.

ಮನೋಹರ ತನಗುಂಟಾದ ಸಂತೋಷವನ್ನು ರಮಾಳ ಸಂಗಡ ಹಂಚಿಕೊಳ್ಳಲು ಅಲ್ಲಿಂದ ಮನೆಯ ಕಡೆ ಓಡಿದ.

ಸುಳ್ಳು ಬರೆದು ಶ್ರೀಮಂತನಾದ

ಲಾಮಾ ಲೋಬ್‌ಸಂಗ್ ರಾಂಪಾ ಟಿಬೇಟನ ಸನ್ಯಾಸಿಗಳ ಜೊತೆ ತಾನು ಕಳೆದ ದಿನಗಳ ಬಗ್ಗೆ ಅನೇಕ ಪುಸ್ತಕಗಳನ್ನು ಬರೆದ. ಆಧ್ಯಾತ್ಮಿಕ ವಿಷಯದ ಒಳಹೊಕ್ಕು ಅಭ್ಯಸಿಸಲು ತನ್ನಲ್ಲಿರುವ ಪವಾಡ ಸದೃಶವಾದ ಮೂರನೇ ಕಣ್ಣು ಸಹಾಯ ಮಾಡಿತೆಂಬುದಾಗಿಯೂ ಪುಸ್ತಕದಲ್ಲಿ ಬರೆದಿದ್ದ. ಸ್ವಾರಸ್ಯದ ಸಂಗತಿಯೆಂದರೆ, ಲಾಮಾ ಲೋಬ್‌ಸಂಗ್ ರಾಂಪಾ ಎಂಬ ಲೇಖಕನೂ ಇರಲಿಲ್ಲ; ಅವನು ಪುಸ್ತಕದಲ್ಲಿ ವಿವರಿಸಿದ್ದ ಬೌದ್ಧ ಸನ್ಯಾಸಿಗಳ ಮಠವೂ ಇರಲಿಲ್ಲ. ಆ ಪುಸ್ತಕಗಳನ್ನು ಸೃಷ್ಟಿಸಿದ ವ್ಯಕ್ತಿ ಬೇರೆ ಯಾರೂ ಅಲ್ಲ, ಪ್ರಸಿದ್ಧ ಲೇಖಕ ಸಿರಿಲ್ ಹೆನ್ರಿ ಹಾಪ್‌ಕಿನ್ಸ್. ಅವನು ಆ ಪುಸ್ತಕಗಳ ಮಾರಾಟದಿಂದ ಶ್ರೀಮಂತನೂ ಆದ.

• *ಕೈವಾರ ಗೋಪಿನಾಥ*

ಪವಾಡ ಲೋಹ

ಪ್ಲಾಟಿನಮ್

ಬೋನ್ಸಾಯ್ ಶ್ರೀನಿವಾಸ

ಇಡೀ ಪ್ರಪಂಚದಲ್ಲಿ ವರ್ಷಂಪ್ರತಿ ಹೆಚ್ಚೆಂದರೆ ಮೂವತ್ತು ಲಕ್ಷ ಟ್ರಾಯ್ ಔನ್ಸುಗಳಷ್ಟು ಮಾತ್ರ ಪ್ಲಾಟಿನಮ್ ದೊರೆಯುತ್ತದೆ. ಇದು ಎಷ್ಟು ಅಪರೂಪದ ಲೋಹವೆಂದರೆ ಇದುವರೆಗೆ ಹೊರತೆಗೆದಿರುವ ಎಲ್ಲಾ ಪ್ಲಾಟಿನಮ್ ಅನ್ನೂ ಕೇವಲ ಹದಿನಾಲ್ಕು ಚದರಡಿ ಜಾಗದಲ್ಲಿ ಸೇರಿಸಿಡಬಹುದಾಗಿದೆ.

ಶ್ರೀಮಂತರು ಸ್ವಿಸ್ . ಬ್ಯಾಂಕ್‌ಗಳಲ್ಲಿ ಭದ್ರವಾಗಿಡುವ ಈ ಪ್ಲಾಟಿನಮ್ ಇನ್ನು ಮುಂದೆ ಅತ್ಯವಶ್ಯಕ ಔದ್ಯಮಿಕ-ವಸ್ತುವಾಗಲಿದೆ...

ಪ್ರಪಂಚದಾದ್ಯಂತ ಶ್ರೀಮಂತರು ಪ್ಲಾಟಿನಮ್ ಗಟ್ಟಿಗಳನ್ನು ಸ್ವಿಸ್ ಬ್ಯಾಂಕುಗಳ ತಿಜೋರಿಗಳಲ್ಲಿ ಭದ್ರವಾಗಿ ಹುದುಗಿಸಿಡುತ್ತಾರೆ. ಆದರೆ ಬ್ಯಾಂಕ್ ಅಧಿಕಾರಿಗಳು ಯಾರ ಪರವಾಗಿ ಮತ್ತು ಎಷ್ಟು ಪ್ಲಾಟಿನಮ್ ತಮ್ಮ ಬ್ಯಾಂಕುಗಳಲ್ಲಿದೆಯೆಂಬ ರಹಸ್ಯವನ್ನು ಹೊರಗೆಡಹುವುದಿಲ್ಲ.

ಪೇಯಪಾತ್ರೆಗಳಿಂದ ಹಿಡಿದು ಕಾಗದದ ನೋಟುಗಳವರೆಗಲ್ಲದೆ, ಕರಕುಶಲ ಕೈಗಾರಿಕೆ ಮತ್ತು ವಾಣಿಜ್ಯ ವ್ಯವಹಾರಗಳಲ್ಲೂ ಪ್ಲಾಟಿನಮ್ ತನ್ನ ಸೌಂದರ್ಯದ ಸೊಬಗನ್ನು ಬೀರಿದೆ. ಪ್ರಾಚೀನ ಕಾಲದಲ್ಲಿ ಕೊಲಂಬಿಯಾದ ಇಂಡಿಯನ್ನರು ಪ್ಲಾಟಿನಮ್‌ನ ಸಣ್ಣ ಸಣ್ಣ ಕಾಳುಗಳನ್ನು ಹರಿಯುವ ನೀರಿನಿಂದ ಹೆಕ್ಕಿ ತೆಗೆದು ಬಂಗಾರದೊಡನೆ ಬಿಸಿ ಮಾಡಿ ಬಡಿದು ಮಿಶ್ರ ಆಭರಣಗಳನ್ನು ತಯಾರಿಸುತ್ತಿದ್ದರು. ಆರ್ಸೆನಿಕ್‌ನೊಡನೆ ಬೆರೆಸಿದಾಗ ಕರಗಿದ ಪ್ಲಾಟಿನಮ್ ರೇಖುಗಳಾಗಿ ಪರಿವರ್ತನೆಗೊಂಡು ಜಟಿಲವಾದ ಕಲಾ ಕೌಶಲ್ಯದ ಆಭರಣಗಳನ್ನು ತಯಾರಿಸಲು ಹದಿನೆಂಟನೆ ಶತಮಾನದವರೆಗೆ ಕಾಯಬೇಕಾಯಿತು.

ಪ್ಲಾಟಿನಮ್ ಕರಗಬಲ್ಲ ಉಷ್ಣತೆ- ೧೭೬೯ c, ಕಬ್ಬಿಣ ಕರಗಬಲ್ಲ ಉಷ್ಣತೆಗಿಂತ ೨೩೦ c ಗಳಷ್ಟು ಹೆಚ್ಚು. ಅತ್ಯಂತ ಹೆಚ್ಚಿನ ಉಷ್ಣತೆಯಲ್ಲಿಯೂ ತನ್ನ ಸಾಮರ್ಥ್ಯವನ್ನು ಕಳೆದುಕೊಳ್ಳದ ಇದನ್ನು ಉನ್ನತ ಮಟ್ಟದ ಗಾಜಿನ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ಸಿಸ್‌ಪ್ಲಾಟಿನ್ ಕ್ಯಾನ್ಸರ್ ಜತೆ ಹೋರಾಡಬಲ್ಲ ಗುಣಗಳುಳ್ಳ ಪ್ಲಾಟಿನಮ್ ಮೂಲದ ಔಷಧ. ಅದನ್ನು ೧೯೬೮ರಲ್ಲಿ ಮಿಶಿಗನ್ ಸ್ಟೇಟ್ ವಿಶ್ವವಿದ್ಯಾಲಯದ ಡಾ. ಬಾರ್ನೆಟ್ ರೋಸನ್‌ಬರ್ಗ್ ಕಂಡುಹಿಡಿದರು.

ಇದರ ಜತೆಯಲ್ಲೇ ಉತ್ಪಾದನೆಯಾಗುವ ಇತರ ಐದು ಲೋಹಗಳೊಳಗೂಡಿ ಅಥವಾ ಒಂಟಿಯಾಗಿ ಇದು ಅನೇಕ ಪದಾರ್ಥಗಳನ್ನು ಸೃಷ್ಟಿಸಬಲ್ಲದು. ಆರ್ಥಿಕವಾಗಿಯೂ ಕೈಗಾರಿಕೆಗಳಲ್ಲಿಯೂ ಇದು ಅತ್ಯಂತ ಉಪಯುಕ್ತ ಲೋಹವಾದರೂ ಇದರ ಬೆಲೆ ಮಾತ್ರ ಎಂದೂ ಸ್ಥಿರವಾಗಿಲ್ಲ. ಹಿಂದಿನ ಹಲವಾರು ವರ್ಷಗಳಲ್ಲಿ ಒಂದು ಟ್ರಾಯ್ ಔನ್ಸಿನ ಬೆಲೆ ರೂ. ೧೦,೦.೦೦ ದಿಂದ ರೂ. ೩೦,೦೦೦ ಗಳವರೆಗೂ ಏರುಪೇರಾಗಿ ಯಾವುದೇ ತಯಾರಿಕೆಯಲ್ಲೂ ಪ್ಲಾಟಿನಮ್ ಹೆಚ್ಚಿನ ಪ್ರಮಾಣದಲ್ಲಿ ಬೇಕಾಗದೆ ಇರುವುದು ನಮ್ಮ

ಪುಣ್ಯ. ತೀರ ಕಡಿಮೆ ಪ್ರಮಾಣದ ಪ್ಲಾಟಿನಮ್ ಮಹತ್ಕಾರ್ಯಗಳನ್ನು ಸಾಧಿಸಬಲ್ಲದು.

ಪುರಾತನ ಇಜಿಪ್ಷಿಯನ್ನರು ಇದನ್ನು ಬೆಳ್ಳಿಯೆಂದೇ ಬಗೆದಿದ್ದರು. ಹದಿನಾರನೆ ಶತಮಾನದಲ್ಲಿ ಸ್ಪೇನರು ಪ್ಲಾಟಿನಮ್ ಅನ್ನು ಪತ್ತೆ ಹಚ್ಚಿದರು. ಇಂದಿನ ಕೊಲಂಬಿಯಾದ ಟೋಕೋ ಪ್ರಾಂತ್ಯದ ನದಿಗಳಿಂದ ಹೊರತೆಗೆಯುತ್ತಿದ್ದ ಬಂಗಾರದಲ್ಲಿ ಪ್ಲಾಟಿನಮ್ ಅನ್ನು ಅಂದೇ ಪತ್ತೆ ಮಾಡಿದ್ದರು. ಅನ್ವೇಷಕರು ಬಂಗಾರದಲ್ಲಿ 'ಬೆಳ್ಳಿ' ಮಿಶ್ರವಿರುವುದೆಂದು ಶಪಿಸುತ್ತಾ ಬಹು ಕಷ್ಟದಿಂದ ಒಂದೊಂದೇ ಚೂರನ್ನು ಬೇರ್ಪಡಿಸಿ ಪುನಃ ನದಿಗೇ ಎಸೆಯುತ್ತಿದ್ದರು.

ಪ್ಲಾಟಿನಮ್- ಪುಟಾಣಿ ಬೆಳ್ಳಿ- ಎಂದೇ ಪ್ಲಾಟಿನಮ್ ಅನ್ನು ಅವರು ಕರೆದರು. ಹಲವರು ಇದು ಬಂಗಾರವೆ; ಆದರೆ ಮತ್ತಷ್ಟು ದಿನಗಳಾದರೂ ಭೂಮಿಯಲ್ಲಿಡಬೇಕೆಂದು ತರ್ಕಿಸಿದ್ದರು.

ಹದಿನಾರನೆ ಶತಮಾನದ ಮಧ್ಯಭಾಗದ ಹೊತ್ತಿಗೆ ಈ ಹೊಸ ವಿಚಿತ್ರ ಲೋಹದ ವಾರ್ತೆ ಯುರೋಪನ್ನು ಮುಟ್ಟಿತು. ಅಂದಿನ ಹಳೆಯ ಪ್ರಪಂಚವನ್ನು ಪ್ಲಾಟಿನಮ್ ತಲುಪಬೇಕಾದರೆ ಶತಮಾನಗಳೆರಡೇ ಸಂದುವು. ಆ ವೇಳೆಗಾಗಲೆ ಈ 'ಅಪ್ರಯೋಜಕ ಬೆಳ್ಳಿ'ಯನ್ನು ಬಂಗಾರದ ನಾಣ್ಯ ಮತ್ತು ಗಟ್ಟಿಗಳೊಂದಿಗೆ ಯುಕ್ತಿಯಿಂದ ಕಲಬೆರಕೆ ಮಾಡುತ್ತಿದ್ದುದರಿಂದ ಪ್ಲಾಟಿನಮ್ ಅನ್ನು ಯುರೋಪಿನೊಳಗೆ ಕಳ್ಳಸಾಗಾಣಿಕೆಯಿಂದಲೇ ಒಯ್ಯಬೇಕಿತ್ತು.

ಹತ್ತೊಂಬತ್ತನೆ ಶತಮಾನದ ಕೊನೆಯ ವೇಳೆಗೆ ಯುರೋಪಿಯನ್ನರು ಇದು ಒಂದು ಲೋಹವಲ್ಲ; ಆರು ವಿವಿಧ ಲೋಹಗಳ ಬೆರಕೆ ಎಂದು ಪ್ಲಾಟಿನಮ್ ಅನ್ನು ಸರಿಯಾಗಿ ಅರ್ಥ ಮಾಡಿಕೊಂಡರು.

ವಿಲಿಯಮ್ ಹೈಡ್ ವೊಲ್ಲಸ್ಟನ್ ಎಂಬ ಲಂಡನ್ನಿನ ರಾಸಾಯನಿಕ ತಜ್ಞ ಮೊತ್ತ ಮೊದಲಿಗೆ ಪ್ಲಾಟಿನಮ್ ಅನ್ನು ಜತೆಯಲ್ಲಿನ ಲೋಹಗಳಿಂದ ಬೇರ್ಪಡಿಸಿದ. ೧೮೦೨ರಲ್ಲಿ ಪೆಲೇಡಿಯಮ್, ೧೮೦೪ರಲ್ಲಿ ರ್‍ಹೋಡಿಯಮ್ ಮತ್ತು ಇವನ ಪಾಲುಗಾರ ಇರಿಡಿಯಮ್ ಮತ್ತು ಆಸ್ಮಿಯಮ್ ಅನ್ನು ಪತ್ತೆ ಹಚ್ಚಿದರು. ೧೮೪೪ರಲ್ಲಿ ಕಟ್ಟಕಡೆಯ ಧಾತುವಾದ ರುಥೇನಿಯಮ್‌ನ್ನು ರಷ್ಯದ ವಿಜ್ಞಾನಿಯೋರ್ವ ಬೇರ್ಪಡಿಸಿದ.

ಪ್ಲಾಟಿನಮ್ ಗುಂಪಿನ ಲೋಹಗಳನ್ನು ಔನ್ಸ್‌ಗಳಲ್ಲಿ ಅಳತೆ ಮಾಡಲಾಗುತ್ತದೆ ಮತ್ತು ಇಷ್ಟು ಕಡಿಮೆ ಮೊತ್ತದ ಪೈಕಿ ಪ್ಲಾಟಿನಮ್ ಮತ್ತು ಪೆಲೇಡಿಯಮ್‌ಗಳದ್ದೇ ಹೆಚ್ಚಿನ ಪಾಲು. ಮಿಕ್ಕ ಲೋಹಗಳು ತೀರ ಕಡಿಮೆ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತವೆ. ಈ ಎಲ್ಲಾ ಆರು ಲೋಹಗಳೂ ಹಲವಾರು ಏಕರೀತಿಯ ಗುಣಗಳನ್ನು ಹೊಂದಿವೆ. ಉದಾ: ಪ್ಲಾಟಿನಮ್‌ನೊಡನೆ ಬಹು ಕಡಿಮೆ ಅಂಶದಲ್ಲಿ ಇಂಡಿಯಮ್‌ನ್ನು ಬೆರೆಸಿದಾಗ ಹೆಚ್ಚು ಕರಗುವ ಉಷ್ಣತೆಯನ್ನು ಹೊಂದಿದ ಹೆಚ್ಚು ವಿದ್ಯುತ್ ನಿರೋಧಕ ಶಕ್ತಿಯುಳ್ಳ ಮತ್ತು ತುಕ್ಕನ್ನು ನಿರೋಧಿಸಬಲ್ಲ ಲೋಹವೊಂದನ್ನು ಉತ್ಪಾದಿಸಬಹುದು. ಪ್ಲಾಟಿನಮ್ ತನ್ನ ಜಾತಿಯ ಲೋಹಗಳಲ್ಲದ ಇತರ ಲೋಹಗಳೊಂದಿಗೆ ಬೆರೆತಾಗ ಉದಾ: ಪ್ಲಾಟಿನಮ್ + ಕೊಬಾಲ್ಟ್- ಅತ್ಯಂತ ಹೆಚ್ಚಿನ ಅಯಸ್ಕಾಂತ ಶಕ್ತಿಯನ್ನು ಹೊಂದಿದ ಮಿಶ್ರ ಲೋಹವನ್ನು ಉತ್ಪಾದಿಸಬಲ್ಲದಾಗಿದೆ.

೨೦ ಕೋಟಿ ವರ್ಷಗಳ ಹಿಂದೆ ಕೆನಡಾದ, ಒಂಟಾರಿಯೋದಲ್ಲಿ ಉಲ್ಕಾ ಶಿಲೆಯೊಂದು ಭೂಮಿಗೆ ಅಪ್ಪಳಿಸಿದಾಗ ಸಡ್ಬರಿ ಎಂಬ ಆಳವಿಲ್ಲದ ಬೋಗುಣಿಯಾಕಾರದ ತಗ್ಗಿನ ಪ್ರದೇಶ ಉಂಟಾಯಿತು. ಹೊಡೆತದ ವೇಗ ಭೂಮಿಯ ಹೊರಪ-ದರವನ್ನು ನಜ್ಜು ಗುಜ್ಜು ಮಾಡಿತು. ಇದರಿಂದಾಗಿ ಅದುರಿನಿಂದ ಸಂಪತ್ಭರಿತವಾದ ಖನಿಜ ವಸ್ತುಗಳ ಒರಟು ಮಿಶ್ರಣವೊಂದು ಭೂಮಿಯ ಹೊರಮೈಗೆ ಹರಿದುಬಂತು.

'ಇನ್ಕೊ ಲಿಮಿಟೆಡ್'ನ ಒಡೆತನದಲ್ಲಿ ಬೃಹತ್ತಾಗಿ ಹಬ್ಬಿರುವ ಜಟಿಲವಾದ ಗಣಿಗಳು ಪೂರಿ ಮಾಡುವ ಯಂತ್ರಗಳು, ಅದುರನ್ನು ಕರಗಿಸುವ ಮತ್ತು ಶುದ್ಧೀಕರಿಸುವ ಸಂಕೀರ್ಣಗಳು ಕ್ಲಿಷ್ಟವಾದ ಕ್ರಿಯೆಗಳಿಂದ ಪ್ಲಾಟಿನಮ್ ಅದುರನ್ನು ಭೂಗರ್ಭದಿಂದ ಹೊರ ತೆಗೆಯುತ್ತವೆ.

ಕಾರ್ಯ ನಡೆಯುವ ಪ್ರತಿದಿನ ಗಣಿಯಿಂದ ೩೪,೦೦೦ ಟನ್ ಅದುರು ಹೊರಬರುತ್ತದೆ. ಹೊರಬರುವ ಹಾದಿಯಲ್ಲೇ ಟನ್‌ಗಟ್ಟಲೆ ನಿಕ್ಕೆಲ್,

ತಾಮ್ರ, ಕೋಬಾಲ್ಟ್, ಬಂಗಾರ ಮತ್ತು ಬೆಳ್ಳಿಯನ್ನು ಬೇರ್ಪಡಿಸಿದಾಗ ಕೊನೆಯಲ್ಲಿ ಅನಾಕರ್ಷಕವಾದ ಸ್ಲೈಮ್ ಎಂಬ ಮಣ್ಣು ಮುದ್ದೆ ಉಳಿಯುತ್ತದೆ. ಇಡೀ ದಿನದ ಸ್ಲೈಮ್ ಉತ್ಪಾದನೆಯನ್ನು ಕಾಲು ಗ್ಯಾಲನ್ ಜಾಡಿಯೊಂದರಲ್ಲಿ ತುಂಬಿಸಿಡುತ್ತಾರೆ. ನಂತರ ಇದನ್ನು ಮತ್ತಷ್ಟು ಪರಿವರ್ತನೆ ಮಾಡಲು ಇಂಗ್ಲೆಂಡಿಗೆ ರವಾನಿಸುತ್ತಾರೆ. ಈ ಸ್ಲೈಮ್‌ನಿಂದ ಹೊರಬರುತ್ತದೆ ಪ್ಲಾಟಿನಮ್ ಕುಟುಂಬದ ಆರು ಅಪ್ಪಟ ಲೋಹಗಳು.

ವರ್ಷಂಪ್ರತಿ ಹತ್ತುಸಾವಿರ ಟನ್ ಬೆಳ್ಳಿ, ಒಂದು ಸಾವಿರ ಟನ್ ಬಂಗಾರ ಮತ್ತು ಕೇವಲ ೭೦ ರಿಂದ ೮೦ ಟನ್‌ಗಳಷ್ಟು ಪ್ಲಾಟಿನಮ್ ಮತ್ತು ಪೆಲೆಡಿಯಮ್‌ಗಳು ಮಾರುಕಟ್ಟೆಯನ್ನು ತಲುಪುತ್ತವೆ. ಕೆನಡಾ ದೇಶ ಪ್ರಪಂಚದ ಶೇಕಡ ಆರುಭಾಗ ಪ್ಲಾಟಿನಮ್‌ಅನ್ನೂ ಕೊಲಂಬಿಯಾ ಇದಕ್ಕಿಂತಲೂ ಕಡಿಮೆ ಪ್ಲಾಟಿನಮ್ ಅನ್ನೂ ಉತ್ಪಾದಿಸುತ್ತದೆ. ಉತ್ಪಾದನೆಯ ಸಿಂಹಪಾಲು ದ. ಆಫ್ರಿಕದ ಟ್ರಾನ್ಸ್‌ವಾಲ್ ಮತ್ತು ಬೋತ್ಸ್ವಾನ ಮತ್ತು ರಷ್ಯದ ಧ್ರುವ ಪ್ರದೇಶಗಳಿಂದ ಬರುತ್ತದೆ.

ಈ ನಾಲ್ಕೂ ಉತ್ಪಾದಕ ದೇಶಗಳ ಪೈಕಿ ದ. ಆಫ್ರಿಕಾ ಮಾತ್ರ ಪ್ಲಾಟಿನಮ್ ಅನ್ನು ಪ್ರಧಾನೋತ್ಪನ್ನವಾಗಿ ಗಣಿಯಿಂದ ಹೊರತೆಗೆಯುತ್ತದೆ. ಉಳಿದ ಗಣಿಗಳು ಇನ್ನಿತರ ಲೋಹಗಳಿಗೇ ಪ್ರಧಾನ್ಯ ನೀಡುತ್ತವೆ.

ದ. ಆಫ್ರಿಕದ ಗಣಿಗಳು ಪೂರ್ವದಿಂದ ಪಶ್ಚಿಮಕ್ಕೆ ೨೭೦ ಮೈಲಿಗಳಷ್ಟು ಮತ್ತು ದಕ್ಷಿಣದಿಂದ ಉತ್ತರಕ್ಕೆ ೧೮೦ ಮೈಲಿಗಳಷ್ಟು ದೂರಕ್ಕೆ ಚಾಚಿವೆ. ಈ ಗಣಿಗಳು ಪ್ಲಾಟಿನಮ್ ಗುಂಪಿನ ಅದುರುಗಳನ್ನು ಹೇರಳವಾಗಿ ಹೊಂದಿವೆ.

ಆಳಕ್ಕೆ ಹೋಗುತ್ತ ಹೋಗುತ್ತಾ ಉಷ್ಣತೆ ಮತ್ತು ಒತ್ತಡ ಹೆಚ್ಚಿ ಗಣಿಯಿಂದ ಅದುರನ್ನು ಹೊರತೆಗೆಯುವ ಕಾರ್ಯ ದುಸ್ತರವಾಗುತ್ತದೆ. ಈ ಗಣಿಗಳಲ್ಲಿನ ಪ್ಲಾಟಿನಮ್ ದಾಸ್ತಾನು ಮುಂದಿನ ಹಲವಾರು ಶತಮಾನಗಳವರೆಗೂ ಕುಗ್ಗಲಾರದಾದರೂ ಅದುರನ್ನು ಹೊರತೆಗೆಯುವ ಕಾರ್ಯ ಆರ್ಥಿಕವಾಗಿ ಲಾಭದಾಯಕವಾಗದ ದಿನಗಳು ಮುಂಬರಬಹುದಾಗಿದೆ.

ಪ್ಲಾಟಿನಮ್ ಅನ್ಯ ಪರಿಣಾಮಕಾರಕ ಕ್ರಿಯೆಯ ಮೂಲಕ ಹೇರಳವಾದ ರಾಸಾಯನಿಕ ಕ್ರಿಯೆಗಳನ್ನು ಅಮಿತೋತ್ಸಾಹದಿಂದ ನಡೆಸಿಕೊಡುತ್ತದೆ.

ಅನ್ಯ ಪರಿಣಾಮಕಾರಕ ಕ್ರಿಯೆ (catalyst) ಎಂದರೇನು?

ಪರ್ವತದ ಹಾದಿಯಲ್ಲಿ ಕಣಿವೆಯಿಂದ ಕಣಿವೆಗೆ ದಾಟಿಸುವ ಮಾರ್ಗದರ್ಶಕನನ್ನು ಮನದಲ್ಲೇ ಕಲ್ಪಿಸಿಕೊಳ್ಳಿ. ಗುಂಪೊಂದನ್ನು ದಾಟಿಸಿ ತನ್ನಲ್ಲಿ ಯಾವ ವಿಧವಾದ ಬದಲಾವಣೆಗೂ ಅವಕಾಶ ಕೊಡದೆ, ಮತ್ತೊಂದು ಗುಂಪೊಂದನ್ನು ದಾಟಿಸುವ ಸಲುವಾಗಿ ಒಂಟಿಯಾಗಿ ಅದೇ ಸ್ಥಳಕ್ಕೆ ಆತ ಹಿಂದಿರುಗುವನು. ಅನ್ಯ ಪರಿಣಾಮಕಾರಕ ವಸ್ತುವಾದರೂ ಹಾಗೆಯೆ. ತಾನು ಬದಲಾವಣೆಗೊಳ್ಳದಿದ್ದರೂ ಅನ್ಯ ವಸ್ತುಗಳಲ್ಲಿ ರಾಸಾಯನಿಕ ಬದಲಾವಣೆಯನ್ನು ಪ್ರೇರೇಪಿಸುತ್ತದೆ. ಇತರ ವಸ್ತುಗಳಿಗಿಂತಲೂ ಹೆಚ್ಚಿನ ಹುರುಪಿನಿಂದ ಬದಲಾವಣೆಯನ್ನುಂಟು ಮಾಡುತ್ತದಾದರೂ ಪ್ಲಾಟಿನಮ್ ಸ್ವತಃ ರಾಸಾಯನಿಕವಾಗಿ ಜಡವಸ್ತು.

ವಾಹನಗಳಿಂದ ಹೊರಬರುವ ಮಲಿನ ಅನಿಲವನ್ನು ಪರಿವರ್ತಿಸುವ ಕಾರ್ಯದಲ್ಲಿ ಇದರ ಉಪಯೋಗ ಅಮೆರಿಕದಲ್ಲಿ ಆದ್ಯತೆ ಬಹಳ ಪಡೆದಿದೆ. ಆ ದೇಶ ಪ್ರತಿವರ್ಷ ಪ್ರಪಂಚದ ಉತ್ಪಾದನೆಯ ಅರ್ಧಭಾಗ ಖರೀದಿಸುತ್ತದೆ. ವಾಹನದಲ್ಲಿನ ಪರಿವರ್ತಕಗಳು ಕಡೆಯ ಪಕ್ಷ ೫೦,೦೦೦ ಮೈಲಿಗಳಷ್ಟು ಓಡುವವರೆಗೆ ಕಾರ್ಯಕ್ಷಮತೆಯಿಂದಿರಬಲ್ಲವು.

ಸೌದೆಯಿಂದ ಉರಿಯುವ ಒಲೆಯಲ್ಲಿಯೂ ಈ ಸ್ಪರ್ಶಮಣಿಯ ಉಪಯೋಗ ಮಾಡಲ್ಪಡುತ್ತದೆ. ಸಾಧಾರಣವಾಗಿ ಸೌದೆ ಉರಿಯ ಶೇಕಡ ೫ ರಿಂದ ೩೦ ಭಾಗದ ಶಕ್ತಿ ಚಿಮಣಿಯ ಮೇಲಕ್ಕೇರುತ್ತಿರುವಂತೆಯೇ ಹೊಗೆಯ ಗೂಡಿನಲ್ಲಿ ವ್ಯರ್ಥವಾಗುತ್ತದೆ. ತಾರೆಣ್ಣೆಯಂತಹ ಕ್ಷಾರದ್ರವವೊಂದನ್ನು ಚಿಮಣಿಯ ಒಳಮೈಗೆಲ್ಲಾ ಬಳಿಯುತ್ತದೆ. ಪ್ಲಾಟಿನಮ್ ಲೇಪದ ಒಲೆಗಳಲ್ಲಿ ಹೊಗೆಯೂ ಸಹ ಉರಿದು ಹೆಚ್ಚಿನ ಶಾಖ ಉಂಟಾಗುತ್ತದೆ.

ನೈಟ್ರಿಕ್ ಆಮ್ಲದ ತಯಾರಿಕೆಯಲ್ಲಿ ಪ್ಲಾಟಿನಮ್ ಅನ್ಯ ಪರಿಣಾಮ ಕ್ರಿಯೆಯನ್ನು ನೆರವೇರಿಸುತ್ತದೆ.

ಅಜೈವಿಕ ಗೊಬ್ಬರಗಳ ತಯಾರಿಕೆಯಲ್ಲಿ ನೈಟ್ರಿಕ್ ಆಮ್ಲ ಮೂಲವಸ್ತು. ಇದು ಗಾಜಿನೆಳೆಯ (**Fiber glass**) ಉತ್ಪಾದನೆಯಲ್ಲೂ ಅನ್ಯ ಪರಿಣಾಮಕಾರಿ ವಸ್ತುವಾಗಿದೆ.

ಉಪ್ಪು ನೀರಿನಲ್ಲಿ ಹಡಗಿನ ಒಡಲು ವಿದ್ಯುತ್ತನ್ನು ಬಿಡುಗಡೆ ಮಾಡಬಲ್ಲ ಬ್ಯಾಟರಿಯಂತೆ ಕಾರ್ಯ ಪ್ರವೃತ್ತವಾಗುತ್ತದೆ. ಹೆಚ್ಚು ಕ್ರಿಯಾಶೀಲವಾದ ಲೋಹದಿಂದ (ಋಣ ಧ್ರುವ) ವಿದ್ಯುತ್ತು ಸಮುದ್ರದ ಉಪ್ಪುನೀರಿನ ಮೂಲಕ (ವಿದ್ಯುದ್ವಿಶ್ಲೇಷ) ಕಡಿಮೆ ಕ್ರಿಯಾಶೀಲವಾಗಿರುವ ಲೋಹಕ್ಕೆ (ಧನ ಧ್ರುವ) ಹರಿಯುತ್ತದೆ. ಉದಾ: ಲೋಹದ ಚುಕ್ಕಾಣಿಯಿಂದ ಉಕ್ಕಿನ ಒಡಲಿಗೆ. ಈ ರೀತಿಯಾದಾಗ ವಿದ್ಯುತ್ತು ಎಲ್ಲಿಂದ ಬಿಡುಗಡೆಯಾಗುತ್ತದೋ ಅಲ್ಲಿ ತುಕ್ಕು ಹಿಡಿಯುವ ಪ್ರತಿಕ್ರಿಯೆ ತೀವ್ರಗತಿಯಿಂದ ಉಂಟಾಗುತ್ತದೆ. ಈ ಸಮಸ್ಯೆಯನ್ನು ಪರಿಹರಿಸಲು ಹಡಗಿನ ಒಡಲಿಗೆ ಸತುವಿನಿಂದ ತಯಾರಿಸಿದ ಪಟ್ಟಿಗಳನ್ನು ಹೊದಿಸುತ್ತಾರೆ. ಸತುವು ಉಕ್ಕಿಗಿಂತ ಹೆಚ್ಚು ಕ್ರಿಯಾಶೀಲವಾದ ಲೋಹ. ಅದು ವಿದ್ಯುತ್ ಹೊರಹೋಗಬಲ್ಲ ಲೋಹದ ಕಾರ್ಯ ನೆರವೇರಿಸಿ, ಆತ್ಮಾರ್ಪಣೆ ಮಾಡಿಕೊಂಡು ಹಡಗಿನ ಒಡಲಿನ ಉಕ್ಕನ್ನು ತುಕ್ಕಿನಿಂದ ರಕ್ಷಿಸುತ್ತದೆ.

ಎಂಗಲೆ ಹಾರ್ಡ್ ಎಂಬುವನಿಂದ ಯೋಜಿಸಲ್ಪಟ್ಟ ವ್ಯವಸ್ಥೆಯಲ್ಲಿ ಋಣಧ್ರುವಗಳಾದ ಲೋಹಗಳು ಪ್ಲಾಟಿನಮ್ ಹೊದಿಕೆಯಿಂದೊಡಗೂಡಿ ಹಡಗಿನ ಒಡಲನ್ನು ಆವರಿಸಿರುತ್ತವೆ. ಅತ್ಯಂತ ಜಾಗರೂಕತೆಯಿಂದ ಹಡಗಿನ ವಿದ್ಯುತ್ ವ್ಯವಸ್ಥೆಯಿಂದ ಈ ಪ್ಲಾಟಿನಮ್ ಋಣ ಲೋಹಕ್ಕೆ ಹತೋಟಿಯಲ್ಲಿಡಬಲ್ಲ ವ್ಯವಸ್ಥೆಯೊಂದರ ಮೂಲಕ ವಿದ್ಯುತ್ತನ್ನು ಹರಿಸಲಾಗುತ್ತದೆ. ಈ ರೀತಿ ಮಾಡಿದಾಗ ನೀರಿನ ಅಡಿಯಲ್ಲಿರುವ ಲೋಹಗಳೆಲ್ಲ ಧನಧ್ರುವವಾಗಿ ಮಾರ್ಪಾಡಾಗುತ್ತವೆ. ಆಗ ಪ್ಲಾಟಿನಮ್ ಆಚ್ಛಾದಿತವಾಗಿರುವ ಲೋಹ ಮಾತ್ರ ತುಕ್ಕಿನಿಂದ ಸವೆಯುತ್ತದೆ. ಆದರೆ ಪ್ಲಾಟಿನಮ್ ಆಚ್ಛಾದಿತ ಲೋಹ ಈ ಕಾರ್ಯವನ್ನು ವರ್ಷಾನುಗಟ್ಟಲೆ ನಿಭಾಯಿಸಬಲ್ಲದು.

ಮೇರಿಲ್ಯಾಂಡಿನ ಗೋಥರ್ಸ್‌ಬರ್ಗಿನಲ್ಲಿ ಅಮೆರಿಕದ ಮಾನಕಗಳನ್ನು, ನಿರ್ದೇಶಿಸುವ ಕಚೇರಿಯ ತಿಜೋರಿಯೊಂದರಲ್ಲಿ. ಪ್ಲಾಟಿಮ್-ಇಂಡಿಯಮ್ ಮಿಶ್ರ ಲೋಹದ ಒಂದು ಕೆ.ಜಿ. ತೂಕ ವರ್ತುಲಾಕಾರದ ನಾಳಿಯೊಂದಿದೆ. ಆಗೊ ಈಗೊಮ್ಮೆ ತನ್ನ ತಿಜೋರಿಯಿಂದ ಹೊರಬರು ಈ ನಾಳಿ ಪ್ಯಾರಿಸ್‌ಗೆ ಪಯಣಿಸಿ ಅಂತಾರಾಷ್ಟ್ರೀ ಮಾನಕದೊಂದಿಗೆ ತಾಳೆ ನೋಡಿಕೊಂಡು ಹಿಂ ರುಗುತ್ತದೆ. ಇದೇ ಆಡಳಿತ ಕಚೇರಿಯಲ್ಲಿ ಪ್ಲಾ ನಮ್-ಇಂಡಿಯಮ್‌ನಿಂದ ತಯಾರಿಸಿದ ಒಂದ ಮೀಟರಿನ ಅಳತೆಗೋಲೂ ಇದೆ. ಇಲೆಕ್ಟ್ರಾನಿ ಮಾಪಕ ವ್ಯವಸ್ಥೆ ಅತ್ಯಂತ ನಿಖರವಾದುದರಿಂ ಇಂದಿನ ಎಲೆಕ್ಟ್ರಾನಿಕ್ ಯುಗದಲ್ಲಿ ಇದರ ಪ್ರಯೋಜನ ಕೇವಲ ಚರಿತ್ರಾರ್ಹ ಮಾತ್ರ.

ರಾಷ್ಟ್ರಗಳು ಅಪಮೌಲ್ಯದ ಹೊಡೆತದಿಂದ ಸ ಳುತ್ತಿದ್ದರೆ ಪ್ಲಾಟಿನಮ್ ಮತ್ತು ಪೆಲೆಡಿಯಮ್ಗ ಬೆಲೆ ಮಾತ್ರ ಏರುತ್ತಲೇ ಇರುತ್ತದೆ. ಮು ಮಾರುಕಟ್ಟೆಯಲ್ಲಿ ಪ್ಲಾಟಿನಮ್‌ನ ಬೆಲೆ ಬಂಗಾರ ಬೆಲೆಗಿಂತ ಸ್ವಲ್ಪ ಜಾಸ್ತಿ. ೧೯೮೦ರಲ್ಲಿ ಒಂದ ಟ್ರಾಯ್ ಔನ್ಸಿನ ಬೆಲೆ ರೂ. ೩೧,೪೭೦ ಗಳಷ್ಟಿತ್ತು ೧೯೭೮ ಸೆಪ್ಟೆಂಬರ್ ೧೭ನೆ ತಾರೀಖು ಅತ್ಯಂ ಗದ್ದಲದಿಂದೊಡಗೂಡಿದ ಲಂಡನ್ನಿನ ಬೀದಿಯೊ ದರಲ್ಲಿ ಬಹು ವಿಚಿತ್ರ ರೀತಿಯಿಂದ ಪ್ಲಾಟಿನಮ ತನ್ನ ಕಾರ್ಯ ಕೌಶಲವನ್ನು ಹೊರಗೆಡವಿತ್ತು. ದೇಶ ತೊರೆದು ಓಡಿ ಬಂದ ಜಾರ್ಜ್ ಮಾರ್ಕೊವ ಎಂಬ ಬಲ್ಗೇರಿಯನ್ ನಾಗರಿಕನೊಬ್ಬ ಗಾಯ ಗೊಂಡು ಬೀದಿಯಲ್ಲಿ ಉರುಳಿದ. ತುರ್ತು ಚಿ ತ್ಸೆಯ ವಿಭಾಗದಲ್ಲಿ ನಾಲ್ಕು ದಿನಗಳ ಉಪಚಾ ಪಡೆದ ಈತ ಆಸ್ಪತ್ರೆಯಲ್ಲೇ ಪ್ರಾಣ ತ್ಯಜಿಸಿದ ಇವನಿಗೆ ಗುಂಡು ಹಾರಿಸಿದಾತ ತನ್ನ ಬಂದೂಕಿನಲ್ಲಿ ಇಂಡಿಯಮ್ಮಿನಿಂದ ತಯಾರಿಸಿದ ಸೂಕ್ಷ್ಮವಾದ ವಿಷ ಯುಕ್ತ ಗುಂಡೊಂದನ್ನು ಬಳಾಯಿಸಿದ್ದ. ಇಂಡಿಯಮ್ಮಿನ ಬದಲು ಬೇರಾವುದೇ ಲೋಹದ ಗುಂಡನ್ನು ಪ್ರಯೋಗಿಸಿದ್ದಿದ್ದರೆ, ಈ ನಾಲ್ಕು ದಿನಗಳ ಶುಶ್ರೂಷೆಯ ಸಮಯದಲ್ಲಿ ಸುಲಭವಾಗಿ ಪತ್ತೆಹಚ್ಚಿ ಮಾರ್ಕೊವನನ್ನು ವೈದ್ಯರು ಸುಲಭವಾಗಿ ಉಳಿಸ ಬಹುದಾಗಿತ್ತು. ಆದರೆ ಸಾಧಾರಣವಾಗಿ ವೈದ್ಯರ ಗಮನವನ್ನು ಸೆಳೆಯಬಲ್ಲ, ಪರಕೀಯ ಪದಾರ್ಥ ಗಳನ್ನು ತಿರಸ್ಕರಿಸಲು ಉಂಟಾಗುವ ಊತ ಈ

ಂಡೇಟಿನ ಭಾಗದಲ್ಲಿ ತೋರಿ ಬರಲೇ ಇಲ್ಲ.

ಇಷ್ಟಾದರೂ ಈ ಲೋಹ ಜೀವವನ್ನು ಸಹ ಳಿಸಬಲ್ಲದು. ೧೯೬೭ರಲ್ಲಿ ಮಿಶಿಗನ್ ಸ್ಟೇಟ್ ಶ್ವವಿದ್ಯಾಲಯದ ವಿಜ್ಞಾನಿಯೋರ್ವ ಅಪಾಯ ರಿ ಸೂಕ್ಷ್ಮಾಣುಗಳ ಉತ್ಪಾದನೆಯನ್ನು ವಿದ್ಯುತ್ ಲಯದಲ್ಲಿ ಪ್ರತಿಬಂಧಿಸಲು ಸಾಧ್ಯವೆ? ಎಂಬು ನ್ನು ಅರಿಯಲು ಪ್ರಯೋಗವೊಂದನ್ನು ಕೈಗೊಂಡ. ೂಕ್ಷ್ಮಾಣುಗಳು ಪುನರುತ್ಪಾದಿಸುವುದನ್ನು ಸ್ಥಗಿತಗೊ ಸಿದವು. ಆದರೆ ವಿದ್ಯುತ್ತನ್ನು ನಿಲ್ಲಿಸಿದ ಮೇಲೂ ಕ್ಷ್ಮಾಣುಗಳು ಪುನರುತ್ಪಾದನೆಯ ಕ್ರಿಯೆಯನ್ನು ಪೂರ್ಣವಾಗಿ ನಿಲ್ಲಿಸಿದ್ದವು. ಪ್ಲಾಟಿನಮ್ ಉತ್ತ ವಾದ ವಿದ್ಯುದ್ವಾಹಕ ಮತ್ತು ಹೋಲಿಕೆಯಲ್ಲಿ ತರ ವಸ್ತುಗಳಿಗಿಂತಲೂ ಜಡವಾಗಿರುವುದರಿಂದ ಪ್ಲಟಿನಮ್‌ನ ವಿದ್ಯುತ್ ಧ್ರುವಗಳನ್ನೇ ಈ ್ರಯೋಗಗಳಲ್ಲಿ ಉಪಯೋಗಿಸಲಾಗಿತ್ತು.

ಕ್ಯಾನ್ಸರಿನ ಶುಶ್ರೂಷೆಯಲ್ಲಿ ಏನಾದರೊಂದು ುಪಯುಕ್ತ ಮಾಹಿತಿ ದೊರೆಯಬಹುದೆಂಬ ಆಸೆ ುಂದ ಪ್ಲಾಟಿನಮ್‌ನೊಂದಿಗೆ ಅನೇಕ ಪ್ರಯೋಗ ಳನ್ನು ನಡೆಸಲಾಯಿತು. ಕೊನೆಗೆ 'ಸಿಸ್‌ಪ್ಲಾಟಿನ್' ಂಬ ಕೃತಕ ಔಷಧಿಯೊಂದನ್ನು ಉತ್ಪಾದಿಸಲಾ ಯಿತು. ಕ್ಲೋರಿನ್ನಿನ ಎರಡು ಅಣುಗಳು ಮತ್ತು ಮೋನಿಯದ ಎರಡು ಅಣುಗಳನ್ನು ಒಂದು ಪ್ಲಟಿನಮ್ ಅಣುವಿನೊಂದಿಗೆ ಬಂಧಿಸಿ ಸ್‌ಪ್ಲಾಟಿನ್‌ಅನ್ನು ಉತ್ಪಾದಿಸಲಾಯಿತು.

೧೯೬೫ರಲ್ಲೇ ಈ ರಾಸಾಯನಿಕ ರಚನೆಯ ರಿಚಯವಾಗಿದ್ದರೂ ಜೀವಕೋಶಗಳ ಮೇಲೆ ಇದರಿಂದುಂಟಾಗುವ ಪರಿಣಾಮಗಳನ್ನು ಇದುವ ಗೆ ಯಾರೂ ಅಭ್ಯಾಸ ಮಾಡಿರಲಿಲ್ಲ. ಸ್‌ಪ್ಲಾಟಿನ್‌ನಿಂದ ದೇಹದ ಮೇಲುಂಟಾಗುವ ರಡು ಗಂಭೀರ (ಯಕೃತ್ತಿಗೆ ಹಾನಿ ಮತ್ತು ಯಂಕರ ಪಿತ್ತೋದ್ರೇಕ) ಪರಿಣಾಮಗಳು ಇತ್ತೀ ಚಿನ ಪ್ರಯೋಗಗಳಿಂದಾಗಿ ಪರಿಣಾಮದ ತೀವ್ರತೆ ಯನ್ನು ಹತೋಟಿಯಲ್ಲಿಡುವಷ್ಟು ಕಡಿಮೆ ಮಾಡ ಾಗಿದೆ.

ಈ ಔಷಧಿ ಯಾವ ರೀತಿಯಲ್ಲಿ ರೋಗವನ್ನು ಡೆಯಬಲ್ಲದೆಂದು ಇನ್ನೂ ಧೃಡಪಟ್ಟಿಲ್ಲವಾದರೂ ್ಯಾನ್ಸರಿನ ಡಿ.ಎನ್.ಎ. ಕೋಶವನ್ನು ಯಾವುದೋ ರೀತಿಯಲ್ಲಿ ಒಳ ಹೊಕ್ಕು ಆಕ್ರಮಿಸಿ, ಹಿಡಿತಕ್ಕೆ ತರಬಲ್ಲದೆಂಬ ಅಂಶವನ್ನು ಎಲ್ಲಾ ವೈದ್ಯರುಗಳು ಅನುಮೋದಿಸುತ್ತಾರೆ. ವೃಷಣ ಮತ್ತು ಅಂಡಾಶ ಯದ ಕ್ಯಾನ್ಸರಿಗೆ ಈ ಔಷಧಿ ಅಸಾಧಾರಣ ರೀತಿಯಿಂದ ಉತ್ತಮ ಪರಿಣಾಮ ನೀಡಬಲ್ಲದು.

ಇದರ ಉಪಯೋಗ ಹೊಂದಬಲ್ಲ ಕೈಗಾರಿಕೆ ಗಳು ದಿನೇ ದಿನೇ ಹೆಚ್ಚುತ್ತಿವೆ. ಬ್ರಿಟನ್ ಸದ್ಯದಲ್ಲೇ ಸೀಸಯುಕ್ತ ಪೆಟ್ರೋಲನ್ನು ಬಹಿಷ್ಕರಿಸುವುದೆಂದೂ ಮತ್ತು ಇಡೀ ಯುರೋಪ್ ತನ್ನನ್ನು ಅನುಸರಿಸ ಬೇಕೆಂದು ಪ್ರೇರೇಪಿಸುವುದಾಗಿಯೂ ಬ್ರಿಟಿಷ್ ಪತ್ರಿ ಕೆಗಳು ವರದಿ ಮಾಡಿವೆ. ಆಗ ಗತ್ಯಂತರವಿಲ್ಲದೆ ಉಳಿದ ದೇಶಗಳು ಅನ್ಯ ಪರಿಣಾಮಕಾರಿ ಪರಿವ ರ್ತನಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಇದ ರಿಂದಾಗಿ ಇಡೀ ಯುರೋಪಿನಲ್ಲಿ ಪ್ಲಾಟಿನಮ್‌ಗೆ ಬೇಡಿಕೆ ತೀವ್ರವಾಗಿ ಬರುತ್ತದೆ.

ಕೈಗಾರಿಕೆಗಳು ಜಟಿಲ ಮತ್ತು ಕೃತಕವಾದಷ್ಟೂ ಲೋಹಗಳನ್ನು ಮತ್ತಷ್ಟು ಬಲಶಾಲಿಯಾಗುವಂತೆ ಮಾಡುವ ಪ್ರಯತ್ನಗಳು ಅವಿರತವಾಗಿ ನಡೆದೇ ಇರುತ್ತವೆ. ಪ್ರತಿವರ್ಷ ಅನೇಕ ಕೈಗಾರಿಕೆಗಳು ತುಕ್ಕಿ ನಿಂದಾಗಿ ಲಕ್ಷಾಂತರ ರೂಪಾಯಿಗಳಷ್ಟು ಹಾನಿ ಹೊಂದುತ್ತವೆ. ಇದನ್ನು ತಪ್ಪಿಸಲು ತುಕ್ಕು ನಿರೋ ಧಕ ಲೋಹಗಳನ್ನು ಉತ್ಪಾದಿಸಲೇ ಬೇಕಾಗುತ್ತದೆ.

ಕೈಗಾರಿಕೆಗಳು ಶಕ್ತಿಶಾಲಿ ಮತ್ತು ದೀರ್ಘ ಬಾಳಿ ಕೆಯ ಲೋಹಗಳಿಗಾಗಿ ಸ್ವಲ್ಪ ಹೆಚ್ಚು ವ್ಯಯ ಮಾಡುವ ಸಾಮರ್ಥ್ಯ ಪಡೆದಾಗ, ಪ್ಲಾಟಿನಮ್ ಮತ್ತು ಇತರ ತತ್ಸಂಬಂಧಿ ಲೋಹಗಳು ಸಹಾಯ ಮಾಡಬಲ್ಲವು. ಪ್ಲಾಟಿನಮ್‌ನಿಂದ ಲೋಹದ ಮೇಲ್ಪದರಕ್ಕೆ ಕಲಾಯಿ ಹಾಕುವುದು, ಇಲ್ಲವೆ ಪ್ಲಾಟಿನಮ್‌ನ ಹಲವಾರು ಅಣುಗಳನ್ನು ಲೋಹದ ಮೇಲ್ಮೈಗೆ ವರ್ಗಾಯಿಸಬಹುದು. ಪ್ಲಾಟಿನಮ್ ಮೊನೆಯುಳ್ಳ ಕ್ಷೌರದ ಬ್ಲೇಡುಗಳ ಉತ್ಪಾದನೆ ಈ ರೀತಿಯಲ್ಲಿಯೆ. ಬ್ಲೇಡಿನ ಮೊನೆಯ ಮೇಲೆ ಅಯಾನ್ ಬದಲಾವಣೆಯ ವಿಧಾನದಿಂದ ಕೆಲ ವಾರು ಅಣುಗಳ ಗಾತ್ರದಷ್ಟು ಪ್ಲಾಟಿನಮ್‌ಅನ್ನು ವರ್ಗಾಯಿಸಿ, ಬ್ಲೇಡಿನ ಕಾರ್ಯಕ್ಷಮತೆಯನ್ನು ಹೆಚ್ಚುಗೊಳಿಸಬಹುದಾಗಿದೆ.

★

ಬರಲಿವೆ ಹೊಸ ಬಗೆಯ ಶಸ್ತ್ರ ಚಿಕಿತ್ಸೆಗಳು

ಮುಂಬರುವ ಶತಮಾನ ನಿಜಕ್ಕೂ ಶ್ರೀಸಾಮಾನ್ಯನಿಗೆ ಚಿಕಿತ್ಸಾ ಕ್ಷೇತ್ರದಲ್ಲಿ ಹೊಸ ಹೊಸ ಆಯಾಮಗಳನ್ನೇ ದರ್ಶಿಸಲಿದೆ.

ಹಿಂದೆ ನಪುಂಸಕರಿಗೆ ವೈವಾಹಿಕ ಜೀವನವೆನ್ನುವುದು ಕನಸಿನ ಮಾತಾಗಿತ್ತು. ಶಸ್ತ್ರಚಿಕಿತ್ಸೆಯಲ್ಲಿನ ಪ್ರಗತಿಯಿಂದಾಗಿ ಇಂದು ಆ ಪರಿಸ್ಥಿತಿ ಉಳಿದಿಲ್ಲ. ಅವರೂ ಉಳಿದವರಂತೆ ವೈವಾಹಿಕ ಜೀವನ ನಡೆಸಬಲ್ಲರು. ಆದರೆ ಮಕ್ಕಳು ಮಾತ್ರ ಆಗುವುದಿಲ್ಲ.

ವಯಸ್ಸಿಗೆ ಬಂದರೂ ಋತುಮತಿಯಾಗದಿದ್ದರೆ ಹೆಂಗಸಿನ ಪಾಡನ್ನು ದೇವರೇ ಬಲ್ಲ. ಆದರೆ ಅಂಥವರಿಗೆ ಕೂಡ ಈಗ ಸ್ತ್ರೀತ್ವವನ್ನು ತಂದುಕೊಡಬಹುದು. ಹೆಂಗಸಿಗೆ ಯೋನಿಯನ್ನುಂಟು ಮಾಡುವ ಶಸ್ತ್ರಚಿಕಿತ್ಸೆಯೇನೂ ಹೊಸದಲ್ಲ. ಆದರೆ ಒಂದು ವಿಶಿಷ್ಟವಾದ ಯಂತ್ರದಿಂದ ಚರ್ಮವನ್ನು ತೆಗೆದು, ಯೋನಿಯನ್ನು ಉಂಟುಮಾಡಿ ಅದಕ್ಕೆ ಆ ಚರ್ಮವನ್ನು ಅಳವಡಿಸುವ ಶಸ್ತ್ರಕ್ರಿಯೆ ಬಳಕೆಗೆ ಬರುತ್ತಿದೆ. ಈ ಹೊಸಬಗೆಯ ಶಸ್ತ್ರಕ್ರಿಯೆ ಉತ್ಕೃಷ್ಟತೆಯ ಪರಾಕಾಷ್ಠೆಯನ್ನು ತಲುಪಿದ್ದೇ ಈ ಉಪಕರಣದ ಶೋಧವಾದದ್ದರಿಂದ. ಸ್ತನಗಳು ಚೆನ್ನಾಗಿ ಬೆಳೆಯದ ಸ್ತ್ರೀಯರಲ್ಲಿಯೂ ಶಸ್ತ್ರಚಿಕಿತ್ಸೆಯ ಮೂಲಕ .ಸ್ತನಗಳನ್ನು ಉಂಟುಮಾಡಬಹುದು. ಸಿಂಗಾಪುರದ ವೈದ್ಯರತ್ನಂ ಅವರಿಂದ ಹೆಣ್ಣಾಗಿ ಪರಿವರ್ತನೆಗೊಂಡ ಗಂಡಸು ಈಗ ಕ್ಯಾಬರೆ ಡ್ಯಾನ್ಸ್ ಮಾಡಿ ತುಂಬಾ ಹಣ ಗಳಿಸುತ್ತಿದ್ದಾನೆ(ಳಂ)ತೆ.

ವೈದ್ಯ ರತ್ನಂ ಅವರ ಸಾಹಸಗಾಥೆ ಇಷ್ಟಕ್ಕೇ ಮುಗಿಯಲಿಲ್ಲ. ಗಂಡಸನ್ನು ಹೆಂಗಸಾಗಿ ಪರಿವರ್ತಿಸಿದಂತೆಯೇ ಹೆಂಗಸನ್ನೂ ಗಂಡಸಾಗಿ ಪರಿವರ್ತಿಸಿದ್ದಾರವರು. ಅವರಿಂದ ಪರಿವರ್ತನೆಗೊಂಡ ಅಪರಿಪಕ್ವ ಗಂಡಸೊಬ್ಬ ಪೂರ್ತಿ ಹೆಣ್ಣಾಗಿ, ಗೃಹಿಣಿಯಾಗಿ ಬಾಳುತ್ತಿದ್ದಾನೆ. ಹೆಂಗಸಿನ ಹೊಟ್ಟೆಯೊಳಗಿನ ಜನನಾಂಗಗಳನ್ನು ಕಿತ್ತಿಹಾಕಿ, ಬಳಿಕ ಹೊಟ್ಟೆಯ ಅಡಿಯಲ್ಲಿರುವ ಚರ್ಮದಿಂದ ಶಿಶ್ನವನ್ನು ಮಾಡಿ ಅಳವಡಿಸುವ ಮೂಲಕ ಅವಳನ್ನು 'ಅವನನ್ನಾಗಿ' ಮಾಡಿದ್ದಾರೆ ರತ್ನಂ. ಸಂಭೋಗ ಮಾಡಲು ಸಾಧ್ಯವಿಲ್ಲದಿರುವವರಿಗೆ ಆ ಕಾರ್ಯ ಮಾಡಲು ಸಹಾಯವಾಗುವಂತಹ ಉಪಕರಣಗಳೂ ಈಗ ಬಂದಿವೆ. ಕೆಲವೆಡೆ ವ್ಯಕ್ತಿಯ ಹಾಲ್ಬೆರಳನ್ನು ಕತ್ತರಿಸಿ ಅದನ್ನೇ ಶಿಶ್ನದಂತೆ ಮಾಡುವ ಶಸ್ತ್ರಕ್ರಿಯೆ ಕೂಡ ನಡೆದಿದೆ.

ದೇಹದಲ್ಲಿನ ಒಂದೊಂದು ರಂಧ್ರಕ್ಕೂ ಈಗ ಒಂದೊಂದು ಬಗೆಯ ದರ್ಶಕ ಲಭ್ಯ. ರಂಧ್ರವಿ

● ಡಾ. ಸುನಂದಾ ಕುಲಕರ್ಣಿ

ರದಲ್ಲಿ ಸಣ್ಣ ತೂತನ್ನು ಉಂಟುಮಾಡಿ ಅದರ ಮೂಲಕ ಒಳಗೆ ನೋಡಬಹುದಾದ ಉದರ ದರ್ಶಕವೀಗ ಸುಲಭವಾಗಿ ದೊರೆಯುತ್ತದೆ. ಈ ಉದರದರ್ಶಕದ ಸಹಾಯದಿಂದ ಈಗ ಗರ್ಭ ಕೋಶ, ಗುಲ್ಮ, ಪಿತ್ತಕೋಶ, ಮೂತ್ರಪಿಂಡ, ಗರ್ಭದ ಮೇಲೆ ಬೆಳೆದ ಮಾಂಸ ಮುಂತಾದವನ್ನು ತೆಗೆಯಬಹುದು. ಗರ್ಭಾಶಯದಿಂದ ತೂರಿಕೊಂಡು ಬಂದ ವಂಕಿಗಳು, ನೀರು ತುಂಬಿಕೊಂಡ ಅಂಡಾಶಯ, ಗರ್ಭನಳಿಕೆ, ಅಷ್ಟೇ ಏಕೆ, ಉದರ ವ್ರಣದಿಂದ ಬಳಲುವವರ ನರಗಳನ್ನು ಕೂಡ ರಂಧ್ರದ ಮೂಲಕ ಕತ್ತರಿಸಲು ಸಾಧ್ಯ. ಈ ವಿಧಾನದಿಂದ ಹೆಚ್ಚಿನ ನೋವಿಲ್ಲ, ಅಪಾಯವಿಲ್ಲ, ಅಧಿಕ ರಕ್ತಸ್ರಾವವೂ ಇಲ್ಲ.

ಕೀಲುಗಳ ಅಂತರ್ಯವನ್ನು ನೋಡಲು ಈಗ ಕೀಲುದರ್ಶಕಗಳೂ ಬಂದಿವೆ. ಕೇವಲ ಒಂದು ಸಣ್ಣ ರಂಧ್ರವನ್ನು ಮಾಡಿ ಕೀಲುದರ್ಶಕದ ಮೂಲಕ ಶಸ್ತ್ರಚಿಕಿತ್ಸೆ ಮಾಡಲೂ ಇನ್ನು ಕೆಲಕಾಲದಲ್ಲಿ ಸಾಧ್ಯವಾಗಬಹುದು.

ಇದೇ ರೀತಿ ಜಠರದರ್ಶಕ, ಕರುಳುದರ್ಶಕ, ಗರ್ಭಸ್ಥ ಶಿಶು ದರ್ಶಕ, ಗರ್ಭದ್ರವದರ್ಶಕಗಳೂ ಈಗ ಪೇಟೆಗೆ ಬಂದಿವೆ. ಜಠರದಲ್ಲಾಗಲಿ ಕರುಳಿನಲ್ಲಾಗಲಿ ದುರ್ಮಾಂಸ ಬೆಳೆದಿದ್ದರೆ, ಅಲ್ಲಿಂದ ರಕ್ತಸ್ರಾವವಾಗುತ್ತಿದ್ದರೆ ಇಲ್ಲವೆ ಅಲ್ಲಿ ವ್ರಣಗಳು ಉಂಟಾಗಿದ್ದರೆ ಈ ಉಪಕರಣಗಳ ಮೂಲಕ ಚಿಕಿತ್ಸೆಮಾಡಬಹುದು. ಮೊದಲಿನ ಹಾಗೆ ಹೊಟ್ಟೆಯನ್ನು ಕೊಯ್ಸಿಕೊಂಡು ಬಹಳ ದಿನಗಳವರೆಗೆ ಆಸ್ಪತ್ರೆಯಲ್ಲಿರುವ ಪ್ರಮೇಯವೀಗ ಇಲ್ಲ. ಹಾಗೆಯೆ, ಗರ್ಭಕೋಶದರ್ಶಕದ ಸಹಾಯದಿಂದ ಮುಟ್ಟಿನ ತೊಂದರೆಯಿರುವವರ ಗರ್ಭಾಶಯದ ಒಳಗಿನ ಆವರಣವನ್ನಾಗಲಿ ಗರ್ಭದಲ್ಲಿ ಸಿಕ್ಕಿಕೊಂಡ ವಂಕಿಗಳನ್ನಾಗಲಿ ಗರ್ಭಾಶಯದ ತೂಗುಬಿದ್ದ ಗಂಟುಗಳನ್ನಾಗಲಿ ತೆಗೆಯಬಹುದು. ಯೋನಿಯ ಮೂಲಕ ಮಾಡುವ ಶಸ್ತ್ರಚಿಕಿತ್ಸೆಯಿಂದಾಗಿ ದೇಹದ ಮೇಲೆ ಯಾವ ಗುರುತೂ ಉಳಿಯದು.

ತಾಯಿಯ ಗರ್ಭದಲ್ಲಿಯೆ ಮಗು ಬೆಳೆಯುತ್ತಿರುವಾಗ ಅದನ್ನು ನೋಡಲು ಧ್ವನ್ಯಾತೀತ ಉಪಕರಣಗಳು ಬಂದಿರುವುದರಿಂದ ಗರ್ಭಸ್ಥ ಶಿಶುವು ಸುಸ್ಥಿಯಲ್ಲಿದೆಯೆ, ಅದರ ಬೆಳವಣಿಗೆಯ ಗತಿ ಸರಿಯಾಗಿದೆಯೆ, ಅದು ಗಂಡೋ ಹೆಣ್ಣೊ, ಗರ್ಭದಲ್ಲಿ ಬೆಳೆಯುತ್ತಿರುವ ಭ್ರೂಣ ಒಂದೋ ಅಥವಾ ಒಂದಕ್ಕಿಂತ ಹೆಚ್ಚೋ ಎನ್ನುವುದನ್ನು ಖಚಿತವಾಗಿ ಹೇಳಬಹುದು. ಈ ಮೊದಲು ಯುದ್ಧ ಸಮಯದಲ್ಲಿ ಶತ್ರುಪಕ್ಷದ ಜಲಾಂತರ್ಗಾಮಿಯನ್ನು ಕಂಡುಹಿಡಿಯಲು ಬಳಸಲಾಗುತ್ತಿದ್ದ ಉಪಕರಣವನ್ನಾಧರಿಸಿ ತಯಾರಿಸಿದ ಈ ಧ್ವನ್ಯಾತೀತ ಯಂತ್ರ ಈಗ ಚಿಕ್ಕಪುಟ್ಟ ನಗರಗಳಲ್ಲಿಯೂ ಲಭ್ಯ. ಗರ್ಭಸ್ಥಮಗುವಿಗೆ ಮೂತ್ರಪಿಂಡದ ತೊಂದರೆಯಿದ್ದರೆ, ರಕ್ತಹೀನತೆಯಿದ್ದರೆ ಇಲ್ಲವೆ ಅವಳಿಮಕ್ಕಳು ಒಂದಕ್ಕೊಂದು ಅಂಟಿಕೊಂಡಿದ್ದು ಬೇರ್ಪಡಿಸಲು ಬರುವಂತಿದ್ದರೆ ತಾಯಿಯ ಗರ್ಭದಲ್ಲಿಯೆ ಶಸ್ತ್ರಚಿಕಿತ್ಸೆ ಮಾಡಿ ತೊಂದರೆಯನ್ನು ದೂರಗೊಳಿಸಬಹುದು. ಮಗುವಿಗೆ ಯಾವ ತರಹದ ತೊಂದರೆಯಿದೆ ಎಂಬುದನ್ನು ತಿಳಿದುಕೊಳ್ಳಲು ಅದು ಗರ್ಭದಲ್ಲಿರುವಾಗಲೆ ಅದರ ಚರ್ಮದ ತುಣುಕು, ರಕ್ತ ಮುಂತಾದವುಗಳನ್ನು ಪರೀಕ್ಷಾರ್ಥವಾಗಿ ತೆಗೆದು, ಮಗುವಿಗೆ ಗುಣಪಡಿಸಲಾರದ ರೋಗವಿದ್ದರೆ ತಾಯಿಗೆ ಗರ್ಭಪಾತಮಾಡಿಸಬಹುದು. ಗರ್ಭದಲ್ಲಿ ಮೂರು ನಾಲ್ಕು ಭ್ರೂಣಗಳು ಬೆಳೆಯುತ್ತಿದ್ದು ಎಲ್ಲವೂ ಅಪಕ್ವ ಸ್ಥಿತಿಯಲ್ಲಿದ್ದರೆ ಒಂದನ್ನು ಮಾತ್ರ ಸರಿಯಾಗಿ ಬೆಳೆಯಲು ಬಿಟ್ಟು ಉಳಿದವುಗಳನ್ನು ಮೊದಲಿನ ಮೂರು ತಿಂಗಳಲ್ಲಿಯೆ ನಾಶಪಡಿಸಲೂ ಈ ಯಂತ್ರ ಸಹಾಯಮಾಡುತ್ತದೆ.

ಈಗ ನಡೆಯುತ್ತಿರುವ ವೈದ್ಯಕೀಯ ಪ್ರಗತಿಯನ್ನು ಗಮನಿಸಿದರೆ ಮುಂದೆ ತಾಯಿ ಯಾರೆನ್ನುವುದನ್ನು ನಿರ್ಧರಿಸುವುದೇ ಕಠಿಣ. ಒಬ್ಬ ತಾಯಿಯ ಅಂಡಗಳನ್ನು ಫಲಿತಗೊಳಿಸಿ ಅದನ್ನು ಇನ್ನೊಬ್ಬಳಲ್ಲಿ ವರ್ಗಾಯಿಸುವ ಕಾಲವಿದು. ಇಂತಹ ಪ್ರಕರಣಗಳು ಹೆಚ್ಚಾದಹಾಗೆ ಭ್ರೂಣ ಯಾರದೋ, ಅದನ್ನು ಗರ್ಭದಲ್ಲಿ ಬೆಳೆಸಿ ಪ್ರಸವಿಸುವವರು ಯಾರೋ, ನಂತರ ಮಗುವಿಗೆ ಹಾಲು ಕುಡಿಸಿ ಬೆಳೆಸುವವರು ಯಾರೋ ಎನ್ನುವುದು ವೈದ್ಯರಿಗೂ ತಿಳಿಯದೆ ನ್ಯಾಯಾಲಯ ಯಾರನ್ನು

ತೋರಿಸುತ್ತದೋ ಅವರಿಗೇ 'ತಾಯಿ' ಎಂದು ಹೇಳಬೇಕಾದ ಕಾಲ ದೂರವಿಲ್ಲ.

ಕಂಪ್ಯೂಟರು ಈಗ ಕಣ್ಣಿನ ಕ್ಷೇತ್ರಕ್ಕೂ ಲಗ್ಗೆಯಿಟ್ಟಿದೆ. ಕಣ್ಣನ್ನು ಪರೀಕ್ಷಿಸಿಕೊಳ್ಳಲು ನೀವು ಈಗ ಮೊದಲಿನ ಹಾಗೆ ನೇತ್ರತಜ್ಞರ ಎದುರು ಕುಳಿತು, ಒಂದು ಕಣ್ಣನ್ನು ಮುಚ್ಚಿ ಇನ್ನೊಂದು ಕಣ್ಣಿನಿಂದ ಅಕ್ಷರಗಳನ್ನು ಒಂದೊಂದಾಗಿ ಓದಬೇಕಾಗಿಲ್ಲ. ಬದಲು, ಕಂಪ್ಯೂಟರನ್ನು ಅಳವಡಿಸಿದ ಯಂತ್ರದ ಮುಂದೆ ಕುಳಿತುಕೊಂಡರೆ ಸಾಕು. ಅದೇ ನಿಮ್ಮ ದೃಷ್ಟಿ ದೋಷದ ಪ್ರಮಾಣವನ್ನು ಕರಾರುವಾಕ್ಕಾಗಿ ನಿರ್ಧರಿಸಿ ನಂಬರುಕೊಡುತ್ತದೆ. ಯಂತ್ರ ತೋರಿಸಿದ ವಸ್ತುವನ್ನು ನೀವು ನೋಡುತ್ತಿರುವಂತೆಯೆ ಅದು ನಿಮ್ಮ ಕಣ್ಣನ್ನು ಕೂಲಂಕಷವಾಗಿ ಪರೀಕ್ಷಿಸಿ ಬಿಡುತ್ತದೆ. ಇದೂ ಅಲ್ಲದೆ ಕಣ್ಣಿನ ಪೊರೆ ತೆಗೆದನಂತರ ಮೊದಲಿನ ಹಾಗೆ ದಪ್ಪ ಗ್ಲಾಸಿನ ಕನ್ನಡಕವನ್ನೀಗ ಧರಿಸಬೇಕಾಗಿಲ್ಲ. ಕಣ್ಣಿನಲ್ಲಿಯೇ ಮಸೂರವನ್ನು ಅಳವಡಿಸಲಾಗುತ್ತದೆಯಾದ್ದರಿಂದ ಕಣ್ಣು ಮೊದಲಿಗಿಂತ ಚೆನ್ನಾಗಿ ಕಾಣಿಸುತ್ತದೆ. ಕನ್ನಡಕವನ್ನು ಧರಿಸುವ ತೊಂದರೆಯೇ ಇಲ್ಲ. ಕವಿಗಳು ಸುಂದರ ಕಣ್ಣಿನ ಯುವತಿಯರನ್ನು ಹರಿಣಾಕ್ಷಿ, ಮೀನಾಕ್ಷಿ ಎಂದೆಲ್ಲ ವರ್ಣಿಸುವುದುಂಟು. ಆದರೆ ಯಾರಿಗೆ ಗೊತ್ತು, ಈ ಅಕ್ಷಿಗಳ ಹಿಂದೆ ಮಸೂರವಿದೆಯೋ ಇಲ್ಲವೋ ಎನ್ನುವುದು! ಲೇಸರ್ ಕಿರಣಗಳ ಮೂಲಕ ಶಸ್ತ್ರಚಿಕಿತ್ಸೆಯನ್ನು ಮಾಡಲಾಗುತ್ತಿದೆಯಾದ್ದರಿಂದ ಹಿಂದೆ ಕಠಿಣವೆಂದು ಭಾವಿಸಲಾಗಿದ್ದ ಶಸ್ತ್ರಕ್ರಿಯೆಗಳೂ ಈಗ ಸರಾಗವಾಗಿ ಆಗುತ್ತಿವೆ.

ದುಡ್ಡಿನ ಬ್ಯಾಂಕೊಂದೇ ಅಲ್ಲ, ಕಣ್ಣಿನ ಬ್ಯಾಂಕ್, ವೀರ್ಯದ ಬ್ಯಾಂಕ್, ಎದೆಹಾಲಿನ ಬ್ಯಾಂಕ್, ಮೂಳೆಯ ಬ್ಯಾಂಕ್ ಹೀಗೆ ಬೇರೆ ಬೇರೆ ಬ್ಯಾಂಕುಗಳೂ ಈಗ ಬಂದಿವೆ. ಮೂತ್ರಪಿಂಡ, ಹೃದಯ, ತಲೆಗೂದಲು ಹೀಗೆ ದೇಹದ ಭಾಗಗಳನ್ನು ಒಬ್ಬರಿಂದ ಒಬ್ಬರಿಗೆ ವರ್ಗಾಯಿಸುತ್ತಿರುವ ಈ ಕಾಲದಲ್ಲಿ ಶವವನ್ನೂ ಒಂದು ಬ್ಯಾಂಕ್ ಎಂದು ಪರಿಗಣಿಸುವ ಕಾಲ ಮುಂದೆ ಬರಬಹುದೇನೋ. ಸತ್ತ ವ್ಯಕ್ತಿಯಿಂದ ರಕ್ತವನ್ನು ತೆಗೆಯುವ ವಿಧಾನವೀಗ ರಶಿಯದಲ್ಲಿ ಪ್ರಯೋಗಾವಸ್ಥೆಯಲ್ಲಿದೆ. ಅವಯವಗಳಿಗಾಗಿ ಹೆಣಗಳನ್ನು ಸಂರಕ್ಷಿಸಿ ಇಟ್ಟುಕೊಳ್ಳುವುದರಿಂದ ಮುಂದೊಮ್ಮೆ ಅಂತ್ಯಕ್ರಿಯೆಗೇ ಅಂತ್ಯಬರಬಹುದೇನೋ?

ಮೂತ್ರ ಪಿಂಡದಲ್ಲಿನ ಕಲ್ಲುಗಳನ್ನು ಇಷ್ಟು ದಿನ ಕೊಯ್ದೇ ತೆಗೆಯಲಾಗುತ್ತಿತ್ತು. ಆದರೆ ಹವೆಯ ಒತ್ತಡದಿಂದಾಗಲಿ ಧ್ವನ್ಯಾತೀತ ಯಂತ್ರದಿಂದಾಗಲಿ ಪುಡಿಗೊಳಿಸಲಾಗುತ್ತಿರುವುದರಿಂದ ಅವು ಈಗ ಮೂತ್ರ ದ್ವಾರದ ಮೂಲಕವೇ ಹೊರಬರುತ್ತಿವೆ. ಪ್ರೊಸ್ಟೇಟ್ ಗ್ರಂಥಿಯನ್ನು ಸಹ ಮೂತ್ರದ್ವಾರದ ಮೂಲಕವೇ ತೆಗೆಯಲಾಗುತ್ತಿದೆ. ಹೀಗಾಗಿ ರೋಗಿಗಳಿಗೆ ಹೊಟ್ಟೆಯನ್ನು ಕೊಯ್ಸಿಕೊಳ್ಳಬೇಕಾದ ಭಯವಿಲ್ಲ.

ಈಗಂತೂ ಕೂದಲೆಳೆಗಿಂತ ಸಣ್ಣದಾದ ದಾರ, ಅದನ್ನು ನೋಡಲು ಸೂಕ್ಷ್ಮ ದರ್ಶಕ, ಇವುಗಳ ಸಹಾಯದಿಂದ ಶಸ್ತ್ರಚಿಕಿತ್ಸೆ ಮಾಡುವ ಉಪಕರಣಗಳು ಬಂದಿವೆ. ಸಂತಾನನಿರೋಧ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡ ಪುರುಷರಿಗೆ ಇಚ್ಛಿಸಿದಲ್ಲಿ ಮತ್ತೆ ಶಸ್ತ್ರಕ್ರಿಯೆಯನ್ನು ಮಾಡಿ ಸಂತಾನ ಸಾಮರ್ಥ್ಯವನ್ನು ಪುನಃ ಒದಗಿಸಿಕೊಡುವ ಚಿಕಿತ್ಸೆಗೆ ಹೆಚ್ಚು ಹೆಚ್ಚಾಗಿ ಯಶಸ್ಸು ದೊರಕುತ್ತಿದೆ. ಫ್ಯಾಕ್ಟರಿಗಳಲ್ಲೋ ಅಥವಾ ಅಪಘಾತದಲ್ಲೋ ಕೈ ಕಾಲುಗಳು ಕತ್ತರಿಸಲ್ಪಟ್ಟು ಅಂಗಹೀನರಾಗುವ ಕಾಲವೊಂದಿತ್ತು. ಆದರೆ ಸೂಕ್ಷ್ಮ ಶಸ್ತ್ರ ಚಿಕಿತ್ಸೆ (Microsurgery)ಯಲ್ಲಿನ ಪ್ರಗತಿಯಿಂದಾಗಿ ಈಗ ಅಂತಹ ಪ್ರಮೇಯವಿಲ್ಲ. ನರಕ್ಕೆ ನರ, ನಾಳಕ್ಕೆ ನಾಳಗಳನ್ನು ಸಲೀಸಾಗಿ ಕೂಡಿಸಬಹುದು. ಕೀಲುಗಳು ಸರಿಯಾಗಿದಿದ್ದರೆ ಅವುಗಳ ಬದಲು ಉಕ್ಕಿನ ಕೀಲುಗಳನ್ನು ಜೋಡಿಸಬಹುದು.

ಹೃದಯದಲ್ಲಿನ ಕವಾಟಗಳು ಒಂದಕ್ಕೊಂದು ಹೊಂದಿಕೊಂಡು ತೊಂದರೆಯಾದಾಗ ಹೃದಯವನ್ನೇ ತೆರೆದು ಶಸ್ತ್ರಕ್ರಿಯೆ ಮಾಡುವ ಕಾಲ ಹೊರಟುಹೋಗುತ್ತಿದೆ. ತೆರೆದ ಶಸ್ತ್ರಚಿಕಿತ್ಸೆ ಮಾಡುವ ಅನಿವಾರ್ಯ ಪ್ರಸಂಗ ಬಂದರೆ ಡಾಕ್ಟರರು ಕೇವಲ ಎರಡಿಂಚಿನಷ್ಟು ರಂಧ್ರಕೊರೆದು ಶಸ್ತ್ರಚಿಕಿತ್ಸೆ ಮಾಡುತ್ತಿದ್ದಾರೆ. ಇಲ್ಲವೆ ಅಭಿಧಮನಿಗಳಲ್ಲಿ ಬಲೂನನ್ನು ತೂರಿಸಿ ಹೃಧಯದ ಕವಾಟಗಳನ್ನು ಹಿಗ್ಗಿಸಲಾಗುತ್ತಿದೆ. ರಕ್ತನಾಳಗಳ ಮೇಲೆ

ಲೇಸರ್‌ಕಿರಣಗಳ ಮೂಲಕ ಮಾಡುವ ಶಸ್ತ್ರಕ್ರಿಯೆಯೂ ಇತೀಚೆ ಜನಪ್ರಿಯವಾಗುತ್ತಿದೆ. ಹೃದಯಕ್ಕೆ ರಕ್ತ ಪೂರೈಸುವ ನಾಳಗಳಲ್ಲಿ ರಕ್ತಕರಣೆಗಟ್ಟಿದಾಗ ಆ ರಕ್ತನಾಳಗಳನ್ನು ಜೋಡಿಸುವ ಬದಲು, ಲೇಸರಿನಿಂದ ಹೃದಯವು ನೇರವಾಗಿ ರಕ್ತಹೀರುವಂತೆ ಮಾಡುವ ವಿಧಾನ ಕ್ರಮೇಣ ಎಲ್ಲೆಡೆ ಬಳಕೆಗೆ ಬರಬಹುದು.

ಮೂರ್ಛೆರೋಗ ಇದ್ದವರಿಗೆ ತಲೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿ ಮೂರ್ಛೆ ಬರುವ ಭಾಗದ ಮೇಲೆ ಶಸ್ತ್ರಕ್ರಿಯೆ ಮಾಡುವ ಬದಲು, ಈಗ ತಲೆಗೆ ಬೇರೆ ಬೇರೆ ದಿಕ್ಕುಗಳಿಂದ ಕಿರಣಗಳನ್ನು ತೂರಿಸುವ ಮೂಲಕ ಚಿಕಿತ್ಸೆ ಮಾಡಿ ಆ ಭಾಗವನ್ನು ಶಮನಗೊಳಿಸುವ ಪದ್ಧತಿ ಬಂದಿದೆ. ಇದರಿಂದಾಗಿ ತಲೆಬುರುಡೆಯನ್ನು ಸೀಳಿ ಮಿದುಳಿನ ಮೇಲೆ ಮಾಡುವ ಶಸ್ತ್ರಚಿಕಿತ್ಸೆ (Stereo tactic surgery) ಮುಂದೊಮ್ಮೆ ಕೊನೆಗೊಳ್ಳಲೂ ಬಹುದು.

ಧಡೂತಿ ಹೆಂಗಸರಿಗೂ ಈಗ ಒಳ್ಳೆಯ ಕಾಲ. ಅವರ ಚರ್ಮದಡಿಯಲ್ಲಿನ ಕೊಬ್ಬನ್ನು ಹೀರಿ ತೆಗೆಯಬಹುದಾದ್ದರಿಂದ ಇನ್ನು ಮುಂದೆ ಅವರೂ ಬಳ್ಳಿಯಂತೆ ಬಳಕುವ ಹೆಂಗಸರಾಗಬಹುದು. ಇಷ್ಟೇ ಅಲ್ಲ, ವಿಕಾರ ಮುಖದವರಿಗೂ ಒಂದು ಶುಭ ಸಮಾಚಾರ. ಮುಖದ ಮೂಳೆಗಳನ್ನು ಮುರಿದು ಸರಿಯಾಗಿ ಕೂಡಿಸಿ ಚೆನ್ನಾಗಿ ಕಾಣುವಂತೆ ಮಾಡುವ ಕಲೆ ನಮ್ಮ ದೇಶದಲ್ಲಿ ಸುಶ್ರುತನ ಕಾಲದಿಂದಲೇ ಗೊತ್ತು. ಸರೂಪಿಕ ಚಿಕಿತ್ಸೆಯಲ್ಲಿ ಹೊಸಹೊಸ ಅನ್ವೇಷಣೆಗಳು ಆಗುತ್ತಲಿವೆ.

ಕುಷ್ಠರೋಗದಿಂದ ಬಳಲುವವರನ್ನೂ ರೋಗ ಉಲ್ಬಣಗೊಂಡು ಅವರ ಕೈ ಕಾಲಿನ ಬೆರಳುಗಳು ಉದುರುವುದನ್ನೂ ನೀವು ನೋಡಿರಬಹುದು. ಅಂಥವರ ಕೈ ಕಾಲುಗಳನ್ನು ಈ ಮೊದಲು ಶಸ್ತ್ರಚಿಕಿತ್ಸೆಯ ಮೂಲಕ ಸರಿಪಡಿಸಲಾಗುತ್ತಿತ್ತು. ಈಗ ಕುಷ್ಠರೋಗವನ್ನು ಬಹು ಮೊದಲೇ ಕಂಡುಹಿಡಿಯುವ ಉಪಕರಣ ಬಂದಿದೆ. (Semmes weistrein monofilaments) ಅದರ ಸಹಾಯದಿಂದ ಸೋಂಕು ಉಂಟಾದದ್ದನ್ನು ಬೇಗ ಖಚಿತಪಡಿಸಿಕೊಂಡು, ಸೂಕ್ತ ಚಿಕಿತ್ಸೆಯ ಮೂಲಕ ಗುಣವಾಗಬಹುದಾದ್ದರಿಂದ ಶಸ್ತ್ರಚಿಕಿತ್ಸೆಯ ಪ್ರಸಂಗವೂ ಇನ್ನು ಮುಂದೆ ಬರಲಿಕ್ಕಿಲ್ಲ.

ಮಧುಮೇಹ ತೀವ್ರವಾಗಿರುವವರು ಇನ್‌ಸುಲಿನ್ ಚುಚ್ಚುಮದ್ದನ್ನು ತೆಗೆದುಕೊಳ್ಳುವುದು ಅನಿವಾರ್ಯ. ಆದರೆ ಇಂಥ ಕೆಲವೇ ಜನರ ಮುಂಗೈಯಲ್ಲಿ ಮೇದೋಜೀರಕ ಗ್ರಂಥಿಯನ್ನು ಯಶಸ್ವಿಯಾಗಿ ಅಳವಡಿಸಲಾಗಿದ್ದು ಅದು ದೇಹದಲ್ಲಿಯ ಸಕ್ಕರೆಯ ಪ್ರಮಾಣಕ್ಕೆ ಅನುಗುಣವಾಗಿ ಇನ್‌ಸುಲಿನ್‌ಅನ್ನು ಸ್ರವಿಸುವುದು. ಈ ಚಿಕಿತ್ಸಾ ವಿಧಾನ ಇನ್ನಷ್ಟು ಯಶಸ್ವಿಯಾಗಿ ವ್ಯಾಪಕವಾಗಿ ಬಳಕೆಗೆ ಬಂದರೆ ಮಧುಮೇಹಿಗಳಿಗೆ ಇನ್‌ಸುಲಿನ್ ಅನ್ನು ಚುಚ್ಚುಮದ್ದಿನ ರೂಪದಲ್ಲಿ ತೆಗೆದುಕೊಳ್ಳುವ ಅಗತ್ಯವೇ ಇರುವುದಿಲ್ಲ. ಇದೇ ರೀತಿ ಇನ್ನು ಮುಂದೆ ಅಸ್ವಸ್ಥರಾದವರಿಗೂ ಚಿಕಿತ್ಸೆ ಬರುವ ದಿನ ದೂರವಿಲ್ಲ. ಕಂಪ್ಯೂಟರಿನಿಂದ ಅಳವಡಿಸಿದ ಚಿಕ್ಕ ಚುಚ್ಚುಮದ್ದುಗಳನ್ನು ಚರ್ಮದಡಿಯಲ್ಲಿ ಹುದುಗಿಸಿ, ರೋಗಿಯು ಅಗತ್ಯವೆನಿಸಿದಾಗ ಒಂದು ಗುಂಡಿಯನ್ನು ಒತ್ತಿಕೊಂಡರೆ ಸಾಕು, ಮದ್ದು ಶರೀರದಲ್ಲಿ ಯುಕ್ತ ಪ್ರಮಾಣದಲ್ಲಿ ಹರಿದು ನೋವು ಹೋಗಿ ಬಿಡುತ್ತದೆ. ಚುಚ್ಚುಮದ್ದಿಗಾಗಿ ವೈದ್ಯರ ಅಗತ್ಯವೇ ಇಲ್ಲ.

ರೋಗಿ ಯಾವ ದಿನ ಆಸ್ಪತ್ರೆಗೆ ಬಂದ, ಅವನನ್ನು ಒಳರೋಗಿಯಾಗಿ ಸೇವಿಸಿಕೊಳ್ಳಲಾಯಿತೆ? ಅಥವಾ ಹೊರಗಿನ ರೋಗಿಯೆಂದು ಚಿಕಿತ್ಸೆ ನೀಡಲಾಯಿತೆ. ಅವನಿಗೆ ನೀಡಿದ ಚಿಕಿತ್ಸೆಯೇನು, ಮಾತ್ರೆಗಳಾವವು, ಕಾಯಿಲೆ ಯಾವುದು, ರೋಗಿಯು ವಯಸ್ಸೆಷ್ಟು, ರೋಗದ ಉಲ್ಬಣತೆ ಎಷ್ಟು, ರೋಗ ವಾಸಿಯಾಗಲು ತೆಗೆದುಕೊಂಡ ಅವಧಿಯೆಷ್ಟು ಮುಂತಾದ ವಿವರಗಳನ್ನು ಕಂಪ್ಯೂಟರಿನಲ್ಲಿ ಸಂಗ್ರಹಿಸಿಡಬಹುದು.

ಶಸ್ತ್ರಚಿಕಿತ್ಸಾಶಾಸ್ತ್ರ ಮುಂದಿನ ಶತಮಾನದತ್ತ ದಾಪುಗಾಲು ಹಾಕುತ್ತಿದೆ. ತತ್ಫಲವಾಗಿ ಪ್ರಯೋಗಾವಸ್ಥೆಯಲ್ಲಿರುವ ಅನೇಕ ಹೊಸ ವಿಧಾನಗಳು ಇನ್ನು ಕೆಲವೇ ಕಾಲದಲ್ಲಿ ಶ್ರೀಸಾಮಾನ್ಯನ ವರೆಗೂ ತಲುಪಲಿವೆ. ನಿಜ ಹೇಳಬೇಕೆಂದರೆ ಹೊಸ ಶತಮಾನ ಚಿಕಿತ್ಸಾಕ್ರಮದಲ್ಲಿ ಈ ವರೆಗೆ ಕಂಡರಿಯದ, ಕೇಳರಿಯದ ಹೊಸ ಹೊಸ ಆಯಾಮಗಳನ್ನೇ ದರ್ಶಿಸಲಿದೆ.



ವೇದಗಳಲ್ಲಿ ವರ್ಗಗಣನೆ

ಯಾವುದೇ ಸಂಖ್ಯೆಯ ವರ್ಗವನ್ನು ತೆಗೆಯುವುದರ ಬಗ್ಗೆ ಈ ಹಿಂದೊಮ್ಮೆ (ನವೆಂಬರ್ ೯೪) 'ಕಸ್ತೂರಿ'ಯ 'ಜ್ಞಾನನಿಧಿ' ಅಂಕಣದಲ್ಲಿರುವುದು ಸರಿಯಷ್ಟೆ. ಆ ವಿಧಾನಕ್ಕಿಂತ ಇಲ್ಲಿನ ವೈದಿಕ ಗಣಿತದ ಸಾಮಾನ್ಯ ವಿಧಾನ ಸುಲಭವೆನಿಸಿತು.

ಪ್ರಸ್ತುತ ಪ್ರಶ್ನೆಗೆ ಹೋಗುವ ಮುನ್ನ ಒಂದು ಸಂಖ್ಯೆಯ ದ್ವಂದ್ವ ಯೋಗವನ್ನು ತಿಳಿಯೋಣ.

೧. ಒಂದಂಕಿ ಸಂಖ್ಯೆಯ ದ್ವಂದ್ವ ಯೋಗ ಅದರ ವರ್ಗ.

ಉದಾ: ೬ರ ದ್ವಂ.ಯೋ ೬^{೨} = ೩೬

೨. ಎರಡಂಕಿ ಸಂಖ್ಯೆಯ ದ್ವಂ.ಯೋ. ಆ ಅಂಕಿಗಳ ಗುಣಲಬ್ಧದ ಎರಡರಷ್ಟು.

ಉದಾ: ೩೪ರ ದ್ವಂ.ಯೋ. ೨ x ೩ x ೪ = ೨೪

೩. ಮೂರಂಕಿಯ ಸಂಖ್ಯೆ. ಉದಾ: ೫೩೮ರ ದ್ವಂ.ಯೋ. ೨ x ೫ x ೮ + ೩^{೨} = ೮೯

೩೬೭ರ ದ್ವಂ.ಯೋ. ೨ x ೩ x ೭ + ೬^{೨} = ೭೮

೪. ನಾಲ್ಕಂಕಿ ಸಂಖ್ಯೆ:

ಉದಾ: ೬೭೩೪ರ ದ್ವಂ.ಯೋ. ೨ x ೬ x ೪ + ೨ x ೭ x ೩ = ೯೦

೧೨೩೪ರ ದ್ವಂ.ಯೋ. ೨ x ೧ x ೪ + ೨ x ೨ x ೩ = ೨೦

೫. ಐದಂಕಿ ಸಂಖ್ಯೆ:

ಉದಾ: ೫೩೮೬೯ರ ದ್ವಂ.ಯೋ. ೨ x ೫ x ೯ + ೨ x ೩ x ೬ + ೮^{೨} = ೧೯೦

೭೫೪೩೧ರ ದ್ವಂ.ಯೋ. ೨ x ೭ x ೧ + ೨ x ೫ x ೩ + ೪^{೨} = ೬೦

ಇದೇ ರೀತಿ ಯಾವುದೇ ಸಂಖ್ಯೆಯ ದ್ವಂ.ಯೋ.ವನ್ನು ತಿಳಿಯಬಹುದು. ಈಗ ನಮ್ಮ ಪ್ರಶ್ನೆಗೆ ಬರೋಣ.

೧. ೬೧ರ ವರ್ಗ

(೬೧)^{೨} = ೬ರ ದ್ವಂ.ಯೋ. / ೬೧ರ ದ್ವಂ.ಯೋ. / ೧ರ ದ್ವಂ.ಯೋ.

= ೬^{೨}/೨x೬x೧/೧^{೨}

= ೩೬/೧^{೨}/೧

= ೩೭೨೧

ಸೂಚನೆ: ಪ್ರತಿಯೊಂದು ಗುಂಪಿನಲ್ಲೂ ಅಂಕಿಗಳನ್ನು ಬರೆಯುವ ರೀತಿಯನ್ನು ಗಮನಿಸಿ. ಗುಂಪುಗಳನ್ನು ಬಲದಿಂದ ಕೂಡುತ್ತಾ ಬಂದಾಗ ದಶಕವನ್ನು ಎಡಪಕ್ಕದ ಗುಂಪಿಗೆ ಎಂದಿನ ಪದ್ಧತಿಯಂತೆ ತೆಗೆದುಕೊಳ್ಳಬೇಕು.

೨. ೮೩ರ ವರ್ಗ.

(೮೩)^{೨} = ೮^{೨}/೨x೮x೩/೩^{೨}

= ೬೪/೪^{೮}/೯

= ೬೮೮೯

೩. ೫೮೯ರ ವರ್ಗ

(೫೮೯)^{೨}=೫ರ ದ್ವಂ.ಯೋ./೫೮ರದ್ವಂ.ಯೋ./೫೮೯ರ ದ್ವಂ.ಯೋ./೮೯ರ ದ್ವಂ.ಯೋ./೯ರ ದ್ವಂ.ಯೋ.

= ೫^{೨}/೨x೫x೮/೨x೫x೯ + ೮^{೨}/೨x೮x೯/೯^{೨}

= ೨೫/೮^{೦}/೧೫^{೪}/೧೪^{೪}/೮^{೧}

= ೩೪೬೯೨೧

೪. ೭೫೬ರ ವರ್ಗ.

(೭೫೬)^{೨} = ೭^{೨}/೨x೭x೫/೨x೭x೬+೫^{೨}/೨x೫x೬/೬^{೨}

= ೪೯/೭^{೦}/೧೦^{೯}/೬^{೦}/೩^{೬}

= ೫೭೧೫೩೬

೫. ೫೨೩೮ರ ವರ್ಗ.

(೫೨೩೮)^{೨} = ೫ರ ದ್ವಂ.ಯೋ./ದ್ವಂ.ಯೋ.೫೨ರ ದ್ವಂ.ಯೋ./೫೩.೨ರ ದ್ವಂ.ಯೋ./೫೨೩೮ರ ದ್ವಂ.ಯೋ./೨೩೮ರ ದ್ವಂ.ಯೋ./ ೩೮ರ ದ್ವಂ.ಯೋ./೮ರ ದ್ವಂ.ಯೋ.

= ೫^{೨}/೨x೫x೨/೨x೫x೩ + ೨^{೨}/೨x೫x೮ + ೨x೨x೩/೨x೨ x೮ + ೩^{೨}/೨x೩x೮/೮^{೨}

= ೨೫/೨^{೦}/೩^{೪}/೯^{೨}/೪^{೧}/೪^{೮}/^{೬}೪

= ೨೭೪೩೬೬೪೪

ನೋಡಿದಿರಾ ವೈದಿಕಗಣಿತದ ಸರಳತೆಯನ್ನು! ಇಷ್ಟೇ ಅಲ್ಲ ಈ ಖನಿಜದಲ್ಲಿರುವುದು ಒಂದು ಸಂಖ್ಯೆ ಯಾವುದೇ ಹತ್ತರ ಘಾತದ ಹತ್ತಿರದ ಸಂಖ್ಯೆಯಾಗಿದ್ದಲ್ಲಿ ಅದರ ವರ್ಗ ತೆಗೆಯುವುದು ಇನ್ನೂ ಸುಲಭ.

೧. ೯೮ರ ವರ್ಗ

(೯೮)^{೨} = ೯೮ - ೨/೨^{೨} = ೯೬/೦೪ = ೯೬೦೪

ಹತ್ತಿರದ ಹತ್ತರ ಘಾತಕ್ಕೂ (ಇಲ್ಲಿ ೧೦೦) ದತ್ತ ಸಂಖ್ಯೆಗೂ ಇರುವ ವ್ಯತ್ಯಾಸವನ್ನು (೨) ದತ್ತ ಸಂಖ್ಯೆಯಿಂದ ಕಳೆದಾಗ ಬರುವ ಸಂಖ್ಯೆ ದತ್ತ ಸಂಖ್ಯೆಯ ವರ್ಗದ ಮೊದಲರ್ಧ. ವರ್ಗದ ಬಲಭಾಗ ಆ ವ್ಯತ್ಯಾಸದ ವರ್ಗ. ವರ್ಗದ ಬಲಭಾಗದಲ್ಲಿ ಹತ್ತಿರದ ಹತ್ತರ ಘಾತದಲ್ಲಿರುವ ಸೊನ್ನೆಗಳಷ್ಟು ಅಂಕಿಗಳಿರುತ್ತದೆ.

೨. ೯೯೬ರ ವರ್ಗ

(೯೯೬)^{೨} = ೯೯೬ - ೪ / ೪^{೨} = ೯೯೨ / ೦೧೬ = ೯೯೨೦೧೬

೩. ೧೦೨ರ ವರ್ಗ

(೧೦೨)^{೨} = ೧೦೨ + ೨ / ೨^{೨} = ೧೦೪ / ೧೦೪೦೪

ಇಲ್ಲಿ ದತ್ತ ಸಂಖ್ಯೆ ಹತ್ತಿರದ ಹತ್ತರ ಘಾತಕ್ಕಿಂತ ಎಷ್ಟು ಹೆಚ್ಚಿದೆಯೋ ಅದನ್ನು ದತ್ತ ಸಂಖ್ಯೆಕೂಡಿ ವರ್ಗದ ಮೊದಲರ್ಧ ಪಡೆಯಬೇಕು.

೪. ೧೧೩ರ ವರ್ಗ.

(೧೧೩)^{೨} = ೧೧೩ + ೧೩ / ೧೩^{೨} = ೧೨೬ / ೧^{೬೯} = ೧೨೭೬೯.

೫. ೧೦೦೮ರ ವರ್ಗ

(೧೦೦೮)^{೨} = ೧೦೦೮ + ೮ / ೮^{೨} = ೧೦೧೬ / ೦೬೪ = ೧೦೧೬೦೬೪

೫ರಿಂದ ಕೊನೆಗೊಳ್ಳುವ ಸಂಖ್ಯೆಯ ವರ್ಗಕ್ಕೆ 'ಕಸ್ತೂರಿ'ಯ ಅಕ್ಟೋಬರ್ ೯೩ರ ಸಂಚಿಕೆಯಲ್ಲಿ ವಿವರಿಸಿರುವ ಕ್ರಮ ವೈದಿಕ ಗಣಿತದ್ದು.

ವೈದಿಕ ಗಣಿತದ ವ್ಯಾಪ್ತಿ ವಿಶಾಲವಾದುದು. ಒಂದು ಸಂಖ್ಯೆಯ ಘನ, ನಾಲ್ಕರ ಘಾತ, ವರ್ಗಮೂಲ- ಇವುಗಳನ್ನು ತಿಳಿಯಲು ಇದರಲ್ಲಿ ಸರಳ, ಸುಂದರ ವಿಧಾನಗಳಿವೆ. ಅದರ ಉಪಯೋಗದ ಪಟ್ಟಿ ಇಲ್ಲಿ ಬಹಳ ಉದ್ದವಾದೀತು.


ಇವುಗಳ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರ ಈ ಮಾತು ಎಷ್ಟು ಸತ್ಯ!

"ಇತಿಹಾಸವನ್ನು ಹೆಚ್ಚು ಹೆಚ್ಚಾಗಿ ತಿಳಿದಷ್ಟು ನಮ್ಮ ಭವಿಷ್ಯವೂ ಹೆಚ್ಚು ಹೆಚ್ಚಾಗಿ ಉಜ್ವಲವಾಗುತ್ತದೆ." ವೈದಿಕ ಗಣಿತದ ಬಗ್ಗೆ ಆಸಕ್ತಿಯುಳ್ಳವರು ಈ ವಿಳಾಸವನ್ನು ಸಂಪರ್ಕಿಸಬಹುದು.

Mrs, Minakshi Puri, convenor, Spiritual Study Group, 41/2, Aamod Kunj, University Campus, Roorkie(U.P.) -247667

• ಕೃ. ನಾಗೇಶ

ಜ್ಞಾನನಿಧಿ



ರೈಲು ಓಡಿ ಬಂದ ದಾರಿ

• ಸಂಜೀವ ಹಲವಾಯಿ

ಜಗತ್ತಿನಾದ್ಯಂತ ರೈಲುಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರನ್ನೂ ಸರಕುಗಳನ್ನೂ ಸಾಗಿಸುತ್ತಿವೆ. ದೇಶದ ಔದ್ಯೋಗಿಕ ಹಾಗೂ ಕೃಷಿ ರಂಗಗಳ ಅಭಿವೃದ್ಧಿಯಲ್ಲಿ ಅವುಗಳ ಪಾತ್ರ ಹಿರಿದು. ದೊಡ್ಡ ಪ್ರಮಾಣದಲ್ಲಿ ಸಾಗಿಸಲ್ಪಡುವ ವಸ್ತುಗಳಾದ ಇದ್ದಿಲು, ಕಬ್ಬಿಣ, ಸಿಮೆಂಟು, ಗೊಬ್ಬರ, ಕಾಳುಗಳು ಹಾಗೂ ಖನಿಜ ತೈಲಗಳ ಸಾಗಾಟ ರೈಲುಗಳಿಂದ ಮಾತ್ರ ಸಾಧ್ಯ. ದೇಹದ ನರನಾಡಿಗಳಲ್ಲಿ ಹರಿಯುವ ರಕ್ತದಂತೆ, ದೇಶದ ನರನಾಡಿಗಳಲ್ಲಿ ಇಂದು ರೈಲುಗಳು ಹರಿದಾಡುತ್ತಿರುವುದರಿಂದಲೇ ದೇಶ ಜೀವಂತವಾಗಿದೆ ಎನ್ನುವುದರಲ್ಲಿ ಉತ್ಪ್ರೇಕ್ಷೆಯಿಲ್ಲ.

ಮಿಂಚಿನ ವೇಗದಲ್ಲಿ ಸಂಚರಿಸುವ ಇಂದಿನ ರೈಲುಗಳಿಗೆ ೧೬೯ ವರ್ಷಗಳ ಸುದೀರ್ಘ ಇತಿಹಾಸವಿದೆ. ಕ್ರಿ.ಶ. ೧೮೨೫ಕ್ಕೂ ಮುಂಚೆ ಪ್ರಪಂಚದ ಯಾವುದೇ ಭಾಗದಲ್ಲಿಯೂ ರೈಲುಗಳು ಇರಲಿಲ್ಲ ಎಂದು ಹೇಳಿದರೆ ನಂಬುವುದೂ ಕಷ್ಟವೆನಿಸುತ್ತದೆ. ಬ್ರಿಟನ್ನಿನಲ್ಲಿ ಮೊಟ್ಟ ಮೊದಲ ಬಾರಿಗೆ ಜನ್ಮತಾಳಿದ ರೈಲುಗಳು ಇಂದು ಪ್ರಪಂಚದಾದ್ಯಂತ ಲಕ್ಷಾವಧಿ ಸಂಖ್ಯೆಯಲ್ಲಿ ಓಡಾಡುತ್ತವೆ. ಬ್ರಿಟನ್ನಿನಲ್ಲಿ ರೈಲನ್ನು ಪ್ರಯಾಣಕ್ಕಾಗಿ ಬಳಸುವ ಮೊದಲು ಸರಕು ಸಾಗಾಟಕ್ಕಾಗಿ ಬಳಸಲಾಯಿತು. ಸುರಂಗದ ಕೆಲಸ ನಡೆಯುವ ಸ್ಥಳಗಳಲ್ಲಿ ಹಾಗೂ ಗಣಿಗಳ ಸಮೀಪ ರೈಲು ಹಳಿಗಳನ್ನು ಹಾಕಲಾಗಿತ್ತು. ಆ ಹಳಿಗಳು ಈಗಿನಂತೆ ಭಾರವಾಗಿರದೆ ಹಗುರವಾಗಿದ್ದವು. ಆಗ ಇಂಜಿನ್ನು ಶೋಧಿಸಲ್ಪಡದಿದ್ದರಿಂದ ರೈಲನ್ನು ಎಳೆಯಲು ಪ್ರಾಣಿಗಳನ್ನು ಬಳಸಲಾಯಿತು.

ರೈಲಿನ ಇತಿಹಾಸದಲ್ಲಿಯೇ ಪ್ರಪ್ರಥಮ ಉಗಿಬಂಡಿಯು ಚಲಿಸಿದ್ದು ಸಪ್ಟೆಂಬರ್ ೨೭, ೧೮೨೫ ರಂದು. ಅದನ್ನು ವಿನ್ಯಾಸಗೊಳಿಸಿ ಓಡಿಸಿದ ಖ್ಯಾತಿ ಬ್ರಿಟನ್ನಿನ ಜಾರ್ಜ್ ಸ್ಟೀಫನ್‌ಸನ್‌ರಿಗೆ ಸಲ್ಲುತ್ತದೆ. 'ಲೋಕೋಮೋಶನ್' ಎಂಬ ಹೆಸರಿನ ಏಳು ಟನ್ ಭಾರದ ಆ ರೈಲು ಗಂಟೆಗೆ ೨೦ ರಿಂದ ೨೫ ಕಿಲೋಮೀಟರ್ ವೇಗದಲ್ಲಿ ಸ್ಟಾಕ್‌ಟನ್ ಮತ್ತು ಡಾರ್ಲಿಂಗ್‌ಟನ್ ಎಂಬ ನಗರಗಳ ಮಧ್ಯದ ೧೭ ಕಿಲೋಮೀಟರು ದೂರವನ್ನು ಕ್ರಮಿಸಿತು. ಇದಾದ ಐದು ವರ್ಷಗಳ ನಂತರ, ಅಂದರೆ ೧೮೩೦ರ ಸಪ್ಟೆಂಬರ್‌ನಲ್ಲಿ, ವೇಗದ ರೈಲುಗಳ ಸಂಚಾರ ಬ್ರಿಟನ್ನಿನ ಲೀವರ್‌ಪೂಲ್ ಮತ್ತು

ಮ್ಯಾಂಚೆಸ್ಟರ್ ಪಟ್ಟಣಗಳ ಮಧ್ಯೆ ಪ್ರಾರಂಭವಾಯಿತು. ಪ್ರಯಾಣಿಕರಿಗಾಗಿ ಆರಂಭವಾದ ಈ ರೈಲುಗಳು 'ರಾಕೆಟ್' ಎಂಬ ಹೆಸರಿನ ಶಕ್ತಿಶಾಲಿ ಉಗಿ ಎಂಜಿನ್ನುಗಳನ್ನು ಹೊಂದಿದ್ದವು. ೧೪ ಟನ್ ಭಾರವನ್ನು ತಾಸಿಗೆ ೪೫ ಕಿಲೋಮೀಟರು ವೇಗದಲ್ಲಿ ಎಳೆದೊಯ್ಯುವ ಸಾಮರ್ಥ್ಯವಿದ್ದ ರೈಲಿನಲ್ಲಿ ಇಂಗ್ಲೆಂಡಿನ ಜನರು ಸುಖಕರವಾಗಿ, ವೇಗವಾಗಿ ಮತ್ತು ಕಡಿಮೆ ಖರ್ಚಿನಲ್ಲಿ ಪ್ರಯಾಣಿಸತೊಡಗಿದರು.

ಭಾರತದಲ್ಲಿ ರೈಲು ಮೊಟ್ಟಮೊದಲ ಬಾರಿಗೆ ಉಗಿ ತುಂಬಿಕೊಂಡಿದ್ದು ೧೮೫೩ರ ಏಪ್ರಿಲ್ ೧೬ ರಂದು. ಅಂದು ಮಧ್ಯಾಹ್ನ ೩.೩೦ಕ್ಕೆ ಮುಂಬಯಿಯ ಬೋರಿ ಬಂದರನ್ನು (ಈಗಿನ ವಿಕ್ಟೋರಿಯಾ ಟರ್ಮಿನಸ್) ಬಿಟ್ಟ ಆ ರೈಲು ೧೪ ಬೋಗಿಗಳಲ್ಲಿ ೪೦೦ ಜನ ವಿಶೇಷ ಆಹ್ವಾನಿತರನ್ನು ಹೊತ್ತು ೩೪ ಕಿಲೋಮೀಟರ್ ದೂರದ ಠಾಣೆಯನ್ನು ತಲುಪಿತು. ಆ ರೈಲನ್ನು ಎಳೆಯಲು 'ಸುಲ್ತಾನ', 'ಸಿಂಧ' ಹಾಗೂ 'ಸಾಹಿಬ್' ಎಂಬ ಹೆಸರಿನ ಮೂರು ಉಗಿ ಇಂಜಿನ್‌ಗಳನ್ನು ಆ ಸಂದರ್ಭದಲ್ಲಿ ಬಳಸಲಾಯಿತು.

ಎಣ್ಣೆಯನ್ನು ಇಂಧನವನ್ನಾಗಿ ಬಳಸಿಕೊಂಡು ಓಡುವ ರೈಲುಗಳು ೧೮೯೪ರಲ್ಲಿ ತಮ್ಮ ಓಡಾಟವನ್ನು ಮೊಟ್ಟ ಮೊದಲ ಬಾರಿಗೆ ಬ್ರಿಟನ್ನಿನಲ್ಲಿ ಪ್ರಾರಂಭಿಸಿದವು. ಆದರೆ ಐ ರೈಲುಗಳು ಭಾರದ ಸರಕುಗಳನ್ನು ಎಳೆಯಬಲ್ಲ ಉಗಿಯಿಂದ ಓಡುವ ರೈಲುಗಳಷ್ಟು ಬಲಶಾಲಿಯಾಗಿರಲಿಲ್ಲ.

ಪ್ರಪ್ರಥಮ ರೈಲಿನ ಓಡಾಟ ಬ್ರಿಟನ್ನಿನಲ್ಲಿ ಆರಂಭವಾದರೂ 'ಡೀಜೆಲ್' ಎಣ್ಣೆಯನ್ನು ಇಂಧನವನ್ನಾಗಿ ಬಳಸಿಕೊಂಡು ಓಡುವ ರೈಲು ವಿನ್ಯಾಸಗೊಂಡಿದ್ದು ಜರ್ಮನಿಯಲ್ಲಿ. ೧೮೯೦ರಲ್ಲಿ ಜರ್ಮನಿಯ 'ರುಡಾಲ್ಫ ಡೀಜೆಲ್' ಎಂಬುವವನು ಡೀಜೆಲ್ ಇಂಜಿನ್‌ಗಳನ್ನು ವಿನ್ಯಾಸಗೊಳಿಸಿದನು. ಅದು ಬಳಕೆಗೆ ಬಂದದ್ದು ೧೯೧೨ರಲ್ಲಿ ಜರ್ಮನಿಯಲ್ಲಿ. ಇದರ ಸುಧಾರಿತ ರೂಪವಾಗಿ ೧೯೨೪ರಲ್ಲಿ ಬ್ರಿಟನ್ನಿನಲ್ಲಿ ಡೀಜೆಲ್ ಇಂಧನವನ್ನು ದಹಿಸಿ ಅದರಿಂದ ವಿದ್ಯುತ್ ಉತ್ಪಾದಿಸಿ, ವಿದ್ಯುತ್ ಶಕ್ತಿಯಿಂದ ಓಡುವ ರೈಲುಗಳು ತಯಾರಾದವು.

ಭಾರತದಲ್ಲಿ YDM-೧ ಎಂಬ ಹೆಸರಿನ ಡೀಜೆಲ್ ಎಂಜಿನ್ ಹೊಂದಿದ್ದ ಪ್ರಪ್ರಥಮ ರೈಲು ೧೯೫೫ ರಲ್ಲಿ ಗುಜರಾತ ಗಾಂಧಿಧಾಮದ

ಅರೆತಲೆಶೂಲೆ ಹೇಗೆ ಬರುತ್ತದೆ?

ಅರೆತಲೆಶೂಲೆಯ ಸಂಕಟ ಅನುಭವಿಸಿದವರಿಗೇ ಗೊತ್ತು. ಅದು ಏಕೆ ಬರುತ್ತದೆನ್ನುವುದು ಗೊತ್ತಿಲ್ಲವಾದರೂ ಹೇಗೆ ಬರುತ್ತದೆನ್ನುವುದು ಇತ್ತೀಚೆಗೆ ಗೊತ್ತಾಗಿದೆ.

ಮಿದುಳುಕಾಂಡ ಸಂಕ್ಷೋಭೆಗೊಂಡಿರುವುದೇ ಇದಕ್ಕೆ ಕಾರಣ ಎನ್ನುವುದನ್ನು ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ. ಈಗ ಡಾಕ್ಟರರು ವಿಧಿಸುವ ಔಷಧ ನಾಲ್ಕರಿಂದ ಆರು ಗಂಟೆಗಳ ಕಾಲ ಮಾತ್ರ ಪರಿಣಾಮಕರವಾಗಿರುತ್ತದೆ. ಅನಂತರ ಮತ್ತೆ ತಲೆನೋವಿನ ಪ್ರಾರಂಭ. ವಿಜ್ಞಾನಿಗಳೀಗ ಮಿದುಳುಕಾಂಡದ ಸಂಕ್ಷೋಭೆ ಕೊನೆಗೊಳ್ಳುವವರೆಗೂ ಸಂವೇದನೆಯನ್ನು ಹತ್ತಿಕ್ಕುವ ಔಷಧವನ್ನು ಶೋಧಿಸುವಲ್ಲಿ ಮಗ್ನರಾಗಿದ್ದಾರೆ. ಅಲ್ಲಿನವರೆಗೂ ಅರೆತಲೆಶೂಲೆ ಬಂದವರು ಔಷಧದ ಪ್ರಭಾವ ಕೊನೆಗೊಳ್ಳುವ ಮೊದಲೆ ಮಾತ್ರೆಗಳನ್ನು- ವಿಶೇಷತಃ ಸುಮಾಟ್ರೆಪ್ಟಾನ್ ಬೆರೆತ ಮಾತ್ರೆಗಳನ್ನು- ಸೇವಿಸುತ್ತಾ ಹೋಗುವುದೊಂದೇ ದಾರಿ.

• 'ಕಸ್ತೂರಿಮೃಗ'

ಜ್ಞಾನನಿಧಿ

ಬಳಿ ಓಡಾಟ ಆರಂಭಿಸಿತು. ಮೊದಮೊದಲು ಪರದೇಶಗಳಿಂದ ಆಮದುಮಾಡಿಕೊಳ್ಳುತ್ತಿದ್ದ. ಡೀಜೆಲ್ ಇಂಜಿನ್‌ಗಳ ದೇಶೀಯ ತಯಾರಿಕಾ ಘಟಕ ಉತ್ತರಪ್ರದೇಶದ ವಾರಾಣಸಿಯಲ್ಲಿ ೧೯೬೫ರಲ್ಲಿ ಪ್ರಾರಂಭವಾಯಿತು. ಡೀಜೆಲ್ ಇಂಜಿನ್‌ಗಳ ನಂತರ ಡೀಜೆಲ್-ವಿದ್ಯುತ್ ರೈಲುಗಳು ಭಾರತದಲ್ಲಿ ೧೯೬೬ರಲ್ಲಿ ಬಳಕೆಗೆ ಬಂದವು. ಪಶ್ಚಿಮ ಬಂಗಾಲದ ಚಿತ್ತರಂಜನ್‌ನಲ್ಲಿ ೧೯೬೩ರಲ್ಲಿ ವಿದ್ಯುತ್ ಇಂಜಿನ್‌ಗಳ ಉತ್ಪಾದನೆ ಆರಂಭವಾಯಿತು. ಫ್ರೆಂಚ್ ರೈಲ್ವೆಯು ಇತ್ತೀಚೆಗೆ ಕೈಕೊಂಡ ಪ್ರಯೋಗಗಳ ಪ್ರಕಾರ ವಿದ್ಯುತ್ ರೈಲುಗಳು ತಾಸಿಗೆ ಗರಿಷ್ಠ ೩೨೦ ಕಿಲೋಮೀಟರ್ ವೇಗದಲ್ಲಿ ಸಂಚರಿಸಬಲ್ಲವು.

೧೯೮೦ರ ಆಸುಪಾಸಿನವರೆಗೆ ಜಪಾನ್‌ನ 'ಬುಲೆಟ್ ಟ್ರೇನ್' ಗಳಿಸಿದ, ತಾಸಿಗೆ ಗರಿಷ್ಠ ಇನ್ನೂರು ಕಿಲೋಮೀಟರುಗಳ ವೇಗವೇ ಜಗತ್ತಿನ ಯಾವುದೇ ರೈಲು ಓಡಿದ ವೇಗಕ್ಕಿಂತ ಹೆಚ್ಚಿನದಾಗಿತ್ತು. ಅದಾದ ನಂತರ ತಾಸಿಗೆ ಗರಿಷ್ಠ ೨೪೦ ಕಿಲೋಮೀಟರು ವೇಗದಲ್ಲಿ ಓಡುವ ರೈಲುಗಳನ್ನು ಬ್ರಿಟನ್ ತಯಾರಿಸಿತು. APT (Advanced Passenger Train) ಎಂಬ ಈ ಸುಧಾರಿತ ವಿದ್ಯುತ್ ರೈಲುಗಳು ಬ್ರಿಟನ್ ಹಾಗೂ ಫ್ರಾನ್ಸ್‌ಗಳಲ್ಲಿ ಬಳಕೆಗೆ ಬಂದವು. ವಿಶಿಷ್ಟವಾಗಿ ವಿನ್ಯಾಸಗೊಳಿಸಲಾದ ಆಲಂಬಕ (Suspension) ಗಳನ್ನು ಹೊಂದಿದ ಈ APT ರೈಲುಗಳು ತಿರುವಿನಲ್ಲಿ ವೇಗವನ್ನು ತಗ್ಗಿಸದೆ ತಂತಾನೆ ಒಂದೆಡೆ ಬಾಗಿಕೊಂಡು ಓಡುವುದರಿಂದ ಉಳಿದ ರೈಲುಗಳಿಗಿಂತ ಹೆಚ್ಚಿನ ವೇಗದಿಂದ ಚಲಿಸಲು ಈ ಇಂಜಿನ್ನಿಗೆ ಸಾಧ್ಯವಾಯಿತು. ಈಗ ಜಪಾನಿನ ನೋಸೋವ್‌ಮಿ ಎಂಬ ರೈಲು ಗಂಟೆಗೆ ಗರಿಷ್ಠ ೨೭೦ ಕಿಲೋಮೀಟರು ವೇಗದಲ್ಲಿ ಓಡುತ್ತದೆ.

ಭಾರತದಲ್ಲಿ 'ರಾಜಧಾನಿ ಎಕ್ಸ್‌ಪ್ರೆಸ್' ಎಂಬ ಮೊಟ್ಟಮೊದಲ ವೇಗವಾಹಿನಿ ರೈಲು ಮಾರ್ಚ್ ೧, ೧೯೬೯ ರಂದು ದೆಹಲಿ ಮತ್ತು ಹೌರಾಗಳ ನಡುವೆ ಓಡಿತು. ಗಂಟೆಗೆ ೧೩೦ ಕಿ.ಮೀ. ವೇಗದಲ್ಲಿ ಓಡುವ ರಾಜಧಾನಿ ಎಕ್ಸ್‌ಪ್ರೆಸ್‌ನ ವೇಗ 'ಪಿಂಕ್ ಸಿಟಿ ಎಕ್ಸ್‌ಪ್ರೆಸ್' ರೈಲಿನ ವೇಗಕ್ಕಿಂತ ಹೆಚ್ಚಾಗಿತ್ತು. ರಾಜಧಾನಿ ಎಕ್ಸ್‌ಪ್ರೆಸ್ ರೈಲಿಗಿಂತ ಮುಂಚೆ ಜೈಪುರ ಮತ್ತು ದೆಹಲಿಗಳ ನಡುವೆ ತಾಸಿಗೆ ಗರಿಷ್ಠ ೧೦೦ ಕಿಲೋಮೀಟರು ವೇಗದಲ್ಲಿ ಸಂಚರಿಸುತ್ತಿದ್ದ 'ಪಿಂಕ್ ಸಿಟಿ ಎಕ್ಸ್‌ಪ್ರೆಸ್' ರೈಲು ಭಾರತದ ಅತ್ಯಂತ ವೇಗದ ರೈಲಾಗಿತ್ತು. ಇಂದು 'ಶತಾಬ್ದಿ ಎಕ್ಸ್‌ಪ್ರೆಸ್' ರೈಲು ಭೋಪಾಳ ಮತ್ತು ನವದೆಹಲಿಗಳ ಮಧ್ಯ ತಾಸಿಗೆ ಗರಿಷ್ಠ ೧೪೦ ಕಿಲೋಮೀಟರ್ ವೇಗದಲ್ಲಿ ಹಾಗೂ ಇದೇ ರೈಲು ಮದ್ರಾಸ್ ಮತ್ತು ಮೈಸೂರುಗಳ ಮಧ್ಯ ತಾಸಿಗೆ ಗರಿಷ್ಠ ೧೦೦ ಕಿಲೋಮೀಟರ್ ವೇಗದಲ್ಲಿ ಸಂಚರಿಸುತ್ತಿದೆ.

ಭಾರತೀಯ ರೈಲ್ವೆಯ ಬಗೆಗಿನ ಕೆಲವು ಮುಖ್ಯ ಅಂಶಗಳೊಂದಿಗೆ ಬರವಣಿಗೆಯ ಈ ರೈಲು ಸದ್ಯಕ್ಕೆ ನಿಲ್ಲುತ್ತದೆ.

೧) 'ಡೆಕ್ಕನ್ ಕ್ವೀನ್' ಎಂಬ ಹೆಸರಿನ ಪ್ರಪ್ರಥಮ ಸುಖವಿಹಾರಿ ರೈಲು ಮುಂಬಯಿಯ ವಿಕ್ಟೋರಿಯಾ ಟರ್ಮಿನಸ್ ಮತ್ತು ಪುಣೆಯ ನಡುವೆ ಪ್ರಾರಂಭವಾಯಿತು.

೨) ಸದ್ಯ ಭಾರತೀಯ ರೈಲ್ವೆ ಇಲಾಖೆಯಲ್ಲಿ ೯೧೬೧ ರೈಲುಗಳಿದ್ದು ಅವುಗಳ ಪೈಕಿ ೩,೨೯೪ ಡೀಜೆಲ್ ಎಂಜಿನ್‌ಗಳು ೪,೪೨೭ ಉಗಿ ಇಂಜಿನ್‌ಗಳು ಹಾಗೂ ೧,೪೩೬ ವಿದ್ಯುತ್ ಇಂಜಿನ್‌ಗಳು ಇವೆ.

೩) ಅಜಮೀರ್‌ನ 'ರಾಜಪುತಾನಾ-ಮಾಳವಾ' ರೈಲ್ವೆ ಕಾರ್ಖಾನೆಯಲ್ಲಿ ಕಟ್ಟಲಾದ ೭೩೪ ನಂಬರ್‌ನ ದೇಶದ ಮೊಟ್ಟಮೊದಲ ರೈಲು ಇಂದು ದೆಹಲಿಯ ರೈಲು ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕಿದೆ!



ಜಗದ್ವ್ಯಾಪಿಯಾದ ಚೇಳು

• *ಟೇಕಲ್ ಗೋಪಾಲಕೃಷ್ಣ*

ಚೇಳುಗಳಲ್ಲಿ ಒಂದಲ್ಲ, ಎರಡಲ್ಲ ಸುಮಾರು ಆರುನೂರು ಬಗೆಗಳಿವೆ. ಆದರೆ ಭಾರತದಲ್ಲಿರುವುದು ಬರಿ ಮೂವತ್ತಾರೇ ಜಾತಿ. ಈ ಆರುನೂರು ಜಾತಿಯ ಚೇಳುಗಳಲ್ಲಿ ಆ್ಯಂಡ್ರೋಕ್ಟೋಮಸ್ ಆಸ್ಟ್ರೇಲಿಯಸ್ ಅತ್ಯಂತ ವಿಷಕರವಾದದ್ದು. ಸಹಾರಾ ಮರುಭೂಮಿಯಲ್ಲಿ ವಾಸಿಸುವ ಈ ಚೇಳಿನ ವಿಷ ಯಾವ ನಾಗರಹಾವಿನ, ವಿಷಕ್ಕೂ ಕಡಿಮೆಯಿಲ್ಲ.

ಇದೊಂದು ನಿಶಾಚಾರ. ಬೆಳಕೆಂದರೇ ಆಗದು. ಆದ್ದರಿಂದ ಹಗಲು ಬೆಳಕಿರುವಾಗ ಕಲ್ಲುಗಳ ಮಧ್ಯದಲ್ಲೋ ಗೋಡೆಯ ಸಂದುಗಳಲ್ಲೋ ಕಸದ ತೊಟ್ಟಿಯಲ್ಲೋ ಬಿರುಕು ಬಿಟ್ಟ ಭೂಮಿಯಲ್ಲೋ ಅವಿತಿಟ್ಟುಕೊಂಡು ಆಹಾರಾನ್ವೇಷಣೆಗಾಗಿ ರಾತ್ರಿ ಕಾಲ ಹೊರಬೀಳುತ್ತದೆ. ತೇವವಾದ ಸ್ಥಳಗಳೆಂದರೆ ಇದಕ್ಕೆ ಬಲು ಪ್ರೀತಿ. ತಗಣೆ, ಗೆದ್ದಲುಗಳಂತಹ ಚಿಕ್ಕ ಚಿಕ್ಕ ಜಂತುಗಳೇ ಇದರ ಆಹಾರ. ತನ್ನ ಜಾತಿಯ ಚಿಕ್ಕ ಚಿಕ್ಕ ಮರಿಗಳನ್ನು ಇದು ಕಬಳಿಸುತ್ತದೆಂಬ ಊಹೆ ಇದೆಯಾದರೂ ಖಚಿತಪಟ್ಟಿಲ್ಲ. ಶಿಕಾರಿಯನ್ನು ಗಪಗಪ ತಿನ್ನುವುದು ಚೇಳಿಗೆ ಇಷ್ಟವಿಲ್ಲ. ಬದಲು, ಅದನ್ನು ಸ್ವಲ್ಪಸ್ವಲ್ಪವಾಗಿ ಸವಿಯುವುದೆಂದರೆ ಅದಕ್ಕೆ ಬಲು ಖುಷಿ. ಹೀಗಾಗಿ ಹಿಡಿದ ಶಿಕಾರಿಯನ್ನು ತಿಂದುಮುಗಿಸಲು ಚೇಳಿಗೆ ಅನೇಕ ಗಂಟೆಗಳೇ ಬೇಕು. ಅದು ಒಮ್ಮೆ ಹೊಟ್ಟೆ ತುಂಬಿ ಮುಂದೆ ಸುಮಾರು ಆರು ತಿಂಗಳ ಕಾಲ ಆಹಾರವಿಲ್ಲದೆ ಇರಬಲ್ಲದು.

ಕಪ್ಪನೆ ಚೇಳುಗಳೂ ಉಂಟು. ಕೆಂಪನೆಯ ಚೇಳುಗಳೂ ಉಂಟು. ಹಾಗೆಯೆ ಹಳದಿ, ಕಂದುಬಣ್ಣದ ಚೇಳುಗಳೂ ಉಂಟು. ಆದರೆ ನಮ್ಮ ದೇಶದಲ್ಲಿ ಕಪ್ಪು, ಕೆಂಪಗಿನ ಚೇಳುಗಳೇ ಸಾಮಾನ್ಯ. ಮರುಭೂಮಿಯಲ್ಲಿರುವಂಥವು ಸರಿಸುಮಾರಾಗಿ ಕಪ್ಪು ಜಾತಿಯವೆ. ಸೂರ್ಯ ಪ್ರಕಾಶದಲ್ಲಿ ಅವು ಪಳಪಳ ಹೊಳೆಯುತ್ತಿರುತ್ತವೆ. ಚೇಳು ಸಂಘಜೀವಿಯಲ್ಲ. ಯಾವಾಗಲೂ ಒಂಟಿಯಾಗಿಯೆ ಇರಬಯಸುತ್ತದೆ.

ಹೆಣ್ಣು-ಗಂಡುಗಳು ಕೂಡಿಕೊಳ್ಳುವ ರೀತಿಯೂ ಬಹು ವಿಚಿತ್ರ. ಅವು ಎದುರು ಬದುರು ನಿಂತು ತಮ್ಮ ಕೊಂಡಿಗಳನ್ನು ಎತ್ತುತ್ತವೆ. ಅನಂತರ ಒಂದನ್ನೊಂದು ಗಟ್ಟಿಯಾಗಿ ತಬ್ಬಿಕೊಂಡು ಅನೇಕ ಗಂಟೆಗಳವರೆಗೆ ನೃತ್ಯ ಮಾಡುತ್ತವೆ. ಇದಾದ ನಂತರ ಗಂಡು ಕಲ್ಲಿನ ಅಡಿಯಲ್ಲಿರುವ ನೆಲದಲ್ಲಿ ರಂಧ್ರವನ್ನು ಮಾಡುತ್ತದೆ. ಅದರಲ್ಲಿ ಎರಡೂ ಸೇರಿಕೊಳ್ಳುತ್ತವೆ. ಸಂಭೋಗದ ನಂತರ ಹೆಣ್ಣು ಗಂಡನ್ನು ಕೊಂದು ತಿಂದುಬಿಡುತ್ತದೆ. ಚೇಳು ಒಂದು ಸಲಕ್ಕೆ ಎರಡರಿಂದ ಮೂರು ಡಜನ್ ವರೆಗೂ ಮರಿ ಹಾಕಬಲ್ಲದು. ಆಹಾರಕ್ಕಾಗಿ ಹಾಗೂ ರಕ್ಷಣೆಗಾಗಿ ಮರಿಗಳು ತಾಯಿಯ ಬೆನ್ನನ್ನೇ ಆಶ್ರಯಿಸುತ್ತವೆ.

ಜ್ಞಾನನಿಧಿ

ಹಾವಿಗಿರುವ ಹಾಗೆ ಚೇಳಿನ ಬಾಯಲ್ಲಿ ವಿಷವಿಲ್ಲ. ಬದಲು, ಕೊಂಡಿಯ ಕೊನೆಯಲ್ಲಿ ವಿಷವಿರುತ್ತದೆ. ಆ ಭಾಗದಲ್ಲಿ ಎರಡು ವಿಷದ ಗ್ರಂಥಿಗಳಿರುತ್ತವೆ. ಚೇಳು ಕುಟುಕುವಾಗ ಕೊಂಡಿಯ ಮೊನೆಯನ್ನು ದೇಹದಲ್ಲಿ ಚುಚ್ಚಿ ತೂತಿನ ಮೂಲಕ ವಿಷವನ್ನು ಬಿಡುತ್ತದೆ. ಇದರ ವಿಷ ಬಹು ತರಳ. ಒಣಗಿದಾಗ ನುಣುಪಾದ ಪೌಡರಿನಂತೆ ಕುಟುಕಿದಾಗ ವಿಷದ ಪ್ರಭಾವ ನರಗಳ ಮೇಲಾಗಿ ನೋವು ಕಾಣಿಸಿಕೊಳ್ಳುತ್ತದೆ. ಒಮ್ಮೊಮ್ಮೆ ಉಸಿರಾಡಲೂ ಕಷ್ಟವಾಗುವುದು, ಜ್ವರವೂ ಬರಬಹುದು. ಆದರೆ ಎಲ್ಲರೂ ಭಾವಿಸಿದ ಹಾಗೆ ಎಲ್ಲ ಜಾತಿಯ ಚೇಳುಗಳಲ್ಲಿಯೂ ವಿಷವಿರುವುದಿಲ್ಲ. ವಿಷದ ತೀವ್ರತೆಯೂ ಏಕಪ್ರಕಾರವಾಗಿರುವುದಿಲ್ಲ. ಕೆಲವು ಜಾತಿಯ ಚೇಳುಗಳಲ್ಲಿಯ ವಿಷ ಜೇನುಹುಳಗಳಲ್ಲಿ ಇದ್ದಷ್ಟು ಮಾತ್ರ ಇರುತ್ತದೆ. ಆದರೆ ಕಡಿದ ಚೇಳು ಯಾವ ಜಾತಿಯದು ಎನ್ನುವುದು ನಮಗೆ ಗೊತ್ತಾಗದ್ದರಿಂದ ಚೇಳು ಕುಟುಕಿದ ಕೂಡಲೆ ಡಾಕ್ಟರರಿಂದ ಚಿಕಿತ್ಸೆ ಮಾಡಿಸುವುದು ಒಳ್ಳೆಯದು.

ಅಮೇರಿಕ ಹಾಗೂ ಮೆಕ್ಸಿಕೋ ದೇಶಗಳಲ್ಲಿ ಹಾವಿನ ಕಡಿತದಿಂದ ಸಾಯುವವರಿಗಿಂತ ಚೇಳಿನ ಕಡಿತದಿಂದ ಸಾಯುವವರೇ ಹೆಚ್ಚು. ಯುರೋಪಿನಲ್ಲಿಯೂ ಚೇಳುಗಳು ಕಂಡುಬರುತ್ತವಾದರೂ ವಿಷವ ವೃತ್ತದ ಪ್ರದೇಶಗಳಲ್ಲಿ ಬರುವ ದೇಶಗಳಲ್ಲೇ ಅವುಗಳ ವಾಸ ಹೆಚ್ಚು. ಚೇಳು ಮನೆಯಲ್ಲಿ ಇರಬಾರದೆಂದರೆ ಮನೆಯನ್ನು ತೇವವಾಗಿ ಇಡಬಾರದು. ಕೀಟನಾಶಕಗಳು ಉಪಯೋಗಿಸಲ್ಪಡುವಲ್ಲಿಯೂ ಇವು ಇರುವುದಿಲ್ಲ. ಮುಖ್ಯವಾಗಿ ಮನೆಯ ಗೋಡೆ, ಛಾವಣಿಗಳಲ್ಲಿ ರಂಧ್ರಗಳಿರದಂತೆ, ಕಸ, ನಿರುಪಯುಕ್ತ ವಸ್ತುಗಳ ರಾಶಿಯಿರದಂತೆ ನೋಡಿಕೊಳ್ಳಬೇಕು.

ವಿಷವೂ ಅಮೃತವಾಗಬಲ್ಲದೆಂಬುದಕ್ಕೆ ಚೇಳಿನ ವಿಷವೇ ಸಾಕ್ಷಿ. ಇದನ್ನು ಔಷಧದಂತೆಯೂ ಉಪಯೋಗಿಸಬಹುದೆಂಬುದನ್ನು ವಿಜ್ಞಾನಿಗಳು ತೋರಿಸಿಕೊಟ್ಟಿದ್ದಾರೆ. ಚೇಳಿನ ವಿಷವನ್ನು ಸಂಗ್ರಹಿಸಲು ವಿಜ್ಞಾನಿಗಳು ಅದರ ಕೊಂಡಿಗೆ ವಿದ್ಯುತ್ತಿನ ಆಘಾತ ಕೊಡುತ್ತಾರೆ. ಆಗ ಅದು ವಿಷವನ್ನು ಸುರಿಸುತ್ತದೆ. ಈ ವಿಷವನ್ನವರು ಸ್ವಲ್ಪವೂ ಬಿದ್ದುಹೋಗದಂತೆ ಜಾಗ್ರತೆಯಾಗಿ ಸಂಗ್ರಹಿಸಿ ಅನೇಕ ಔಷಧಗಳನ್ನು ತಯಾರಿಸುತ್ತಾರೆ.

ಹೀಗೆ ಚೇಳು ಮಾನವನ ಮಿತ್ರನೂ ಹೌದು, ಶತ್ರುವೂ ಹೌದು. ಶತ್ರುವನ್ನು ಆದಷ್ಟು ದೂರ ಇಟ್ಟು ಅವನ ಒಳ್ಳೆಯ ಗುಣಗಳ ಪ್ರಯೋಜನ ಪಡೆಯುವುದರಲ್ಲಿಯೇ ಜಾಣತನವಿದೆ, ಅಲ್ಲವೆ?

ದಾದಾ ಸಾಹೇಬ್ ಫಾಲ್ಕೆ ಭಾರತೀಯ ಚಲನಚಿತ್ರ ರಂಗಕ್ಕೆ ಅದ್ವಿತೀಯ ಸೇವೆಯನ್ನು ಸಲ್ಲಿಸಿದ ಮಹನೀಯರು. ಅವರ ಸೇವೆಯನ್ನು ಗುರುತಿಸಿ ಕೇಂದ್ರ ಸರ್ಕಾರ ಅವರ ಜನ್ಮಶತಾಬ್ದಿಯ ವರ್ಷವಾದ ೧೯೬೯ರಲ್ಲಿ ಫಾಲ್ಕೆ ಅವರ ಜ್ಞಾಪಕಾರ್ಥವಾಗಿ ಪ್ರಶಸ್ತಿಯನ್ನು ಸ್ಥಾಪಿಸಿತು. ಅಭಿನಯ ಜಗತ್ತಿನಲ್ಲಿ ಗಣನೀಯ ಸಾಧನೆಯನ್ನು ಮಾಡಿದ, ಕಲಾವಿದರಿಗೆ ಇದನ್ನು ಕೊಡಲಾಗುವುದು. ಈ ಪ್ರಶಸ್ತಿಯನ್ನು ಪಡೆದ ಮೊದಲ ಕಲಾವಿದೆಯೆಂದರೆ ದೇವಿಕಾರಾಣಿ.

ನಮ್ಮ ರಾಷ್ಟ್ರದ ಮೊಟ್ಟ ಮೊದಲ ಸುರಂಗ ರೈಲು ಎಂದರೆ ಕಲ್ಕತ್ತಾದ ಮೆಟ್ರೊ ರೈಲ್ವೆ. ಇದನ್ನು ೧೪-೧೦-೧೯೮೪ರಲ್ಲಿ ಉದ್ಘಾಟಿಸಲಾಯಿತು. ಏಷ್ಯಾ ಖಂಡದ ಸುರಂಗ ರೈಲ್ವೆಗಳಲ್ಲಿ ಇದು ಐದನೆಯದು.

• ಡಿ. ಗುಂಡೂರಾವ್

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ಅನ್ಯೂನ
(ಅ) ಕೊರತೆ ಇಲ್ಲದ
(ಆ) ಮೋಟಕಾದ
(ಇ) ಮಧ್ಯಾಹ್ನ
(ಈ) ಪರನಿಂದೆ

೨. ಕಿಂಚಿದೂನ
(ಅ) ಸ್ವಲ್ಪವೂ ಬುದ್ಧಿಯಿಲ್ಲದ
(ಆ) ಅರ್ಥರಹಿತ
(ಇ) ಬಹಳ ನೋವು
(ಈ) ಸ್ವಲ್ಪವೇ ಕಡಿಮೆಯಾದ

೩. ಅಪಸವ್ಯ
(ಅ) ತಾಳಲಾರದ
(ಆ) ವಿರುದ್ಧ
(ಇ) ಎಡಬದಿಯ
(ಈ) ನೀರು ಜಿನುಗುವ

೪. ಅತಿಗಳೆ
(ಅ) ಗಟ್ಟಿಯಾಗಿ ಕೂಗು
(ಆ) ಒಂದು ಸಸ್ಯ
(ಇ) ತಿರಸ್ಕರಿಸು
(ಈ) ರಕ್ತಪಿಪಾಸು ಪ್ರಾಣಿ

೫. ಓಲಗಿಸು
(ಅ) ವಾದ್ಯ ಊದು
(ಆ) ಸಿಂಹಾಸನದ ಮೇಲೆ ಕೂಡ್ರು
(ಇ) ನಡುಗು
(ಈ) ಸೇವೆ ಮಾಡು

೬. ಕೈತವ
(ಅ) ಸಹಾಯ
(ಆ) ಮೋಸ
(ಇ) ಅಧಿಕ ಪ್ರಸಂಗ
(ಈ) ಖಡ್ಗ

೭. ನಿಗೀರ್ಣ
(ಅ) ಬಿದ್ದುಹೋದ
(ಆ) ತುಕ್ಕು ಹಿಡಿದ
(ಇ) ನುಂಗಲ್ಪಟ್ಟ
(ಈ) ಸಂಕೋಲೆಬಿಗಿದ

೮. ಸ್ವೀಯ
(ಅ) ಸ್ವಂತದ
(ಆ) ಬೆವರು
(ಇ) ನೆನಪು
(ಈ) ಎಚ್ಚರ

೯. ಹರಿಗಡಿ
(ಅ) ಧಾರೆ ಕಡಿ
(ಆ) ಒಡೆದ ಗಡಿಗೆ
(ಇ) ದೋಣಿ
(ಈ) ಬೇಡಿ

೧೦. ಕೈಯೂರು
(ಅ) ಬಳೆ
(ಆ) ಸೋಲೊಪ್ಪಿಕೊಳ್ಳು
(ಇ) ಹೊಡೆಯಲು ಹೋಗು
(ಈ) ದಮ್ಮಯ್ಯ ಹಾಕು

೧೧. ಚಕ್ಷುಷ್ಯ
(ಅ) ಕನ್ನಡಕ
(ಆ) ಕುರುಡ
(ಇ) ನೋಡತಕ್ಕ
(ಈ) ಚಕ್ಕುಲಿ

೧೨. ಜಿಘಾಂಸು
(ಅ) ತಿನ್ನಲಾಶಿಸುವ
(ಆ) ಸಾಯಲಿಚ್ಛಿಸುವ
(ಇ) ತಿರಸ್ಕಾರಗೊಂಡ
(ಈ) ಕೊಲ್ಲಬಯಸುವ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

೧. ಅನ್ಯೂನ

(ಅ) ಕೊರತೆಯಿಲ್ಲದ, ಕುಂದಿಲ್ಲದ, ಊನವಿಲ್ಲದ; ಪೂರ್ಣ, ಪರಿಪೂರ್ಣ. (ಸಂ. ಅ + ನಿ + ನಿ + ಊನ.)

೨. ಕಿಂಚಿದೂನ

(ಈ) ಸ್ವಲ್ಪವೇ ಕಡಿಮೆಯಾದ, ತುಸುವೆ ಕೊರತೆಯುಳ್ಳ. ಉದಾ: ಓಂಕಾರದ ಶಂಖನಾದಕ್ಕಿಂತ ಕಿಂಚಿದೂನ (ಬೇಂದ್ರೆ) - ಅಂದರೆ ಓಂಕಾರದ ಶಂಖನಾದಕ್ಕಿಂತ ಸ್ವಲ್ಪ ಮಾತ್ರ ಕಡಿಮೆಯಾದ. (ಸಂ. ಕಿಂಚಿತ್ = ಸ್ವಲ್ಪ, ಊನ.)

೩. ಅಪಸವ್ಯ

(ಅ) ವಿರುದ್ಧ, ಅಯೋಗ್ಯ, ಅಶುಭ, ಉದಾ- ಅವನ ವಿಚಾರಗಳೇ ಅಪಸವ್ಯವಾದವು. (ಸಂ. ಅಪ = ವಿರುದ್ಧ ಸವ್ಯ = ಎಡ, ಅಂದರೆ ಎಡ ದಿಕ್ಕಿಗೆ ಇರದ್ದು. ಬ್ರಾಹ್ಮಣರ ಜನಿವಾರ ಎಡ ಹೆಗಲಿಂದ ಬಲಕಡೆಗೆ ಜೋತಾಡುತ್ತಿರುತ್ತದೆ; ಶ್ರಾದ್ಧ ಮೊದಲಾದ ಅಶುಭ ಕಾರ್ಯಗಳಲ್ಲಿ ಜನಿವಾರವನ್ನು ತದ್ವಿರುದ್ಧ ದಿಕ್ಕಿಗೆ ಹಾಕಿಕೊಳ್ಳುವುದರಿಂದ 'ಅಪಸವ್ಯ' ಅಶುಭವನ್ನು ಸೂಚಿಸುತ್ತದೆ.)

೪. ಅತಿಗಳೆ

(ಇ) ತಿರಸ್ಕರಿಸು, ಧಿಕ್ಕರಿಸು, ಮೀರಿನಡೆ, ಅಲಕ್ಷಿಸು. ಉದಾ: ಕಾಯದೆಗಳನ್ನು ಅತಿಗಳೆಯುವ ಪ್ರವೃತ್ತಿ ಕೆಟ್ಟದ್ದು. (ಅತಿ = ಕಳೆ.)

೫. ಓಲಗಿಸು

(ಈ) ಸೇವೆ ಮಾಡು, ಆಶ್ರಯಿಸು, ಅನುಸರಣೆ ಮಾಡು; ಹೇಳಿದಂತೆ ನಡೆ. ಉದಾ- ಅಧಿಕಾರಿಗಳನ್ನು ಓಲಗಿಸಿ ಕಾರ್ಯಸಾಧನೆ ಮಾಡಿಕೊಳ್ಳುತ್ತಾನೆ. (ಕನ್ನಡ, ಓಲಗ = ಊಳಿಗ, ರಾಜಸಭೆ ಎಂಬುದರಿಂದ.)

೬. ಕೈತವ

(ಅ) ಮೋಸ, ವಂಚನೆ, ಜೂಜಾಟ. ಉದಾ-ಕೈತವದಿಂದ ಅವಳನ್ನು ಒಲಿಸಿಕೊಂಡ. (ಸಂ. ಕಿತವ = ಮೋಸಗಾರ)

೭. ನಿಗೀರ್ಣ

(ಇ) ನುಂಗಲ್ಪಟ್ಟ, ಕಣ್ಮರೆಯಾದ. ಉದಾ: ಇಡೀ ಮನೆಯೇ ಭೂಕಂಪದಿಂದಾದ ಬಿರುಕಿನಲ್ಲಿ ನಿಗೀರ್ಣವಾಯಿತು. (ಸಂ. ನಿ = ಕೆಳಗೆ, ಗೀರ = ನುಂಗಲ್ಪಟ್ಟದ್ದು.)

೮. ಸ್ವೀಯ

(ಅ) ಸ್ವಂತದ, ತನ್ನದಾದ, ತನಗೆ ಸೇರಿದ. ಉದಾ- ಅವನಲ್ಲಿ ಸ್ವೀಯವಾದ ವಿಚಾರಗಳೇನೂ ಇಲ್ಲ (ಸಂ. ಸ್ವ = ತನ್ನ-ಎಂಬುದರಿಂದ.)

೯. ಹರಿಗಡಿ

(ಅ) ಧಾರೆ ಕಡಿ, ಪ್ರವಾಹ ನಿಂತುಹೋಗು, ಉದಾ- ತನ್ನ ವಂಶ ಇಲ್ಲಿಗೇ ಹರಿಗಡಿಯುವುದೆಂದು ದಶರಥ ಭಯಪಟ್ಟ. (ಕನ್ನಡ.)

೧೦. ಕೈಯೂರು

(ಆ) ಸೋಲೊಪ್ಪಿಕೊಳ್ಳು, ಸೋತುಹೋಗು, ಇನ್ನೇನೂ ಮಾಡಲು ದಾರಿಕಾಣದಾಗು. ಉದಾ- ಬಹಳ ಪ್ರಯತ್ನ ಮಾಡಿ ಕೊನೆಗೆ ಕೈಯೂರಿದ. (ಕನ್ನಡ, ಕೈ = ಊರು.)

೧೧. ಚಕ್ಷುಷ್ಯ

(ಇ) ನೋಡತಕ್ಕ, ಕಣ್ಣಿಗೆ ಚೆಂದವಾದ, ಸುಂದರ, ಪ್ರೇಕ್ಷಣೀಯ, ಮನೋಹರ. (ಸಂ. ಚಕ್ಷುಸ್ = ಕಣ್ಣು ಎಂಬುದ್ದರಿಂದ)

೧೨. ಜಿಘಾಂಸು

(ಈ) ಕೊಲ್ಲಬಯಸುವವ, ಶತ್ರು (ಸಂ.)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಶಬ್ದಗಳಿಗೆ ಅರ್ಥ ಗುರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬-೮ ಸರಿಯಿದ್ದರೆ	....	ಸಾಧಾರಣ
೯-೧೦ ಸರಿಯಿದ್ದರೆ	....	ಉತ್ತಮ
೧೧-೧೨ ಸರಿಯಿದ್ದರೆ	....	ಅತ್ಯುತ್ತಮ

ಅನುಭವ

• ಶೋಭಾ ಹಳಬೆ

ಮನಾ

ಇದೊಂದು ಬೆಕ್ಕಿನ ಕಥೆ. ಸತ್ಯವಾದದ್ದು. ನೀವು ಇದನ್ನು ನಂಬಬಹುದು ಅಥವಾ ನಂಬದೆ ಇರಬಹುದು. ಅದು ನಿಮಗೆ ಸೇರಿದ್ದು. ಪ್ರಾಣಿಗಳನ್ನು ಸಾಕುವ ಹವ್ಯಾಸವಿರುವವರು ನಂಬಿಯಾರು, ಕೆಲವರು, "ನಾಯಿಯ ಬಗೆಗಾದರೆ ನಂಬಬಹುದಾಗಿತ್ತು; ಆದರೆ ಬೆಕ್ಕೂ ಹೀಗೆ ಇರಬಹುದೆ?" ಎಂದು ಸಂಶಯವನ್ನೂ ಪಟ್ಟಾರು. ನಾನು ಬರೆದದ್ದರಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆಯಿಲ್ಲ ಎಂದು ಮಾತ್ರ ಹೇಳಬಲ್ಲೆ.

ಬೆಕ್ಕಿನ ಮರಿ ಹುಟ್ಟಿ ಇನ್ನೂ ತಿಂಗಳಾದರೂ ಆಗಿತ್ತೋ ಇಲ್ಲವೋ, ನಮಗೆ ಬೇಡ ಬೇಡವೆಂದು ಗೋಗರೆದರೂ ಕೇಳದೆ ಮಿ. ಬ್ಯಾನರ್ಜಿ ಅದನ್ನು ತಂದು ನಮ್ಮಲ್ಲಿ ಬಿಟ್ಟರು. "ನಿಮ್ಮ ದಾಳಿಂಬರ ಗಿಡದ ಕಾಯನ್ನೆಲ್ಲಾ ಅಳಿಲು ತಿಂದು ಹಾಳುಮಾಡುತ್ತವಲ್ಲಾ, ಅದನ್ನು ತಪ್ಪಿಸಲಾದರೂ ಇದು ಇರಲಿ. ಬೆಕ್ಕು ಓಡಾಡುತ್ತಿದ್ದರೆ ಒಂದು ಅಳಿಲೂ ಇತ್ತ ಮುಖ ಹಾಕದು," ಎಂಬ ಆಶೆಯನ್ನೂ ಹುಟ್ಟಿಸಿದರು. ಮೊದಲೆ ಬ್ಯಾನರ್ಜಿ ಗಡಸು ಮನುಷ್ಯ. ಅವರ ಮಾತಿಗೆ ಎದುರು ಹೇಳುವ ಧೈರ್ಯವೂ ಆಗದೆ ಇತ್ತ ಸುಂದರವಾದ ಆ ಪುಟ್ಟ



ಮುಂದೆಲ್ಲ ಮನಾ ಮನಸ್ಸಿನ ರಾಣಿಯೇ ಆದದ್ದು ಯಾವ ಜನುಮದ ಋಣವೋ.

ಮರಿಯನ್ನು ಬಿಟ್ಟು ಬಿಡುವ ಮನಸ್ಸು ಆಗದೆ ಅವರು ಹೇಳಿದ್ದಕ್ಕೆ ಹೊಂಗುಟ್ಟಿದೆವು. ಅಂತೂ ಆ ಪುಟಾಣಿ ಮರಿ ಮನೆ ಸೇರಿತು.

ಕುರ್ಚಿಯಿಂದ ಎದ್ದಾಗಲೆಲ್ಲ ಚಿಮ್ಮುವ ಸೀರೆಯ ನಿರಿಗೆಯೊಡನೆ ಆಡುವುದೆಂದರೆ ಮರಿಗೆ ಎಲ್ಲಿಲ್ಲದ ಖುಷಿ. ಆದರೆ ನನಗೋ ಸಿಕ್ಕಾಪಟ್ಟೆ ಭಯ. ಎಷ್ಟೋ ಸಲ ಅದರ ಪುಟ್ಟ ಉಗುರುಗಳು ಸೀರೆಗೆ ಸಿಕ್ಕಿಕೊಂಡು ನನಗಷ್ಟೇ ಅಲ್ಲ, ಮರಿಗೂ ಬಿಡಿಸಿಕೊಳ್ಳಲು ಆಗದೆ ತಾಪತ್ರಯವಾಗುತ್ತಿತ್ತು. ಕಪ್ಪು ಒಡೆದದ್ದರಿಂದ ಬಸಿ ಬಹಳ ಕಾಲದಿಂದ ಅನಾಥವಾಗಿ ಬಿದ್ದುಕೊಂಡಿತ್ತು. ಈಗ ಮರಿಗೆ ಅದೇ ಊಟದ ತಟ್ಟೆಯಾಯಿತು.

ಅದರಲ್ಲಿ ಸ್ವಲ್ಪ ಹಾಲು ಹಾಕಿ ಇಟ್ಟೆ. ಮರಿ ಅದನ್ನೆಲ್ಲ ಕುಡಿದು ಆ ಬಿಳಿಯ ಬಸಿಯಲ್ಲಿ ಮುದುರಿಕೊಂಡು ಮಲಗಿಬಿಟ್ಟಿತ್ತು. ಮರಿಯಾದರೂ ಹೇಗಿತ್ತು ಅನ್ನುತ್ತೀರಿ? ಹಿಂಜಿಟ್ಟ ಹತ್ತಿಯಂತೆ. ಮಧ್ಯೆ ಮಧ್ಯೆ ಸ್ವಲ್ಪ ಜಾಗದಲ್ಲಿ ಬಂಗಾರದ ಬಣ್ಣ. ಆಶ್ಚರ್ಯವೆಂದರೆ ಅದಕ್ಕೆ ಬೆಕ್ಕಿನ ಕಣ್ಣು ಇರಲಿಲ್ಲ. ಕಪ್ಪು ಕಣ್ಣು. ಕೆಂಪು ತುಟಿ. ಪುಟ್ಟ ಕೆಂಪು ಮೂಗು. ನೋಡಿದರೆ ಎತ್ತಿ ಮುದ್ದಾಡುವ ಆಸೆ. ಆದರೆ ಹತ್ತಿರ ಹೋಗಲು ಭಯ. ಸ್ಕೂಲಿನಿಂದ ಬಂದ ಮಕ್ಕಳಿಗೆ ಅದನ್ನು ತೋರಿಸಿದಾಗ ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ.

ಮಕ್ಕಳಿಗೆ ಆಟ, ಊಟ, ನಿದ್ದೆ ಎಲ್ಲದರಲ್ಲೂ ಅದು ಜೊತೆಗಾರ. ಮರಿ ಮನೆಬಿಟ್ಟು ಅಂಗಳದಲ್ಲೆಲ್ಲ ಸುತ್ತಾಡತೊಡಗಿದ ಮೇಲೆ ಅದಕ್ಕೊಂದು ಹೆಸರು ಬೇಕೇಬೇಕು ಎನಿಸಿತು ನಮಗೆಲ್ಲ. ಉಳಿದವರು ಬೆಕ್ಕುಗಳಿಗೆ ಸಾಮಾನ್ಯವಾಗಿ ಇಡುವ ಹೆಸರುಗಳೆಲ್ಲ ನಮ್ಮ ಮರಿಗೆ ಹೇಗೆ ತಾನೇ ಸರಿಯಾದೀತು? ಹಾಗೆಂದೇ ಅಪರೂಪದ ಹೆಸರೆಂದು 'ಮನಾ' ಎಂದು ಕರೆದೆವು. ಇಷ್ಟು ಹೊತ್ತಿಗೆ ಮನೆಮಂದಿಯ ಮನಸ್ಸನ್ನೆಲ್ಲಾ ಮನಾ ತುಂಬಿಕೊಂಡಿತ್ತು.

ನನ್ನ ಮಗಳು ಹೊರಗೆ ಆಡಲು ಹೋಗುವುದನ್ನೇ ನಿಲ್ಲಿಸಿದಳು. ಆಕೆ ರಿಬ್ಬನ್ನನ್ನೋ ಲಾಡಿಯನ್ನೋ ಹಿಡಿದು ಆಡಿಸುತ್ತಿದ್ದರೆ ಅದರ ಜೊತೆ ಮನಾನ ಆಟ ನೋಡಿದಷ್ಟು ಸಾಲದೆನಿಸುತ್ತಿತ್ತು. ಮಕ್ಕಳು ಕೇರಂ ಆಡಲು ಕುಳಿತರೆ ಛಟ್ಟೆಂದು ಚೆದುರುವ ಕಾಯಿಗಳನ್ನು ಕಂಡು ಅದರ ಸಂತೋಷ ಮಿತಿಮೀರಿ ತಾನೇ ಕೇರಂ ಬೋರ್ಡಿನ ಮೇಲೆ ಕುಳಿತುಬಿಡುತ್ತಿತ್ತು. ತನ್ನ ಪುಟ್ಟ ಕೈಗಳಿಂದ ಕಾಯಿಗಳನ್ನೂ ಸ್ಟ್ರೈಕರನ್ನೂ ಅತ್ತಿತ್ತ ಚದುರಿಸುತ್ತಿತ್ತು. ಗುರಿಯಿಡುತ್ತಿದ್ದ ಮಕ್ಕಳ ಕೈಬೆರಳನ್ನು ತಟ್ಟನೆ ತಾನೇ ಹಿಡಿದುಕೊಂಡು-ಬಿಡುತ್ತಿತ್ತು. ತಾನೂ ಆಡುತ್ತಿದ್ದೇನೆ ಎಂಬ ಸಂತೋಷ ಮನಾನಿಗೆ.

ಹಾಲುವಾಣದ ಕಾಳುಗಳನ್ನು ನೆಲಕ್ಕೆ ಸುರಿದು ಗುಂಪಾಗಿಸಿ, ಆ ಗುಂಪಿನ ಮೇಲೆ ಜೋರಾಗಿ ಊದಿ ಹೊರಬಂದ ಕಾಳುಗಳನ್ನು ಇನ್ನೊಂದು ಕಾಳಿಗೆ ಬೆರಳು ತಾಗದಂತೆ ತೆಗೆದುಕೊಳ್ಳುವುದು ಒಂದು ಆಟ. ಮಗಳು ಆ ಆಟವಾಡುತ್ತಿದ್ದರೆ, ಕಾಳುಗಳ ಗುಂಪನ್ನು ಚದುರಿಸಿಬಿಡುವುದು ಹಾಗೂ ಅಲುಗಾಡುವ ಕಾಳುಗಳನ್ನು ಕುತ್ತಿಗೆ ಸೊಟ್ಟಮಾಡಿ ನೋಡುವುದು ನಮ್ಮ ಮನಾನ ಮತ್ತೊಂದು ಆಟ. ಅದರ ಈ 'ಮಂಗಾಟ'ದಿಂದ ಮಕ್ಕಳಿಗೆ ಸ್ವಲ್ಪವೂ ಬೇಸರವಿಲ್ಲ. ಆದರೆ ಅದರ ಆಟ (ಕಾಟ?) ಅತಿಯಾಯಿತೆಂದರೆ, "ನೋಡಮ್ಮ ಮನಾ ನಮಗೆ ಆಡಲು ಬಿಡುತ್ತಲೇ ಇಲ್ಲ" ಎಂದು ನನ್ನ ಹತ್ತಿರ ತಕರಾರು ಬರುತ್ತಿತ್ತು. "ಜಾಣ ಮರಿ, ಹಾಗೆಲ್ಲ ಮಾಡಬಾರದು," ಎಂದು ಅದರ ಮುಖಕ್ಕೆ ಮುಖಕೊಟ್ಟು ಹೇಳಿದರೆ ಮಕ್ಕಳಿಗೂ ಸಂತೋಷ, ಮನಾನಿಗೂ ಸಂತೋಷ. ನಂತರ ಎಲ್ಲವೂ ಯಥಾಪ್ರಕಾರ.

"ಮಕ್ಕಳೇನೋ ಸರಿ. ಆದರೆ ನೀನು ಇಡೀ ದಿನ ಅದರ ಜೊತೆ ಕಟ್ಟಿಕೊಳ್ಳುವುದು ನನಗೇನೂ ಸರಿಕಾಣುವುದಿಲ್ಲ" ಎಂದು ನನ್ನವರು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. "ಊಟ-ತಿಂಡಿಯಲ್ಲಿ ಅದರ ಕೂದಲು ಬಿದ್ದರೆ ಒಳ್ಳೆಯದಲ್ಲವಂತೆ" ಎಂದೂ ಎಚ್ಚರಿಸಿದರು. "ನಾನಾದರೂ ಏನು ಮಾಡಲಿ? ಅದು ನನ್ನನ್ನು ಬಿಡುವುದೇ ಇಲ್ಲ" ಅಂದೆ.

ಹೌದು, ಅದು ನನ್ನನ್ನು ಬಿಡುತ್ತಲೇ ಇರಲಿಲ್ಲ.

ಬೆಳಿಗ್ಗೆ ಎದ್ದು ಅಡಿಗೆಮನೆಗೆ ಬಂದರೆ ಮನಾ ನನ್ನ ಹಿಂದೆಯೆ ನಡೆದುಬರುತ್ತಿತ್ತು. 'ನನ್ನನ್ನು ಎತ್ತಿಕೋ' ಎನ್ನುವ ಹಾಗೆ ಎರಡೂ ಕಾಲುಗಳನ್ನೆತ್ತಿ ನಿಂತಿಕೊಳ್ಳುತ್ತಿತ್ತು. ಎತ್ತಿಕೊಂಡರೆ ಸರಿ, ಇಲ್ಲವಾದರೆ ಒಂದೇ ನೆಗೆತಕ್ಕೆ ಅಡಿಗೆಯ ಕಟ್ಟೆಯ ಮೇಲೆ ಹಾರಿ, ಅಲ್ಲಿಂದ ಭುಜಕ್ಕೆ ನೆಗೆದು, ಅಲ್ಲಿಯೆ ಕುಳಿತುಬಿಡುತ್ತಿತ್ತು. ಬೆಳಿಗ್ಗೆ ಹಾಲು ಕಾಯಿಸುವುದು, ಚಹಮಾಡುವುದು, ಚಪಾತಿಗೆ ಹಿಟ್ಟು ಕಲೆಸುವುದು- ಎಲ್ಲವನ್ನೂ ಇದನ್ನು ಭುಜದ ಮೇಲಿಟ್ಟುಕೊಂಡೇ ಮಾಡಬೇಕಾಗುತ್ತಿತ್ತು.

ಊಟಕ್ಕೆ ಕುಳಿತಾಗಲೂ ಅದು ನನ್ನ ಕಾಲುಗಳ ಮೇಲೆಯೆ ಮಲಗಿರುತ್ತಿತ್ತು. ಪಾತ್ರೆಗಳಿಗೆ ಬಾಯಿ ಹಾಕುವುದಾಗಲಿ ತನಗೂ ಕೊಡೆಂದು ಊಟದ ಮಧ್ಯೆ ನಮ್ಮನ್ನು ಪೀಡಿಸುವುದಾಗಲಿ ಮಾಡುತ್ತಿರಲಿಲ್ಲವಾದ್ದರಿಂದ ಮನಾನ ಬಗೆಗಿನ ಇವರ ಅಸಮಾಧಾನವನ್ನು ನಾನು ಅಷ್ಟಾಗಿ ತಲೆಗೆ ಹಚ್ಚಿಕೊಂಡಿರಲಿಲ್ಲ. ಪ್ರತಿಸಲವೂ ಅದರ ಪ್ಲೇಟನ್ನು ತೊಳೆದ ನಂತರವೇ ಊಟಕ್ಕೆ ಹಾಕಬೇಕಾಗುತ್ತಿತ್ತು. ಹೇಗಾದರೂ ಸ್ವಚ್ಛವಾಗಿಯೇ ಇದೆಯಲ್ಲ ಎಂದು ನಾವೇನಾದರೂ ಉಂಡ ಪ್ಲೇಟಿಗೆ ಹಾಲು ಸುರಿದರೆ ಅದು ಮೂಸಿ ಕೂಡ ನೋಡುತ್ತಿರಲಿಲ್ಲ. ಬಾತ್ ರೂಮಿನ ಮೋರಿಯನ್ನೊಮ್ಮೆ ಅದಕ್ಕೆ ತೋರಿಸಿಕೊಟ್ಟ ಮೇಲೆ ಮನಾ 'ಅಂತಿಂಥ ಕೆಲಸಗಳನ್ನು ಬೇರೆಲ್ಲಿಯೂ ಮಾಡಿರಲಿಲ್ಲ; ಅಸಹ್ಯವೆನಿಸುವಂತಹ ಯಾವ ಕೆಲಸವನ್ನೂ ನನ್ನಿಂದ ಮಾಡಿಸಿರಲಿಲ್ಲ. ಇಂತಹ ಗುಣಶಾಲಿಯಾದ ಮನಾನ ಬಗೆಗೆ ಇವರಿಗೇಕೆ ಅಷ್ಟು ಅಸಮಾಧಾನವಿತ್ತೋ ನಾನರಿಯೆ.

ನಾನು ಸ್ನಾನಕ್ಕೆ ಹೋದಾಗ ಮುಚ್ಚಿದ ಬಾಗಿಲಿನ ಎದುರು ನಾನು ಹೊರಬರುವುದನ್ನೇ ಕಾಯುತ್ತ ಕುಳಿತಿರುತ್ತಿತ್ತು. ಅಂಥ ಹೊತ್ತಿನಲ್ಲಿ ಹೊರಗೆ ಗೇಟಿನ ಶಬ್ದವೇನಾದರೂ ಆದರೆ, ಮುಚ್ಚಿದ ಬಾಗಿಲಿನ ಕೆಳಗೆ ನನಗೆ ಕಾಣುವಂತೆ ಕೈ ಹಾಕಿ 'ಮ್ಯಾಂವ್ ಮ್ಯಾಂವ್' ಎನ್ನುತ್ತಿತ್ತು. ಮತ್ತೆ ಹೊರಗಿನ ರೂಮಿನ ಕಿಡಕಿಯಿಂದ ತಲೆಯನ್ನು ಹೊರಗೆ ತೂರಿಸಿ, ಬಂದವರಿಗೆ, 'ಮ್ಯಾಂವ್ ಮ್ಯಾಂವ್' ಹೇಳಿ ಮತ್ತೆ ಮೊದಲಿನ ಸ್ಥಳದಲ್ಲೇ ಕುಳಿತುಕೊಳ್ಳುತ್ತಿತ್ತು. ಸ್ವಲ್ಪ ಸಮಯದ ನಂತರ ಮತ್ತೆ ಅದರ ಪುನರಾವರ್ತನೆ.

ಸಾಮಾನ್ಯವಾಗಿ ಬೆಳಗಿನ ಹೊತ್ತು ಬರುವವರೆಲ್ಲರ ಅನುಭವವಾಗಿತ್ತು ಇದು. "ಏನು, ನಾವು ಬಂದರೆ ನಿಮ್ಮ ಹಾಗೆಯೆ ನಿಮ್ಮ ಮನಾ ಕೂಡ ಸಂಭ್ರಮಪಡುತ್ತದಲ್ಲ!" ಎಂದು ಹೊರಗಿನಿಂದ ಬಂದವರು ಹೆಮ್ಮೆಪಟ್ಟು, ನಮ್ಮನ್ನು ಹೆಮ್ಮೆಪಡಿಸಿದ್ದಿದೆ. ಅತಿಥಿಗಳು ಬಂದದ್ದಕ್ಕೆ ಸಡಗರವೇನೋ ಸರಿ. ಆದರೆ ಬಂದವರು ಬಹಳ ಹೊತ್ತು ಮಾತನಾಡುತ್ತಾ ಕುಳಿತರೆ ಮಾತ್ರ ಅದಕ್ಕೆ ಸಹಿಸಲಾಗುತ್ತಿರಲಿಲ್ಲ. ಮೊದಲು ತಾನೂ ಸ್ವಲ್ಪಹೊತ್ತು ನಮ್ಮ ಜೊತೆಯಲ್ಲಿ ಕುಳಿತು ಸಂತೋಷಪಟ್ಟರೂ



ಹೆಚ್ಚು ಹೊತ್ತಾದರೆ ತನ್ನ ಮುಂಗಾಲಿನಿಂದ (ಅಲ್ಲ ಮುಂಗೈಯಿಂದ) ನನ್ನ ಬಾಯಿಯನ್ನು ಮುಚ್ಚಿ, ನನ್ನ ಮುಖವನ್ನು ತನ್ನೆರಡೂ ಕೈಗಳಿಂದ ತನ್ನತ್ತ ತಿರುಗಿಸುವ ಮೂಲಕ, "ಇಷ್ಟು ಹೊತ್ತಿನ ತನಕ ಮಾತಾಡಿದ್ದು ಸಾಕು; ಇನ್ನು ನನ್ನನ್ನು ಗಮನಿಸು," ಎಂಬ ಭಾವ ಪ್ರಕಟಿಸುತ್ತಿತ್ತು.

ಒಮ್ಮೊಮ್ಮೆ ಬೆಳಗಿನ ಸಮಯ ವಾಕಿಂಗಿಗೆ ಹೋಗುವ ಮೂಡ್ ಬರುತ್ತಿತ್ತು ಮನಾನಿಗೆ. ಬರಿ ಹೊಟ್ಟೆಯಲ್ಲೇ ಹೋಗುತ್ತದಲ್ಲ ಎಂದು ಅದರ ಹಿಂದೆ ಹೋಗಿ, "ಹಾಲು ಕುಡಿದು ಹೋಗು ಮರಿ" ಅಂದರೆ ಆಜ್ಞಾಧಾರಕಮರಿ ರಾಜ ಬೀದಿಯಿಂದ ತಿರುಗಿ ಬರುತ್ತಿತ್ತು. ಆದರೆ ಹಾಲು

ಕುಡಿದು ಮುಗಿಸುವ ಹೊತ್ತಿಗೆ ವಾಕಿಂಗಿಗೆ ಹೋಗುವ ವಿಷಯ ಮರೆತುಹೋಗಿರುತ್ತಿತ್ತು.

ಒಂದು ದಿನ ಅತಿಥಿಯೊಬ್ಬರು ಮನೆಗೆ ಬಂದಿದ್ದರು. ಬೇಸಿಗೆಯ ದಿನಗಳಾದ್ದರಿಂದ ಅಂಗಳದಲ್ಲಿ ಕುರ್ಚಿ ಹಾಕಿ ಮಾತನಾಡುತ್ತ ಕುಳಿತಿದ್ದೆವು. "ನಾವು ಬಂದು ಒಂದು ಗಂಟೆಯಾಗುತ್ತ ಬಂತು; ಮನಾ ಕಾಣಲೇ ಇಲ್ಲವಲ್ಲ," ಅಂದರು. ನಾನು ಕುಳಿತಲ್ಲಿಂದಲೇ, "ಮನಾ" ಎಂದು ಜೋರಾಗಿ ಕರೆದೆ. ಮನೆಯ ತಾರಸಿಯ ಕೆಳಗಿನಿಂದ ಬಗ್ಗಿ ಮನಾ "ಮ್ಯಾಂವ್ ಮ್ಯಾಂವ್" ಅಂದಿತು. "ಇಲ್ಲೇ ಇದ್ದೀಯಾ? ಸರಿ, ಎಲ್ಲಿಗೆ ಹೋದೆಯೋ ಅಂತ ಚಿಂತೆಯಾಗಿ ಕರೆದೆ: ಹೋಗು," ಅಂದೆ. ಮನಾ ಮೊದಲಿನ ಸ್ಥಾನಕ್ಕೆ ಹೊರಟುಹೋಯಿತು.

ಬಂದವರು ಮೂಕವಿಸ್ಮಿತರಾಗಿ, "ಯಾವ ಜನ್ಮದಲ್ಲಿ ಏನಾಗಿತ್ತೋ, ಇಷ್ಟು ತಿಳುವಳಿಕೆಯಿರುವ ಬೆಕ್ಕನ್ನು ಈವರೆಗೆ ನೋಡಿಯೇ ಇಲ್ಲವಪ್ಪ ಎಂದೆಂದು, "ಯಾರಾದರೂ ಸಿನೆಮಾದವರನ್ನು ಕೇಳಿನೋಡು; ಪಿಕ್ಚರಿಗೆ ಬೇಕಾದರೆ ಉಪಯೋಗಿಸಿಕೊಂಡಾರು," ಎಂಬ ಸಲಹೆಯನ್ನೂ ಕೊಟ್ಟರು. 'ನಯನ ತುಝೆ ಜಾದೂಗಾರ್' ಒಳ್ಳೆ ನಾಟಕವಿದ್ದರೂ ಅದರಲ್ಲಿ ಬೆಕ್ಕಿನ ಪಾತ್ರವಿರುವುದರಿಂದ ಅದನ್ನು ಯಾರೂ ಆಡುವುದಿಲ್ಲ. ಮನಾನಿಗೆ ಮನುಷ್ಯರ ಮಾತು ತಿಳಿಯುವುದರಿಂದ ಈ ಸಲ ಆ ನಾಟಕವನ್ನೇ ಆಡೋಣ ಎಂದು ಹಿಂದೆ ನನ್ನೊಡನೆ ಮರಾಠಿ ನಾಟಕದಲ್ಲಿ ಭಾಗವಹಿಸಿದವರರೊಬ್ಬರು ಹೇಳಿದ್ದರು. ಲಹರಿ ಬಂದ ಹಾಗೆ ಮಾಡುವ ಈ ಮನಾನನ್ನು ಹಚ್ಚಿಕೊಂಡು ನಾಟಕ ಮಾಡಿದಹಾಗೇ ಇದೆ ಎಂದು ನಾನದಕ್ಕೆ ಒಪ್ಪಿರಲಿಲ್ಲ. ಆದರೆ ಮನಾ ಸಂಗೀತಪ್ರೇಮಿಯಾಗಿತ್ತೆನ್ನುವುದರಲ್ಲಿ ಸಂಶಯವಿಲ್ಲ. ಮನೆಯಲ್ಲಿ ಭಜನೆಯಿರಲಿ, ಸಂಗೀತ ಕಾರ್ಯಕ್ರಮವಿರಲಿ ಅಥವಾ ದಿನನಿತ್ಯದ ಇವರ ಹಾಗೂ ಮಗನ ತಬಲಾ ಪ್ರ್ಯಾಕ್ಟೀಸ್ ಇರಲಿ, ಮನಾ ಎದುರು ಕುಳಿತು ಆಲಿಸುತ್ತಿತ್ತು. ತಬಲಾದ ಧ್ವನಿ ಕೇಳಿಬರುತ್ತಲೇ ಅದು ಇದ್ದಲ್ಲಿಂದ ಓಡಿ ಬಂದು ಹಾಜರಾಗುತ್ತಿತ್ತು.

ದಾಳಿಂಬದ ಗಿಡಕ್ಕೆ ಕಾಯಿ ತಿನ್ನಲು ಇಣಚಿಗಳು ಬರುತ್ತಿದ್ದವಷ್ಟೆ. ಅಲ್ಲಿ ಮನಾ ತನ್ನ ಹೊಣೆಗಾರಿಕೆಯನ್ನು ಚೆನ್ನಾಗಿ ನಿಭಾಯಿಸುತ್ತಿತ್ತು. ಒಂದು ದಿನ ಅಡಿಗೆ ಮನೆಯಲ್ಲಿ ಯಾವುದೋ ಕೆಲಸದಲ್ಲಿದ್ದಾಗ ಇಣಚಿಯ 'ಚೀಂವ್ ಚೀಂವ್' ಕೂಗು ಹತ್ತಿರದಲ್ಲೆ ಕೇಳಿದಂತಾಗಿ ತಿರುಗಿ ನೋಡಿದರೆ, ಬಾಯಿಯಲ್ಲಿ ತನಗಿಂತ ತೂಕದ ಇಣಚಿಯೊಂದನ್ನು ಕಚ್ಚಿಕೊಂಡು ಕುಳಿತಿತ್ತು ಮನಾ. ನನ್ನತ್ತ ಭಾರಿ ಅಭಿಮಾನದ ದೃಷ್ಟಿಯನ್ನು ಬೀರಿತು. ಇಣಚಿ ಪ್ರಾಣಭಯದಿಂದ ತಪ್ಪಿಸಿಕೊಂಡು ಹೋಗುವ ಪ್ರಯತ್ನಮಾಡುತ್ತಿದ್ದರೆ ಈ ನಮ್ಮ ಸಸ್ಯ ಸಂರಕ್ಷಕ ಅದರ ಎಳೆತವನ್ನು ತಾಳಲಾರದೆ ತಾನೂ ಅತ್ತಿತ್ತ ಸರಿದಾಡುತ್ತಿದ್ದಾನೆ! ಒಂದು ಕ್ಷಣ ಏನು ಮಾಡಬೇಕೆಂದು ತೋಚಲಿಲ್ಲ. ಶ್ರಮಪಟ್ಟು ಹಿಡಿದು ತಂದ ಶಿಕಾರಿಯನ್ನು ಬಿಡಿಸಿ ಓಡಿಸುವುದೂ ಸರಿಕಾಣಲಿಲ್ಲ. ಇಣಚಿಯನ್ನು ಕೋಲಿನಿಂದ ಹೊಡೆದು ಸಾಯಿಸಿ ಮನಾನ ಎದುರು ಬಿಸಾಕುವುದೂ ನನ್ನಿಂದ ಆಗದ ಕೆಲಸ. ಕೊನೆಗೆ, ಅರ್ಧ ಮಾಡಿದ ಅಡಿಗೆಯನ್ನು ಹಾಗೇ ಮುಚ್ಚಿಟ್ಟು ಅಡಿಗೆಮನೆಯ ಬಾಗಿಲನ್ನೂ ಹೊರಬಾಗಿಲನ್ನೂ ಹಾಕಿಕೊಂಡು ಪಕ್ಕದ ಮನೆಗೆ ಹೋದೆ. ಬೆಕ್ಕಿನ ಆಟವನ್ನು ನೋಡುವುದೂ ಎಂಥಾ ಭೀಭತ್ಸ ಎಂದು ಆಗ ನನಗೆ ಅನ್ನಿಸಿತ್ತು. ಒಂದೆರಡು ಗಂಟೆ ಅಲ್ಲಿಯೆ ಕಳೆದು, ಇನ್ನೇನು ಸ್ವಚ್ಛ ಮಾಡಲಿಕ್ಕಿದೆಯೋ ಎಂದು ಅಳುಕುತ್ತಾ, ಮನೆಗೆ ಬಂದರೆ ಬೇಟೆಯ ಕುರುಹೇ ಇಲ್ಲ. ಇಣಚಿ ತಪ್ಪಿಸಿಕೊಂಡು ಓಡಿ ಹೋಗಿರಬಹುದೆನಿಸಿತು. ಆದರೆ ನನ್ನನ್ನು ಕಂಡೂ ಎಂದಿನಂತೆ ಓಡಿ ಬಾರದೆ ಮೂಲೆಯಲ್ಲಿ ಹೊಟ್ಟೆಯುಬ್ಬಿಸಿಕೊಂಡು ಮನಾ ಕುಳಿತಿದ್ದನ್ನು ಕಂಡಾಗ ಎಲ್ಲವೂ ಸ್ಪಷ್ಟವಾಯಿತು.

ಒಂದು ಒಂದೂವರೆ ವರ್ಷದಿಂದಲೂ ಕುಂಟುತ್ತಾ ಸಾಗಿದ್ದ ಮನೆಕಟ್ಟುವ ಕೆಲಸ ಅಂತೂ ಮುಕ್ತಾಯದ ಹಂತಕ್ಕೆ ಬಂದಿತ್ತು. ತೀರಾ ಊರ ಹೊರಗಿನ ಒಂದು ಬಡಾವಣೆಯಲ್ಲಿ ನಮ್ಮ ಹೊಸ ಮನೆ, ಒಂಟಿಮನೆ. ಸುತ್ತಮುತ್ತ ಕೂಗಳತೆಯಲ್ಲಿ ಒಂದಾದರೂ ಮನೆಯಿಲ್ಲ. ಸರಿಯಾದ ರಸ್ತೆಯಿಲ್ಲ, ಬಸ್ಸಿಲ್ಲ. ವಿದ್ಯುತ್ತಿನ ಸೌಕರ್ಯವಿಲ್ಲ. ಬಾವಿಯ

ನೀರನ್ನೇ ಅವಲಂಬಿಸಬೇಕಿತ್ತು. ಇಷ್ಟೆಲ್ಲ ಅನಾನು ಕೂಲಗಳನ್ನೂ ಸಹಿಸಿಕೊಂಡು ಅಲ್ಲಿರಬೇಕೋ ಬೇಡವೋ ಎಂಬ ಬಗ್ಗೆ ಎಲ್ಲರೂ ದೀರ್ಘವಾಗಿ ಆಲೋಚಿಸಿ, ಮಕ್ಕಳ ಪರೀಕ್ಷೆಯ ನಂತರ ಹೋದರೆ ಎರಡು ತಿಂಗಳು ಅವರ ಜೊತೆಗೆ ಇದ್ದಂತೆಯೂ ಆದೀತು. ಅದರಿಂದಾಗಿ ಹೊಸ ವಾತಾವರಣಕ್ಕೆ ಹೊಂದಿಕೊಂಡಂತೆಯೂ ಆದೀತು ಎಂದು ಯೋಚಿಸಿ ಹೊಸಮನೆಗೆ ಹೋಗುವುದೆಂದೇ ನಿರ್ಧರಿಸಿದೆವು.

ಇನ್ನೇನು ಹೊರಡಲು ೧೫ ದಿನ ಮಾತ್ರ ಉಳಿದಿವೆ ಎನ್ನುವಾಗ ತುಂಬ ದಿನಗಳ ನಂತರ ಪರಿಚಿತರೊಬ್ಬರು ಬಂದಿದ್ದರು. ಹಾಲಿನಲ್ಲಿ ಹರಟೆ ಸಾಗಿತ್ತು. ಮನಾ ಯಥಾಪ್ರಕಾರ ನನ್ನ ಕಾಲುಗಳ ಮೇಲೆ ಸಿಂಹಾಸನಾರೂಢನಾಗಿತ್ತು. “ಅಂದ ಹಾಗೆ ಈ ಬೆಕ್ಕನ್ನೂ ಒಯ್ಯುತ್ತೀರೋ ಹೊಸಮನೆಗೆ?” ಎಂದು ಕೇಳಿದಳು ಆಕೆ. ಇದೆಂಥ ಪ್ರಶ್ನೆ! ನಮ್ಮ ಋಣಾನುಬಂಧ ಇವರಿಗೆ ತಿಳಿಯದ ವಿಷಯವೆ ಎಂದುಕೊಳ್ಳುತ್ತಿರುವಾಗಲೆ ಮನಾ ‘ಸಿಂಹಾಸನ’ ಬಿಟ್ಟೆದ್ದು, ತನ್ನ ಮುಂದಿನ ಎರಡೂ ಕಾಲುಗಳಿಂದ ನನ್ನ ಕುತ್ತಿಗೆಯನ್ನು ಬಿಗಿಯಾಗಿ ಹಿಡಿದು ಮುಖಕ್ಕೆ ಮುಖಹಚ್ಚಿತು. ಅವರಿಗೂ ಈ ಪ್ರತಿಕ್ರಿಯೆ ಮುದ್ದಾಗಿ ಕಂಡಿರಬೇಕು, “ಕೆಮರಾ ಇದ್ದರೆ ಫೋಟೋ ತೆಗೆಯಬಹುದಾಗಿತ್ತು” ಎಂದು ಕೌತುಕಪಟ್ಟರು. ನಾನೂ ಅದನ್ನು ಮುದ್ದಾಡಿ, “ಇದನ್ನು ಬಿಟ್ಟಿರೋಕ್ಕೆ ಆಗುತ್ತೆಯೆ? ಆದರೆ ನಮ್ಮ ಈ ಪ್ರೀತಿಯೇ ಎಲ್ಲಿ ಕಂಟಕ ತಂದೊಡ್ಡುತ್ತದೋ ಎಂಬ ಭಯ ನನಗೆ,” ಅಂದೆ. “ಯಾಕೆ? ಇದರಿಂದೇನು ತೊಂದರೆಯಾದೀತು ನಿಮಗೆ?” ಎಂದರವರು. ನಮ್ಮ ಹಳೆಯ ಮನೆಯ ಕಿಡಕಿಗಳಿಗೆಲ್ಲ ಜಾಳಿಗೆ ಹೊಡೆದಿದ್ದರಿಂದ ಮನಾ ಬಾಗಿಲಿನಿಂದಲೇ ಪ್ರವೇಶಿಸಬೇಕಿತ್ತು. ರಾತ್ರಿ ಎಷ್ಟು ಹೊತ್ತಾದರೂ ಅದು ‘ಮ್ಯಾಂವ್’ ಎಂದ ಕೂಡಲೆ ಬಾಗಿಲನ್ನು ತೆರೆಯಲೇಬೇಕಿತ್ತು. ಇದನ್ನು ಯಾರಾದರೂ ತಿಳಿದುಕೊಂಡು ಅದರ ದುರ್ಲಾಭ ಪಡೆದರೆ ಹೇಗೆ? ಎಂಬ ಭಯ ನಮಗೆಲ್ಲ. ಅದನ್ನೇ ಅವರಿಗೆ ತಿಳಿಸಿಹೇಳಿದೆ. ಅದು ಅಸಹಜವೆಂದು ಅವರಿಗೆ ಅನ್ನಿಸಲೂ ಇಲ್ಲ. ಮನಾ ಕೈಗಳನ್ನು ಸಡಲಿಸಿ ಟಪಕ್ಕೆಂದು ಕೆಳಗೆ ಹಾರಿ ತೆರೆದ ಬಾಗಿಲಿನಿಂದ ಹೊರಗೆ ಹೋಯಿತು. ಮತ್ತು ಹೋದದ್ದೇ ಒಳ್ಳೇದಾಯಿತು. ಮನಾನನ್ನು ಎಬ್ಬಿಸುವ ಮನಸ್ಸಾಗದೆ ಬಂದವರ ಬಾಯಾರಿಕೆಯನ್ನು ನಿವಾರಿಸುವ ಗೋಜಿಗೂ ಹೋಗದೆ ಆ ವರೆಗೆ ಹಾಗೆಯೆ ಹರಟುತ್ತ ಕುಳಿತಿದ್ದೆ. ಈಗ ಚಹ ಮಾಡಲು ಎದ್ದು ಒಳಗೆ ಬಂದೆ. ಮನಾನ ಬಗ್ಗೆ ‘ಕಂಟಕ’ ಶಬ್ದ ಉಪಯೋಗಿಸಿದ ಬಗ್ಗೆ ಏಕೋ ಇಡೀ ದಿನ ಮನಸ್ಸು ಪಳಪಳಿಸುತ್ತಿತ್ತು.

ಮನೆ ಬದಲಿಸುವ ಗೊಂದಲದಲ್ಲಿ ಮನಾನತ್ತ ಗಮನಕೊಡುವುದು ಕೊಂಚ ಕಡಿಮೆಯಾಯಿತು. ಎರಡು ಮೂರು ದಿನಗಳಿಂದ ಅದು ಊಟಮಾ



ಡುವುದನ್ನೇ ಬಿಟ್ಟಿತ್ತು. ಆದೀಗ ಬೇಟೆಯಲ್ಲಿ ಪಳಗಿದ್ದರಿಂದ ನಾವದನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಂಡಿರಲೂ ಇಲ್ಲ. ವಾಸ್ತುಶಾಂತಿಗೆ ನಾಲ್ಕೈದು ದಿನ ಮಾತ್ರ ಉಳಿದಿತ್ತು. ಈಗ ಮನಾ ತುಂಬಾ ಅಶಕ್ತವಾದಂತೆ ಕಾಣತೊಡಗಿತ್ತು. ಒಂದು ರಾತ್ರಿಯಂತೂ ಅದು ಮನೆಗೆ ಬರಲೇ ಇಲ್ಲ. ಅದರ ಚಿಂತೆಯಿಂದಾಗಿ ನನಗೆ ನಿದ್ದೆಯೂ ಹತ್ತಲಿಲ್ಲ. ಅದಕ್ಕೆ ಹುಷಾರಿಲ್ಲವೋ ಏನೋ, ಅಶಕ್ತಿಯಿಂದಾಗಿ ಏಳಲಿಕ್ಕೆ ಬಾರದೆ ಎಲ್ಲಿಯಾದರೂ ಬಿದ್ದುಬಿಟ್ಟಿದೆಯೋ ಏನೋ, ಓಡಿಹೋಗುವ ತ್ರಾಣ ಮೊದಲೇ ಇಲ್ಲ. ಇಂತಹುದರಲ್ಲಿ ನಾಯಿಗಳ ಕೈಗೆ ಸಿಕ್ಕರೆ ಏನು ಗತಿ, ಹೀಗೇ ಇನ್ನೂ

ಏನೇನೋ ವಿಚಾರಗಳು. ದೀಪಹಾಕಿ ನೋಡಿದೆ. ರಾತ್ರಿ ಎರಡು ಗಂಟೆ. ಇವರಿಂದ ಬಯ್ಯಿಸಿಕೊಳ್ಳ ಬೇಕಾಗುವುದೆಂಬುದು ಗೊತ್ತಿದ್ದರೂ ಅವರನ್ನೆಬ್ಬಿಸಿ, "ರಾತ್ರಿ ಎರಡಾದರೂ ಮನಾ ಇನ್ನೂ ಮನೆಗೆ ಬಂದಿಲ್ಲ. ಹುಡುಕಿಕೊಂಡು ಬರೋಣ ಬನ್ನಿ" ಎಂದು ಗೋಗರೆದೆ. "ನಿನಗೇನು ಹುಚ್ಚೆ?" ಒಂದು ವರ್ಷದ ಗಂಡುಬೆಕ್ಕು ಅದೇನೂ ಮರಿ ಯಲ್ಲ ಈಗ. ಸುಮ್ಮನೇ ಮಲಗಿಕೋ," ಎಂದರು. ಕಂಟಕ ಶಬ್ದ ನೆನಪಾಗಿ ಅಳು ಬಂದು ಬಿಟ್ಟಿತು. ರಾತ್ರಿಯ ನೀರವತೆಯಲ್ಲಿ ನನ್ನ ಅಳು ಹೆಚ್ಚಾದಂತೆ ಅನಿಸಿತಂತೆ ಇವರಿಗೆ. ಕೋಪಬಂದರೂ ನಾನೂ ನನ್ನ ಬೆಕ್ಕೂ ಪಾಪದವಾಗಿ ಕಂಡು, ಬ್ಯಾಟರಿಯನ್ನು ತೆಗೆದುಕೊಂಡು ಹೊರಗೆ ಹೊರಡಲು ತಯಾರಾ ದರು. ನಮ್ಮ ಮನೆಯ ಪಕ್ಕದಲ್ಲೇ ಪಾರ್ಕು. ಅಲ್ಲೆಲ್ಲ ಹುಡುಕಿದೆವು. ಹುಡುಕಿ ಹುಡುಕಿ ಸುಸ್ತಾಯಿತು. 'ಮನಾ' ಎಂದು ದೊಡ್ಡದಾಗಿ ಕೂಗಿ ಕರೆದಿದ್ದರೆ ಧ್ವನಿಯನ್ನು ಕೇಳಿ ಓಡಿಬರುತ್ತಿತ್ತೇನೋ. ಆದರೆ ನಾಲ್ಕು ಜನರಿಗೆ ವಿಚಿತ್ರವಾಗಿ ತೋರಬಹುದಾದ್ದ ರಿಂದ ಹಾಗೆ ಮಾಡದೆ ಸುಮ್ಮನಾಗಬೇಕಾಯಿತು. ಹಾಗೆಯೆ ನಾವು ಮನೆಗೆ ಹಿಂದಿರುಗಿದೆವು. ಮನಾ ಬರಲಿಲ್ಲ. ಅಂದಮೇಲೆ ನನಗೆ ನಿದ್ದೆಯಾದರೂ ಹೇಗೆ ಹತ್ತಬೇಕು?

ಬೆಳಿಗ್ಗೆ ಬಾಗಿಲು ತೆರೆದರೆ ಮೊದಲನೆಯ ದರ್ಶನ ಮನಾನದೆ. ಅಪರಿಮಿತ ಆನಂದವಾ ಯಿತು. ಎಂದಿನಂತೆ ಮುಂಗಾಲುಗಳನ್ನೆತ್ತಿ ಕರೆ ದುಕೋ ಎಂದಿತು. ಅದೀಗ ತೀರಾ ಅಶಕ್ತವಾಗಿತ್ತು. ಮೊದಲಿನಂತೆ ಕಟ್ಟೆಯೇರಿ ನನ್ನ ಮೈಮೇಲೆ ಕುಳಿ ತುಕೊಳ್ಳುವುದು ಅದಕ್ಕೆ ಆಗುತ್ತಿರಲಿಲ್ಲ. ಅದನ್ನು ಡಾಕ್ಟರರ ಬಳಿ ಕರೆದುಕೊಂಡು ಹೋಗುವಂತೆ ಹಟಹಿಡಿದೆ. ಆಶ್ಚರ್ಯವೆಂಬಂತೆ ಇವರು ಅದನ್ನು ದವಾಖಾನೆಗೆ ಒಯ್ದರು. ಆದರೆ ಬಾಗಿಲು ಹಾಕಿ ದ್ದರಿಂದ ಹಾಗೆಯೆ ಮರಳಿಬಂದರು. ಮತ್ತೊಮ್ಮೆ ಮನಾನನ್ನು ಗಮನಿಸಿದೆ. ಇಲ್ಲ, ಅದು ಊಟಮಾ ಡುತ್ತಿಲ್ಲ. ಹಾಲು, ಇಡ್ಲಿ, ಚಪಾತಿ, ಯಾವುದನ್ನೂ ಅದು ತಿನ್ನುತ್ತಿಲ್ಲ. "ಯಾಕೆ ಮನಾ, ನೀನು ಹೀಗೆ ಉಪವಾಸ ಕುಳಿತರೆ ನಮಗೆ ಬೇಸರವಾಗುವುದಿ ಲ್ಲವೆ? ಏನಾದರೂ ತಿನ್ನು ಮರಿ..." ಎಂದು ಆಗ್ರಹಪಡಿಸಿದೆ. ಮನಾ 'ಮ್ಯಾಂವ್ ಮ್ಯಾಂವ್' ಅಂದಿತು ಅಷ್ಟೆ.

ಹೊಸ ಮನೆಗೆ ಬಂದಾಯಿತು. ಆಗತಾನೆ ತಂದು ಹಾಕಿದ ಸಾಮಾನು ರಾಶಿರಾಶಿಯಾಗಿ ಬಿದ್ದಿತ್ತು. ಪೂಜೆಯ, ಅಡಿಗೆಯ ಗಡಿಬಿಡಿ. ಎಲ್ಲ ದಕ್ಕೂ ಸಂಭ್ರಮದಿಂದ ಮುಂದಾಗುತ್ತಿದ್ದ ಮನಾ ತನಗೆ ಏನೂ ಸಂಬಂಧವಿಲ್ಲ ಎನ್ನುವಂತೆ ಮುಖ ಚಿಕ್ಕದು ಮಾಡಿಕೊಂಡು ಕುಳಿತಿದೆ. ನಮಗೆ ತುಂಬಾ ಸಂಕಟವಾಯಿತು. ಅಂದು ಊಟ ಮುಗಿಯುವುದಕ್ಕೂ ಜೋರಾಗಿ ಮಳೆಬರುವು ದಕ್ಕೂ ಸರಿಹೋಯಿತು. ಹೀಗಾಗಿ ಅಂದೂ ಮನಾನನ್ನು ದವಾಖಾನೆಗೆ ಕರೆದುಕೊಂಡು ಹೋಗಲು ಸಾಧ್ಯವಾಗಲಿಲ್ಲ. ನಿತ್ರಾಣವಾಗಿ ಮಲ ಗಿದ್ದ ಮನಾಗೆ, "ನಮ್ಮ ಹೊಸಮನೆ ನೋಡುವು ದಿಲ್ಲವೆ?" ಅಂದೆ. ಅದು ಏಳಲಾರದೆ ಏಳುತ್ತ ಅಡಿಗೆಮನೆ, ರೂಮು, ಹಾಲ್, ಬಚ್ಚಲುಮನೆ ಹೀಗೆ ಎಲ್ಲವನ್ನೂ ಒಂದು ಸಲ ಸುತ್ತಿಬಂತು. ತಲೆ-ಬಾಲ ನನಗೆ ತಿಕ್ಕುತ್ತ ಮ್ಯಾಂವ್ ಮ್ಯಾಂವ್ ಅಂತೇನೋ ಹೇಳಿತು. "ಹಬ್ಬದ ಅಡಿಗೆ ಮಾಡಿ ದ್ದೇನೆ ಮನಾ, ನೀನು ಏನಾದರೂ ತಿನ್ನಲೇಬೇಕು," ಎಂದು ಬಸಿಯಲ್ಲಿ ಸ್ವಲ್ಪ ಪಾಯಸ ಹಾಕಿಟ್ಟರೆ ಒಂದೆರಡು ಚಮಚದಷ್ಟು ಪಾಯಸ ನೆಕ್ಕಿ ನಮ್ಮ ಸಂಭ್ರಮದಲ್ಲಿ ಪಾಲ್ಗೊಂಡಿತು.

ಮರುದಿನ ನಾವು ಮಾಡುವ ಮೊದಲ ಕೆಲ ಸವೆಂದರೆ ಮನಾನನ್ನು ಡಾಕ್ಟರ ಹತ್ತಿರ ಕರೆದು ಕೊಂಡು ಹೋಗುವುದು ಎಂದು ನಿರ್ಧರಿಸಿದೆವು. ಇವರೂ ಮರುಮಾತಿಲ್ಲದೆ ರಜೆ ಹಾಕಿ ಡಾಕ್ಟರರ ಬಳಿ ಅದನ್ನೊಯ್ಯಲು ಒಪ್ಪಿದರು. ಬೆಳಗಿನ ಸಮಯ ಪ್ಲಾಸ್ಟಿಕ್ಕಿನ ಪಟ್ಟಿಗಳಿಂದ ಮಾಡಿದ ಚೌಕಾ ಕಾರದ ದೊಡ್ಡ ಬ್ಯಾಗಿನಲ್ಲಿ ನಿಧಾನವಾಗಿ ಎತ್ತಿ ಮನಾನನ್ನು ಮಲಗಿಸಿದೆ. ಮುಚ್ಚಳ ಹಾರಿ ಹೋಗದ ಹಾಗೆ ರಿಬ್ಬನ್ ಕಟ್ಟಿದೆ. ಅದರಲ್ಲಿ ಸಾಕಷ್ಟು ಸ್ಥಳವಿದ್ದು ಮನಾ ಹಾಯಾಗಿಯೆ ಮಲ ಗಿತ್ತು. ಇವರೂ ನನ್ನ ತಮ್ಮನೂ ಬುಟ್ಟಿ ಸಹಿತವಾಗಿ ಮನಾನನ್ನು ಎತ್ತಿಕೊಂಡು ದವಾಖಾನೆಗೆ ಹೊರ

ಟರು. ಪಟಪಟ ಜಿಗಿದಾಡುತ್ತಿದ್ದ ಮನಾನನ್ನು ಹೀಗೆ ಎತ್ತಿ ಇಡುವ ಹೊತ್ತು ಬಂದುದಕ್ಕೆ ನಮಗೆಲ್ಲ ಬಹಳ ಸಂಕಟವಾಗಿತ್ತು. "ಹೋಗಿ ಬಾ ಮರಿ, ಹೋಗಿ ಬಾ, ಡಾಕ್ಟರು ಔಷಧ ಕೊಡುತ್ತಾರೆ. ನೀನು ಬೇಗ ಹುಷಾರಾಗುತ್ತೀ; ಆಗ ನಾವೆಲ್ಲ ಮೊದಲಿನಂತೆ ಕೇರಂ ಆಡೋಣ. ಹೋಗಿ ಬಾ," ಎಂದು ಮನಸ್ಸಿನಲ್ಲೇ ಹೇಳಿದೆ. ಆದಕ್ಕೆ ಅರ್ಥವಾಯಿತೋ ಏನೋ, ಮಲಗಿದಲ್ಲಿಯೇ ತಲೆಯೆತ್ತಿ 'ಮ್ಯಾಂವ್' ಎಂದಿತು ಕ್ಷೀಣ ಧ್ವನಿಯಲ್ಲಿ. ಅದನ್ನು ಹೊತ್ತ ಮೋಟರ್ ಬೈಕ್ ನಿಧಾನವಾಗಿ ಹೊರಟು ಹೋಯಿತು.

ಅಲ್ಲಿಗೆ ನಮ್ಮ ಅದರ ಋಣ ಮುಗಿದಿತ್ತು. ದವಾಖಾನೆಯಿಂದ ಅದು ಮರಳಿ ಬರಲಿಲ್ಲ. ಮನಾ ಹೋಗುವಾಗ ಹೇಳಿದ 'ಮ್ಯಾಂವ್'ಗೆ ಏನೆಂದು ಅರ್ಥ ಹಚ್ಚಲಿ? "ಇದೋ, ಹೋಗುತ್ತಿದ್ದೇನೆ, ನನ್ನ, ನಿಮ್ಮ ಪ್ರೀತಿ ನಿಮ್ಮ ಮನೆಗೆ ಕಂಟಕವಾಗದಿರಲಿ" ಎಂದೆ? ಅಥವಾ "ನನ್ನ ಮಾತನ್ನು ನೀವು ಅಷ್ಟು ಗಂಭೀರವಾಗಿ ತೆಗೆದುಕೊಳ್ಳಬಾರದಾಗಿತ್ತು; ಕಾಲನ ಕರೆ ಬಂದಿದೆ, ಹೋಗುತ್ತಿದ್ದೇನೆ ಅಷ್ಟೇ," ಎಂದೆ? ನೀರವ ರಾತ್ರಿಯಲ್ಲಿ ಮನಾನ ನೆನಪಾದಾಗ ಮುಂದೆ ನಿದ್ದೆ ಬರುವುದೇ ಇಲ್ಲ ನನಗೆ.

ಜಿಯೋಡ್?!

ನ್ಯೂಜಿಲೆಂಡಿನ ಸಮುದ್ರ ತೀರದಲ್ಲಿ ಫುಟ್‌ಬಾಲ್‌ಗಳನ್ನು ನೆನಪಿಸುವಂತಹ ಕಲ್ಲುಗುಂಡುಗಳು ಕಾಣಬರುತ್ತವೆ. ಇವುಗಳನ್ನು ೧,೩೫,೦೦೦,೦೦೦ ವರ್ಷಗಳ ಹಿಂದೆ ನಿರ್ಮಿಸಿದ್ದು ನಿಸರ್ಗ. ಇವುಗಳಲ್ಲಿ ಅನೇಕ ಗುಂಡುಗಳು ಟೊಳ್ಳಾಗಿದ್ದು ಅವುಗಳಲ್ಲಿ ಹಲವು ರೀತಿಯ ಆದಿರುಗಳು ತುಂಬಿಸಿಕೊಂಡಿರುತ್ತವೆ. ಇಂತಹವುಗಳನ್ನು ವಿಜ್ಞಾನಿಗಳು ಜಿಯೋಡ್‌ಗಳೆನ್ನುತ್ತಾರೆ. ಇವುಗಳನ್ನು ಕತ್ತರಿಸಿ, ಸಾಣೆಹಿಡಿದು, ಸಣ್ಣಪುಟ್ಟ ಆಭರಣಗಳನ್ನು ತಯಾರಿಸಲಾಗುತ್ತದೆ. ೧೯೬೧ರಲ್ಲಿ ಸಿಕ್ಕಿದ ಇಂತಹದೊಂದು ಜಿಯೋಡ್ ಅನ್ನು ಕತ್ತರಿಸುವಾಗ ವಜ್ರದ ಅಲುಗಿನ ಗರಗಸವೇ ಮುರಿದುಹೋಯಿತು. ಆಶ್ಚರ್ಯದಿಂದ ಅದನ್ನು ಭೂಗರ್ಭ ಶಾಸ್ತ್ರಜ್ಞರ ಬಳಿ ತಲುಪಿಸಲಾಯಿತು. ಅವರು ಇದರ ಹೊರಭಾಗವನ್ನು ತೆಗೆದು ಖಾಲಿಯಾಗಿರುವಂತೆ ಕಂಡ ಒಳಭಾಗವನ್ನು ಪರಿಶೀಲಿಸಿದಾಗ ಅದು ಖಾಲಿಯಾಗಿ ಇರಲಿಲ್ಲ. ಒಳಗೆ ಅತ್ಯುನ್ನತ ಶಾಖದಲ್ಲಿ ನಿರ್ಮಾಣಗೊಂಡ ಹೊಳಪಿನ ಕಲ್ಲಿನಂತಹ ಪದಾರ್ಥದೊಳಗೆ ಎರಡು ಮಿಲಿಮೀಟರ್ ದಪ್ಪ, ೧೭ ಮಿಲಿಮೀಟರಗಳಷ್ಟು ಉದ್ದವಾದ ಹೊಳೆಯುವ ನಿಸರ್ಗ ನಿರ್ಮಿತ ಲೋಹದ ತಂತಿ ಸಿಕ್ಕಿತು.


• *ಕೆ. ಗಣೇಶ್*

ನೈಜೀರಿಯಾದ ಮಾದರಿ

ಆಫ್ರಿಕಾದ ಅನೇಕ ದೇಶಗಳು ಇನ್ನೂ ಹಿಂದುಳಿವೆಯೆಂದು ಭಾವಿಸಲ್ಪಟ್ಟಿದ್ದರೂ ಜಾತೀಯತೆ ಹಾಗೂ ರಾಷ್ಟ್ರೀಯತೆಯ ವಿಷಯಗಳಲ್ಲಿ ನಮಗಿಂತ ಮುಂದೆ ಎನ್ನುವುದಕ್ಕೆ ನೈಜೀರಿಯವೇ ಸಾಕ್ಷಿ.

ಆ ದೇಶದಲ್ಲಿ ವಿವಾಹವಾಗಲಿಚ್ಛಿಸುವವರು ಸಬ್ ರಿಜಿಸ್ಟ್ರಾರ್‌ರವರ ಕಚೇರಿಗೆ ಹೋಗಿ ವಿವಾಹವನ್ನು ನೋಂದಾಯಿಸಲೇಬೇಕು. ಅದಕ್ಕೆ ಮೊದಲು ಉಪನೋಂದಣಾಧಿಕಾರಿಗಳು ವಧೂ-ವರರಿಬ್ಬರಿಗೂರಾಷ್ಟ್ರಗೀತೆಯನ್ನು ಹಾಡಲು ಆದೇಶಿಸುತ್ತಾರೆ. ಅವರಿಬ್ಬರೂ ರಾಷ್ಟ್ರಗೀತೆಯನ್ನು ಹೇಳಿದರೆ ಮಾತ್ರ ವಿವಾಹವನ್ನು ನೋಂದಣಿ ಮಾಡಿಕೊಳ್ಳುತ್ತಾರೆ. ಇಲ್ಲದಿದ್ದಲ್ಲಿ ವಿವಾಹವೇ ನಿಂತುಹೋಗುತ್ತದೆ.

• ಸಂಗ್ರಹ: ಪಿ.ಎಸ್. ಕೃಷ್ಣಪ್ರಸಾದ್



ಒಂದು:
ಅಜ್ಜಿ ಸತ್ತ ಸುದ್ದಿಗೆ ದುಃಖ ಒಟ್ಟರಿಸಲಿಲ್ಲ
ಬದಲಾಗಿ–
ಬದ್ದಿಗೆ ಒದ್ದ ಹಾಗೆ ಸಣ್ಣಗೆ ನರಳಿದೆ
ಕೌದಿ ಅಜ್ಜಿ ಎಂದೇ ಗೊತ್ತು ನೆರೆ ಹೊರೆಗೆ
ರತ್ನಗಂಬಳಿಗೆ ಸಮ
ಆಕೆ ಹೊಲೆವ ಕೌದಿ ಕುಲಾವಿಗಳು.

ಲ್ಯಾಯಿ ಬಟ್ಟೆ ನಿಗುಚಿ, ತಿದ್ದಿ ತೀಡಿ
ಕಣ್ಣ ಸೂಜಿಗೆ ಉಸಿರ ದಾರ ಪೋಣಿಸಿ
ಪಗಡೆ ಗೊಂಬೆ, ಮಲ್ಲಿದಂಡೆ
ಕೊಳಲ ಬಾವಿ ಬಿಡಿಸಿ ಗೊಂಡೆ
ಕಟ್ಟಿದ ಕೌದಿ ಚಂದಚಾರ
ಕನಸ ಹೊಲೆಯುವ ಜೀವ ನೂಕಿತುನೂರ.


ಸೋಲಿಗೆ ಗಿದ್ದನ ಕಾಳುಕಡಿ
ಕೂಲಿ ಸಿಕ್ಕರೆ ಸಾಕು
ಅಡುತ್ತಾಳೆ ಅಂಬಲಿ ಅಡಗೂಲಜ್ಜಿ
ತಾಟು ಹಿಡಿದು ಹೊಟ್ಟೆ ತೆರೆದು ನಿಂತ ಮಕ್ಕಳಿಗೆ.

ಈ ಅಜ್ಜಿ ಹಬ್ಬುವ ಹೊಕ್ಕುಳ ಬಳ್ಳಿ;
ಕುಡಿಯ ಹೂಮಿಡಿಗೆ ಹುಳ
ಕಸಗಾಯಿ ಇಸಗಾಯಿ ಮಾಗದ ಫಲ
ಏಳು ಮಕ್ಕಳ ತಾಯಿ ಈಡುಗಾಯಿ.

ಎರಡು:
ಅಜ್ಜಿಯ ಗಂಡ ಮುತ್ತಜ್ಜ ಅಲೆಮಾರಿ
ಸಿದ್ದರ ಗವಿಯಲಿ 'ಮಲ್ಲಾಡ ಚೌಡಿ'ಯ
ಅರಸಿ ಹೋದವನು ಮರಳಿ ಬರಲಿಲ್ಲ.

ಇಂದು ಬಂದಾನು ನಾಳೆ ಬಂದಾನು ಪುರುಷ
ಕಳೆದವು ಮಳೆ ಬೆಳೆ ನಾಲ್ಕಾರು ವರುಷ.
ಕುಸಿಯಿತು ನಿಂತ ನೆಲ
ಕಣ್ಣು ಕಟ್ಟಿ ಕಾಡಿಗೆ ಬಿಟ್ಟ ಈ ಸೀತೆಗೆ
ಇನ್ನೂ ಪಕ್ಕ ಬಲಿಯದ ಮಕ್ಕಳಿಗೆ
ಕೊಳ್ಳದಲಿ ಸುಡುಗಾಡ ಸಿದ್ದರ ಸದ್ದು.
ಗುಡಗುಡಿಯ ಗಾಂಜಾ ಅಮಲು
ಊರ ಮಂದಿಯ ಬಾಯಿ
ತಡಿಕೆ ಬಾಗಿಲಾಯಿತು;
ಮೋಡಿಯಾದನು ಮುತ್ತ ಚೌಡಿಗೆ
ತೀರದ ತಿರುಗದ ಹಾದಿ ತುಳಿದ...

ಮರಳಿ ಬಾರದ ಇತ್ತ ಸಾಯದ ಗಂಡನ
ಕಳೆದು ಮುಂಡೆಯಾದಳು ಮಡದಿ ಮುತ್ತ ಒಡೆದು



ಚಿತೆ ಎದುರು ಉಡುಗೆ ಕಳೆಯದೆ...
ಹೊಸ ನೂಲು ಉಡಲಾರದೆ...
ಕತ್ತಲ ಕಷಾಯ ಹಗಲ ಹಾಲನು ಕುಡಿದು
ನೆರಿದ ನಿಧಿಯಾದಳು ಅಜ್ಜಿ.

ಮೂರು:
ಪಿಂಡ ಮುಟ್ಟಲಿಲ್ಲ ಕಾಗೆ
ಅದೇನು ಆಸೆ ಇತ್ತೋ ಮುದುಕಿಗೆ
ಗೊಣಗಿದರು...
ಮನೆ ಮಂದಿ ಅಜ್ಜಿ 'ಕಾರ್ಯ'ದ ದಿವಸ.

ಕರೆ ಕಂಬಳಿ ಗದ್ದುಗೆ ಮೇಲೆ
ಚಂದ್ರಕಾಳಿ ಸೀರೆಯ ಮಡಿಕೆ
ಎಳೆ ಪಿಸಿದ ಸೆರಗಲಿ ಮಾಸಿದ ಕಸೂತಿ,

ಅದಕೆ ಕಣ್‌ಬಟ್ಟು, ಐದು ಕುಂಕುಮ ಬೊಟ್ಟು,
ರೊಟ್ಟಿ, ಅಂಬಲಿ, ಪುಂಡಿ–ಹಕ್ಕರಿಕೆ ಪಲ್ಯ,
ಹುಣಸೆ ಬೋಟು, ಹುರಿದ ಮೀನಿನ ಎಡೆ
ಹರಡಿದ ಪ್ರಣತಿ ಬೆಳಕು, ಲೋಬಾನದ ಹೊಗೆ.

ಮೀಸಲಿ ಅಡುಗೆ ತುಂಬಿಸಿದೆ ಗೊಪಾಳಕೆ
ತಂಬೂರಿ ಮೀಟಿ 'ಗೋವಿಂದ ಗೋ...'
ಎಂದು ದಾಸಯ್ಯ ಕೈಜಲವ
'ಮಣ್ಣಿಗೆ ನೀಡುವದನು ಕಾಯುವ ಗಿಡುಗಗಳು
ಅಜ್ಜಿಯ ಪಿಂಡದೂಟಕೆ
ಕೂಡಿಟ್ಟ ಆಕೆಯ 'ಗಂಟ'ನ ಪಾಲಿಗೆ...

• ಶಂಕರ ಕಟಗಿ


ಕಥಾನುವಾದ

ಮೂಲ: ಅಂಜು ಮಖೀಜಾ
ಅನುವಾದ: ಸುಧಾ ಶರ್ಮಾ, ಚವತ್ತಿ

(The Indian P.E.N. ಪತ್ರಿಕೆಯಿಂದ)

ಹೊಸ ಹುಟ್ಟು

ಮರ್ಸಿಡಸ್ ಕಾರು ಗಕ್ಕನೆ ನಿಂತ ಶಬ್ದಕ್ಕೆ ಅಂಗಳದಂಚಿಗೆ ಇದ್ದ ಹಳೆಯ ದಾಳಿಂಬೆ ಗಿಡದ ಮೇಲೆ ಇನ್ನೂ ಏಳಬೇಕೋ ಬೇಡವೋ ಎಂದು ಕಣ್ಣುಜ್ಜುತ್ತಿದ್ದ ಹಕ್ಕಿಗಳು ಪುರ್ರನೆ ಹಾರಿದವು. ವಿಶಾಲವಾದ ಅಂಗಳದ ತುಂಬ ಚೆಲ್ಲಿದ ಕಾರಿನ ಹೆಡ್‌ಲೈಟ್ ಬೆಳಕು. ಗವ್ವೆನ್ನುತ್ತಿರುವ ಭವ್ಯ ಬಂಗಲೆ. 'ಮೆಹ್ತಾ ರೆಸಿಡೆನ್ಸ್'ನಲ್ಲಿ ಜೀವ ಸಂಚಾರ. ನಿನ್ನೆ ರಾತ್ರಿಯಿಂದಲೂ ಸಾಹೇಬರೂ ಅಮ್ಮಾವರೂ ಬರುತ್ತಾರೆಂದು ಬಾಗಿಲಲ್ಲೇ ಚಾಪೆ ಹಾಸಿ ಮಲಗಿದ ಸಾವಿತ್ರಿ ಈ ಶಬ್ದದಿಂದ ದಿಗ್ಗನೆದ್ದು ಚಾಪೆ ಸುತ್ತಿದಳು. ಅಸ್ತವ್ಯಸ್ತವಾಗಿದ್ದ ಸೀರೆಯನ್ನು ಸರಿಪಡಿಸಿಕೊಂಡು ಸೆರಗನ್ನು ಎದೆತುಂಬ ಹೊದ್ದು ಚಿಲಕ ತೆಗೆಯಲು ಬಾಗಿಲತ್ತ ಹೊರಟವಳು ಇನ್ನೂ ಮಲಗೇ ಇರುವ ಮಗ ರಾಜುವನ್ನು ನೋಡಿದಳು.



ತಟ್ಟನೇ ಹಿಂದಕ್ಕೆ ಹೆಜ್ಜೆ ಹಾಕಿ ಇನ್ನೂ ಮಲಗಿದ ಅವನನ್ನು ಅವುಚಿ ಎತ್ತಿ 'ಇಲ್ಲಾ ಅಮ್ಮಾವ್ರು ನನ್ನ ಮಗನ್ನ ನೋಡಬಾರ್ದು. ಅವರಿಗೆ ಗೊತ್ತಾಗಬಾರದು' ಎಂದಂದುಕೊಳ್ಳುತ್ತಾ ಸೀದಾ ಅಡುಗೆ ಮನೆಗೆ ಹೋಗಿ ಕಮಲಳ ಕೈಗೆ ಮಗುವನ್ನು ಕೊಟ್ಟು, "ಜ್ವಾಕೆ ಕಮಲಾ, ಅಮ್ಮಾವ್ರು ಬಂದ ಬಿಟ್ರು" ಎಂದವಳೇ ಹೊರಗೋಡಿದಳು. ಹೊಟ್ಟೆ ತುಂಬಿದ್ದ ರಾಜು ನಿದ್ದೆಯ ಮಂಪರಲ್ಲೇ ಕಮಲಾಳ ಕರಿಮಣಿಸರವನ್ನು ಮುಷ್ಟಿಯಲ್ಲಿಟ್ಟುಕೊಂಡು ಮತ್ತೆ ನಿದ್ದೆಗೆ ಜಾರಿದ.

"ಸಾವಿತ್ರೀ ಸಾವಿತ್ರೀ, ಏನ್ ಮಾಡ್ತಿದೀಯೇ ಎಷ್ಟು ಹೊತ್ತೇ.....?" ಬಾಗಿಲು ಬಡಿಯುತ್ತ ನಿಂತ ರಮೇಶ್ ಸಾಹೇಬ ಮತ್ತು ಅಮ್ಮಾವ್ರಿ(ಆರತಿ)ಗೆ ನಮಸ್ತೆ ಹೇಳುತ್ತಿದ್ದರೂ ಅಸಮಾಧಾನ ಆರಿರಲಿಲ್ಲ.

"ಏನೇ, ಎಲ್ಲ ಎಲ್ಲಿ? ನಾವು ಬರೋದು ಗೊತ್ತಿರಲಿಲ್ಲ? ಇವತ್ತು ಮುಂಜಾನೆ ಮುಂಬಯಿಯಿಂದ ಬರ್ತೀವಿ ಅಂತ್ ಹೇಳಿರಲಿಲ್ಲೇನು?" ಎಂದು ಕೇಳುತ್ತಲೇ "ಕಾರಲ್ಲಿದ್ದ ಸಾಮಾನೆಲ್ಲ ಎತ್ಕೊಂಡ್ಬಾ" ಎನ್ನುತ್ತ ಆರತಿ ಮಹಡಿ ಮೇಲಿನ ಮಲಗುವ ಕೋಣೆಯತ್ತ ಹೆಜ್ಜೆ ಹಾಕಿದಳು.

ಸಾವಿತ್ರಿಯ ದೃಷ್ಟಿಯೆಲ್ಲ ತಳ್ಳುವ ತೊಟ್ಟಿಲಲ್ಲಿದ್ದ ಸಾಹೇಬರ ಮಗುವಿನತ್ತಲೇ ಇತ್ತು. ವಿದೇಶದಲ್ಲಿ ಹುಟ್ಟಿದ ಈ ಸುಕುಮಾರ ಶಿಶು ಹೇಗಿದ್ದೀತು? ಸಾಹೇಬರು, ಅಮ್ಮಾವ್ರು ಬೆಳ್ಳಗೆ, ಹಾಲಂತ ಮೈಬಣ್ಣದವರು. ಆದರೆ ಮಗುವಿನ ಮುಖವೇ ಕಾಣಿಸುತ್ತಿರಲಿಲ್ಲ. ಮೆತ್ತನೆಯ ಹಾಸಿಗೆಯ ಗುಲಾಬಿ ಬಣ್ಣ ಮಾತ್ರ ಕಾಣುತ್ತಿತ್ತು.

ತಳ್ಳುವ ತೊಟ್ಟಿಲಿನಿಂದ ಮಗುವನ್ನು ಎತ್ತಿಕೊಳ್ಳಲು ಬೆಲ್ಟ್ ಬಿಚ್ಚುತ್ತಿದ್ದ ರಮೇಶನ ಕೈ ಮಗುವಿನ ಕೆನ್ನೆಗೆ ಬಡಿಯಿತು. ಮೊದಲೇ ಹಸಿವಿನಿಂದ ಅಳುತ್ತಿದ್ದ ಮಗು ಅರುಣನ ಅಳು ಇನ್ನೂ ಜೋರಾಯಿತು. "ಮಗುನ್ನ ಸುಮ್ನೆ ಅಳ್ಸಬ್ಯಾಡ್ರಿ" ಎಂದು ಗದರಿದ ಆರತಿ "ಬಾ ಸಾವಿತ್ರಿ, ಕೂಸನ್ನ ಎತ್ಕೊಳೋಕೆ ನೆರವಾಗು," ಎಂದಳು.



ಕಾರಿನಿಂದಿಳಿಸಿ ತಂದ ಬ್ಯಾಗುಗಳನ್ನು ಕೈಯಲ್ಲೆ ಹಿಡಿದ ಸಾವಿತ್ರಿ ಆರತಿಯತ್ತ ಧಾವಿಸಿದಳು. ಆರತಿಯ ಹೆಗಲ ಮೇಲೆ ತಲೆ ಇಟ್ಟ ಕಿರಿಗಣ್ಣಿನ, ಪುಟ್ಟ ಮುಖದ ಕಪ್ಪನೆಯ ಆ ಸಣಕಲು ಶಿಶು ಆರತಿಯ ಮಗುವೆಂದರೆ ನಂಬಲೇ ಆಗುತ್ತಿಲ್ಲ. 'ರಮೇಶ ಸಾಹೇಬ್ರು- ಆರತಿ ಅಮ್ಮಾವ್ರಿಗೆ ಇಂತಹ ಮಗು ಹುಟ್ಟಲು ಸಾಧ್ಯವೇ ಇಲ್ಲ. ಅಚ್ಚ ಬಿಳುಪಿನ ಆ ದಂಪತಿಗೆ ಕರಿಗುಪ್ಪಿನ ಈ ಮಗು! ಆದರೆ ನನ್ನ ರಾಜು, ಎಷ್ಟು ಚಂದ! ಥೇಟ್ ರಮೇಶ್ ಸಾಹೇಬರ ಹಾಗೆ ಅಚ್ಚ ಬಿಳಿ.' ಯಾವುದೋ ಗುಂಗಲ್ಲಿದ್ದ ಸಾವಿತ್ರಿಯನ್ನು "ಏನ್ ನೋಡ್ತಾ ನಿಂತಿ? ಹೋಗು ಕಮಲಳಿಗೆ ಚಾ ಮಾಡ್ಲಿಕ್ ಹೇಳು" ಎಂದ ಆರತಿಯ ಧ್ವನಿ ಎಚ್ಚರಿಸಿತು.

'ಅಮ್ಮಾವ್ರು ನನ್ನ ಮಗನ್ನಿನ್ನೂ ನೋಡಿಲ್ಲ. ಅವರು ನೋಡಬಾರ್ದು. ರಮೇಶ ಸಾಹೇಬರ ಹಾಗೇ ಇರುವ ನನ್ನ ಮಗ ಅವರ ಕಣ್ಣಿಗೆ ಬೀಳಬಾರದು.'

*** *** ***

"ನಾನು ಊರಲ್ಲಿಲ್ಲದಾಗ ನಿಂಗೂ ಮಗು ಆಗಿರ್ಬೇಕಲ್ಲ?" ಸಾವಿತ್ರಿ ಕೋಣೆಯೊಳಗೆ ಕಾಲಿಡುತ್ತಿದ್ದಂತೆ ಆರತಿ ಪ್ರಶ್ನಿಸಿದಳು. ಆ ಪ್ರಶ್ನೆ ಸಹಜವಾಗೇ ಇದ್ದರೂ ಸಾವಿತ್ರಿಯ ಮನಸ್ಸಿನಲ್ಲಿ ಅರ್ಥವಾಗದ ಅಳುಕು. ಆ ಮಾತು ತನಗೆ ಕೇಳಿಸಲೇ ಇಲ್ಲವೆಂಬಂತೆ ಸಾವಿತ್ರಿ ನೆಲ ಗುಡಿಸುವುದರಲ್ಲಿ ಗರ್ಕಾದಳು.

"ಸಾವಿತ್ರಿ ಆ ಕಸಬರಗ್ಯಾಗ ಗುಡಸಬೇಡ. ನಾ ಲಂಡನ್‌ನಿಂದ ವ್ಯಾಕ್ಯೂಮ್ ಕ್ಲೀನರ್ ತಂದೀನಿ" ಎಂದು ಆರತಿ ಅಂದಾಗ ವಿಷಯಾಂತರವಾಗಿದ್ದಕ್ಕೆ ಖುಷಿಯಾದ ಸಾವಿತ್ರಿ "ವಾಕುಮ್ ಕ್ಲೀನರೀ?" ಎಂದು ಕಷ್ಟಪಟ್ಟು ಉಚ್ಚರಿಸತೊಡಗಿದಳು. "ಹೂಂ ಅದು ಕಸಾನೆಲ್ಲ ಹಿರ್ಕೊಳ್ಳೋದು. ಧೂಳು ಹಾರಿದ್ರ ಮಗುನ ಶ್ವಾಸಕೋಶಕ್ಕೆ ಛಲೋ ಅಲ್ಲ ಅಂತ ಹೇಳಿ ತಂದೀನಿ."

ತೊಟ್ಟಿಲಿನ ಹುರಿಯನ್ನು ಬಾಯಿಗಿಡಲು ಹವಣಿಸುತ್ತಿದ್ದ ಮಗುವನ್ನು ಓರೆಗಣ್ಣಲ್ಲಿ ನೋಡಿದ ಸಾವಿತ್ರಿ "ಅಮ್ಮಾರ ಮಗು ಹಗ್ಗ ತಿನ್ನಲಾಕ್ ಹತ್ತೈತಿ" ಎಂದಳೇ ಹೊರತು ಎತ್ತಿಕೊಳ್ಳಲು ಹಿಂಜರಿದಳು. ಒಳಗೆಲ್ಲಿಂದಲೋ ಬಂದಂತಿರುವ ಚಿಕ್ಕ ಮಗುವಿನ ಅಳುವ ಶಬ್ದ. ಸಾವಿತ್ರಿಗೀಗ ಚಡಪಡಿಕೆ. ಅಳ್ತಿರೋದು ರಾಜೂನೆ. ಬೆಳಿಗ್ಗೆ ಧಡಕ್ಕನೆದ್ದು ಬಂದೆ. ಒಂದತಾಸ್ ಮೇಲಾತು. ಹಸಿವಾತೇನೋ, ಮಲ್ಯಾಗ ಹಾಲ ತುಂಬ್ಕೊಂಡ್ಗೆದ.

"ಏನದು ಸಾವಿತ್ರಿ, ಅಳ್ತಿರೋದು ಯಾರ ಮಗು?" ಆರತಿಯ ಅಚ್ಚರಿಯ ಪ್ರಶ್ನೆಗೆ ಯಾರೋ ಹಾದೀಲಿ ಹೋಗವರದೇನೋ ಎಂದು ತನಗೆ ಗೊತ್ತೇ ಇಲ್ಲವೆಂಬಂತೆ ಸಾವಿತ್ರಿ ಉತ್ತರಿಸಿದಳು. ಅರುಣ ಕಿಟಾರನೇ ಕಿರುಚಿಕೊಂಡ. ಅಳದಿದ್ದರೆ ಮಾತು ಮುಂದುವರಿಯುತ್ತಿತ್ತೋ ಏನೋ. ಅವನನ್ನು ಎತ್ತಿಕೊಂಡ ಆರತಿ "ಸಾವಿತ್ರಿ. ನೀ ಕೆಳಗ ಹೋಗಿ ನಂಗೇನಾದ್ರೂ ಕುಡಿಲಿಕ್ ತಗೊಂಡ್ಬಾ" ಎಂದಳು.

ಅಡುಗೆ ಮನೆಯಲ್ಲಿ ನೆಲದಲ್ಲೆ ಮಲಗಿ ಅಳುತ್ತಿದ್ದ ರಾಜುವನ್ನೆತ್ತಿದ ಸಾವಿತ್ರಿ ರವಿಕೆಯ ಗುಂಡಿಬಿಚ್ಚಿ ಅವನಿಗೆ ಮೊಲೆ ಉಣಿಸತೊಡಗಿದಳು. "ಬೇಗ ತಿನ್ನೋ. ಅಮ್ಮಾವ್ರು ಬಂದಾರ, ಬೇಗ ಹೋಗಬೇಕು" ಅವಸರ ಅವಸರದಲ್ಲೇ ಅವನನ್ನು ಅಲ್ಲೇ ಬಿಟ್ಟು ಸೀದಾ ಆರತಿಯ ಕೋಣೆಗೆ ಬಂದಳು.

"ಯಾರ ಅಳ್ತಿರೋದಂತ ಗೊತ್ತಾತೇನು ಸಾವಿತ್ರಿ?" ಆರತಿ ಮತ್ತೆ ವಿಚಾರಿಸಿದಾಗ "ಇಲ್ಲ ಅಮ್ಮಾರ, ಅಂಗಳದ ತೋಟದಾಗ ಯಾರೋ ಇರಬೇಕು" ಎಂದು ಮತ್ತೊಂದು ಸುಳ್ಳು ಉರುಳಿಸಿದಳು.

'ಅಲ್ಲಾ ಎಷ್ಟ್ ದಿನ ಅಂತಾ ನಾನಿದನ್ನ ಮುಚ್ಚಿಡಲಿ. ಒಂದಲ್ಲ ಒಂದಿನ ಗೊತ್ತಾಗಲೇಬೇಕಲ್ಲ. ನನ್ನ ಮಗ ರಾಜು ಹೂಬೇಹೂಬು ರಮೇಶ ಸಾಹೇಬರ ಹಾಂಗ....' ಯೋಚನೆಯ ಗುಂಗಿನಲ್ಲಿದ್ದ ಸಾವಿತ್ರಿಯನ್ನು.

"ಇಲ್ಲಾ ಅರುಣಂಗೆ ಹಾಲ ಸಾಲ್ದು. ಎಷ್ಟಂತ ಮೊಲಿ ಚೀಪತಾನ?" ಎಂಬ ಆರತಿಯ ಧ್ವನಿ ಎಚ್ಚರಿಸಿತು. "ಪ್ರತಿಸಾರಿ ಅಂವ ಅತ್ತಾಗ್ಲೂ ಹಾಲ ಕೊಡ್ತೀನಿ. ಆದ್ರೂ ಅವಂಗೆ ಸಾಲ್ದು. ನಾನಾದ್ರೂ ಏನ್ ಮಾಡ್ಲಿ ಹಾಲೇ ಇಲ್ಲ" ಎಂಬ ಆರತಿಯ ಮಾತಿಗೆ "ಹಾಗನಬ್ಯಾಡ್ರಿ ಅಮ್ಮಾರ ಹಾಲ ಖಾಲಿನೇ ಆಗಾಂಗಿಲ್ಲ" ಎಂದ ಸಾವಿತ್ರಿಯ ತಾಯ್ತನ ತುಂಬಿ ಬಂದಿತ್ತು. ಅರುಣನಿಗೆ ಹಾಲು ಣಿಸಿಬಿಡಲೇ ಎಂದೂ ಅನ್ನಿಸಿಬಿಟ್ಟಿತ್ತು.

"ನಿನ್ನೆ ರಾತ್ರಿಯಂತೂ ಅರುಣ ಐದುಸಾರಿ ಎದ್ದ. ಎಲ್ಲಾ ಸಾರಿನೂ ಮೊಲಿ ತಿಂದಾನ. ನಮ್ಮ ಲಂಡನ್‌ನಲ್ಲಿರೋ ಡಾಕ್ಟರ್ರೇ ಇಲ್ಲಿರಬೇಕಿತ್ತು. ರಮೇಶ ನಾನೇ ಚೆನ್ನಾಗಿ ಕಾಳಜಿ ಮಾಡ್ತೀನಿ ಅಂತ ಇಲ್ಲೀಗ ಕರ್ಕೊಂಬಂದ. ಇಲ್ಲಿ ಯಾರೂ ಇಲ್ಲ. ಈಗ ತಾನೂ ಇಲ್ಲ" ಎಂದು ಸ್ವಸ್ಥಳಾಗಿ ಆರತಿ ನಿಟ್ಟುಸಿರಿಡತೊಡಗಿದಳು.

'ಹೌದು ರಮೇಶ ಸಾಹೇಬ್ರು ಹಾಂಗs. ಯಾವಾಗ್ಲೂ ಫೋರೆನ್, ಫೋರೆನ್ ಅಂತಾನ ಓಡಾ

ಡ್ತಿರ್ತಾರ. ಕಾಲಲ್ಲಿ ಚಕ್ರಾ ಇರೋರಗತಿ. ನನ್ನ ರಾಜೂನೂ ಹೀಂಗ ದೊಡ್ಡ ಮನಶ್ಯಾ ಆಗೋ ನೇನೋ. ಪಾಪ ಅಮ್ಮಾವ್ರಿಗೆ ಗೊತ್ತೇ ಇಲ್ಲ. ಕಳೆದವರ್ಷ ಅವರು ಲಂಡನ್‌ನಾಗ ಇದ್ರು. ಆಗ ಸಾಹೇಬ್ರು ಬಂಗ್ಲೇಕ್ಕ ಬಂದಿದ್ರು. ಯಾಕೋ ಜಡ್ಡು ಬಂದು ಬಿದ್ರು. ಪ್ರತಿಯೊಂದಕ್ಕೂ ನನ್ನ ಅವಲಂಬಿಸಿದ್ರು. ನಾನೇ ಎಲ್ಲ ಸೇವೆ ಮಾಡ್ದೆ. ಜಡ್ಡು ಗುಣ ಆದ್ಮೇಲೆ ನನ್ನ ಜೊತೆ ಬರ್ತೀಯಾ ಅಂದ್ರು. ನನಗೆ ಒಲ್ಲೆ ಅನಲಿಕ್ಕೆ ಆಗಲಿಲ್ಲ. ಅವರು ನನ್ನ ಗಂಡನ ಹಾಂಗ ಹೊಡದು-ಬಡದು ಮಾಡ್ತಿರಲಿಲ್ಲ. ಭಾಳ ಛೊಲೊ ನನ್ನ ನೋಡ್ಕೊಂಡ್ರು.''

ಅರುಣನ ಅಳು ನಿಲ್ಲಲಿಲ್ಲ. "ಇವಂಗ ಪೌಡರ್ ಹಾಲ ಮಾಡ್ಕೊಂಬರ್ತೀನಿ'' ಎಂದು ಆರತಿ ಏಳ ತೊಡಗಿದಳು.

"ಪೌಡರ ಹಾಲ್ರಿ? ಹಾಂಗಂದ್ರ?''

"ನಿಂಗೊತ್ತಾಗೋದಿಲ್ಲ ಸಾವಿತ್ರಿ, ಸುಮ್ನಿರು.''

"ಇಲ್ಲಾ ಅಮ್ಮಾರ ಅಂತಾ ಹಾಲೆಲ್ಲ ಕೊಡ ಬಾರ್ದು.''

"ನನ್ನ ಜೊತೆ ವಾದಕ್ಕಿಳೀಬ್ಯಾಡ ಸುಮ್ನ ಇವನ್ನ ನೋಡ್ಕೊ'' ಎಂದ ಆರತಿ ಅಡುಗೆ ಮನೆಯತ್ತ ನಡೆದಳು.

ಅಡುಗೆ ಮನೆಯ ನೆಲದ ಮೇಲೆ ಮಲಗಿದ್ದ ರಾಜು. 'ಓ ಆವಾಗ ಅತ್ತಿದ್ದು ಇದೇ ಮಗು ಅಲ್ಲಾ?' ಹತ್ತಿರ ಹೋಗಿ ಬಗ್ಗಿದಳು. ಕೈ ಮೇಲೆತ್ತಿ ಎತ್ತಿಕೊಳ್ಳುವ ಆಸರೆಬಯಸಿದ ಆ ಚಂದದ ಶಿಶು ವನ್ನು ತೋಳಿಗೆ ತೆಗೆದುಕೊಂಡಳು. ಆರತಿಯ ಬೆಚ್ಚನೆಯ ಸ್ಪರ್ಶಕ್ಕೆ ಪುಲಕಿತವಾದ ಮಗು ಅವಳನ್ನು ಇನ್ನಷ್ಟು ಅವುಚಿಹಿಡಿದು ಹಸಿವಾದುದನ್ನು ಸಾರು ವಂತಿತ್ತು. ಆ ಮಗು ಆರತಿಯ ಮಾತೃ ವಾತ್ಸಲ್ಯ ವನ್ನು, ಪ್ರೀತಿಯನ್ನು ಉಕ್ಕಿಸಿತು. ಉಕ್ಕಿದ ಪ್ರೀತಿಯ ಧಾರೆಯಲ್ಲೇ ತನ್ನ ಮಗನಿಗೆ ಹಾಲು ಮಾಡಿದಳು.

*** *** ***

ಮಲಗುವ ಕೋಣೆಯಲ್ಲಿ ರಚ್ಚೆ ಹಿಡಿದು ಅಳುತ್ತಿರುವ ಅರುಣನನ್ನೆತ್ತಿಕೊಂಡು ಸುಮ್ಮನಿರಿಸ ತೊಡಗಿದ ಸಾವಿತ್ರಿಯ ತುಂಬಿದೆದೆಯನ್ನು ತಡಕು ತ್ತಿದ್ದ ಅರುಣ ತಾಯಿ ಹಾಲಿಗಾಗಿ ಹುಡುಕುತ್ತಿದ್ದ. ಅವನಿಗೆ ಬೇಕಾದುದು ಮೊಲೆ ಹಾಲು. ಆರತಿ ತರಲು ಹೋದದ್ದು ಪೌಡರ್ ಹಾಲು. ಸಾವಿತ್ರಿ ಗ್ಯಾಕೋ ಸುಮ್ಮನಿರಲಾಗಲಿಲ್ಲ. ಮೊಲೆ ತಡವುತ್ತಿದ್ದ ಅರುಣನನ್ನು ಅವಚಿಕೊಂಡು ರವಿಕೆಯ ಗುಂಡಿ ಬಿಚ್ಚಿ ಬಾಯಿಗೆ ಮೊಲೆಗಿಡಿದಳು.

ಅಳು ನಿಲ್ಲಿಸಿದ ಅರುಣ ಗಬಗಬ ಮೊಲೆ ಚೀಪತೊಡಗಿದ. ಬಾಗಿಲಲ್ಲಿ ಆರತಿಯ ಹೆಜ್ಜೆ ಶಬ್ದವಾದಾಗಲೇ ಸಾವಿತ್ರಿಗೆ ತಾನೇನು ಮಾಡುತ್ತಿ ದ್ದೇನೆಂದು ಅರಿವಿಗೆ ಬಂದು ಅರುಣನನ್ನು ಕೆಳಗಿಳಿ ಸಲು ನೋಡಿದಳು. ಬಾಗಿಲಲ್ಲಿ ರಾಜುವನ್ನೆತ್ತಿ ಕೊಂಡು ಆರತಿ ನಿಂತಿದ್ದಾಳೆ.

ಹೆದರಿಕೆಯಿಂದ ನಿರಾಕರಣೆಯಿಂದ "ಇಲ್ಲಾ ಅಮ್ಮಾವರ ಇಲ್ಲ'' ಎಂದು ದೈನ್ಯವಾಗಿ ಸಾವಿತ್ರಿ ಗೋಗರೆಯತೊಡಗಿದಳು.

"ಅವನನ್ನು ಅಲ್ಲಿ ಬಿಡು'' ಆರತಿಯ ಧ್ವನಿ ಅಧಿಕಾರದಿಂದ ಕೂಡಿತ್ತು.

ನಡುಗುವ ಕೈಗಳಿಂದ ಅವನನ್ನು ಅಲ್ಲಿ ಬಿಟ್ಟಳು. ಆರತಿ ಒಮ್ಮೆಲೆ ರಾಜುವನ್ನು ಕೆಳಗಿಳಿಸಿದ್ದರಿಂದ ಅವನು ಅಳತೊಡಗಿದ.

"ಸಾವಿತ್ರಿ ನಿನ್ನ ಮಗನಿಗೆ ಮೊಲೆ ಕೊಡು'' ಧ್ವನಿಯ ಮಾರ್ದವತೆ ತಟ್ಟಿದರೂ "ಇಲ್ಲಾ ಅಮ್ಮಾವರ ಇಲ್ಲಾ'' ಎನ್ನುತ್ತಲೇ ಸಾವಿತ್ರಿ ರವಿಕೆಯ ಗುಂಡಿಬಿಚ್ಚತೊಡಗಿದಳು. ಆರತಿ ಅರುಣನನ್ನೆತ್ತಿ ಅವನ ಬಾಯಿಗೆ ಬಾಟಲಿ ಇಟ್ಟಳು.

ನಿದ್ರೆಯಲ್ಲೂ ಎಚ್ಚರ

ಡಾಲ್ಫಿನ್ ಒಂದು ಕಣ್ಣು ತೆರೆದು ನಿದ್ರಿಸಿದರೆ ಹೋತ ಎರಡೂ ಕಣ್ಣು ತೆರೆದು ನಿದ್ರಿಸುತ್ತದೆ. ದಿನಕ್ಕೆ ಎಂಟು ಗಂಟೆಗಳ ಕಾಲ ಮಲಗುವ ಹೋತ ನಿಜವಾದ ಅರ್ಥದಲ್ಲಿ ನಿದ್ರಿಸುವುದಿಲ್ಲ. ಅದರ ನಿದ್ರೆ ಎಂದರೆ ಜೋಂಪು ಹೋಗುವುದು ಮಾತ್ರ. ಸಣ್ಣ ಶಬ್ದಕ್ಕೂ ಅದಕ್ಕೆ ಕೂಡಲೆ ಎಚ್ಚರವಾಗಿಬಿಡುತ್ತದೆ.

ಗಣೇಶ್, ಪಿ. ನಾಡೋರ

೨೮

ನೀರಿನಿಂದ ನೀರಿಗೆ

ಸಕಲ ಜೀವಕೋಟಿಗೆ ಆಧಾರವಿತ್ತು, ಅದರ ಭಾರಹೊತ್ತು ನಿಂತಿರುವ ಪೃಥ್ವಿಯ ನಾಲ್ಕರಲ್ಲಿಯ ಮೂರು ಪಾಲು ನೀರು! "ವಿಶ್ವಮೇವಚ ತನ್ಮಯಂ" ಎಂಬ ಮಾತು ಪ್ರಪಂಚವು ಜಲಮಯವೆಂಬುದನ್ನು ತೋರಿಸುತ್ತದೆ. ಪ್ರಳಯ ಕಾಲದಲ್ಲಂತೂ ಎಲ್ಲೆಲ್ಲೂ ನೀರೇ ನೀರು. "ಪ್ರಳಯಾಬ್ಧಿಯ ಭೋರ್ಗರೆಯುವ ಗಿರಿಯೆತ್ತರ ಏರಿಳಿವ ಜಲ ಸಂಚಯದಲ್ಲಿ ತೇಲುವ ಆಲದೆಲೆಯ ಹಾಸುಗೆ! ಕಡು ಚಲ್ವಿಕೆ ಮೈದಳೆದಿಹ ಚೈತನ್ಯವೆ ಘನವಾಗಿಹ ಆನಂದದ ನಿಧಿ ಎನಿಸಿದ ಎಳೆಯ ಮುದ್ದು ಕೂಸಿಗೆ!"

ಜಲರಾಶಿಯ ಮಧ್ಯದಲ್ಲಿ ತೇಲುವ ಆಲದೆಲೆಯ ಮೇಲೆ ಪವಡಿಸಿದ ಪುಟ್ಟಹಸುಳೆ ಸೃಷ್ಟಿಯ ನಿರ್ಮಾಣದ ಬಗೆಗೆ ಯೋಚಿಸಿ, ಯೋಜಿಸಹೊರಟಿತಂತೆ. ಮೊದಲು ನಿರ್ಮಿತವಾದುದು ನೀರು, ಎಂದು ಮನುಸ್ಮೃತಿ ವಿವರಿಸುತ್ತದೆ. "ಅತ ಏವ ಸಸರ್ಜಾದೌ" ಮನುವಿನ ಈ ನುಡಿಯನ್ನೇ ಅನುಸರಿಸಿ ಕಾಳಿದಾಸ ಕೂಡ ತನ್ನ ಅಭಿಜ್ಞಾನ ಶಾಕುಂತಲ ನಾಟಕದ ನಾಂದಿ ಪದ್ಯದಲ್ಲಿ "ಯಾಸೃಷ್ಟಿಃ ಸ್ರಷ್ಟುರಾದ್ಯಾ" ಎಂದು ಬಣ್ಣಿಸಿ, ಮೊದಲ ಸೃಷ್ಟಿ ಎನಿಸಿದ ನೀರು ಶಿವನ ಅಷ್ಟತನುಗಳಲ್ಲಿ ಒಂದು ಎಂದು ವಿವರಿಸುತ್ತಾನೆ.

ಪ್ರಳಯಕಾಲದಲ್ಲಿ ಸಹ ಎಲ್ಲೆಲ್ಲಿಯೂ ನೀರೇ ನೀರು ಎಂದೆನಲ್ಲವೆ. ಅವ್ಯಾಹತವಾಗಿ ಜಲರಾಶಿಯನ್ನು ಸುರಿಸುವ ಆವರ್ತಕ ಸಂವರ್ತಕದಂತಹ ಮೇಘಗಳಿಂದಾಗಿ ಎಂಬುದು ಪುರಾಣಗಳ ಉಲ್ಲೇಖ. ಇದರಿಂದಾಗಿ ನೀರಿನಿಂದಲೆ ವಿಶ್ವದ ಉದಯ, ನೀರಿನಿಂದಲೇ ಅದರ ಪ್ರಳಯ ಎನ್ನಬಹುದಲ್ಲವೆ?

ಮನುವಿಗಿಂತ ಹೆಚ್ಚು ಪ್ರಾಚೀನವಾದ ತೈತ್ತೀರಿಯ ಉಪನಿಷತ್ತು ನೀಡುವ ವಿವರಣೆ ತೀರ ವಿಭಿನ್ನ. ಏಕಮೇವಾದ್ವಿತೀಯವಾದ ಸತ್‌ತತ್ತ್ವ "ಬಹುಸ್ಯಾಂ ಪ್ರಜಾಯೇಯ" ಎಂದು ನಿರ್ಧರಿಸಿ ಮೊದಲಿಗೆ ತೇಜಸ್ಸನ್ನು ಸೃಜಿಸಿತಂತೆ. ಅದರಿಂದ ನೀರಿನ ಉದ್ಭವ. ಛಾಂದೋಗ್ಯ ಉಪನಿಷತ್ತು ವಿವರಿಸುವ ಸೃಷ್ಟಿಕ್ರಮ ಇನ್ನೊಂದು ಬಗೆ. ಅಲ್ಲಿ ಭಗವಂತನಿಂದ ಆಕಾಶ, ಆಕಾಶದಿಂದ ವಾಯು, ವಾಯುವಿನಿಂದ ತೇಜಸ್ಸು, ತೇಜಸ್ಸಿನಿಂದ ನೀರು, ನೀರಿನಿಂದ ಪೃಥಿವಿ ಎನ್ನಲಾಗಿದೆ. ಏನಿದ್ದರೂ ಸರಿ, ಸೃಷ್ಟಿಯ ಪ್ರಾರಂಭಿಕ ಅವಸ್ಥೆಯಲ್ಲಿಯೇ ನೀರಿನ ನಿರ್ಮಿತಿ ಎಂಬುದು ನಿರ್ವಿವಾದ.

"ಬ್ರಹ್ಮಾಂಡದಲ್ಲಿ ಎಂತೋ ಅಂತೆಯೆ ಪಿಂಡಾಂಡದಲ್ಲಿ" ಎಂಬುದು ಶಾಸ್ತ್ರವಾಕ್ಯ. ಈ ಮಾತಿಗೆ ಅನುಗುಣವಾಗಿ ಹೊರಗಣ ಪ್ರಪಂಚದಲ್ಲಿಯಂತೆಯೆ ಮಾನವ ಶರೀರ ಕೂಡ ನಾಲ್ಕರಲ್ಲಿ ಮೂರು ಪಾಲು ಜಲಮಯ.

ಶರೀರ ರಚನೆಗೂ ನೀರಿಗೂ ಇದ್ದ ನಿಕಟ ಸಂಬಂಧವನ್ನು ಒತ್ತಿ ಹೇಳುವಂತಿದೆ "ಗರ್ಭಧರಿಸು" ಎಂಬ ಅರ್ಥದಲ್ಲಿನ "ನೀರ್-ನಿಲ್ಲು" ಎಂಬ ಕನ್ನಡ ಪದ ಪ್ರಯೋಗ. ಶರೀರ ರಚನೆಯಲ್ಲಿ ಹೇಗೊ ಹಾಗೆಯೇ ಪೋಷಣೆಯಲ್ಲಿಯೂ ನೀರಿನದು ಪ್ರಧಾನಪಾತ್ರ. "ಪಯಸ್" ಎಂಬ ಸಂಸ್ಕೃತ ಪದಕ್ಕೆ ಎರಡು ಅರ್ಥ; ಹಾಲು, ನೀರು. ಈ ಭಾಷಾಜ್ಞಾನ ಇನ್ನಿತರರಿಗಿಂತ ಗೌಳಿಗರಿಗೆ ಹೆಚ್ಚು ಪರಿಚಿತ. ನೀರು ಅನಾಯಾಸವಾಗಿ ಹಾಲಿನೊಂದಿಗೆ ಬೆರೆಯುವಂಥದು. ಇದನ್ನರಿತುಕೊಂಡೆ ಹಾಲಿನಲ್ಲಿ ನೀರನ್ನೋ ಅಥವಾ ನೀರಿನಲ್ಲಿ ಹಾಲನ್ನೋ ಸೇರಿಸಿ ಮಾರುವ ಉಪಕ್ರಮ. ಆದರೆ ಹಂಸಪಕ್ಷಿ ನೀರನ್ನು ಪ್ರತ್ಯೇಕಿಸಿ ಹಾಲನ್ನು ಮಾತ್ರ ಸೇವಿಸುವ ನೈಪುಣ್ಯವನ್ನು ಮೆರೆಯುತ್ತದೆ. ಇದರಿಂದಾಗಿಯೆ "ಹಂಸಕ್ಷೀರನ್ಯಾಯ" ಎಂಬುದು ರೂಢವಾದುದು.

ನೀರಿನದು ಮೂಲತಃ ಪ್ರವಾಹಿ ರೂಪ. ಆದರೂ ಮಿತಿಮೀರಿದ ಶೀತವಾತಾವರಣದ ಪರಿಣಾಮವಾಗಿ ಅದು ಹೆಪ್ಪುಗಟ್ಟಿ ಘನರೂಪತಳೆಯುತ್ತದೆ. ಋಗ್ವೇದದಲ್ಲಿ ವರ್ಣಿತರಾದ ವೃತ್ರಾಸುರ, ಶಂಬರರಂತಹರು ನದಿಗಳ ಪ್ರವಾಹವನ್ನು ತಡೆಗಟ್ಟಿದವರೆನ್ನುವಲ್ಲಿ ಇಂತಹ ಹೆಪ್ಪುಗಟ್ಟುವಿಕೆ ಪ್ರತಿಬಿಂಬಿತವಾಗಿರಬೇಕೆಂದು ಪಾಶ್ಚಾತ್ಯ ವಿದ್ವಾಂಸರ ಊಹೆ. ಸೂರ್ಯಕಿರಣಗಳ ಸ್ಪೋಂಕಿಗೆ ಅಂತಹ ವಿಕೃತಿಗೊಂಡ ನೀರು ಪುನಃ ತನ್ನ ಪ್ರಕೃತಿಗೆ ಮರಳಿದುದು ಇಂದ್ರನ ವಜ್ರಾಯುಧದ ಪ್ರಭಾವದಿಂದ ಎಂದು ಅಲ್ಲಿ ಉಲ್ಲೇಖಿಸಲಾಗಿದೆ ಎಂಬುದು ಅವರ ಅಭಿಮತ. ವಿವಿಧ ಋತುಗಳಲ್ಲಿ ಕಾಣಿಸಿಕೊಳ್ಳುವ ಮಂಜು, ಇಬ್ಬನಿ, ಹಿಮಪಾತ, ನೀರಿನಲ್ಲಿ ತೇಲುವ ಮಂಜುಗಡ್ಡೆ ಮುಂತಾದವುಗಳು ಕೂಡ ನೀರಿನ ವಿಭಿನ್ನ ವಿಕಾರಗಳು. ಅದೇ ತೆರನಾಗಿ ಹರಿಯುವ ಹೊಳೆಯಲ್ಲಿಯ ತಿರುಗಣ್ಣಿ, ತೆರೆ, ನೀರುಗುಳ್ಳೆ, ಬುರುಗು ಇವು ಕೂಡ ನೀರಿನ ಬಗೆಬಗೆಯ ರೂಪುಗಳು. ನೀರು ಒಂದಾದರೂ ಅದಕ್ಕೆ ಪ್ರವಾಹಿ, ಘನ ಮತ್ತು ಉಗಿ ಎಂಬ ರೂಪಗಳೂ ಉಂಟು. ಇದನ್ನೆಲ್ಲ ಗಮನಿಸಿದಾಗ, ''ಯಶೋದೆ, ನಿನ್ನ ಕಂದಗೇಸು ರೂಪವೆ'' ಎಂದು ಮುದ್ದು ಕೃಷ್ಣನನ್ನು ಕುರಿತು ದಾಸರು ಹಾಡಿದಂತೆ ನೀರಿನ ಬಗೆಗೆ ''ನಿನಗೆ ಏಸು ರೂಪವೆ'' ಎಂದು ಕೇಳಬಹುದಲ್ಲವೆ?

ಭಗೀರಥನ ಸುದೀರ್ಘ ತಪಸ್ಸಿನ ಫಲವಾಗಿ ಸ್ವರ್ಗದಿಂದ ಭೂಮಿಗಿಳಿದ ಪಾವನ ಗಂಗೆಯಲ್ಲಿ ಮೀಯುವುದೆಂದರೆ ಭಾರತೀಯರಿಗೆಲ್ಲ ಪುಣ್ಯಪ್ರದ ಎಂಬ ಕಲ್ಪನೆ. ಆದರೆ ಇಂದಿನ ಪರಿಸರ ಮಾಲಿನ್ಯದ ಅತಿರೇಕದಿಂದಾಗಿ ಗಂಗಾಜಲ ಕಲುಷಿತಗೊಂಡುದು ದೈವೀ ದುರ್ವಿಪಾಕವೇ ಸೈ. ಈ ಮಾತು ತುಂಗಾಪಾನಕ್ಕೂ ಅನ್ವಯ. ಗಂಗಾಜಲ ಕೊನೆಯುಸಿರು ಎಳೆಯುತ್ತಿರುವವನಿಗೆ ಕೊನೆಯ ಗುಟುಕು ಆಗಲೆಂಬ ಹಂಬಲ ನಮ್ಮವರದು. ''ಸರ್ವಾನಿಷ್ಟಂ: ಸರಸ್ವತ್ಯೆ:....'' ಎಂಬ ಮಹೋನ್ನತ ವಿಚಾರಕ್ಕೆ ವಿರೋಧಿಯಾಗಿ ಎನ್ನುವಂತೆ, ನಮ್ಮಲ್ಲಿಯ ಸನಾತನಿಗಳು ನೀರಿಗೆ ಇಲ್ಲದ ಮೈಲಿಗೆಯನ್ನು ಕೂಡ ಕಲ್ಪಿಸುವಲ್ಲಿ ಹಿಂದೆ ಬಿದ್ದಿಲ್ಲ.

ಮನೆಗೆ ಬಂದ ಗುರುಹಿರಿಯರನ್ನು ಸತ್ಕರಿಸಲಾಗುವ ಸಮಯ ಸಮರ್ಪಿಸಲಾಗುವ ಅರ್ಘ್ಯ, ಪಾದ್ಯ ಆಚಮನೀಯ ಮುಂತಾದ ವಿಧಿಗಳಲ್ಲಿ ಕೂಡ ನೀರಿಗಿರುವ ಸ್ಥಾನ ಅದರ ಪಾವನತ್ವದ ದ್ಯೋತಕ.

ನೀರು, ಪ್ರಾಣಧಾರಣ ಸಾಧನವಾಗಿರುವಂತೆಯೇ, ಹಗ್ಗ, ಬೆಂಕಿ, ವಿಷಗಳಂತೆ ಪ್ರಾಣಾಪಹರಣದ ಸಾಧನವೂ ಎನಿಸಿದುದು ಅದರ ದೌರ್ಭಾಗ್ಯ.

ತನ್ನ ನಡೆನುಡಿಗಳಿಂದ ನಾಡಿನ ಸಮೃದ್ಧಿಯನ್ನು ಸಾಧಿಸಿ, ರಾಮರಾಜ್ಯವನ್ನು ಪ್ರಸ್ಥಾಪಿಸಿದ ಕೀರ್ತಿಗೆ ಪಾತ್ರನಾದ ಶ್ರೀರಾಮ ತನ್ನ ಅವತಾರ ಕಾರ್ಯವನ್ನು ಕೊನೆಗೊಳಿಸಿದುದು ಸರಯೂ ನೀರಿನಲ್ಲಿ ಪ್ರವೇಶಮಾಡುವ ಮೂಲಕ.

ಹುಚ್ಚುನಾಯಿಯ ಕಡಿತಕ್ಕೆ ಸಿಲುಕಿದವನಿಗೆ ಸೂಕ್ತ ಚಿಕಿತ್ಸೆ ದೊರೆಯಲಿಲ್ಲವಾದರೆ ಆತನಿಗೆ ನೀರನ್ನು ಕಂಡಾಗ ಎಲ್ಲಿಲ್ಲದ ಭೀತಿ ಎಂಬುದು ಗಮನಾರ್ಹ. ಅದೇ ತೆರನಾಗಿ ಅಪಸ್ಮಾರಕ್ಕೆ ಗುರಿಯಾದ ರೋಗಿ ಕೂಡ ನೀರಿನಿಂದ ಗಾಬರಿಗೊಳ್ಳುತ್ತಾನೆ.

ನೀರು ಅಗ್ನಿ ಎರಡೂ ಪಂಚಮಹಾಭೂತಗಳೇನೋ ಅಹುದು. ಆದರೂ ನೀರು ಅಗ್ನಿಶಾಮಕ, ಕೆಲವೊಂದು ಸಲ ಬೆಂಕಿಯ ಸಂವರ್ಧಕ-ವಡವಾಗ್ನಿಯ ವಿಷಯದಲ್ಲಿರುವಂತೆ.

ನೀರು ಸಮತಾವಾದಿ. ಎಷ್ಟೇ ನೀರನ್ನು ಹೊರದೆಗೆದರೂ ತನ್ನ ಪಾತಳಿಯನ್ನು ಸರಿಸಮವಾಗಿ ಇರಿಸಿಕೊಳ್ಳುವಲ್ಲಿ ಅದರದು ಅವಿರತ ಹವ್ಯಾಸ. ತನ್ನ ಸಮುದಾಯದ ಸ್ವಾಸ್ಥ್ಯವನ್ನು, ಸಾಮರಸ್ಯವನ್ನು ಕಾಪಾಡಿಕೊಳ್ಳುವದು ಅದರ ನಿರಂತರ ಅಭ್ಯಾಸ. ನೀರು ಸಾಂಘಿಕ ಜೀವನದ ಮಹದಾದರ್ಶವನ್ನು ಎತ್ತಿತೋರಿಸುತ್ತದೆ. ಮೇಲ್ಮಟ್ಟದಿಂದ ಕೆಳಮಟ್ಟದತ್ತ ಹರಿಯುವುದು ಅದರ ಹುಟ್ಟುಗುಣ. ನೀರಿನ ಈ ಹಿರಿಯ ಗುಣವು ನೀರಿನ ನೆರವಿನಿಂದಲೆ ಬದುಕುವ ಮಾನವನಿಗೆ ಮಾರ್ಗದರ್ಶಕವಾಗಿದೆ. ಸಮಾಜದಲ್ಲಿ, ರಾಷ್ಟ್ರದಲ್ಲಿ, ವಿಶ್ವದಲ್ಲಿ, ಸುಜ್ಞಾನ, ಸಂಪತ್ತು ಸಾಮರ್ಥ್ಯದ ದೃಷ್ಟಿಯಿಂದ ಮೇಲ್ಮಟ್ಟದಲ್ಲಿದ್ದು, ಸುದೈವಿಗಳೆನಿಸಿಕೊಂಡವರು, ಕೆಳಮಟ್ಟದಲ್ಲಿರುವ ದುರ್ದೈವಿಗಳತ್ತ ಧಾವಿಸಿ, ಅವರಲ್ಲಿರುವ ಕೊಳ್ಳದಾಳದಂತಿರುವ ಕೊರತೆಯನ್ನು ತುಂಬಲು ಮನವಾರೆ ಶ್ರಮಿಸುವುದಾದರೆ ಅದುವೆ ಮಹಾ ಸುದಿನ! ಅದುವೆ ಪ್ರಾಚೀನ ಭಾರತೀಯ ಸಂಸ್ಕೃತಿಯು ಕಂಡುಕೊಂಡ ''ವಸುಧೈವ ಕುಟುಂಬಕಮ್'' ಎಂಬ ಕನಸನ್ನು ನನಸಾಗಿಸುವ ದಿನ!

• ಪ್ರೊ. ಶ್ರೀನಿವಾಸ ತೋಫಖಾನೆ

ಪುನರ್ಜನ್ಮದ ಸತ್ಯಕಥೆ

ಇದು ಕೇವಲ ಕಲ್ಪನೆಯಲ್ಲ. ನಾನು ಸ್ವತಃ ಅನುಭವಿಸಿ ಕಂಡುಕೊಂಡ ಸತ್ಯಘಟನೆ:

ವಿಚಿತ್ರವೆನಿಸುತ್ತದಲ್ಲವೆ?

ಹೌದು. ನನ್ನ ಬದುಕಿನಲ್ಲಿ ಇಂಥ ಹಲವಾರು ಚಿತ್ರ-ವಿಚಿತ್ರ ಘಟನೆಗಳು ಘಟಿಸಿವೆ. ಹೇಳಿದರೆ ಯಾರೂ ನಂಬದಂಥ ಘಟನೆಗಳು ಅವೆಲ್ಲ.

ನಾನಿಲ್ಲಿ ಹೇಳಹೊರಟಿರುವ ಘಟನೆ ಡೊರೊಥಿ ಎಂಬ ಯುವತಿಯ ಬದುಕಿಗೆ ಸಂಬಂಧಿಸಿದ್ದು. ಹದಿನೆಂಟನೆಯ ವಯಸ್ಸಿಗಾಗಲೇ ಆಕೆಯ ವಿವಾಹ ಜನರಲ್ ಹೆನ್ರಿ ವೆದರ್ಬಿಯೊಂದಿಗಾಯಿತು. ಆದರೆ ಅದೊಂದು ಇಜ್ಜೋಡು. ಗಂಡ ಸರಿಯಾಗಿ ಇಪ್ಪತ್ತು ವರ್ಷ ದೊಡ್ಡವ. ತೀರ



ತಡವಾಗಿ ಅಂದರೆ. ತನ್ನ ಮೂವತ್ತೆಂಟನೆಯ ವಯಸ್ಸಿಗೆ ಆತ ಲಗ್ನವಾದ. ಸರ್ ಹೆನ್ರಿ ವೆದರ್ಬಿ ಮದುವೆಯಾದ ಹೊಸತರಲ್ಲೇ ಭಾರತಕ್ಕೆ ವರ್ಗಾಯಿಸಲ್ಪಟ್ಟ. ದಕ್ಷಿಣ ಭಾರತದ ಪ್ರದೇಶವೊಂದರ ಗವರ್ನರ್ ಹುದ್ದೆ ವಹಿಸಿಕೊಂಡ. ಗಂಡನೊಂದಿಗೆ ಡೊರೊಥಿಯೂ ಮಂತ್ರ-ತಂತ್ರಗಳ ಈ ನಾಡಿಗೆ ಬರಬೇಕಾಯಿತು.

ಭಾರತದ ಬಗ್ಗೆ ಡೊರೊಥಿಗೆ ಗೊತ್ತಿದ್ದದ್ದು ಕೇವಲ ಒಂದು ಸಂಗತಿ ಮಾತ್ರ. ತಾನು ಹುಟ್ಟಿದ್ದೇ ಅಲ್ಲಿ ಎಂಬುದಾಗಿ ಅಪ್ಪ-ಅಮ್ಮನಿಂದ ಕೇಳಿ ತಿಳಿದದ್ದು ಬಿಟ್ಟರೆ ಈ ದೇಶದ ಕುರಿತ ಇನ್ನಾವ ಮಾಹಿತಿಯೂ ಆಕೆಗಿರಲಿಲ್ಲ.

ಬ್ರಿಟಿಶ್ ಅಧಿಕಾರಿಗಳು ಭಾರತಕ್ಕೆ ವರ್ಗಾಯಿಸಲ್ಪಟ್ಟಾಗಲೆಲ್ಲ ಅವರು ಆಡಳಿತದ ಬಗ್ಗೆಯೇ ಇಪ್ಪತ್ತನಾಲ್ಕು ತಾಸು ತಲೆ ಕೆಡಿಸಿಕೊಂಡಿರುತ್ತಿದ್ದರೆ ಅವರ ಹೆಂಡಂದಿರು ಸಮಾಜಸೇವೆಗೆ ತೊಡಗಿರುತ್ತಿದ್ದುದು ವಾಡಿಕೆ.

ಅಪ್ಪ-ಅಮ್ಮಂದಿರ ಏಕಮಾತ್ರ ಮುದ್ದಿನ



ಸರ್ಪ ಸಂಗಿನಿ

ಕೀರೋ ಜೀವನ ಪ್ರಸಂಗ

ಅನುವಾದ:

ಗೋಪಾಲ ವಾಜಪೇಯಿ

ಆಕೆ ಇನ್ನುಳಿದ ಸ್ತ್ರೀಯರಂತಿರಲಿಲ್ಲ. ದೇಹದಿಂದ ಮಾತ್ರ ಹೆಣ್ಣಾಗಿದ್ದ ಆಕೆಯ ಆತ್ಮವು ಬೇರಾವುದೋ ಜೀವಿಯದು! ಶಂಖಚೂಡ ಸರ್ಪ ಆಕೆಯ ಜನ್ಮಜನ್ಮಾಂತರದ ಸಂಗಾತಿಯಾದುದರ ರಹಸ್ಯವೇನೆಂದು ಆ ಸಾಧು ಬಲ್ಲವನಾಗಿದ್ದ.

ಮಗಳು ಡೊರೊಥಿ. ಬೆಳೆದದ್ದು ತುಂಬ ಕಟ್ಟುನಿಟ್ಟಿನಲ್ಲಿಯೆ. ಮನೆಯಲ್ಲಿಯದು ತುಂಬ ಸಾಂಪ್ರದಾಯಿಕವಾದ ವಾತಾವರಣ. ಭೂತ-ಪ್ರೇತ, ಪುನರ್ಜನ್ಮಗಳ ಕುರಿತು ಮಾತಾಡುವ ಹಾಗೇ ಇರಲಿಲ್ಲವೆಂದ ಮೇಲೆ ಇನ್ನು ಅಂಥ ಪುಸ್ತಕಗಳನ್ನಾದರೂ ಓದುವುದೆಲ್ಲಿ ಬಂತು? ಮನೆ, ಮನೆಯ ಜನ, ಸಂಬಂಧಿಕರು ಇಷ್ಟು ಬಿಟ್ಟರೆ ಡೊರೊಥಿಗೆ ಬಾಹ್ಯ ಜಗತ್ತಿನ ಸಂಪರ್ಕವೇ ಬಂದಿರಲಿಲ್ಲ. ಹದಿನಾಲ್ಕು ವರ್ಷಗಳು ತುಂಬಿದಾಗ ಡೊರೊಥಿಗೆ ಮಾತೃವಿಯೋಗದ ಆಘಾತವಾಯಿತು. ಅಪ್ಪ ಇದಾವುದನ್ನು ಗಮನಕ್ಕೆ ತಂದುಕೊಳ್ಳದೆ ಮರುಮದುವೆ ಮಾಡಿಕೊಂಡುಬಿಟ್ಟ. ಮಗಳನ್ನಾತ ತನ್ನ ಸೋದರಿಯ ಮನೆಗೆ-ಲಂಡನ್ನಿಗೆ- ಕಳಿಸಿಕೊಟ್ಟ. ಡೊರೊಥಿಯ ಸೋದರತ್ತೆ ಅವಿವಾಹಿತೆ. ಧರ್ಮಪರಾಯಣೆ. ಡೊರೊಥಿ ಬಂದ ಲಾಗಾಯ್ತು ಆಕೆಯ ಮನೆಯ ಕಿಟಕಿಗಳು ಮುಚ್ಚಿಕೊಂಡೇ ಇದ್ದುವು. "ಸೋದರಸೊಸೆಗೆ ಅಂಥಿಂಥ ಅನಿಷ್ಟ ದೃಷ್ಟಿ ತಾಕಬಾರದು" ಎಂಬ ಕಾಳಜಿ ಆ ಮಧ್ಯವಯಸ್ಕಳದು.

ಅಂಥಿಂಥ, ಅನಿಷ್ಟ ದೃಷ್ಟಿಗಳ ಭಯವಾದರೂ ಆಕೆಗೆ ಯಾಕಿತ್ತು?

ತಾನೂ ಆ ಅವಸ್ಥೆ ದಾಟಿಯೇ ಬಂದವಳಲ್ಲವೆ? ಆಗಿನ ಅನುಭವ ಆಕೆಗೆ ಅಂಥ ಪಾಠ ಕಲಿಸಿತ್ತು.

ಡೊರೊಥಿಯ ವಯಸ್ಸೇ ಅಂಥದಲ್ಲವೇ? ಅರೆಬಿರಿದ ಮೊಗ್ಗಿನಂಥದು. ಶಾರೀರಿಕವಾಗಿ ವಿಕಾಸಹೊಂದುತ್ತ' ಜಗತ್ತನ್ನು ಹೊಸದೃಷ್ಟಿಯಿಂದ ನೋಡುತ್ತ ಬೆಳೆಯತೊಡಗಿದ ಹುಡುಗಿ. ಶಾರೀರಿಕ ವಿಕಾಸದೊಂದಿಗೆ ಆಕೆಯ ಮನೋಜಗತ್ತಿನಲ್ಲೂ ಪರಿವರ್ತನೆಗಳಾಗತೊಡಗಿದವು.

ಹೀಗೊಂದು ದಿನ ಇಗರ್ಜಿಗೆ ಹೋಗಿ ಬರುತ್ತಿರುವಾಗ ಎದುರಿಗೆ ಕಂಡ ಜನರಲ್ ಸರ್ ಹೆನ್ರಿ ವೆದರ್ಬಿ. ಕಟ್ಟುಮಸ್ತಾದ ಆ ದೇಹಯಷ್ಟಿಯ, ಎತ್ತರ ನಿಲುವಿನ, ಆಕರ್ಷಕ ಮುಖದ, ಮಿಂಚುಗಣ್ಣಿನ ಮೂರ್ತಿ ಈ ಹದಿಹರೆಯದ ಹುಡುಗಿಯ ಹೃದಯಮಂದಿರದಲ್ಲಿ ಪ್ರತಿಷ್ಠೆಗೊಂಡೇಬಿಟ್ಟಿತು.

ಸರ್ ವೆದರ್ಬಿಗೂ ಅಷ್ಟೆ. ಈ ಮೋಹಕ ಚೆಲುವಿನ ಗೊಂಬೆ ಕಣ್ಣಲ್ಲಿ ಕೂತುಕೊಂಡಿತು.

ಪರಸ್ಪರರಿಗೆ ಆಗ ವಯಸ್ಸು ನೆನಪಿಗೇ ಬರಲಿಲ್ಲ.

ಇಗರ್ಜಿಯೊಂದು ನೆಪವಾಯಿತು. ಪ್ರತಿ ರವಿವಾರ ಸಂಧಿಸತೊಡಗಿದರು.

ಮುಂದೆ ವಾರಕಾಲ ವಿರಹವೇದನೆ.

ಆದರಿಂದ ಪಾರಾಗಲು ಪತ್ರವ್ಯವಹಾರಕ್ಕೆ ಶುರುವಾಯಿತು.

"ಪ್ರಿಯ ಡೊ.... " ಎಂದು ಆತ,

"ಪ್ರೀತಿಯ ಹೆ...." ಎಂದು ಆಕೆ.

ಆದರೆ ಬರೆದ ಪತ್ರಗಳು ಅಂಚೆಗೆ ಹಾಕಲ್ಪಡುತ್ತಿರಲಿಲ್ಲ. ಸಿಕ್ಕಿಬೀಳುವ ಭಯ.

ಇಗರ್ಜಿಯ ದಾರಿಯಲ್ಲಿ ಸಿಕ್ಕಾಗ ಒಂದರ್ಧ ಗಂಟೆ ಮೌನ ಸಂಭಾಷಣೆ. ಆಮೇಲೆ ಇಂಥಿಂಥ ದಿನ ಓದಬೇಕೆಂದು ನಮೂದಿಸಿದ ಪತ್ರಗಳ ಕಟ್ಟಿನ ವಿನಿಮಯ.

ಆಕೆ ಇಗರ್ಜಿಗೆ ಹೋಗುವಾಗ ಮತ್ತು ಮರಳುವಾಗ ಜತೆಗೆ ಪಕ್ಕದ ಮನೆಯ ಹುಡುಗಿ ಇರುತ್ತಿದ್ದುದರಿಂದ ಸೋದರತ್ತೆಗೆ ಸಂಶಯ-ಗುಮಾನಿಗಳು ಕಾಡುವ ಅವಕಾಶವೇ ಇರಲಿಲ್ಲ.

ಸರ್ ಹೆನ್ರಿಗೆ ಬಾಹ್ಯ ಸೌಂದರ್ಯ ಇಲ್ಲವೆ ಅಲಂಕಾರಗಳು ಇಷ್ಟವಾಗುತ್ತಿರಲಿಲ್ಲ. ಆತ ಆವರೆಗಿನ ಬದುಕಿನಲ್ಲಿ ಸಾಕಷ್ಟು ಜನ ಸ್ತ್ರೀಯರೊಂದಿಗೆ ದಿನಗಳೆದಿದ್ದ. ಸೌಂದರ್ಯ ಪ್ರಸಾಧಕಗಳನ್ನು ಮೆತ್ತಿಕೊಂಡ ಸುಂದರ ಮುಖಗಳ ಹಿಂದಿನ ಕರಾಳ ಮುಖಗಳನ್ನೂ ಕಂಡಿದ್ದ. ಸಾಕಷ್ಟು ಕಹಿಯನ್ನೂ ಉಂಡಿದ್ದ. ಡೊರೊಥಿಯನ್ನಾತ ಮೆಚ್ಚಿಕೊಂಡದ್ದು ಆಕೆಯ ವಯೋಸಹಜವಾದ ಸೌಂದರ್ಯ, ಸರಳ ಉಡಿಗೆ-ತೊಡಿಗೆ, ನೇರ ನಡವಳಿಕೆಗಳಿಂದಾಗಿ.

ಆದರೆ ಒಂದು ದಿನ ಇಗರ್ಜಿಗೆ ಡೊರೊಥಿಯೊಂದಿಗೆ ಸೋದರತ್ತೆಯೂ ಹೊರಟು ನಿಂತಳು. ಸಾಮಾನ್ಯವಾಗಿ ಆಕೆ ತನ್ನ ವಯಸ್ಸಿನ ಹೆಂಗಸರೊಂದಿಗೆ ಹೋಗಿ ಅವರೊಂದಿಗೆ ಪ್ರಾರ್ಥನೆ ಸಲ್ಲಿಸಿ ಡೊರೊಥಿಗಿಂತ ಬೇಗನೇ ಮನೆ ತಲುಪುತ್ತಿದ್ದಳು.



“ಈಗ ಗೊತ್ತಾಯ್ತು, ಮದುವೇಲಿ ಈ ಸ್ಟೂಲು ಯಾಕೆ ಕಾಣಿಕೆಯಾಗಿ ಬಂತು ಅಂತ...”

ಆ ದಿನ ಮಾತ್ರ ಜತೆಗೆ ಸೋದರತ್ತೆಯೂ ಹೊರಟಿದ್ದು ಡೊರೊಥಿಗೆ ಒಳಗೊಳಗೇ ಅಂಜಿಕೆ ಹುಟ್ಟಿಸಿತು. ದಾರಿಯಲ್ಲಿ ಹೆನ್ರಿ ಭೆಟ್ಟಿಯಾಗೇ ಬಿಟ್ಟ. “ಹಾಯ್ ಡೊ” ಎಂದವ ಜತೆಗಿದ್ದ ಈ ಹಿರಿಯಳನ್ನು ಕಂಡವನೇ ಹಿಂಜರಿದು ನಿಂತ.

ಸೋದರತ್ತೆ ಅವನನ್ನೊಮ್ಮೆ ವಿಚಿತ್ರವಾಗಿ ನೋಡಿದಳು. ಡೊರೊಥಿ “ಬೇಗ ಹೋಗೋಣ ನಡೆ ಅತ್ತೆ” ಎಂದು ಅವಸರಿಸಿದಳು.

ವೆದರ್ಬಿ ಪರಿಸ್ಥಿತಿಯ ವಾಸನೆ ಹಿಡಿದ. ತನ್ನ ಪ್ರೀತಿಯ ‘ಡೊ’ನ ಪ್ರಸಂಗಾವಧಾನವನ್ನು ಮೆಚ್ಚಿಕೊಂಡ. ಪತ್ರಗಳ ಜುಟ್ಟು ಸೇರಬೇಕಾದ ಕೈಗಳನ್ನು ಸೇರಲಿಲ್ಲವಲ್ಲ ಎಂಬುದಷ್ಟೇ ಆತನ ವ್ಯಸನವಾಯಿತು.

ಇತ್ತ ಸೋದರತ್ತೆ ನಾನಾ ರೀತಿಯ ಪ್ರಶ್ನೆ ಹಾಕಿ ಆತ ಯಾರು, ಏನು, ಎತ್ತ ಎಂದೆಲ್ಲ ಅರಿತುಕೊಳ್ಳುವ ಯತ್ನ ಮಾಡಿದಳು. ಡೊರೊಥಿ ಗೊತ್ತಿಲ್ಲವೆಂದೇ ಸಾಧಿಸಿದಳಾದರೂ ಕೊನೆಗೆ ಆಣೆ ಹಾಕಿದಾಗ ಸೋದರತ್ತೆಯೆದುರು ಸಂಗತಿಯನ್ನು ಹೇಳಲೇಬೇಕಾಯಿತು.

“ಇಷ್ಟೇಯೋ ಅಥವಾ ಇದಕ್ಕಿಂತ ಮುಂದು ವರಿದ್ದೀರೋ?”

“ನಿಜ ಹೇಳುತ್ತೇನೆ. ಈ ವರೆಗೆ ಒಮ್ಮೆಯೂ ನಾವು ಬೆರಳು ಕೂಡ ಸೋಕಿಸಿಲ್ಲ.” ಸೋದರತ್ತೆ ನಿಟ್ಟುಸಿರೊಂದನ್ನು ಬಿಟ್ಟಳು.

ಮರುವಾರ ಇಗರ್ಜಿಯ ಹಾದಿಯಲ್ಲಿ ಮತ್ತೆ ವೆದರ್ಬಿ ಕಂಡ. ಈ ಮೊದಲೇ ಆತ ನಿರ್ಧರಿಸಿಕೊಂಡೇ ಬಂದಂತಿತ್ತು.

“ಹಲೋ ಆಂಟಿ, ನಿಮ್ಮ ಜತೆ ಮಾತಾಡ್ಬೇಕು. ಯಾವಾಗ, ಎಲ್ಲಿ ಮಾತಾಡೋಣ?” ನೇರವಾಗಿ ಕೇಳಿಬಿಟ್ಟ.

ಆತನ ನೇರ ಸ್ವಭಾವದಿಂದ ಸೋದರತ್ತೆ ಪ್ರಭಾವಿತಳಾದಳು.

“ಅದಕ್ಕೇನಂತೆ? ಚರ್ಚ್‌ನಿಂದ ಮರಳಿದ ಮೇಲೆ ಮನೆಯಲ್ಲಿ ಕಾಯ್ತಿರ್ತೀನೆ. ಬಾರಪ್ಪಾ....” ಎಂದಳು.

ಮಧ್ಯಾಹ್ನದ ಹೊತ್ತು. ವೆದರ್ಬಿ ಬಂದಾಗ ಅಚ್ಚರಿಪಡುವಂತಾಯಿತು.

“ಕೂತುಕೋ ಹುಡುಗಾ. ನೀನೇನು ಕೇಳಬೇಕೆಂದುಕೊಂಡಿದ್ದೀ ಅಂತ ನನಗೊತ್ತು. ವಯಸ್ಸಿನ ಅಂತರ ಬಹಳ ಇದೆ. ಆದರೆ ಮನಸ್ಸು ಒಂದಾಗಿವೆಯಲ್ಲ, ಅದನ್ನ ಬೇರ್ಪಡಿಸೋದೂಂದ್ರೆ ಕೊಲೆ ಮಾಡಿದಷ್ಟೇ ಘೋರ ಪಾತಕ. ಈ ಹುಡುಗಿಯ ಮದುವೆ ಮಾಡಿ ಬಿಟ್ಟರೆ ನನ್ನ ಜವಾಬ್ದಾರಿ ಮುಗಿದ್ಹಾಗೆ. ನಿನ್ನ ಅನುಕೂಲದ ದಿನ ಹೇಳಿಬಿಡು. ಮದುವೆ ಆಗೇಬಿಡಲಿ.”

ಮಾತಾಡಬೇಕೆಂದು ಬಂದಾತ ಮೌನವಾಗಿ, ಸಂಭ್ರಮದಿಂದ ಮೂಕನಾಗಿ ಕುಳಿತುಕೊಳ್ಳಬೇಕಾಯಿತು. ಕೊನೆಗೆ ತನ್ನ ಅನುಕೂಲದ ದಿನವನ್ನು ಹೇಳಿದ.

ಡೊರೊಥಿ-ಹೆನ್ರಿ ಸತಿಪತಿಯರಾದರು.

☆

ಮೇ ತಿಂಗಳಿನ ಒಂದು ದಿನ. ಮಧ್ಯಾಹ್ನ ಮೀರಿ ಸಂಜೆ ಸಮೀಪಿಸುವ ಮುನ್ನ ನನ್ನ ಸೆಕ್ರೆಟರಿ

"ಯಾರೋ ಹೆಂಗಸು ತನ್ನ ಹೆಸರು-ವಿಳಾಸ ಹೇಳದೇ, ನಿಮ್ಮನ್ನು ಜರೂರಾಗಿ ಕಾಣಬೇಕಿದೆ ಎಂದು ಹೊರಗೆ ಕಾದು ಕುಳಿತಿದ್ದಾಳೆ," ಎಂದಳು.

ನನ್ನ ಜ್ಯೋತಿಷಶಕ್ತಿಯನ್ನು ಅರಿಯಲೆಂದು ಕೆಲವರು ಹೀಗೆ ಮಾಡುತ್ತಿದ್ದುದು ಸಾಮಾನ್ಯವಾಗಿತ್ತು. "ಡ್ರಾಯಿಂಗ್ ರೂಮಿಗೆ ಕಳಿಸು," ಎಂದು ನಾನೂ ಎದ್ದು ಸಿದ್ಧಳಾಗಿ ಅಲ್ಲಿಗೆ ಬಂದೆ.

ಅಲ್ಲಿ ಕೂತಿದ್ದ ಆಕೆಯನ್ನು ಕಂಡಾಕ್ಷಣವೇ ಆಕೆಯ ಆಕೃತಿ, ರೂಪ-ರಂಗು, ಶರೀರದ ನಿಲುವುಗಳು ನನ್ನನ್ನು ಪ್ರಭಾವಿತಗೊಳಿಸಿದುವು. ಅನಂತರ ತನ್ನ ಕೊನೆಯುಸಿರಿನ ತನಕವೂ ಆಕೆ ನನ್ನೊಂದಿಗೆ ಸಂಪರ್ಕವಿಟ್ಟುಕೊಂಡಿದ್ದಳು.

"ನೀವೇನೂ ಅನ್ಯಥಾ ಭಾವಿಸದಿದ್ರೆ ಒಂದಷ್ಟು ವಿಷಯ ಹೇಳಲಾ?" ನಾನೇ ಮಾತಿಗೆ ಮೊದಲು ಮಾಡಿದೆ.

"ಅನ್ಯಥಾ ಭಾವಿಸೋದೇನು ಬಂತು? ನಾನು ನಿಮ್ಮೊಂದಿಗೆ ಮಾತಾಡಬೇಕೆಂದೇ ಇಲ್ಲಿಯವರೆಗೂ ಬಂದದ್ದು," ಎಂದು ನನ್ನತ್ತ ತಿರುಗಿದಳು.

ಆಕೆ ಕುಳಿತ ಭಂಗಿ ನನಗೆ ಆಕೆಯ ಹಸ್ತರೇಖೆಗಳನ್ನು ಸ್ಪಷ್ಟವಾಗಿ ತೋರಿಸುವಂತಿತ್ತು. ಅವನ್ನೇ ಗಮನಿಸಿ ಹೇಳಿದೆ:

"ನಿಮ್ಮ ವೈವಾಹಿಕ ಜೀವನ ಅಷ್ಟು ಸುಖಿಯಾಗಿಲ್ಲ. ಸದ್ಯದಲ್ಲೇ ನಿಮ್ಮ ವಿವಾಹ ವಿಚ್ಛೇದನವಾಗಲಿದೆ."

"ಛೆ, ಸಾಧ್ಯವೇ ಇಲ್ಲ," ಎಂದಾಕೆ ನಕ್ಕಳು. ಅಂಥ ಆತ್ಮವಿಶ್ವಾಸವಿತ್ತು ಆಕೆಯ ಮಾತಿನಲ್ಲಿ.

"ಯಾಕೆ?" ನಾನು ಮತ್ತೆ ಪ್ರಶ್ನಿಸಿದೆ.

"ಯಾಕೆಂದರೆ ನಾನು ಇನ್ನಿತರ ಸ್ತ್ರೀಯರಿಗಿಂತ ಭಿನ್ನವಾದವಳು. ನನ್ನ ಪತಿ ಅದಾವ ಆಧಾರದ ಮೇಲೆ ವಿಚ್ಛೇದನಕ್ಕೆ ಮುಂದಾದಾದರು? ನನ್ನ ಮನಸ್ಸಿನಲ್ಲಿ ಪುರುಷರ ಬಗ್ಗೆ ಆಕರ್ಷಣೆಯೂ ಇಲ್ಲ, ಇಲ್ಲಿಯ ತನಕ ಯಾವ ಪುರುಷನೂ ನನ್ನನ್ನು ಪ್ರೀತಿಸಿಯೂ ಇಲ್ಲ."

"ಅರೆ! ನಿಮ್ಮ ಗಂಡನೂ....."

ಆಕೆ ಹೌದೆಂಬಂತೆ ತಲೆದೂಗಿದಳು. ನನಗೆ ಅಚ್ಚರಿಯಾಯಿತು. ಕೇಳಿಯೆಬಿಟ್ಟೆ.

"ನೀವು ಹೇಳೋದಾದ್ರೂ ಏನು?"

"ಅದೇ ಹೇಳಿದೆನಲ್ಲ, ಗಂಡ ತನ್ನ ಹೆಂಡತಿಯಿಂದ ಬಿಡುಗಡೆ ಪಡೆಯಬೇಕಾದರೆ ಅದಕ್ಕೊಂದು ಬಲವಾದ ಕಾರಣವಿರಬೇಕು. ಅದನ್ನಾತ ಕೋರ್ಟಿನಲ್ಲಿ ಸಿದ್ಧಪಡಿಸಬೇಕು. ನನ್ನ ಗಂಡನ ಬಳಿ ಅಂಥ ಯಾವ ಆಧಾರವೂ ಇಲ್ಲ."

"ಆಯಿತು. ನನ್ನ ಮಾತಿನ ಸತ್ಯಾಸತ್ಯತೆಯ ನಿರ್ಧಾರವನ್ನು ಭವಿಷ್ಯಕ್ಕೆ ಬಿಟ್ಟುಕೊಡಿ."

"ಮಿಸ್ಟರ್ ಕೀರೊ.... ನಿಮಗೆ ಪುನರ್ಜನ್ಮದಲ್ಲಿ ನಂಬಿಕೆ ಇದೆಯಾ?" ಆಕೆ ಒಂದು ಕ್ಷಣ ಬಿಟ್ಟು ಕೇಳಿದಳು.

"ಈ ಪ್ರಶ್ನೆಯನ್ನು ನೀವು ನನಗ್ಯಾಕೆ ಹಾಕುತ್ತಿದ್ದೀರಿ?"

"ಯಾಕೆಂದರೆ ನಾನು ಕೆಲವು ವರ್ಷ ಭಾರತದಲ್ಲಿದ್ದು ಬಂದಿದ್ದೇನೆ. ಅಲ್ಲಿ ಪುನರ್ಜನ್ಮ ಕುರಿತಂತೆ ತಿಳಿದು ಬಂದ ಮಾಹಿತಿಯಿಂದ ನಾನು ನಿದ್ದೆಗೇಡಾಗಿ ಕೂತಿದ್ದೇನೆ."

ಆಕೆಗೆ ತಿಳಿದು ಬಂದ ಮಾಹಿತಿಯಾದರೂ ಏನೆಂದು ಅರಿಯುವ ಮನಸ್ಸಾಯಿತು.

ಹಾಗೆಂದು ಕೇಳಿದ್ದಕ್ಕೆ ಉತ್ತರ ನೀಡದೇ ಆಕೆ, "ಮೊದಲು ಪುನರ್ಜನ್ಮದ ವಿಷಯದಲ್ಲಿ ನಿಮ್ಮ ಧೋರಣೆ ಏನೆಂದು ಹೇಳಿ. ಆ ಮೇಲೆ ನಾನು ಪಡೆದ ಮಾಹಿತಿಗಳ ವಿವರ ತಿಳಿಸುತ್ತೇನೆ," ಎಂದಳು. ಒಂದು ರೀತಿಯ ಹಠಮಾರಿತನ ಆ ಉತ್ತರದಲ್ಲಿ ಎದ್ದು ಕಾಣುತ್ತಿತ್ತು.

ನಾನು ಆಕೆಯನ್ನೇ ಗಮನವಿಟ್ಟು ನೋಡಿದೆ. ಈ ತನಕವೂ ಆಕೆಯ ಹಸ್ತರೇಖೆಗಳಲ್ಲೇ ಸುಳಿದಾಡುತ್ತಿದ್ದ ನನ್ನ ದೃಷ್ಟಿಯಿಗ ಆಕೆಯ ಕಣ್ಣುಗಳನ್ನು ಸಂಧಿಸಿತು.

ಎಂಥಾ ಕಣ್ಣುಗಳವು!

ಲೈಂಗಿಕ ಸುಖದ ವಿಷಯವಾಗಿ ಇತರ ಸ್ತ್ರೀಯರಿಗಿಂತ ಆಕೆಗಿದ್ದ ರುಚಿಯೇ ಬೇರೆ ತೆರನಾಗಿದ್ದದ್ದು ಆ ಕಣ್ಣುಗಳಿಂದ ಸ್ಪಷ್ಟವಾಗುತ್ತಿತ್ತು.

ನನಗೋ ಒಂದು ರೀತಿ ಇಬ್ಬಂದಿ. ಈ ವಿಷಯವನ್ನು ಆಕೆಗೆ ನೇರವಾಗಿ ಕೇಳುವುದು ಹೇಗೆ? ಅದೇನಿದ್ದರೂ ಆನುಷಂಗಿಕವಾಗಿ ಆಕೆ

ಯಿಂದಲೇ ತಿಳಿದು ಬರುವಂತೆ ಮಾಡುವುದೇ ಉಚಿತವೆಂದುಕೊಂಡು, ಆಕೆ ಕೇಳಿದ ಪ್ರಶ್ನೆಗೆ ಉತ್ತರವೀಯುವ ಮೂಲಕ ಮಾತು ಬದಲಿಸಿದೆ.

"ಹೌದು, ಪುನರ್ಜನ್ಮದಲ್ಲಿ ನನಗೆ ನಂಬಿಕೆಯಿದೆ. ಹಾಗೂ ನಾನು....."

ಆಕೆ ಥಟ್ಟನೇ ಬಾಯಿ ಹಾಕಿದಳು.

" 'ನೀನು ಪೂರ್ವಜನ್ಮದಲ್ಲಿ ಈಜಿಪ್ತದ ರಾಣಿ'ಯಾಗಿದ್ದೆ ಅಥವಾ ಯಾವುದೋ ಮಂದಿರದ ದೇವದಾಸಿಯಾಗಿದ್ದೆ' ಎಂದು ಹೇಳುವುದಿಲ್ಲವಷ್ಟೆ? ಅಥವಾ ಯಾವಳೋ ಕುರೂಪಿಯನ್ನು ನೋಡಿ 'ನೀನು ಪೂರ್ವಜನ್ಮದ ಸುರಸುಂದರಿ ಕ್ಲಿಯೋಪಾತ್ರಾ' ಎಂದೆನ್ನುವುದಿಲ್ಲವಷ್ಟೇ?"

"ಖಂಡಿತ ಇಲ್ಲ. ನಾನು ನನ್ನ ನಂಬಿಕೆಯ ಕುರಿತು ಹೇಳುತ್ತಿದ್ದೆ. ಸಮಾಜದಲ್ಲಿ ಕೆಳಸ್ತರದ ಜನ ಉಚ್ಚಸ್ತರಕ್ಕೇರಬಯಸುವುದು ತೀರ ಸ್ವಾಭಾವಿಕ. ಇದೇ ಮಾತನ್ನು ಸಮಸ್ತ ಜೀವ-ಜಗತ್ತಿಗೂ ಅನ್ವಯಿಸಬಹುದು."

"ಊಹುಂ, ಸ್ಪಷ್ಟವಾಗಲಿಲ್ಲ," ಎಂದ ಆಕೆಯ ಕಣ್ಣುಗಳಲ್ಲಿ ಉತ್ಸುಕತೆ ತುಳುಕಿತು.

"ಜೀವ-ಜಗತ್ತಿನಲ್ಲಿ ಮನುಷ್ಯ ಸರ್ವಶ್ರೇಷ್ಠ ಎನಿಸಿಕೊಂಡಿದ್ದಾನಲ್ಲವೆ? ಹೀಗಾಗಿ ಇನ್ನಿತರ ನೀಚಸ್ತರದ ಜೀವಿಗಳು ಪುನರ್ಜನ್ಮದಲ್ಲಿ ತಾವು ಮನುಷ್ಯರಾಗಿ ಹುಟ್ಟಬೇಕು ಅಂದುಕೊಳ್ಳುತ್ತಲೂ ಇರಬಹುದಲ್ಲವೆ? ಈ ಆಕಾಂಕ್ಷೆಯ ಮೂರ್ತರೂಪವೇ ಪುನರ್ಜನ್ಮದ ಕಲ್ಪನೆಯಾಗಿರಬೇಕು..."

ನನ್ನ ಮಾತು ಕೇಳಿ ಆಕೆ ಏನೋ ಯೋಚನೆಗೀಡಾದಂತೆ ಕಂಡಿತು. ನಾನು ಆಕೆಯನ್ನು ವಿಚಲಗೊಳಿಸಲಿಲ್ಲ.

"ಒಂದು ವೇಳೆ ಈ ತತ್ವವನ್ನು ಎಲ್ಲ ಜೀವಿಗಳಿಗೂ ಅನ್ವಯಿಸುವುದಾದರೆ ನನಗೆ ಎಷ್ಟು ಜನ್ಮಗಳ ನಂತರ ಈ ಮನುಷ್ಯಜನ್ಮ ಪ್ರಾಪ್ತವಾಯಿತೆಂಬುದನ್ನು ಹೇಳಬಲ್ಲಿರಾ? ಪೂರ್ವಜನ್ಮದಲ್ಲಿ ನಾನು ಏನಾಗಿದ್ದೆ ಎಂದಾದರೂ ತಿಳಿಸಬಲ್ಲಿರಾ?" ಆಕೆ ತುಂಬಾ ಆತುರಾತುರವಾಗಿ ಪ್ರಶ್ನಿಸಿದಳು.

"ಅದನ್ನು ತಿಳಿದುಕೊಂಡಾದರೂ ಏನು ಮಾಡುತ್ತೀಯಮ್ಮಾ?" ನಾನು ಕೆಣಕಿದೆ.

"ತಿಳಕೋಬೇಕು, ಅಷ್ಟೆ. ಆದಕ್ಕೇಂತ್ಲೆ ಕೇಳಿದ್ದು ಹೇಳಿರಲ್ಲ" ಆಕೆ ಆಗ್ರಹಪಟ್ಟಳು.

ನಾನೀಗ ಬಹುವಚನ ಬಿಟ್ಟು ಏಕವಚನದಲ್ಲೇ ಸಂಭೋಧಿಸತೊಡಗಿದೆ.

"ತಿಳಿದುಕೊಂಡೆಯಾದರೆ ನೀನು ಘೋರ ಮಾನಸಿಕ ರೋಗದಿಂದ ನರಳಬೇಕಾಗುತ್ತದೆ."

"ಈಗೇನು ಕಡಿಮೆ ನರಳುತ್ತಿದ್ದೇನೆಯೆ?"

ನನಗೀಗ ಮತ್ತೆ ಉಭಯಸಂಕಟ. ಈ ಹೆಣ್ಣುಮಗಳೊಂದಿಗೆ ಮಾತಾಡುವಾಗ ಅದ್ಯಾಕೋ ನಾನು ಸಹಜವಾಗಿ ಮಾತಾಡುವುದನ್ನು ಮರೆತೇಬಿಡುತ್ತಿದ್ದೆ. ಮನಸ್ಸಿನೊಳಗೆ ಅನೇಕ ವಿಚಾರಗಳೆದ್ದು ಗೊಂದಲವುಂಟುಮಾಡಿದಂತೆ ಒದ್ದಾಡತೊಡಗಿದೆ. ಅನಿಸಿದ್ದನ್ನು ಹೇಳಿಬಿಡಬೇಕೆಂದರೆ ನಾಲಿಗೆ ಸಹಕರಿಸದಂಥ ಸ್ಥಿತಿ ನನ್ನದಾಗಿತ್ತು. ಆದರೆ ಅವುಗಳನ್ನು ಎದೆಯೊಳಗೇ ಹುದುಗಿಸಿಕೊಂಡಿರಲೂ ಆಗದು. ಒಬ್ಬ ಅಪರಿಚಿತ ಮಹಿಳೆಯೊಂದಿಗೆ ಇಂಥವೆಲ್ಲ ಮಾತು ಆಡಲು ನನಗಾವ ಅಧಿಕಾರವೂ ಇರಲಿಲ್ಲ. ಆದರೆ ಆಡದೇ ಹೋಗುವುದು ಕಪಟತನವಾದೀತು. ಅದು ನನಗೆ ಹಿಡಿಸದ ವಿಷಯ. ಕೊನೆಗೊಮ್ಮೆ ಹೇಳಿಯೇಬಿಟ್ಟೆ.

"ನೀನು ಹೇಳಿದ್ದು ನಿಜವಮ್ಮಾ. ಇತರ ಹೆಂಗಸರಂತಲ್ಲ ನೀನು. ಹೌದು, ನೀನು ಮನುಷ್ಯರಂತೆ ಇದ್ದರಲ್ಲವೆ ಇತರ ಹೆಂಗಸರಂತಿರುವುದು? ಹೀಗಾಗಿಯೇ ನೀನು ಯಾವನೇ ಪುರುಷನನ್ನು, ಯಾವನೇ ಪುರುಷ ನಿನ್ನನ್ನು ಪ್ರೀತಿಸುವುದು ಸಾಧ್ಯವಾಗಲಿಲ್ಲ."

"ನೀವು ಹೇಳುವುದು ಸತ್ಯ."

"ನೀನು ಅಪರೂಪದ ರೂಪವತಿ."

"ಜನ ಹಾಗೆ ಹೇಳುವುದು ಕಿವಿಗೆ ಬಿದ್ದಿದೆ," ಆಕೆ ತುಟಿಯಿಂದೀಚೆ ಜಾರಿಬಾರದ ನಗೆ ನಕ್ಕಳು.

"ಪುರುಷರು ಇಂಥ ಅಪರೂಪದ ರೂಪರಾಶಿಯತ್ತ ಸಹಜವಾಗೇ ಆಕರ್ಷಿತರಾಗುತ್ತಾರೆ. ಆದರೆ ನಿನ್ನಲ್ಲಿ ಅದಕ್ಕೆ ಪ್ರತಿದಾನ ನೀಡುವ ಯೋಗ್ಯತೆ ಇಲ್ಲ. ದೈಹಿಕ ಸಂಪರ್ಕದಲ್ಲಿ ನೀನು ನಿರಾಸಕ್ತೆ. ಆ ಬಗ್ಗೆ ಅದೇನೋ ಉದಾಸೀನ ನಿನಗೆ. ನಾನು ಹೇಳುವುದೇನೆಂದರೆ..." ನಾನು ನಾಲಿಗೆ

ಕಚ್ಚಿಕೊಂಡೆ.

"ಹೂಂ, ಹೇಳಬೇಕಾದ್ದನ್ನು ಹೇಳುತ್ತಲೇ ಹೋಗಿ. ನಾನು ಎಲ್ಲವನ್ನೂ ಲಕ್ಷ್ಯವಿಟ್ಟು ಆಲಿಸುತ್ತಿದ್ದೇನೆ. ಅರಿತುಕೊಳ್ಳುತ್ತಿದ್ದೇನೆ."

"ನಿನ್ನ ಗಂಡನೂ ಹೀಗೆ ಆಕರ್ಷಿತನಾಗಿಯೇ ಮದುವೆಗೆ ಒಪ್ಪಿದ್ದು. ಆದರೆ ಆ ನಂತರ ಆತ ಭ್ರಮನಿರಸನಗೊಂಡ. ಆತನ ಒಂದೂ ಕಾಮನೆಯನ್ನು ನೀನು ಪುರಸ್ಕರಿಸಲಿಲ್ಲ. ಅಂಥ ಕಾಮನೆಗಳ ಜ್ವರದಿಂದ ಆತ ಪೀಡಿತನಾದ. ಮಾನಸಿಕವಾಗಿ ಜರ್ಜರಿತನಾದ. ಇದರಿಂದ ಮುಕ್ತಿ ಪಡೆಯಲೋಸುಗವೇ ಆತ ವಿವಾಹ ವಿಚ್ಛೇದನದ ವಿಚಾರವನ್ನು ತಲೆಯಲ್ಲಿ ಹಾಕಿಕೊಂಡದ್ದು."

ಆಕೆ ಗೊಂಬೆಯಂತೆ ಕೂತು ನಾನು ಹೇಳುವುದನ್ನೆಲ್ಲ ಆಲಿಸುತ್ತಲೇ ಇದ್ದಳು.

"ನೀನು ಪೂರ್ವಜನ್ಮದ ಮಾತಾಡಿದೆಯಲ್ಲವೆ? ಕೇಳು ಹುಡುಗಿ, ನೀನು ಹಿಂದಿನ ಜನ್ಮದಲ್ಲಿ ಮನುಷ್ಯಳಾಗಿರಲಿಲ್ಲ."

"ನೀವು ಸರಿಯಾಗೇ ಹೇಳಿದಿರಿ. ಈಗ ಅದನ್ನೆಲ್ಲ ಸಾದ್ಯಂತವಾಗಿ ನಿವೇದಿಸುತ್ತೇನೆ ಕೇಳಿ. ಭಾರತದಲ್ಲಿ ಘಟಿಸಿದ್ದೆಲ್ಲವನ್ನೂ ಇದ್ದಕ್ಕಿದ್ದಂತೆಯೇ ಹೇಳಿ ಹಗುರಾಗುತ್ತೇನೆ."

ಲೇಡಿ ಡೊರೊಥಿ ವೆದರ್ಬಿ ಒಮ್ಮೆ ನನ್ನ ಡ್ರಾಯಿಂಗ್ ರೂಮಿನೆಲ್ಲೆಡೆ ದೃಷ್ಟಿ ಹರಿಸಿ ಶೋಕೇಸ್‌ನಲ್ಲೇ ಕಣ್ಣು ಕೀಲಿಸಿ ತನ್ನ ಪರಿಚಯ ಹೇಳಿಕೊಂಡಳು. ಆಮೇಲೆ ಅಲ್ಲೇ ಕಣ್ಣೂರಿಸಿ ತನ್ನ ಕಥೆಯನ್ನು ಹೇಳತೊಡಗಿದಳು.

☆

ಮಿ. ಕೀರೋ ಅವರೆ,

ನೀವು ನನ್ನ ಕುರಿತಂತೆ ಈಗ ಹೇಳಿದಿರಲ್ಲ, ಅದರಂತೆಯೇ ಭಾರತದಲ್ಲಿಯೂ ಹೇಳಿದ್ದರು. ನನ್ನ ಪತಿ ಜನರಲ್ ಸರ್ ಹೆನ್ರಿ ವೆದರ್ಬಿ ನಿಜಕ್ಕೂ ಸಜ್ಜನಿಕೆಯ ಸಾಕಾರ. ನಾನು ಅಂಥ ಸಜ್ಜನಿಕೆಯುಳ್ಳ ಬೇರೆ ವ್ಯಕ್ತಿಯನ್ನೇ ಈ ವರೆಗೆ ಕಂಡಿಲ್ಲ. ನನ್ನಿಂದಾಗಿ ಆತ ಮಾನಸಿಕವಾಗಿ ಜರ್ಜರಿತನಾಗಿದ್ದಾನೆಂದಿರಲ್ಲ ನೀವು. ಹೌದು, ಅದಕ್ಕೆ ನಾನೇ ಕಾರಣ. ಮದುವೆಗೆ



"'ಗ್ಯಾಸ್ ಟ್ರಬಲ್' ಅಂತ ಹೇಳಿದ. ಕೂಡಲೇ ಹಿಡಿದು ಆಪರೇಶನ್ ಮಾಡಿಬಿಟ್ರು. ಹುಡುಗ ಗ್ಯಾಸ್ ಅಂತ ಹೇಳೋದಿಕ್ಕೂ ಅವಕಾಶ ಕೊಡ್ಲಿಲ್ಲ..."

ಮುಂಚೆ ಒಂದು ಸುರಕ್ಷಿತ ಅಂತರವಿಟ್ಟುಕೊಂಡೇ ಅವನೊಂದಿಗೆ ವ್ಯವಹರಿಸುತ್ತಿದ್ದೆ. ಮದುವೆಯ ನಂತರ ಅವನ ಹೃದಯದಲ್ಲಿ ನಾನು ಜಾಗ ಪಡೆಯಲೇ ಇಲ್ಲ. ಮದುವೆಗೆ ಮುಂಚಿನ ನನ್ನ ಆಕಾಂಕ್ಷೆಗೆ ತಕ್ಕವ ಆತನಲ್ಲ ಎಂಬ ಭಾವನೆ ಮೊದಲ ರಾತ್ರಿಯೇ ಉಂಟಾಯಿತು. ಎರಡು, ಮೂರು, ನಾಲ್ಕು, ಐದು, ಹೀಗೇ ತಿಂಗಳುಗಳುರುಳಿದವು. ಆತ ನನಗೆ ಸಾಟಿಯಲ್ಲ ಎಂಬುದು ಅನುಭವಕ್ಕೆ ಬಂದು ಅತ್ತೆ. ಅಂದಿನಿಂದ ಯಾರಿಗೂ ಮುಖ ತೋರಿಸುವುದಾಗಲಿ, ಯಾರೊಂದಿಗಾದರೂ ಮಾತಾಡುವುದಾಗಲಿ ಅಂದರೆ ಹೇಸಿಕೆ ಬರತೊಡಗಿತು. ಯಾರಾದರೂ ಮಾತಾಡಿಸಿದರೆ ಸಿಟ್ಟು ಬರುತ್ತಿತ್ತು. ನನ್ನನ್ನು ಯಾರಿಗೂ ಪರಿಚಯಿಸಬೇಡಿ ಎಂದು ಕಟ್ಟುನಿಟ್ಟಾಗಿ ಹೆನ್ರಿಗೆ ಹೇಳಿಬಿಟ್ಟೆ. ಅದರಿಂದಾತ ಕೋಪಗೊಂಡ. ಅದೇ ಹೊತ್ತಿಗೆ ಆತನ ಬಗೆಗೇನೋ ಸಹಾನುಭೂತಿಯೂ ಮೂಡಿತು.

ದಿನಗಳೆದಂತೆ ನಾವಿಬ್ಬರೂ ಮಾತು ಬಿಟ್ಟೆವು. ದಿನದಿನವೂ ಆತ ಸಿಟ್ಟಿಗೆದ್ದು ಜಗಳ ಕಾಯತೊಡಗಿದ. ಹತ್ತಿರವಿದ್ದೂ ದೂರವಾದೆವು. ನನಗೆ ಒಂಟಿತನ ಅಭ್ಯಾಸವಾಗಿಬಿಟ್ಟಿತು. ಒಬ್ಬಂಟಿಯಾಗಿ ಉಣ್ಣುವುದು, ಒಬ್ಬಂಟಿಯಾಗಿ ಅಡ್ಡಾಡುವುದು,

ಒಬ್ಬಂಟಿಯಾಗಿ ಮಲಗುವುದು.... ಕಾಡುಗಳಲ್ಲಿ ಜೀವ-ಜಂತುಗಳ ನಡುವೆ ಸುತ್ತುವುದೆಂದರೆ ನನಗೆಲ್ಲಿಲ್ಲದ ಪ್ರೀತಿ. ಅದರಲ್ಲೂ ಸರ್ಪಗಳೆಂದರೆ ಮುಗಿಯಿತು. ಅಪ್ಪಿಕೊಂಡು ಮುದ್ದಾಡುವ ಮನಸ್ಸಾಗುತ್ತದೆ. ಮೈಮೇಲೆಲ್ಲ ಅವನ್ನು ಹರಿದಾಡಿಸಿ ರೋಮಾಂಚಗೊಳ್ಳುವ ಇಚ್ಛೆಯುಂಟಾಗುತ್ತದೆ.

ಒಂದೊಮ್ಮೆ ತಿರುಗಾಡಲು ಹೊರಟೆ. ಕಾಲುದಾರಿಯೊಂದು ಕಂಡಿತು. ಮುಂದುವರಿದೆ. ತುಸು ದೂರದ ಮೇಲೆ ಒಂದು ಜೀರ್ಣ-ಶೀರ್ಣ ಮಂದಿರ ಕಣ್ಣಿಗೆ ಬಿತ್ತು. ಭಾರತದಲ್ಲಿಂಥ ಮಂದಿರಗಳು ಅಲ್ಲಲ್ಲಿ ಕಾಣಸಿಗುತ್ತವೆ. ನಿರ್ಜನವಾದ ಜಾಗ ಅದು. ನಾನು ಒಳಗೆ ಪ್ರವೇಶಿಸಿದಾಗ ಎದುರಿಗೊಬ್ಬ ವೃದ್ಧಯೋಗಿ! ಭಾರತ ತುಂಬ ವಿಚಿತ್ರ ದೇಶ. ಆಗೀಗ ಕೆಲವರು ರಹಸ್ಯಮಯಿ, ತ್ರಿಕಾಲದರ್ಶಿ ಯೋಗಿಗಳು ಭೇಟಿಯಾಗುತ್ತಾರೆಂದು ಕೇಳಿ ತಿಳಿದಿದ್ದೆ. ನನ್ನನ್ನು ನೋಡಿದ ಯೋಗಿ ಸಮೀಪ ಬರುವಂತೆ ಸನ್ನೆ ಮಾಡಿದ. ತೀರ ಹಳೆಯ ಪರಿಚಯದ ಅಜ್ಜನೊಬ್ಬ ಕರೆದಂತೆನಿಸಿತು. ಹೋದೆ. ಎದ್ದು ನಿಂತು ನನ್ನೆಡೆ ಬೆನ್ನು ಹೊರಳಿಸಿ ಹಿಂದೆಯೇ ಬರುವಂತೆ ಸನ್ನೆ ಮಾಡಿದ. ಹಿಂಬಾಲಿಸಿದೆ. ಆತ ಗುಹೆಯೊಂದನ್ನು ಹೊಕ್ಕ. ಬಹುಶಃ ಅದೇ ಆತನ ನಿವಾಸವಿರಬೇಕು. ಅಲ್ಲಿ ಅದಾವುದೋ ವಿಶಾಲಕಾಯ ದೇವತೆಯ ವಿಗ್ರಹವೊಂದಿತ್ತು.

"ಏನಾದರೂ ಅರಿತುಕೊಳ್ಳಬೇಕು ಅನಿಸ್ತಿದೆಯಾ?" ಯೋಗಿ ಕೇಳಿದ.

ಏನು ಹೇಳಲಿ? ಹೂಂ ಎನ್ನಲೆ? ಊಹುಂ ಎನ್ನಲೆ? ಹೊಳೆಯಲೇ ಇಲ್ಲ. ಆದರೂ ಸ್ವಲ್ಪ ಸಂಕೋಚದಿಂದಲೇ ಹೇಳಿದೆ, "ಇಲ್ಲಿ ಬಂದ ಮೇಲೆ ನನಗೆ ನಾನು ಬಹುಕಾಲದಿಂದ ಹುಡುಕುತ್ತಿದ್ದ ಜಾಗಕ್ಕೆ ಬಂದು ತಲುಪಿದ್ದೇನೆ ಅನಿಸ್ತಿದೆ."

"ಜೀವನದಲ್ಲಿ ಯಾವುದೂ ಒಮ್ಮಿಂದೊಮ್ಮೆಲೆ ಆಕಸ್ಮಿಕವಾಗಿ ನಡೆಯೋದಿಲ್ಲ. ನೀನು ನಿಶ್ಚಿತವಾಗಿ ಯಾವುದೋ ಒಂದು ಪ್ರಯೋಜನಕಾರಿ ಉದ್ದೇಶದಿಂದಾಗಿಯೇ ಇಲ್ಲಿಗೆ ನಡೆಸಲ್ಪಟ್ಟು ಬಂದಿದ್ದೀಯೆ...."

"ಇರಬಹುದು" ಎಂದೆ.

"ಹೂಂ. ಈಗ ಹೇಳು ಮಗು. ನಿನ್ನಲ್ಲೇನೋ ದುಃಖ ಮಡುಗಟ್ಟಿದೆಯಲ್ಲ, ಅದಕ್ಕೆ ಏನು ಕಾರಣ ಅಂತ ಹೇಳಿಬಿಡು ತಾಯಿ," ಅಂದ ಯೋಗಿ.

ನಾನು ಮೌನವಾಗಿದ್ದೆ. ಏನು ಹೇಳಲಿ ಎಂಬ ಯೋಚನೆಯಿಂದಾದ ಮೌನ.

"ಹೇಳಮ್ಮಾ ಹೇಳು, ನಾಚಿಕೆಪಟ್ಟುಕೊಳ್ಳಬೇಕಾದ ಅವಶ್ಯಕತೆ ಇಲ್ಲ. ನೀನು ನನಗೆ ಮಗಳಿದ್ದಂತೆ!"

ನಾನು ಮೈಚಳಿಬಿಟ್ಟು ಕೇಳಿದೆ, "ನಾನು ಇತರ ಸ್ತ್ರೀಯರಂತೇಕಿಲ್ಲ? ಅವರಿಗಿಂತ ಯಾಕೆ ಭಿನ್ನ ಸ್ವಭಾವ ನನ್ನದು ಅಂತ ತಿಳಿದುಕೋಬೇಕು ನಾನು."

"ನಿಜಕ್ಕೂ ತಿಳಿದುಕೋಬೇಕಾ?"

"ಹೌದು,"

"ಹಾಗಿದ್ದರೆ ಕೇಳು. ನೀನು ಮನುಷ್ಯಳಲ್ಲವೆ ಅಲ್ಲ."

"ಏನು! ಮನುಷ್ಯರಂತೆಯೇ ಅದರಲ್ಲೂ ತರುಣ ಸ್ತ್ರೀಯೊಬ್ಬಳಿಗಿರಬೇಕಾದ ಎಲ್ಲ ಅಂಗಾಂಗಗಳೂ ಪ್ರಮಾಣಬದ್ಧವಾಗಿಯೇ ಇವೆ, ಇತರ ಸ್ತ್ರೀಯರು ಅನುಭವಿಸುವ ಸ್ಥಿತಿಯೇ ನನ್ನದೂ ಆಗಿದೆ. ಆದರೂ..."

"ಕೇವಲ ಅಂಗಾಂಗಗಳು, ಸ್ಥಿತಿಗಳಿದ್ದರೆ ಆಯಿತೇ ಮಗು? ಆತ್ಮಕ್ಕೆ ಮನುಷ್ಯ ಸಂಸ್ಕಾರ ದೊರೆತಿಲ್ಲವಲ್ಲ...."

"ಯಾಕೆ? ಯಾಕೆ ದೊರೆತಿಲ್ಲ?"

"ನಾನು ಬಹುಶಃ ನಿನ್ನ ಮುತ್ತಾತನ ವಯಸ್ಸಿನವನು. ನಿನ್ನ ತಂದೆ ಇಲ್ಲಿ ಭಾರತದಲ್ಲಿ ಇದ್ದು ಹೋದವರು. ನಾನು ನಿನ್ನ ಅಪ್ಪ-ಅಮ್ಮ ಇಬ್ಬರನ್ನೂ ನೋಡಿದವ. ನಿನ್ನ ಹುಟ್ಟು ಅವರಿಗೆ ಅಪ್ರಿಯ ಘಟನೆ ಎನಿಸಿತ್ತು. ಮಗನೊಬ್ಬ ಹುಟ್ಟಬೇಕಿತ್ತು ಎಂದು ಅವರಿಬ್ಬರೂ ಅಂದುಕೊಂಡಿದ್ದುಂಟು!"

"ಮಗಳೊಬ್ಬಳು ಹುಟ್ಟುವುದು ಅಪ್ರಿಯ ಘಟನೆ ಯಾಕಾಗಬೇಕು?"

"ಊಹುಂ, ಕೆಲವರಿಗೆ ಮಗಳು ಹುಟ್ಟಿದ್ದುದ್ದೇ ಅಪ್ರಿಯ ಘಟನೆಯಾಗುತ್ತದೆ. ಆದರೆ

ನಿರೀಕ್ಷೆ ಅನ್ನುವುದಿದೆಯಲ್ಲ, ಅದು ಅಸಫಲವಾದಾಗ ವ್ಯಕ್ತಿ ಹತಾಶನಾಗುತ್ತಾನೆ. ಮಾನಸಿಕವಾಗಿ ಕುಸಿಯುತ್ತಾನೆ. ದುಃಖಭಾರದಿಂದ ಬಳಲುತ್ತಾನೆ. ಹೋಗಲಿ, ಆನಂತರದ ವಿಷಯ ಹೇಳುತ್ತೇನೆ. ನೀನು ಬಹುಶಃ ಏಳೆಂಟು ತಿಂಗಳಿನ ಕೂಸಿರಬೇಕು. ಆಗೊಂದು ಆಶ್ಚರ್ಯಕಾರಕ ಘಟನೆ ನಡೆಯಿತು. ಮನೆಯಲ್ಲೊಬ್ಬ ಆಯಾ ನಿನ್ನನ್ನು ನೋಡಿಕೊಳ್ಳುತ್ತಿದ್ದಳು. ಒಂದು ದಿನ ಚಿಕ್ಕ ಮಂಚದ ಮೇಲೆ ನಿನ್ನನ್ನು ಮಲಗಿಸಿ ಅದೆಲ್ಲಿಗೊ ಹೋಗಿದ್ದಳು. ತಿರುಗಿ ಬಂದಾಗ ಕಂಡದ್ದನ್ನು ಹಾಗೆಯೇ ನೋಡುತ್ತ ಕಂಬದಂತೆ ನಿಂತುಬಿಟ್ಟಳು. ನಿನ್ನ ಮಂಚದ ಮೇಲೊಂದು ವಿಶಾಲಕಾಯದ ಶಂಖಚೂಡ ಸರ್ಪ! ಅದು ತನ್ನ ದೇಹವನ್ನು ಸುರುಳಿಯಾಗಿಸಿ ಬಾಲವನ್ನು ನಿನ್ನ ಕಾಲುಗಳಿದ್ದಲ್ಲಿಯೂ ತಲೆಯನ್ನು ನಿನ್ನ ಮುಖದ ಪಕ್ಕದಲ್ಲೂ ಇಟ್ಟು ಮಲಗಿತ್ತು! ಎಷ್ಟೋ ಹೊತ್ತಿನ ಮೇಲೆ ಆಯಾ ಇಡೀ ಬಂಗಲೆಗೆ ಕೇಳುವ ಹಾಗೆ ಅರಚಿಕೊಂಡಳು. ನಿನ್ನಪ್ಪ ಓಡಿಬಂದ. ಆಳುಗಳು ಧಾವಿಸಿಬಂದರು. ಆ ಸರ್ಪವನ್ನು ಹ್ಯಾಗೆ ಅಲ್ಲಿಂದ ನಿವಾರಿಸಬೇಕು ಎಂದವರು ಯೋಚಿಸುತ್ತಿರುವಷ್ಟರಲ್ಲೇ ಅದು ಅಲ್ಲಿಂದ ನೆಲಕ್ಕಿಳಿದು ಸರಸರನೆ ಸರಿದು ಪಾರಾಗಿ ಮರೆಯಾಯಿತು.''

''ಆಮೇಲೆ?''

''ಆನಂತರ ನಿನ್ನ ಸರ್ಪಭಯ ದೂರವಾಯಿತು. ಆದರೆ ನಿನ್ನ ತಾಯಿ ಮಾತ್ರ ಇನ್ನು ಇಲ್ಲಿರುವುದು ಬೇಡವೆಂದೂ ತಿರುಗಿ ಸ್ವದೇಶಕ್ಕೆ ಹೋಗಿಬಿಡೋಣವೆಂದೂ ನಿನ್ನ ತಂದೆಗೆ ಒಂದೇ ಸಮ ವತಾಮತಿ ಹಚ್ಚಿದಳು. ಹೀಗಾಗಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ನಿನ್ನಪ್ಪ ಕುಟುಂಬ ಸಮೇತ ಇಂಗ್ಲೆಂಡಿಗೆ ಮರಳಿದರು. ಸರಿಯಾಗಿ ಇಪ್ಪತ್ತು ವರ್ಷಗಳ ನಂತರ ನಿನ್ನ ಪತಿ ಈಗ ಅದೇ ಹುದ್ದೆಯ ಮೇಲೆ ಇಲ್ಲಿಗೆ ಬಂದಿದ್ದಾನೆ.....''

''ಅಂದರೆ.... ಪೂರ್ವಜನ್ಮದಲ್ಲಿ ನಾನು ಸರ್ಪವಾಗಿದ್ದೆನೆಂಬುದು ನಿಮ್ಮ ಅಭಿಪ್ರಾಯವೇನು?''

''ಹೌದು, ಆದ್ದರಿಂದಲೇ ನಿನ್ನ ಮನಃಸ್ಥಿತಿ ಇತರ ಸ್ತ್ರೀಯರಿಗಿಂತ ಭಿನ್ನವಾಗಿದೆ, ಮಗು.''

ಆ ಸಂಜೆಯ ಹೊತ್ತಿಗೆ ನಾನು ಮನೆಗೆ ಮರಳಿದೆ. ರಾತ್ರಿಯ ಊಟದ ಹೊತ್ತು. ನಾನು ಡ್ರೆಸಿಂಗ್ ಟೇಬಲ್ ಎದುರು ನಿಂತು ಸಾಧನಕ್ಕೆ ತೊಡಗಿದೆ. ಆಕಸ್ಮಿಕವಾಗಿ ಕನ್ನಡಿಯತ್ತ ಕಣ್ಣು ಹಾಯಿಸಿದೆ. ಅವಾಕ್ಕಾದೆ. ಬಹುಶಃ ಮೊಟ್ಟಮೊದಲ ಬಾರಿಗೆ ಹಾಗೆ ಕನ್ನಡಿಯಲ್ಲಿ ನನ್ನನ್ನು ನಾನು ನೋಡಿಕೊಂಡಿರಬೇಕು....

ನನ್ನ ಶರೀರ ಅದೆಷ್ಟು ಮಿಂಚುತ್ತಿತ್ತು. ಮೃದುವಾದ, ಬಳ್ಳಿಯಂತೆ ಬಳಕುವ ಶರೀರ. ಉಬ್ಬು ತಗ್ಗುಗಳಿಲ್ಲದಂಥದು. ಸೊಂಟದ ಕೆಳಗಿನ ಭಾಗ ಸ್ತ್ರೀ ಶರೀರಕ್ಕೆ ಸಹಜವಾದ ಘನ ಜಘನಗಳಿಂದೊಡಗೂಡಿರಲಿಲ್ಲ. ಪ್ರತಿಬಿಂಬ ನೋಡಿಕೊಂಡರೆ ಕಾಲುಗಳೇ ಕಾಣಲಿಲ್ಲ. ಬದಲಾಗಿ ಎರಡೂ ಕಾಲುಗಳ ಬದಲು ತೆಳ್ಳಗಾಗುತ್ತ ನಡೆದ ಬಾಲದಂಥದು ಗೋಚರಿಸಿತು. ನಾಗರಾಣಿ ಬಾಲದ ಆಧಾರದ ಮೇಲೆ ಆಳೆತ್ತರಕ್ಕೆ ಎದ್ದು ನಿಂತಂತೆ ಭಾವಿಸಿಕೊಂಡೆ. ಗಾಬರಿಯಾಯಿತು. ಇಷ್ಟು ದಿನಗಳವರೆಗೂ ನನ್ನ ಈ ವಿಲಕ್ಷಣತೆಯತ್ತ ಲಕ್ಷ್ಯವೇಕೆ ಹರಿಯಲಿಲ್ಲ? ಅಥವಾ ಇದು ಭ್ರಮೆಯೋ?

ನಾನು ಮತ್ತೆ ಮತ್ತೆ ಮತ್ತಷ್ಟು ಲಕ್ಷ್ಯವಹಿಸಿ ಪ್ರತಿಬಿಂಬ ನೋಡಿಕೊಂಡೆ. ಶುಭ್ರ ಬಿಳಿ ಬಣ್ಣ. ವರ್ಷಕ್ಕೊಮ್ಮೆ ನನ್ನ ದೇಹದ ಚರ್ಮ ಕಳಚಿ ಹೊಸ ದೇಹ ಧರಿಸಿದಂಥ ಅನುಭವ ಹಿಂದೆಲ್ಲ ಆಗಿದ್ದುದರ ನೆನಪಾಯಿತು. ಹಾವುಗಳು ಪೊರೆ ಬಿಡುತ್ತವೆಂಬುದಾಗಿ ಕೇಳಿ ತಿಳಿದಿದ್ದೆ. ಕನ್ನಡಿಗೆ ತೀರ ಸಮೀಪವಾಗಿ ಮುಖ ನೋಡಿಕೊಂಡೆ. ಹಣೆಯ ಮೇಲೆ ಸಾಧು-ಸಂತರಿಗಿರುವಂತೆ ತ್ರಿಪುಂಡ್ರ ಕಂಡಿತು. ಮೂರೆಳೆಯ ತಿಲಕದಂಥ ನಾಮದಂಥದು. ಶಂಖಚೂಡ ಸರ್ಪದ ಹಣೆಯ ಮೇಲೆ ಇಂಥ ತಿಲಕವಿರುತ್ತದಂತೆ. ಯೋಗಿ ಹೇಳಿದ್ದು ಥಟ್ಟನೆ ನೆನಪಿಗೆ ಬಂತು. ಇದೆಲ್ಲದರಿಂದ ನಾನು ಗಾಬರಿಗೊಳ್ಳಲಿಲ್ಲ. ಬದಲಾಗಿ ಇನ್ನುಳಿದ ಸ್ತ್ರೀಯರಿಗಿಂತ ನಾನು ಭಿನ್ನವಾಗಿರುವುದರ ವಾಸ್ತವಿಕ ಕಾರಣ ನನಗೆ ತಿಳಿದು ಸಮಾಧಾನ, ಹೆಮ್ಮೆ ಉಂಟಾಯಿತು.

ವೃದ್ಧ ಯೋಗಿ ನನಗೆ ನಾನ್ಯಾರೆಂಬುದನ್ನು

ನಾನೇ ಅರಿತುಕೊಳ್ಳುವಂತೆ ಮಾಡಿದ್ದ. ಆತನ ಬಗೆಗಿನ ಪೂಜ್ಯಭಾವನೆ ಇಮ್ಮಡಿಸಿತು. ವಾರಕ್ಕೊಮ್ಮೆ ಆತನ ದರ್ಶನ ಮಾಡಿಕೊಳ್ಳಬೇಕೆಂದು ಆಗಲೇ ನಿಶ್ಚಯಿಸಿದೆ.

ಆ ದಿನ ನಾನು ಯೋಗಿಯ ದರ್ಶನಕ್ಕೆಂದು ಹೊರಟಿದ್ದಾಗ ಅದ್ಯಾವ ಮಾಯದಿಂದಲೋ ಏನೋ ಒಂದು ಬೃಹತ್ತಾದ ಶಂಖಚೂಡ ಸರ್ಪ ಸರಿದು ಬಂದು ನನ್ನ ಪಾದಗಳ ಬಳಿ ತಲೆಯಿರಿಸಿತು. ಬಹುಶಃ ಇದು ನಾಗರಾಜನೇ ಇರಬೇಕು. ನನಗೇನೂ ತೊಂದರೆಯುಂಟು ಮಾಡಲಿಕ್ಕಿಲ್ಲ ಎಂಬ ಭಾವನೆ ಅದು ಹೇಗೆ ಉಂಟಾಯಿತೆಂದು ನನಗಿಂದಿಗೂ ಅರ್ಥವಾಗುತ್ತಿಲ್ಲ. ನಾನು ಬಾಗಿ ಮೆಲ್ಲಗೆ ಅದರ ಹೆಡೆಯನ್ನು ನೇವರಿಸಿದೆ, ಶರೀರದ ಮೇಲೆ ಕೈ ಆಡಿಸಿದೆ. ತಟ್ಟಿದೆ. ಅದು ಸ್ಪರ್ಶಹಿತವನ್ನು ಇನ್ನಷ್ಟು ಬಯಸಿದ ಹಾಗೆ ಮಾಡಿತು. ಅಂದಿನಿಂದ ನಾನು ಮಂದಿರಕ್ಕೆ ಹೋಗುವಾಗಲೆಲ್ಲ ಮಾರ್ಗದ ಮಧ್ಯದಲ್ಲಿ ಶಂಖಚೂಡ ಸರ್ಪ ಭೇಟಿಯಾಗತೊಡಗಿತು.

ನಾನದನ್ನು 'ಬಾಬ್' ಎಂದು ಕರೆಯತೊಡಗಿದೆ. ಅದು ಆತನಿಗೂ ಇಷ್ಟವಾಯಿತೇನೋ. ಆ ಮೇಲೆ ಕಾಡುದಾರಿಯಲ್ಲಿ ಹೊರಟ ನಾನು 'ಬಾಬ್' ಎಂದು ಕರೆದ ಹೊರತು ಅದು ಬರುತ್ತಿರಲೇ ಇಲ್ಲ. ಹಾಗೆ ಮೂರು ಸಲ ಕೂಗಿ ಕರೆದಾಗ ತಾನು ಅಡಗಿದ್ದಲ್ಲಿಂದ ಸರಸರನೆ ಸರಿದು ಬರುವಾಗಿನ ಅದರ ಸಂಭ್ರಮ ನೋಡುವಂತಿರುತ್ತಿತ್ತು.

ತಿಂಗಳುಗಳು ಸರಿದುದೇ ಗೊತ್ತಾಗಲಿಲ್ಲ. ಮಂದಿರಕ್ಕೆ ಹೋಗುವುದನ್ನುಳಿದರೆ ಇನ್ನಾವುದೂ ಪ್ರಿಯವೆನಿಸದಂಥ ಸ್ಥಿತಿ ತಲುಪಿದೆ. ನಿತ್ಯದ ಕೆಲಸಗಳನ್ನು ಅವಸರದಲ್ಲಿ ಅನಾಸಕ್ತಿಯಿಂದ ಮಾಡಿ ಮುಗಿಸಿ ಮಂದಿರಕ್ಕೆ ಹೊರಟು ನಿಲ್ಲುತ್ತಿದ್ದೆ. ಮನೆಗೆ ಅತಿಥಿಗಳು ಬಂದ ಒಂದಾದರೂ ಸಂದರ್ಭದಲ್ಲಿ ನಾನಿರದಿರುತ್ತಿದ್ದುದು ಹೆನ್ರಿಗೆ ಸಿಟ್ಟು ತರಿಸತೊಡಗಿತು. ಆತನ ಇಚ್ಛೆಯ ಸತಿಯಾಗಿರಬೇಕೆಂದು ಎಷ್ಟೇ ಪ್ರಯತ್ನಿಸಿದರೂ ನನ್ನಿಂದ ಸಾಧ್ಯವಾಗಲಿಲ್ಲ. ನನಗೆ ನಾನೇ ಸೋತಿದ್ದೆ. ಊಹುಂ, 'ಬಾಬ್'ಗೆ ಮನಸೋತಿದ್ದೆ ಎನ್ನುವುದೇ ವಿಹಿತ. ಕೂತರೆ, ನಿಂತರೆ, ಮಲಗಿದರೆ ಕೊನೆಗೆ ಒಂಟಿಯಾಗಿರುವ ಪ್ರತಿ ನಿಮಿಷದಲ್ಲೂ ನನ್ನ ಮನದಲ್ಲಿ ಆ ಜೀರ್ಣ-ಶೀರ್ಣ ಮಂದಿರ, ಆ ವೃದ್ಧ ಯೋಗಿ ಹಾಗೂ ಆ ಶಂಖಚೂಡ ಸರ್ಪ ಇವೇ ಸುತ್ತಬೇಕು. ಕಣ್ಣೆದುರು ಸುಳಿಯಬೇಕು.

ಹೀಗೊಂದು ದಿನ ಆ ವೃದ್ಧ ಯೋಗಿ, "ಮಗು, ನೀನೀಗ ಸ್ವದೇಶಕ್ಕೆ ವಾಪಸಾಗುವ ಕಾಲ



"…. ಇವರು ನಮ್ಮೂರಿನ ಖ್ಯಾತ ಹಾರ್ಮೋನಿಯಂ ವಾದಕರು ಸಾರ್!…."

ಸನ್ನಿಹಿತವಾಗಿದೆ," ಎಂದ.

ಸಿಡಿಲು ಬಡಿದಂತಾಯಿತು.

"ಯಾಕೆ? ನನ್ನ ಪತಿ ಇಲ್ಲಿಗೆ ಬಂದು ಇನ್ನೂ ನಾಲ್ಕು ವರ್ಷಗಳಾಗಿಲ್ಲ. ಐದು ವರ್ಷಗಳ ವಾಸ್ತವ್ಯ ಇಲ್ಲಿಯದು. ಅಲ್ಲದೆ ಅವರಿಗೆ ಪದೋನ್ನತಿಯಾಗಲಿದೆಯೆಂದೂ ಕೇಳಿದ್ದೇನೆ...."

"ಮಗಳೆ, ದೈವೇಚ್ಛೆಯೆಂಬುದೊಂದು ಇದೆಯಲ್ಲ. ಅದರ ಪ್ರಕಾರ ನೀನು ನಡೆಯಲೇಬೇಕು..... ನೀವಿಬ್ಬರೂ ಭಾರತದಲ್ಲಿ ಇರುವ ಯೋಗ ಸಮಾಪ್ತಿಗೊಳ್ಳುತ್ತಲಿದೆ. ನಿನ್ನ ಪತಿ ರಾಜೀನಾಮೆ ಇತ್ತು ಮಾತೃದೇಶಕ್ಕೆ ಹೊರಡುವ ಯೋಚನೆ ಮಾಡಿದ್ದಾನೆ."

"ಆದರೆ ನಾನು 'ಬಾಬ್'ನನ್ನು ಬಿಟ್ಟು ಹೇಗೆ ಜೀವಿಸಲಿ?"

"ಅದೊಂದು ಸಮಸ್ಯೆಯೇ ಅಲ್ಲ. 'ಬಾಬ್' ಕೂಡ ನಿನ್ನೊಂದಿಗೆ ಲಂಡನ್ನಿಗೆ ಬರುತ್ತಾನೆ. ಆತ ಬಂದ ಮೇಲೆಯೇ ಸಮಸ್ಯೆಯಾಗಲಿದೆ."

"ಏನು ಸಮಸ್ಯೆ?"

"ಎಲ್ಲವನ್ನೂ ಹೇಳಲಾಗುವುದಿಲ್ಲ, ಹೇಳಿದರೂ ಪ್ರಯೋಜನವಿಲ್ಲ. ಆಗಬೇಕಾದ್ದು ಆಗಿಯೇ ತೀರುವುದು. ನೀನಿನ್ನು ಹೊರಡು ಮಗಳೆ," ಎಂದ.

ನಾನು ಮರಳಿ ಬಂದೆ.

ಕೆಲವು ದಿನಗಳ ನಂತರ ಹೆನ್ರಿ ತಾನು ಕೆಲಸಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿರುವುದಾಗಿಯೂ, ಲಂಡನ್ನಿಗೆ ಮರಳಲು ತಯಾರಾಗಿರು ಎಂದೂ ನನಗೆ ಹೇಳಿದ.

"ಇದ್ದಕ್ಕಿದ್ದಂತೆ ಇಂಥ ನಿರ್ಧಾರವನ್ನಾಕೆ ಕೈಗೊಂಡಿರಿ?"

"ಇದ್ದಕ್ಕಿದ್ದಂತೆ ಏನಲ್ಲ, ಎಷ್ಟೋ ತಿಂಗಳು ಯೋಚಿಸಿದ ನಂತರವೇ ಈ ನಿರ್ಧಾರ ಗಟ್ಟಿಗೊಂಡದ್ದು" ಎಂದ ಆತ.

ಅದೇ ಸಂಜೆ ಮಂದಿರಕ್ಕೆ ಹೋಗಿ ಯೋಗಿಯನ್ನು ಭೇಟಿಯಾದೆ. ಆವನು ನನ್ನನ್ನು ಮಂದಿರದ ಆವಾರದ ಒಂದೆಡೆ ಕರೆದೊಯ್ದು "ಇದೋ, ನಿನ್ನ 'ಬಾಬ್'ಗಾಗಿ ಮಾಡಿಸಿದ್ದು" ಎಂದು ಬಿದಿರಿನ ಸಂದೂಕದತ್ತ ಕೈ ಮಾಡಿದ. ಸಮೀಪಿಸಿ ನೋಡಿದೆ. ಒಳಗೆ 'ಬಾಬ್' ಆರಾಮಾಗಿ ಯಾತ್ರಾಕ್ಷಣವನ್ನೇ ಎದುರು ನೋಡುತ್ತ ಮಲಗಿದ್ದ.

ಒಂದು ವಾರದ ನಂತರ ನಾವು ಹಡಗನ್ನೇರಿದೆವು. ನಮ್ಮಿಬ್ಬರಿಗೂ ಎರಡು ಪ್ರತ್ಯೇಕ ಕ್ಯಾಬಿನ್‌ಗಳನ್ನು ಕಾಯ್ದಿರಿಸಲಾಗಿತ್ತು. ಇಂಗ್ಲಂಡಿನಿಂದ ಬರುವಾಗಲೂ ಇಂಥದೇ ವ್ಯವಸ್ಥೆಯಾಗಿತ್ತು. ಆದರೆ ಅಂತರವಿಷ್ಟೇ; ಆಗ ಕ್ಯಾಬಿನ್ನುಗಳು ಬೇರೆಯಾಗಿದ್ದರೂ ಮನಸ್ಸುಗಳು ಒಂದಾಗಿದ್ದವು. ಈಗ ಕ್ಯಾಬಿನ್ನೂ ದೂರ, ಮನಸ್ಸುಗಳಂತೂ ಇನ್ನೂ ದೂರ.

ನನ್ನ ಕ್ಯಾಬಿನ್ನನ್ನು ಹೊಕ್ಕು ನೋಡಿದೆ. ಎದುರಿಗೆ 'ಬಾಬ್'ನ ಸಂದೂಕವಿತ್ತು, ಕೀಲಿಜಡಿದು ಸೀಲ್ ಮಾಡಿದ ಸಂದೂಕ. ಅದರ ಮೇಲೆಯೇ ಒಂದು ಲಕೋಟೆ. ನನ್ನ ಹೆಸರಿಗೆ. ಅದನ್ನೊಡೆದೆ. ಒಳಗೆ ಸಂದೂಕದ ಚಾವಿ ಇತ್ತು. ನಾನು ಬೇಗ ತೆರೆದೆ. ಧುತ್ತೆಂದು ಹೆಡೆ ಎತ್ತಿದ 'ಬಾಬ್.' ನಾನು ಮೃದುವಾಗಿ ನೇವರಿಸಿದೆ. 'ಬಾಬ್' ಹೆಡೆಯನ್ನು ಮುಚ್ಚಿ ನನ್ನ ಕೈಗೆ ಮುದ್ದಿಡುವಂತೆ ಮೂತಿ ಸವರಿದ. ಎಂಥ ಸುಖಾನುಭವ ಆಗ!

ಇಂಗ್ಲೆಂಡ್ ತಲುಪಿದ ಹಡಗು ಬಂದರು ಕಟ್ಟೆಗೆ ಬಂದಿತು. ಕಸ್ಟಮ್ಸ್‌ನವರ ಔಪಚಾರಿಕತೆಯೆಲ್ಲ ಮುಗಿದ ಮೇಲೆ ನಾವು ಸಾಮಾನುಗಳನ್ನು ಇಳಿಸಿಕೊಂಡೆವು. ನಾನು ಸಂದೂಕದ ಬೇಗ ತೆರೆದೆ. 'ಬಾಬ್' ಮತ್ತೆ ಹೆಡೆಯಗಲಿಸಿ ನಿಂತ. ಇದನ್ನು ಕಂಡ ಹೆನ್ರಿ ಅರಚಿಕೊಂಡ. ನಾನು "ಹೆದರಿಕೋಬೇಡಿ" ಎನ್ನುತ್ತ 'ಬಾಬ್'ನ ಹೆಡೆಯ ಮೇಲೆ ಹಸ್ತವನ್ನಿರಿಸಿದೆ.

"ಸಾಕಿದ್ದೀಯೇನು?" ಅಂಜುತ್ತಲೇ ಕೇಳಿದ ಹೆನ್ರಿ.

"ಹೂಂ," ಎಂದಷ್ಟೇ ಉತ್ತರಿಸಿದೆ.

ಆ ಮೇಲೆ ಈ ಸಂಬಂಧದಲ್ಲಿ ಹೆನ್ರಿ ಒಮ್ಮೆಯೂ ಪ್ರಸ್ತಾಪವೆತ್ತಲಿಲ್ಲ. ನಾನೂ ಮೌನವಾಗುಳಿದೆ.

ಹೊಟೆಲ್ಲಿನಲ್ಲಿ ಅಕ್ಕಪಕ್ಕದ ಎರಡು ಪ್ರತ್ಯೇಕ ಕೋಣೆಗಳನ್ನು ನಮಗಾಗಿ ಕಾಯ್ದಿರಿಸಲಾಗಿತ್ತು.

ನನ್ನ ಕೋಣೆಯನ್ನು ಹೊಕ್ಕ ಮೇಲೆ ನಾನು

ಮಾಡಿದ ಮೊದಲ ಕೆಲಸವೆಂದರೆ ಕಿಟಕಿ-ಬಾಗಿಲು ಮುಚ್ಚಿ ಸಂದೂಕದ ಬಾಯಿ ತೆರೆದದ್ದು. 'ಬಾಬ್' ಅಲ್ಲಿಂದ ಸರಿದು ನೆಲಕ್ಕಿಳಿದು ಹರಿಯುತ್ತ ಸೋಫಾ ಏರಿ ಕೂತು ಹೆಡೆಬಿಚ್ಚಿದ. ಸ್ವಚ್ಛಂದವಾಗಿ ಸಂಚರಿಸುವ ಅವಕಾಶ ಆತನಿಗೆ ಆನಂದ ತಂದಿರಬೇಕು. ನಾನು ಕೋಣೆಯಲ್ಲಿ ಎಲ್ಲಿಯೇ ಹೋದರೂ ಹಿಂಬಾಲಿಸಬೇಕು. ಒಂದು ವೇಳೆ ಹಾಗೆ ಹಿಂಬಾಲಿಸದಿದ್ದರೂ ಸೋಫಾ ಮೇಲೆ ಕುಳಿತೇ ನಾನು ಹೋದಲ್ಲೆಲ್ಲ ಹೆಡೆ ತಿರುಗಿಸಿ ನೋಡಬೇಕು. ನಡುನಡುವೆ ಒಮ್ಮೊಮ್ಮೆ ಹಿಸ್-ಹಿಸ್ ಎಂಬ ಸಿಳ್ಳೆ ಬೇರೆ. ಸಂತಸವ್ಯಕ್ತಪಡಿಸಲೆಂದು ಹಾಗೆ ಸಿಳ್ಳೆ ಹಾಕುತ್ತಾನೆಂದು ತಿಳಿಯಲು ತಡವಾಗಲಿಲ್ಲ.

ಮರುದಿನ ಸಂಜೆಯ ನಂತರ ಹೆನ್ರಿ ಹೊಟೇಲಿಗೆ ಮರಳಿದ. ಇಬ್ಬರೂ ಜತೆಯಾಗಿಯೇ ರಾತ್ರಿಯೂಟಕ್ಕೆ ಹೋದೆವು.

ಊಟ ಮಾಡುತ್ತಿರುವಾಗ, "ಇವತ್ತು ನಿನಗೆಂದು ಒಂದು ಫ್ಲ್ಯಾಟ್ ನೋಡಲು ಹೋಗಿದ್ದೆ" ಎಂದ ಹೆನ್ರಿ.

"ನನಗೆಂದಾ? ಅಂದರೆ ನೀನು ಅಲ್ಲಿ ಇರೋದಿಲ್ವೇನು?" ಅಚ್ಚರಿಯಿಂದ ಸವಾಲೆಸೆದೆ.

"ಊಹುಂ. ಇಲ್ಲೇ ಸಮೀಪ ಕೆಸಿಂಗ್ಟನ್ನಿನಲ್ಲಿದೆ ಫ್ಲ್ಯಾಟು. ನೀನು ಅಲ್ಲಿರು. ನನ್ನ ಚಿಂತೆ ಮಾಡಬೇಡ. ಕೆಲ ದಿನಗಳ ಮಟ್ಟಿಗೆ ಉತ್ತರ ಇಂಗ್ಲಂಡಿನಲ್ಲಿ ಉಳಿಯುವ ನಿರ್ಧಾರಗೈದಿದ್ದೇನೆ."

"ಈ ದಿಢೀರ್ ನಿರ್ಧಾರದ ಕಾರಣ?"

"ಕೆಲವು ದಿನ ಸಂಬಂಧಿಕರ ಜತೆ ಕಾಲಕಳೆಯೋಣಾಂತ. ರಾಜಕಾರಣ, ಆಡಳಿತ ಇವುಗಳಲ್ಲಿ ನನಗೀಗ ಆಸಕ್ತಿ ಉಳಿದಿಲ್ಲ..."

"ಆದರೆ, ಅದಕ್ಕಾಗಿ ನಾನ್ಯಾಕೆ ಬೇರೆಯಾಗಿ ಒಂಟಿವಾಸ ಮಾಡಬೇಕು? ಜತೆಗೇ ಇರಲು ಏನಡ್ಡಿ?"

"ಇದಕ್ಕೆ ಉತ್ತರ ಬೇಕೇ ಬೇಕೇನು?" ಎಂದು ಒಂದು ಕ್ಷಣ ನನ್ನನ್ನೇ ನೋಡಿ, "ನಿನಗೆ ಉತ್ತರ ಗೊತ್ತಿದೆ. ಆದರೂ ಇನ್ನೊಮ್ಮೆ ಬಹುಶಃ ಕೊನೆಯ ಬಾರಿ ಹೇಳಿಬಿಡುತ್ತೇನೆ ಕೇಳು: ನಾವು ಇಷ್ಟು ದಿನ ಜತೆಗಿದ್ದು ಬೇರೆಯಾಗಿದ್ದೇವೆ. ಸುಮ್ಮನೇ ಜತೆಯಾಗಿರುವ ನಾಟಕದಿಂದೇನು ಪ್ರಯೋಜನ?" ಎಂದು ಖಾರವಾಗಿ ಕೇಳಿದ.

ನಾನು ಸುಮ್ಮನುಳಿದೆ. ಮಾತಿನ ಅರ್ಥ ತಿಳಿದ ಮೇಲಿನ್ನೇನು ಪ್ರಶ್ನೆ?

ಮರುದಿನವೇ ನಾನು ಸೇವಕಿಯೊಬ್ಬಳೊಂದಿಗೆ ಕೆಸಿಂಗ್ಟನ್ನಿನ ಫ್ಲ್ಯಾಟ್‌ಗೆ ಹೊರಟು ಹೋದೆ. ಅದೀಗ ಕೇವಲ ನನ್ನ ಫ್ಲ್ಯಾಟು. ನಮ್ಮದಲ್ಲ. ಅಲ್ಲಿ ಸರ್ ಹೆನ್ರಿ ಕೇವಲ ಒಮ್ಮೆ ಬಂದಿದ್ದ. ನನಗೆ ಯಾವ ತೊಂದರೆಯೂ ಆಗದಂತೆ ವ್ಯವಸ್ಥೆ ಮಾಡಿ ಹೋಗಲೆಂದು ಬಂದಿದ್ದ ಅಷ್ಟೆ. ಮುಂದೆ ಎರಡು ವರ್ಷಗಳ ಕಾಲ ನಮ್ಮಿಬ್ಬರ ಭೇಟಿ ಅಥವಾ ಪತ್ರವ್ಯವಹಾರ ಯಾವುದೂ ಆಗಲಿಲ್ಲ. ಆತ ತನ್ನ ಸಂಬಂಧಿಕರ ಜತೆ ಇರತೊಡಗಿದ. ಮೊದಮೊದಲು ಆತ ನಿಲ್ಲದ್ದು ಏನೋ ಕೊರತೆ ಎನಿಸತೊಡಗಿತಾದರೂ ಮುಂದೆ ಒಂಟಿ ಬದುಕೇ ರೂಢಿಯಾಗಿ ಹೋಯಿತು. ಮೊದಲಾದರೂ ಅಷ್ಟೆ. ಕೇವಲ ಬೆಳಗಿನ ತಿಂಡಿ, ಮಧ್ಯಾಹ್ನ ಹಾಗೂ ರಾತ್ರಿಯ ಊಟಗಳ ಹೊತ್ತಿನಲ್ಲಿ ಮಾತ್ರ ಒಂದೆಡೆ ಕೂಡುತ್ತಿದ್ದೆವು. ಇನ್ನುಳಿದ ಹೊತ್ತಿನಲ್ಲಿ ನಾನಾಯಿತು, ಅವರಾಯಿತು.

ನನಗಾವ ತೊಂದರೆಗಳೂ ಇರಲಿಲ್ಲ. ಕೊರತೆಯೂ ಉಂಟಾಗಲಿಲ್ಲ. ನನಗಿಷ್ಟ ಬಂದಂತೆ ಇರುತ್ತಿದ್ದೆ. ಬೇಕೆನಿಸಿದ್ದನ್ನು ಮಾಡುತ್ತಿದ್ದೆ. ಬೇಕೆಂದಲ್ಲಿಗೆ ಹೋಗುತ್ತಿದ್ದೆ. ನಾನು ಮುಕ್ತಳೆಂದೆನಿಸಿತು. ಯಾರದೂ ಅಂಕೆಯಿಲ್ಲ, ಯಾವುದೇ ಅಂಜಿಕೆಯಿಲ್ಲ. ಮುಖವಾಡ ಧರಿಸಿ ಆಢ್ಯತೆ ಪ್ರದರ್ಶಿಸುತ್ತಿದ್ದ ಯಾರನ್ನೂ ಕಾಣಬೇಕಾದ ಪ್ರಮೇಯವೂ ಬರಲಿಲ್ಲ.

ಪ್ರತಿದಿನ ಪ್ರಾಣಿ ಸಂಗ್ರಹಾಲಯಕ್ಕೆ ಹೋಗಿ ಅಲ್ಲಿನ ಸಕಲ ಜೀವಿಗಳಿಗೂ ಉಣಿಸು ತಿನಿಸು ನೀಡುವುದು, ಮನೆಗೆ ಬಂದರೆ ಇಡೀ ದಿನ 'ಬಾಬ್'ನೊಂದಿಗೆ ಕಾಲಕಳೆಯುವುದು ಇವೇ ನನ್ನ ದಿನಚರಿಯ ಮುಖ್ಯ ಕೆಲಸಗಳಾದವು. ಈಗ 'ಬಾಬ್' ತುಂಬ ಬೆಳೆದು ನಿಂತಿದ್ದ. ಜಗತ್ತಿನಲ್ಲಿ ನಾನು ಪ್ರಗಾಢವಾಗಿ ಪ್ರೀತಿಸುವ ಏಕಮಾತ್ರ ಸಂಗಾತಿ ಎಂದರೆ ಈ 'ಬಾಬ್.'

✡

ಲೇಡಿ ವೇದರ್ಬಿ ತನ್ನ ಕಥೆ ಹೇಳಿ ಮುಗಿಸಿದ ಮೇಲೆ ನಾನು ಕೇಳಿದೆ:

" 'ಬಾಬ್'ನನ್ನು ಅಷ್ಟು ಹಚ್ಚಿಕೊಂಡದ್ದೇಕೆ?"

"ಯಾಕೇಂತ ಸ್ಪಷ್ಟವಾಗಿ ಹೇಳಾಲಿಕ್ಕಾಗೋದಿಲ್ಲ."

"ಆದರೂ ಪ್ರಯತ್ನಿಸಿ...."

"ಹೋಗ್ಲಿ ಬಿಡಿ ಮಿಸ್ಟರ್ ಕೀರೋ. ನನಗೆ ಮನಸ್ಸಿನ ಮಾತುಗಳನ್ನು ಹೇಳಿ ನನ್ನನ್ನು ನಾನು ಹಗುರಾಗಿಸಿಕೊಳ್ಳಲು ಒಬ್ಬ ಮಿತ್ರನ ಅವಶ್ಯಕತೆ ಇದೆ. ನನ್ನನ್ನು, ನನ್ನ ಸುಖ-ದುಃಖಗಳನ್ನು ಅರಿತುಕೊಳ್ಳಬಲ್ಲ ಮಿತ್ರನೊಬ್ಬ ಬೇಕು. ಹೇಳಿ, ಅಂಥ ಮಿತ್ರನಾಗಲು ನೀವು ತಯಾರೆ?"

ಆಕೆಯ ಪ್ರಶ್ನೆಗೆ ನಾನು ತಟ್ಟನೆ ಯಾವುದೇ ಉತ್ತರ ಕೊಡಲೂ ಸಮರ್ಥನಿರಲಿಲ್ಲ. ಆದರೆ ಸುಮ್ಮನಿದ್ದು ಬಿಡುವುದೂ ಸರಿಯಲ್ಲ. ಆದ್ದರಿಂದ ಕೇಳಿದೆ.

"ನಾನಾ?"

"ಹೌದು ನೀವೇ. ಆಗೀಗ ನಮ್ಮ ಮನೆಗೆ ಬಂದು-ಹೋಗಿ ಮಾಡಿರಲ್ಲ. ನಾನು ಹೇಳುವುದನ್ನೆಲ್ಲ ಈಗಿನ ಹಾಗೆ ಲಕ್ಷ್ಯವಿಟ್ಟು ಆಲಿಸಿರಲ್ಲ.... ಇಷ್ಟು ಮಾಡಿದರೆ ಸಾಕು. ಇತರರಿಗಿಂತ ನೀವು ನನ್ನನ್ನು ಹೆಚ್ಚಾಗಿ ಮತ್ತು ಪೂರ್ತಿಯಾಗಿ ಅರಿತುಕೊಳ್ಳಲು ಸಾಧ್ಯ."

ನಾನು ಲೇಡಿ ವೆದರ್ಬಿಯ ಕಣ್ಣುಗಳಲ್ಲೇ ಇಣುಕಿ ನೋಡಿದೆ. ಅಲ್ಲಿ ನನಗೆ ಕಂಡದ್ದು ಕೇವಲ ವಿಷಾದ. ನಿರ್ಲಕ್ಷಿಸಲ್ಪಟ್ಟಿದ್ದೇನೆಂಬ ದುಃಖ ಅಲ್ಲಿ ಹೆಪ್ಪುಗಟ್ಟಿ ಕೂತಿತ್ತು. ಈ ಹೆಂಗಸಿಗೆ ಸಹಾನುಭೂತಿಯ ಅವಶ್ಯಕತೆ ಇದೆ ಎಂಬುದು ನನ್ನ ಅರಿವಿಗೆ ಬಂತು. ಆಕೆಯ ಆಮಂತ್ರಣವನ್ನೊಪ್ಪಿಕೊಂಡೆ. ಹಾಗೆಯೇ ಆಕೆಯ ಕೈ ಕುಲುಕಿ, "ನಾನು ಇಂದಿನಿಂದ, ಅಲ್ಲಲ್ಲ, ಈಗಿನಿಂದಲೇ ನಿನ್ನ ಆತ್ಮೀಯ ಸ್ನೇಹಿತ," ಎಂದೆ.

ಆಕೆಯ ಕಣ್ಣುಗಳಾಚೆ ಹೆಪ್ಪುಗಟ್ಟಿದ್ದ ದುಃಖ ಕರಗಿತು. ಗೊಳೋ ಎಂದು ಅತ್ತುಬಿಟ್ಟಳು.

ಒಂದು ವಾರದ ಮೇಲೆ ನಾನು ಆಕೆಗೆ



ಪೂರ್ವಸೂಚನೆ ನೀಡಿದೇ ಕೆಸಿಂಗ್ಟನ್ ಫ್ಲಾಟಿಗೆ ಹೋಗಿ ಬಾಗಿಲು ಬಡಿದೆ. ತೆರೆದುಕೊಂಡಿತು. ಲೇಡಿ ವೆದರ್ಬಿ ಒಂದು ಕ್ಷಣ ಬಾಯಿ ತೆರೆದೇ ನಿಂತಳು. ಆಮೇಲೆ,

"ಅರೆ! ನೀ....ವು!" ಎಂದಳು.

"ಹೂಂ, ನಾನೇ... ಹೀಗೇ ನೋಡಿಕೊಂಡು ಹೋಗೋಣಾಂತ ಬಂದೆ," ಎನ್ನುತ್ತ ಒಳಗೆ ನುಗ್ಗಿದೆ.

ಎದುರಿಗೆ ಸೋಫಾದ ಮೇಲೆ ನಾನು ಈವರೆಗೆ ಕೇಳಿ ಮಾತ್ರ ಗೊತ್ತಿದ್ದ 'ಬಾಬ್' ಮಲಗಿದ್ದ. ನನ್ನನ್ನು ನೋಡಿ ಬುಸ್ಸೆನ್ನುತ್ತಾನೇನೋ ಎಂಬ ನನ್ನ ಭಯ ಸುಳ್ಳಾಯಿತು. ಆತ ನೋಡಿದನಾದರೂ ತೆಪ್ಪಗೇ ಮಲಗಿಯೇ ಇದ್ದ.

ಲೇಡಿ ವೆದರ್ಬಿಯ ಬಗ್ಗೆ ನನಗೆ ಆ ಕ್ಷಣದಿಂದ ಒಂದು ರೀತಿಯ ಭಾವನಾತ್ಮಕ ಅನುಬಂಧ ಉಂಟಾಯಿತು.

ಅಂದಿನಿಂದ ನಾನು ನನ್ನ ಮನೆಬಿಟ್ಟರೆ ವಾರದಲ್ಲಿ ಒಂದೆರಡು ಸಲವಾದರೂ ಮೂರು ಗಂಟೆಗಳಷ್ಟು ಕಾಲ ಹೊತ್ತುಗಳೆಯುತ್ತಿದ್ದದ್ದು ಕೆಸಿಂಗ್ಟನ್ನಿನ ಫ್ಲಾಟಿನಲ್ಲಿಯೆ.

ಡೊರೊಥಿಯ ಮುಖದಲ್ಲಿ ಹೊಸಕಳೆ

ತುಂಬಿ ತುಳುಕತೊಡಗಿತು. ನನ್ನನ್ನು ಕಂಡರೆ ಸಾಕು ಆಕೆಯ ಮನಸ್ಸು ಮಯೂರವಾಗುತ್ತಿತ್ತು.

ಎಷ್ಟೋ ತಿಂಗಳುಗಳ ನಂತರ ಮುಂಜಾನೆಯ ಪತ್ರಿಕೆಯಲ್ಲೊಂದು ಸುದ್ದಿ ನನ್ನ ಮನಸ್ಸನ್ನು ಕಲಕಿತು. ನಗರವಿಡೀ ಈ ಸುದ್ದಿ ದಾವಾನಲದಂತೆ ಹಬ್ಬಿಹೋಯಿತು.

''ಕೆಸಿಂಗ್ಟನ್ ಫ್ಲ್ಯಾಟ್‌ನಲ್ಲಿರುವ ಲೇಡಿ ವೆದರ್ಬಿಯ ಮನೆಯ ಮೇಲೆ ವಾಸಿಸುವ ದಂಪತಿಯ ಕೆಟ್ಟ ಅನುಭವದ ವಾರ್ತೆ ಇದು. ಒಂದು ರಾತ್ರಿ ಆ ದಂಪತಿ ತುಂಬ ತಡವಾಗಿ ಮರಳಿದರು. ಮೇಲಿನ ಅಂತಸ್ತಿಗೆ ಹತ್ತಲೆಂದು ಪಾವಟಿಗೆಗಳನ್ನೇರುತ್ತಿದ್ದ ಹಾಗೆಯೇ ಆ ಹೆಂಗಸು ಅರಚಿಕೊಂಡಳು. ಪಾವಟಿಗೆಗಳ ಪಕ್ಕದಲ್ಲಿ ಕೈ ಆಸರೆಗೆಂದು ಹಾಕಲ್ಪಟ್ಟಿದ್ದ ಕಬ್ಬಿಣದ ಪೈಪಿನ ಮೇಲೆ ಏನೋ ಮೆತ್ತಗಿನ ತಣ್ಣನೆಯ ವಸ್ತುವಿರುವ ಅನುಭವ ಆಕೆಗಾಗಿತ್ತು. ನೋಡಿದರೆ ಏಳಡಿಯ, ಸಾಕಷ್ಟು ದಪ್ಪವೇ ಆದ ಭಯಂಕರ ವಿಷಸರ್ಪ ಅಲ್ಲಿ ಉದ್ದಕ್ಕೆ ಮಲಗಿದೆ! ಆ ಹೆಂಗಸು ಕೈಯಿರಿಸಿದ್ದು ಅದರ ತಲೆಯ ಮೇಲೆಯೇ. ಹೆಂಗಸಿಗೆ ಇದು ಗೊತ್ತಾದದ್ದೇ ತಡ ಹೌಹಾರಿ ಎಚ್ಚರದಪ್ಪಿಬಿದ್ದಳು. ಆ ಇಡೀ ಕಟ್ಟಡದಲ್ಲಿ ಗುಲ್ಲೆದ್ದಿತು. ಕೂಗಾಟ–ಅರಚಾಟ ಶುರುವಾಯಿತು. ಇದನ್ನೆಲ್ಲ ಕೇಳಿ ತನ್ನ ಮನೆಯಿಂದ ಹೊರಬಂದ ಲೇಡಿ ವೆದರ್ಬಿ ''ಏನು?'' ಎಂದು ಕೇಳುವ ಹೊತ್ತಿಗೆ ಆಕೆಯ ದನಿಯನ್ನಾಲಿಸಿದ ವಿಷಸರ್ಪ ಸರಸರನೆ ಲೇಡಿ ವೆದರ್ಬಿಯ ಮನೆಯೊಳಗೆ ಹೊಕ್ಕುಬಿಟ್ಟಿತು. ಅಷ್ಟರೊಳಗೆ ಯಾರೋ ಪೊಲೀಸರಿಗೆ ಸುದ್ದಿ ತಿಳಿಸಿದ್ದರು. ಅವರು ಬಂದರಾದರೂ ಲೇಡಿ ವೆದರ್ಬಿ 'ಅದು ಸಾಕು ಪ್ರಾಣಿ'' ಎಂದು ಸಮರ್ಥಿಸಿಕೊಂಡದ್ದರಿಂದ ಹಾಗೆಯೇ ಮರಳಿದರು. ಈಗ ಸಾರ್ವಜನಿಕರು ಎತ್ತಿರುವ ಮೂಲಭೂತ ಪ್ರಶ್ನೆ ಏನೆಂದರೆ ಲಂಡನ್ನಿನಂಥ ನಗರದಲ್ಲಿ ಮನೆಯಲ್ಲಿ ವಿಷಸರ್ಪವನ್ನು ಸಾಕುವುದು ವಿಧಿಸಮ್ಮತವೇ?''.....

ಕೆಸಿಂಗ್ಟನ್ ಫ್ಲ್ಯಾಟಿನ ಮಾಲಿಕ ಲೇಡಿ ಡೊರೊಥಿ ವೆದರ್ಬಿಗೆ ನೋಟಿಸುಕೊಟ್ಟು ಮನೆ ಖಾಲಿ ಮಾಡುವಂತೆ ತಿಳಿಸಿದ. ಆಕೆ ಹೊಸ ಮನೆ ಹುಡುಕಿಕೊಂಡು ಹೋಗಲೇಬೇಕಾಯಿತು.

ಡೊರೊಥಿ ವಾಸಿಸಿದ್ದ ಹೊಸ ಮನೆ ಸಾಕಷ್ಟು ವಿಶಾಲವಾಗಿತ್ತು. ಸುತ್ತಲೂ ದೊಡ್ಡ ಆವಾರ. ಅದರೊಳಗೆ ತೋಟ. 'ಬಾಬ್'ಗೆ ಹರಿದಾಡಲು ಸಾಕಷ್ಟು ಸ್ಥಳಾವಕಾಶ ಒದಗಿತು.

ಆದರೆ ಈಗ ಪ್ರಕಟವಾದ ಇನ್ನೊಂದು ವಾರ್ತೆ ಮತ್ತಷ್ಟು ಕಳವಳಕಾರಿಯಾದುದಾಗಿತ್ತು. 'ಸರ್ ಹೆನ್ರಿ ವೆದರ್ಬಿ ತಮ್ಮ ಪತ್ನಿಗೆ ಬಿಡುಗಡೆ ಪತ್ರ ನೀಡಲಿದ್ದಾರೆ,' ಇದರೊಟ್ಟಿಗೆ ಅವರಿಬ್ಬರ ಸಂಬಂಧದಲ್ಲಿನ ಬಿರುಕು, ಅವರೆಂದೂ ಪತಿ-ಪತ್ನಿಯಂತೆ ಬಾಳಿರಲಿಲ್ಲವೆಂಬ ವಿವರಗಳೆಲ್ಲ ಆ ಸುದ್ದಿಯನ್ನು ಇನ್ನಷ್ಟು ರೋಚಕವಾಗಿಸಿದ್ದವು. ದೊಡ್ಡವರ ದಾಂಪತ್ಯದ ಕುರಿತ ಇಂಥ ಸುದ್ದಿಗಳೆಂದರೆ ಜನ ಬಾಯಿಚಪ್ಪರಿಸಿ ಮೆದ್ದು ಬಿಡುತ್ತಾರೆ.

ಲೇಡಿ ಡೊರೊಥಿ ನ್ಯಾಯಾಲಯದಲ್ಲಿ ತನ್ನನ್ನು ತಾನು ಸಮರ್ಥಿಸಿಕೊಳ್ಳಲಿಲ್ಲ. ವಿಚ್ಛೇದನ ಅರ್ಜಿ ಪುರಸ್ಕರಿಸಲ್ಪಟ್ಟಿತು. ಆಮೇಲೆ ಸರ್ ಹೆನ್ರಿಯ ಮರುಮದುವೆಯೂ ನಡೆಯಿತು. ನಾನು ಈ ಒಳಗಾಗಿ ಜರೂರು ಕೆಲಸದ ಮೇಲೆ ಅಮೆರಿಕಕ್ಕೆ ಹೋಗಿದ್ದೆನಾದ್ದರಿಂದ ಡೊರೊಥಿಯೊಂದಿಗೆ ಸಂಪರ್ಕವೇರ್ಪಟ್ಟಿರಲಿಲ್ಲ.

ನಾನು ಅಮೆರಿಕದಿಂದ ಮರಳಿ ಬಂದದ್ದು ಬಹಳ ವರ್ಷಗಳ ನಂತರ. ಕೆಲ ದಿನಗಳ ಮೇಲೆ ಡೊರೊಥಿಯಿಂದ ಒಂದು ಪತ್ರ ಬಂತು.

'ಪ್ರಿಯಶ್ರೀ ಕೀರೋ ಅವರೆ,

ನೀವು ವಾಪಸಾದ ಸುದ್ದಿ ಪತ್ರಿಕೆಗಳಿಂದ ಗೊತ್ತಾಯಿತು. ನಾನು ತೀರ ಅಸ್ವಸ್ಥಳಾಗಿದ್ದೇನೆ. ನಿಮ್ಮನ್ನು ಕಾಣಲಿಚ್ಛಿಸಿದ್ದೇನೆ. ಪತ್ರ ದೊರೆತೊಡನೆಯೇ ಬಂದರಂತೂ ತುಂಬ ಖುಷಿಪಡುತ್ತೇನೆ.

ಹಾರ್ದಿಕ ವಂದನೆಗಳೊಂದಿಗೆ–
ಲೇಡಿ ವೆದರ್ಬಿ

ಮರುದಿನ ಮಧ್ಯಾಹ್ನ ನಾನು ಅವಳ ಮನೆಗೆ ಹೋದೆ. ಇದು ಆಕೆಯ ಮೂರನೆಯ ನಿವಾಸಸ್ಥಾನ. ಚೆಸ್ಲಿ ಅಪಾರ್ಟ್‌ಮೆಂಟಿನ ಮೂರನೆಯ ಮಹಡಿಯಲ್ಲಿರುತ್ತಿದ್ದಳು. ಆಕೆಯ ಪತ್ರದಲ್ಲಿ ಈ ವಿಳಾಸವಿದ್ದುದು ಅನುಕೂಲವೇ ಆಯಿತು. ಆಕೆಯ ಸೇವಕಿ ನನ್ನನ್ನು ಒಳಗೆ ಕರೆದೊಯ್ದಳು.

ಡೊರೊಥಿ ಶಯನಕಕ್ಷದಲ್ಲಿ ಮಲಗಿದ್ದಳು. ನೋಡಿ ಗಾಬರಿಯಾಯಿತು. ಗುರುತುಸಿಗದಷ್ಟು

ಸೊರಗಿ ಹೋಗಿದ್ದಳು. ಹ್ಯಾಗಿದ್ದವಳು ಹ್ಯಾಗಾಗಿದ್ದಾಳೆ ಅನ್ನಿಸಿತು. ಒಂದು ಕಾಲದಲ್ಲಿ ಅತ್ಯಂತ ರೂಪವತಿ. ಅಪ್ರತಿಮ ಸೌಂದರ್ಯದ ಖನಿ. ಈಗ! ಕೇವಲ ಚರ್ಮ ಹೊದಿಸಿದ ಮೂಳೆಗಳ ಚಕ್ಕಳ! ತನ್ನ ಸೋತ ಸೊಣಕಲು ಕೈಯನ್ನೆತ್ತಿ ಸ್ವಾಗತಿಸಿದಳು. ಆಕೆಯ ಕೈಯನ್ನು ಕುಲುಕಿದೆ. ಕೈಯೇ ಅದು? ಮಂಜಿನಿಂದ ಮಾಡಿದ ದಂಡ ಅನಿಸಿತು. ಜೂನ್ ತಿಂಗಳಿನ ಅತಿ ಸೆಕೆಯ ಕಾಲದಲ್ಲೂ ಶರೀರ ಹಿಮದಷ್ಟು ತಣ್ಣಗಿದೆಯೆಂದರೆ! ಪಕ್ಕದಲ್ಲೇ 'ಬಾಬ್' ಆಕೆಗೆ ಅಂಟಿಕೊಂಡಂತೆ ಮಲಗಿತ್ತು. ಅದೂ ಅಸ್ವಸ್ಥವೆಂಬಂತೆ ತೋರಿಬಂತು. ಇಬ್ಬರ ದೇಹಗಳೂ ಒಣಗಿದಂತೆ ಮೈಯ ಮೃದುತ್ವ-ಮಿಂಚುಗಳನ್ನು ಕಳಕೊಂಡಂತೆ ಭಾಸವಾಯಿತು. ಡೊರೊಥಿಯ ಸುಂದರ ಕಣ್ಣುಗಳಲ್ಲಿ ಪಿಚ್ಚು ರಾಶಿ ಹಾಕಲ್ಪಟ್ಟಿತ್ತು.

ತೀರ ಸೋತ ಸ್ವರದಲ್ಲಿ ಡೊರೊಥಿ ಹೇಳಿದಳು:

"ನೀವು ಬಂದಿರಿ. ನಾನಿನ್ನು ನಿಶ್ಚಿಂತೆಯಿಂದ...." ಮಾತು ಅರ್ಧಕ್ಕೇ ನಿಂತಿತು. ಕಣ್ಣಲ್ಲಿ ನೀರು ಒಸರಿತು.

"ಯಾಕಮ್ಮಾ ಹೀಗ್ಯಾಕೆ ಆಡುತ್ತೀ? ಛಿ ಹುಚ್ಚಿ, ಸುಮ್ಮನಿರು, ನೀನು ಆರಾಮಾಗುತ್ತೀ...." ಎಂದೆ.

"ಒಂದು ವರ್ಷದಿಂದ ಹೀಗೆಯೇ ಹಾಸಿಗೆ ಹಿಡಿದಿದ್ದೇನೆ ಮಿ. ಕೀರೋ...."

"ಡಾಕ್ಟರು ಏನಂದರು?"

"ಲಂಡನ್ನಿನ ಎಲ್ಲಾ ಪ್ರಸಿದ್ಧ ಡಾಕ್ಟರುಗಳೂ ಬಂದು ನೋಡಿದ್ದಾಯಿತು...."

"ಆದರೂ ರೋಗಕ್ಕೆ ಮದ್ದು ನೀಡಲಾಗಲಿಲ್ಲವೆ?"

"ನನ್ನ ರೋಗ ಯಾವುದೆಂದೇ ತಿಳಿಯುತ್ತಿಲ್ಲವಂತೆ. ಈ ವರೆಗೂ ಮನುಷ್ಯರಾರಿಗೂ ಬಾರದಿದ್ದಂಥ ರೋಗವಂತೆ ನನ್ನನ್ನು ಕೂಡಿದ್ದು"

ಇದು ಮಾನಸಿಕ ರೋಗವೇ ಇರಬೇಕು ಎಂದು ತರ್ಕಿಸಿದೆ.

"ಅಂದ ಹಾಗೆ ನಿನ್ನನ್ನು ನೋಡಿಕೊಳ್ಳಲು ಯಾರಿದ್ದಾರೆ?" ಕೇಳಿದೆ.

"ಮಿಸ್ ವಿಲೋಬಿ. ಆಕೆಯನ್ನು ಬಿಟ್ಟರೆ ಬೇರೆ ಯಾರೂ ನನ್ನ ಬಳಿ ಸುಳಿಯುವುದಿಲ್ಲ."

"ಚೆನ್ನಾಗಿ ನೋಡಿಕೊಳ್ಳುತ್ತಾಳಷ್ಟೇ?"

"ಅವಳಿದ್ದಾಳೇಂತ್ಲೇ ನಾನಿವೊತ್ತು ನಿಮ್ಮೊಂದಿಗೆ ಮಾತಾಡಲು ಸಾಧ್ಯವಾದದ್ದು. ನನ್ನ ಸೇವೆಯಲ್ಲಿ ಆಕೆ ಹಗಲ್ಯಾವುದು-ರಾತ್ರಿ ಯಾವುದು ಎಂಬುದನ್ನೇ ಮರೆತಿದ್ದಾಳೆ. ಆದರೆ...." ಡೊರೊಥಿ ಬಿಕ್ಕಿ ಅಳುತ್ತ ಹೇಳಿದಳು, "ನಾನು ಬಹಳದಿನ ಬದುಕುಳಿಯುವುದಿಲ್ಲ.... ಬದುಕುಳಿಯಬಾರದು ಕೂಡ...."

"ಅಂಥದ್ದೇನಾಗಿದೆ ಈಗ? ಹೇಳಮ್ಮಾ... ನಾನು ನಿನ್ನ ಆತ್ಮೀಯ ಮಿತ್ರನಲ್ಲವೆ?"

ಆಕೆ ಅರೆಕ್ಷಣ ಸುಮ್ಮನಿದ್ದಳು. ಆಮೇಲೆ "ನಾನು ಹೇಳುತ್ತಿರುವುದು ನಿಜ. ನಾಳೆಯ ಸೂರ್ಯೋದಯವನ್ನು ನಾನು ನೋಡುವುದಿಲ್ಲ ಎಂಬುದು ನನಗೆ ಗೊತ್ತು. ಅದಕ್ಕೆಂದೇ ನಿಮ್ಮನ್ನು ಬರಹೇಳಿದ್ದು. ನೀವು ನನ್ನ ಅಂತಿಮ ಇಚ್ಛೆಯನ್ನು ಪೂರೈಸುವಿರಾ? ನಿಮ್ಮನ್ನು ಬಿಟ್ಟರೆ ಇನ್ನಾರಿದ್ದಾರೆ ನನಗೆ? ಸಂಬಂಧಿಕರೆ, ಸ್ನೇಹಿತರೆ, ಯಾರಿದ್ದಾರೆ? ಅದಕ್ಕೇ ಕೇಳಿಕೊಳ್ಳುತ್ತೇನೆ.. ದಯವಿಟ್ಟು ನಾನು ಹೇಳಿದ ಹಾಗೆ ಮಾಡಿ...."

"ಕಾಳಜಿ ಬಿಡಮ್ಮಾ... ನೀನು ಹೇಳಿದಂತೆಯೇ ಮಾಡ್ತೀನಿ. ಆಯ್ತಾ?"

ಆಕೆ ನಡುಗುವ ಸ್ವರದಲ್ಲಿಯೇ ಹೇಳತೊಡಗಿದಳು:

"ನಾನು ಸತ್ತ ಮೇಲೆ ಬಹುಶಃ ಈ ನನ್ನ 'ಬಾಬ್' ಕೂಡ ಬದುಕುಳಿಯುವುದಿಲ್ಲ.... ಒಂದು ವೇಳೆ ಬದುಕಿದನೆಂದರೆ ಅವನನ್ನು ವಿಷಾನಿಲದ ಕೋಶದೊಳಗೆ ನೂಕಿ ಕೊಂದುಬಿಡಿ... ಆಮೇಲೆ ನಮ್ಮಿಬ್ಬರ ಅಂತ್ಯ ಸಂಸ್ಕಾರವನ್ನು ಒಂದೇ ಸಲಕ್ಕೆ ಮಾಡಿ ಮುಗಿಸಿ..... ಹಾಂ. ಹೂತು ಹಾಕಬೇಡಿ... ಅಗ್ನಿ ಸಂಸ್ಕಾರ ಗೈಯಿರಿ...."

"ಆಯಿತಮ್ಮಾ ಹಾಗೇ ಮಾಡೋಣ" ನಾನು ಭರವಸೆಯಿತ್ತೆ.

"ಆ ಮೇಲೆ ನಮ್ಮ ಚಿತಾಭಸ್ಮವನ್ನು ಒಂದೇ ಕರಂಡಕದಲ್ಲಿ ಸೇರಿಸಿ ದೂರದಲ್ಲಿ ಯಾವುದಾ

ದರೂ ಸಮುದ್ರದಲ್ಲಿ ವಿಸರ್ಜಿಸಿಬಿಡಿ."

"ಹಾಗೇಕೆ ಮಾಡಬೇಕು ಅಂತ ಸ್ವಲ್ಪ ಹೇಳುತ್ತೀಯಾ ಅಮ್ಮಾ?"

"ಹಾಗೆ ಮಾಡಿದರೆ ಮತ್ತೆ ಮುಂದಿನ ಜನ್ಮದಲ್ಲಿ ನಾವು ಸತಿಪತಿಗಳಾಗಿರಬಹುದೋ ಏನೋ ಅಂತ...."

ಇದ್ದಕ್ಕಿದ್ದಂತೆ ಡೊರೊಥಿ ದಣಿದಳು. ದಿಂಬಿಗೆ ಒರಗಿ ತಲೆ ಅಂಟಿಕೊಂಡಿತು. ಹಾಗೆಯೆ ಪಕ್ಕಕ್ಕೆ ವಾಲಿತು. ನಾನು ಕೈ ಬೆರಳುಗಳನ್ನು ಆಕೆಯ ಮೂಗಿನ ಹೊರಳೆಗಳ ಬಳಿಗೊಯ್ದೆ. ಇನ್ನೂ ಕೊಂಚ ಉಸಿರಿತ್ತು.

ಅಲ್ಲಿಯೇ ಇದ್ದ ಸೇವಕಿಗೆ ನಾನು ಮರುದಿನ ಮುಂಜಾನೆ ಒಂಭತ್ತು ಗಂಟೆಗೆ ಬರುವುದಾಗಿ ಹೇಳಿ ಮನೆಗೆ ಬಂದೆ. ಅಲ್ಲಿಂದ ಒಲ್ಲದ ಮನಸ್ಸಿನಿಂದಲೇ ಹೆಜ್ಜೆ ಕಿತ್ತಿದ್ದೆ.

ಮುಂಜಾನೆ ಒಂಭತ್ತಕ್ಕೆ ಬರುತ್ತೇನೆಂದು ಹೇಳಿದ್ದರೂ ಯಾಕೋ ಮನೆಯಲ್ಲಿ ಕೂಡಲಾಗಲಿಲ್ಲ. ಎಂಟುಗಂಟೆಯ ಹೊತ್ತಿಗಾಗಲೇ ನಾನು ಡೊರೊಥಿಯ ಮನೆಯ ಬಾಗಿಲು ಬಡಿಯುತ್ತಲಿದ್ದೆ.

ಸೇವಕಿ ಬಾಗಿಲು ತೆಗೆದಳು. ಆಕೆಯ ಕಣ್ಣುಗಳು ಕೆಂಪಗಾಗಿದ್ದವು.

ನನಗೆ ಎಲ್ಲಾ ತಿಳಿದುಹೋಯಿತು.

ನೇರವಾಗಿ ಶಯನಕಕ್ಷೆಗೆ ಹೋದೆ. ಡೊರೋಥಿಯ ತಣ್ಣಗಿನ ದೇಹ ಕೊರಡಾಗಿ ಕಳೇವರವಾಗಿ ಬಿದ್ದುಕೊಂಡಿತ್ತು.

"ಎಷ್ಟೊತ್ತಿಗೆ?" ಎಂದು ಸೇವಕಿಯನ್ನು ಕೇಳಿದೆ.

"ಅವರು ಹೇಳಿದ ಹಾಗೆ ಸೂರ್ಯೋದಯಕ್ಕೆ ಸ್ವಲ್ಪ ಮೊದಲು."

'ಬಾಬ್'ನ ಜವಾಬ್ದಾರಿ ಹೊರುತ್ತೇನೆಂದು ಡೊರೊಥಿಗೆ ವಚನವಿತ್ತದ್ದು ನೆನಪಾಯಿತು. 'ಅತ ಒಂದು ವೇಳೆ ಸತ್ತಿದ್ದರೆ ಒಳ್ಳೆಯದೇ ಆಯಿತು. ಆದರೆ ಬದುಕಿದ್ದರೆ?' ಎಂದುಕೊಂಡು ಮುಂದೇನು ಮಾಡಲು ಡೊರೊಥಿ ಹೇಳಿದ್ದಳೋ ಅದನ್ನು ನೆನೆದು ನಖಶಿಖಾಂತ ನಡುಗಿಬಿಟ್ಟೆ.

ಅನಿಲಕೋಶವೇನೋ ಅಲ್ಲಿತ್ತು. ಆದರೆ 'ಬಾಬ್'ನನ್ನು ಹಿಡಿದು ಸಾಯಿಸುವುದು ಹೇಗೆ? ಒಂದು ವೇಳೆ ತಪ್ಪಿಸಿಕೊಂಡು ಹೋದರೆ? ಏನಾದರಾಗಲಿ, ಡೊರೊಥಿಗೆ ಕೊಟ್ಟ ವಚನದಂತೆ ನಡೆಯಲೇಬೇಕೆಂದು ಮಂಚವನ್ನು ಸಮೀಪಿಸಿದೆ.

ಹಿಂದಿನ ದಿನದಂತೆಯೇ ಡೊರೊಥಿಗೆ ಅಂಟಿಕೊಂಡೇ ಮಲಗಿತ್ತು 'ಬಾಬ್.'

ಇನ್ನಷ್ಟು ಬಾಗಿ ನೋಡಿದೆ. ಕಣ್ಣಲ್ಲಿ ಚೇತನವಿರಲಿಲ್ಲ. ದೇಹ ಉಸಿರಾಡುತ್ತಿರಲಿಲ್ಲ. ಬಾಲ ಮಿಸುಕಾಡುತ್ತಿರಲೂ ಇರಲಿಲ್ಲ.

ಹಾಗಾದರೆ 'ಬಾಬ್' ಕೂಡ....

ಹೌದು. ಅದೇ ಆಗಿತ್ತು. 'ಬಾಬ್' ತನ್ನ ಸಂಗಾತಿಯನ್ನು ಮರಣದಲ್ಲೂ ಬಿಟ್ಟುಕೊಡದೇ ಪ್ರಾಣತ್ಯಾಗ ಮಾಡಿತ್ತು.

ಅದೇ ರಾತ್ರಿ ಆ ಎರಡೂ ಕಳೇವರಗಳನ್ನು ಒಂದಕ್ಕೊಂದು ಅಪ್ಪಿಕೊಂಡಂತೆ ಮಲಗಿಸಿ ಚಿತೆಗೇರಿಸಿದೆ.

ಮೂರು ದಿನಗಳ ನಂತರ ಚಿತಾಭಸ್ಮವನ್ನು ಕುಂಡಕದಲ್ಲಿ ತುಂಬುತ್ತಿರುವಾಗ ನನ್ನ ಮನಸ್ಸು ಹಾರೈಸುತ್ತಿತ್ತು.

"ಬಾಬ್-ಡೊರೋಥಿ... ಬರುವ ಜನ್ಮದಲ್ಲಿ ಸತಿ-ಪತಿ..."

ಭಾರತೀಯರು ಕೈಯಿಂದ ಆಹಾರ ಸೇವಿಸುವುದನ್ನು ಟೀಕಿಸುತ್ತ ವಿದೇಶಿಯನೊಬ್ಬ ನೆಹರೂ ಅವರಿಗೆ ಕೇಳಿದನಂತೆ, "ಕೈಯಿಂದ ತಿನ್ನುವುದಕ್ಕಿಂತ ನಮ್ಮಂತೆ ಚಮಚೆ ಹಾಗೂ ಫೋರ್ಕುಗಳಿಂದ ತಿನ್ನುವುದು ಹೆಚ್ಚು ಆರೋಗ್ಯದಾಯಕವಲ್ಲವೆ?"

"ಇರಬಹುದು. ಆದರೆ ನನ್ನ ಅಭಿಪ್ರಾಯದಲ್ಲಿ ಅದು ಮಧ್ಯವರ್ತಿಯೊಬ್ಬರ ಸಹಾಯದಿಂದ ಪ್ರೀತಿಸಿದಂತಾಗುತ್ತದೆ" ಎಂದರಂತೆ ನೆಹರೂ.

• ಮುರಳೀಧರ ಕುಲಕರ್ಣಿ

ಹಾ. ಮ್ಯ. ಸೂರಿ

"ನೀವು ಏನೇ ಹೇಳಿ ಪ್ರೇಮಮ್ನೋರೇ, ಇಂತಹ ಅವರೆಕಾಳು ಸಾರಿಗೆ ರಾಗಿ ಮುದ್ದೆ ನೆಂಜಿಕೊಂಡು ತಿಂದು ಸುಮಾರು ವರ್ಷ ಆಗಿತ್ತು. ನಿಮ್ಮ ಕೈ ಗುಣ" ಎಂದು ಊಟ ಮಾಡುತ್ತಾ ಅಂದು ಭಾನುವಾರ ನಮ್ಮ ಕೊಟ್ರ ನನ್ನ ಹೆಂಡತಿ ಪ್ರೇಮಳ ಅಡುಗೇನ ಹೊಗಳಿದ್ದೂ ಹೊಗಳಿದ್ದೇ. ಆ ರುಚಿಕಟ್ಟಾದ ಅಡುಗೆಗೆ ಅವಳ ಹಸ್ತಗುಣವೇ ಕಾರಣ ಎಂದು ಅನೇಕರು ಹೇಳಿದ ಮೇಲೆ ನಾನೂ ಹೇಳದಿದ್ದರೆ ಆಗುತ್ತದೆಯೇ?

"ನಳ, ಭೀಮರ ಹಸ್ತಗುಣಾನು ಹಾಗೇ ಕಣಯ್ಯಾ... ಅದರಂತೆಯೇ ಕರ್ಣನ ಹಸ್ತಗುಣ ದಾನದಲ್ಲಿ. ಅದಕ್ಕೇ ಅವನು ದಾನ ಶೂರ ಕರ್ಣ ಆದ" ಎಂದೆ ನಾನು ಊಟದ ಮಧ್ಯದಲ್ಲಿ.

"ಅಲ್ಲವೇ ಮತ್ತೆ? ಅದೇ ನಮ್ಮ ಕಾರ್ಖಾನೆ ಶೀನ ಇದಾನಲ್ಲಾ ಆತನದ್ದೇ ಬೇರೆ..... ಬೇರೆಯವರಿಗೆ ಕೈ ಕೊಡೋದ್ರಲ್ಲೇ ಅವನ ಹಸ್ತಗುಣ....

ಹೊಟ್ಟೆಗೇ ಕೊಟ್ಟದ್ದು



ಎರಡು ವರ್ಷದ ಹಿಂದೆ ಸಾಲತೊಗೊಂಡಿದ್ದ.... ಸತಾಯಿಸ್ತಾ ಇದಾನೆ.... ಕೊಟ್ಟ ಕೈ..'' ಎಂದ ಕೊಟ್ರ.

"ಅಂದಹಾಗೇ..... ಲೇ, ಪ್ರೇಮ.... ನೆನ್ನೆ ಲೇಡಿ ಡಾಕ್ಟರ್ ಲಲಿತಂಗೆ ತೋರಿಸಿದೆಯಾ.... ಅವರ ಹಸ್ತಗುಣ ಪ್ರಸಿದ್ಧ. ಅವರು ಕೊಟ್ಟ ಔಷಧೀಲಿ ಖಾಯಿಲೆ ಬೇಗ ಗುಣ ಆಗತ್ತೆ,'' ಎಂದೆ ಅವಳ ಕಡೆ ತಿರುಗಿ.

"ಇವತ್ತು ಬರ ಹೇಳಿದ್ದಾರೆ.... ಊಟ ಆದ ಮೇಲೆ ಹೋಗಿ ಬರ್ತೀನಿ,'' ಎಂದು ಮಜ್ಜಿಗೆ ಸೌಟು ನನ್ನ ಮೂತಿಯ ಬಳಿ ತಿರುಗಿಸಿ ಹೋದಳು.

ನಾನೂ ಕೊಟ್ರ ಹಾಗೇನೇ ಊಟ ಮುಗಿಸಿ ಎಲೆ ಅಡಿಕೆ ಜಗಿಯುತ್ತಾ, ಹಸ್ತದಲ್ಲಿನ ಬೆರಳಿನ ಮಹತ್ತು, ಏಕಲವ್ಯ ದ್ರೋಣರಿಗೆ ಕೊಟ್ಟ ಹೆಬ್ಬೆಟ್ಟಿನ ಡೊನೇಷನ್ನು, ನಶ್ಯ ಮೂಗಿಗೇರಿಸುವಾಗ ಹೆಬ್ಬೆರಳು ಮತ್ತು ತರ್ಜನಿ ಬೆರಳಿಗೆ ಇರುವ ನಿಕಟ ಸಂಪರ್ಕ, ಶಾಲೆಗಳಲ್ಲಿ ಶಿಷ್ಯರ ಕಪಾಳ ಮೋಕ್ಷಕ್ಕೆ ಗುರುಗಳ ಹಸ್ತ ಹೇಗಿರಬೇಕು ಇತ್ಯಾದಿ ವಿಷಯಗಳನ್ನು ಕರತಲಾಮಲಕವಾಗಿ ಚರ್ಚಿಸುತ್ತಾ ಆ ದಿನ ವಿನೋದವಾಗಿ ಕಳೆದಿದ್ದೆವು.

ಮಾರನೇ ದಿನ ಸಂಜೆ ನಾನು ನಮ್ಮ ಡಾಕ್ಟರ್ ಬಳಿ ಬಂದೆ.

"ನಮಸ್ಕಾರ ಡಾಕ್ಟರೇ,'' ಎಂದೆ.

"ನಮಸ್ಕಾರ ಬನ್ನಿ,'' ಎಂದರು.

"ನಿಮ್ಮ ಹಸ್ತಗುಣ ಚೆನ್ನಾಗಿದೆ. ನೆನ್ನೆ ನೀವು ಕೊಟ್ಟಿದ್ದ ಐದೂ ಗುಳಿಗೆ ತಗೊಂಡೆ.''

"ಹ್ಞಾ.... ಐ..... ದೂ.... ಅರೆ, ನಾನು ಹೇಳಿದ್ದು ಎರಡೇ ಅಲ್ಲವೆ? ಬೆಳಿಗ್ಗೆ ಒಂದು ರಾತ್ರಿ ಒಂದು,'' ಎಂದರು ವೈದ್ಯರು.

"ಹೊಟ್ಟೆ ನೋವು ಜಾಸ್ತಿ ಇತ್ತು. ಬೇಗ ಗುಣ ಆಗಲಿ ಅಂತಾ ಮೂರು ಮೂರು ಗಂಟೆಗೆ ಒಂದರಂತೆ ತಿಂದೆ.... ಏನೂ ಆಗ್ಲಿಲ್ಲ.... ಒಟ್ಟಿನಲ್ಲಿ ನಿಮ್ಮ ಹೊಟ್ಟೆ ಗುಣ.... ಅಲ್ಲ, ಅಲ್ಲ.... ನಿಮ್ಮ ಹಸ್ತಗುಣ..... ಒಳ್ಳೆ ಔಷಧಿ ಕೊಟ್ಟರಿ...: ಹೊಟ್ಟೆ ನೋವಿಲ್ಲ:... ಹಿ... ಹಿ.... ಹಿ....'' ಎಂದೆ.

"ಹ್ಞುಂ, ಸರಿ.... ಇವತ್ತೇನು ಔಷಧಿ ಬೇಡ



ವಲ್ಲ'' ಎನ್ನುತ್ತಲೇ ತಮ್ಮ ಕೊರಳಿನಲ್ಲಿದ್ದ ಸ್ಟೆತೊಸ್ಕೋಪನ್ನು ಪಕ್ಕದಲ್ಲಿ ಕುಳಿತಿದ್ದ ರೋಗಿಯೆದೆಗೆ ಒತ್ತಿ ಹಿಡಿದರು.

"ಗುಣ ಆಗಿದೆ, ಬರ್ತೀನಿ'' ಎಂದು ಹೇಳಿ ಮನೆಗೆ ಬಂದೆ.

ಮನೆಯಲ್ಲಿ ಹೆಂಡತಿ ಪ್ರೇಮ ಆಗಲೆ ಏನನ್ನೋ ಹುಡುಕುತ್ತಾ ಇದ್ದಳು.

"ಏನೇ ಅದೂ?'' ಎಂದು ನನ್ನ ಅಂಬೋಣ.

"ನೆನ್ನೆ ಇಲ್ಲೇ ಇಟ್ಟಿದ್ದೇರೀ....''

"ಏನು ಅಂತ ಹೇಳಬಾರದೇ?''

"ಅದೇ ರೀ... ನೆನ್ನೆ ನಮ್ಮ ಲೇಡಿಡಾಕ್ಟರು ನನ್ನ ಹೊಟ್ಟೆ ಪರೀಕ್ಷೆ ಮಾಡಿ ದಿನ ಆಗಿದೆ ಅಂತಾ... ಐದು ಗುಳಿಗೆ ಕೊಟ್ಟಿದ್ದರು.... ತಗೋಳೋಣಾಂತ ಹುಡುಕ್ತಾ ಇದೀನಿ.... ಸಿಗ್ತಾ ಇಲ್ಲ.... ಅವರ ಹಸ್ತಗುಣ ಚೆನ್ನಾಗಿದೆ ಅಂತ ನೀವೇ ಹೇಳ್ತೀರಲಿಲ್ಲವೆ.... ಅದನ್ನ ಈ ಡಬ್ಬೀಲಿ ಹಾಕಿದ್ದೆ.... ಈಗ ಎಲ್ಲಿ?'' ಎಂದು ಖಾಲಿ ಡಬ್ಬಿ ತೋರಿಸಿದಾಗ ನಾನು ಸುಸ್ತು.

"ಹಯ್ಯೋ.... ಅದನ್ನೇ ನಾನು ನನ್ನ ಹೊಟ್ಟೆ ನೋವಿಂದು ಅಂತ ತಿಳಿದು ಮಂಗನ ಹಾಗೆ ನುಂಗಿದೆನಲ್ಲೇ..... ಒಂದೇ ಬಣ್ಣದ ಮಾತ್ರೆಗಳು.... ಹೋಗಲಿ ಬಿಡು.... ಮಾತ್ರೆ ನಿಂಗಾದರೇನು, ನನಗಾದ್ರೇನು ಇಬ್ಬರಿಗೂ ಹೊಟ್ಟೇಗೇ ಕೊಟ್ಟದ್ದು.... ಇಬ್ಬರ ಡಾಕ್ಟರ ಹಸ್ತ ಗುಣಾನೂ ಚೆನ್ನಾಗಿದೆ'' ಎಂದು ನಗುತ್ತಾ ಹೊಟ್ಟೆಯ ಮೇಲೆ ಕೈಯಾಡಿಸಿಕೊಂಡೆ.



ಇದು 'ಜ್ಞಾನೇಶ್ವರಿ'ಯ ಸಪ್ತ ಶತಮಾನೋತ್ಸವ ವರ್ಷ

ಕನ್ನಡದಲ್ಲಿ ಜ್ಞಾನೇಶ್ವರರು

ಹಿಂದಿಮೂಲ:
ಡಾ. ಶ್ರೀನಿವಾಸ ಹಾವನೂರು

ಕನ್ನಡಕ್ಕೆ
ಎಸ್.ವಿ. ಸುಜಾತ

ಇತ್ತೀಚೆಗೆ ನನಗೆ ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣ ಹಳ್ಳಿಯ ಮನೆಯೊಂದರಲ್ಲಿ ಜ್ಞಾನೇಶ್ವರಿಯ ಮೂಲ ಹಾಗು ಅರ್ಥವನ್ನೊಳಗೊಂಡ ಒಂದು ಪ್ರತಿ ಕಾಣಸಿಕ್ಕಿತು. ಮಹಾರಾಷ್ಟ್ರದಿಂದ ನೂರಾರು ಮೈಲು ದೂರವಿದ್ದ ಆ ಸ್ಥಳದಲ್ಲಿ ಅದನ್ನು ನೋಡಿ ನಾನು ಚಕಿತನಾದೆ. ಅದನ್ನು ಖರೀದಿಸಿದ್ದು ೧೯೦೪ನೇ ವರ್ಷ ಎಂದು ಪ್ರತಿಯಲ್ಲಿ ಬರೆಯಲಾಗಿತ್ತು. ಆ ಮನೆಯ ಯಜಮಾನನ ಅಜ್ಜಿ ದಿನಾಲೂ ಅದನ್ನು ಪಾರಾಯಣಮಾಡುತ್ತಿದ್ದಳು. "ನೀವು ಯಾವ ಪಂಥದವರು?" ನಾನು ಪ್ರಶ್ನಿಸಿದೆ. "ಚಿತ್ಪಾವನ ಪಂಥ"ದವರೆಂದು ಉತ್ತರ ಬಂತು.

ವಿಜಯನಗರ ಕಾಲದಿಂದ ಅನೇಕಾನೇಕ ಚಿತ್ಪಾವನ, ಕರ್ಹಾಡೆ, ಕೊಂಕಣಿ, ಸಾರಸ್ವತ ಮುಂತಾದ ಪಂಥಗಳ ಬ್ರಾಹ್ಮಣ ಕುಟುಂಬಗಳು ಕರ್ನಾಟಕದಲ್ಲಿ ದೂರ ದೂರದವರೆಗೆ ಬಂದು ನೆಲೆಸಿರುವುದು ಇತಿಹಾಸವನ್ನು ತಿರುವಿದಾಗ ಗೊತ್ತಾಗುತ್ತದೆ. ಇಂದಿಗೂ ಅವರ ಓದು ಮತ್ತು ವ್ಯವಹಾರ ಕನ್ನಡದಲ್ಲಿದ್ದರೂ ಅವರ ಮನೆಯಲ್ಲಿ ಆಡುವ ಭಾಷೆ ಮರಾಠಿಯೇ. ಶತಮಾನಗಳಿಂದ ತಮ್ಮ ನೆಲದಿಂದ ದೂರವಿರುವುದರಿಂದ ಹಾಗೂ ಕನ್ನಡ ಭಾಷೆಯ ಸತತ ಪ್ರಭಾವ, ಸಂಪರ್ಕದಿಂದ ಅವರ ಮರಾಠಿ ವಿಚಿತ್ರವಾಗಿ ತೋರುತ್ತದೆ. ಇಂದಿನ ಪುಣೆ ಮತ್ತು ಮುಂಬಯಿಯ ಜನರಿಗೆ ಅವರ ಮರಾಠಿ ಬಹುಶಃ ಅರ್ಥವಾಗುವುದಿಲ್ಲ. ಒಂದು ರೀತಿಯಲ್ಲಿ ಇದು ಸರಿಯೇ. ಆದರೆ ಕರ್ನಾಟಕದಲ್ಲಿ ನೆಲೆಸಿರುವ ಈ ಜನರಿಗೆ ಜ್ಞಾನೇಶ್ವರಿಯ ಮರಾಠಿ ಕೂಡ ಅರ್ಥವಾಗಿರಲಾರದು. ಆದಾಗ್ಯೂ ಜ್ಞಾನೇಶ್ವರಿ ಮನಾಚೆ ಶ್ಲೋಕ, ದಾಸಬೋಧ, ಹರಿಭಕ್ತಿವಿಜಯ ಇತ್ಯಾದಿ ಧಾರ್ಮಿಕ ಗ್ರಂಥಗಳನ್ನು ಓದುವ, ಅಧ್ಯಯನ ಮಾಡುವ ಅಭ್ಯಾಸ ಅವರಿಗಿದೆ. ಅರ್ಥಾತ್ ಅವರಿಗೆ ತಮ್ಮ ಮೂಲ ಪ್ರದೇಶದೊಂದಿಗೆ ಸಂಪರ್ಕ ಉಳಿಸಿಕೊಳ್ಳುವ ಏಕಮಾತ್ರ ಸಾಧನ ಈ ಧರ್ಮಗ್ರಂಥಗಳೇ

ಆಗಿವೆ. ಏನೇ ಇರಲಿ, ಮಧ್ಯಯುಗದಿಂದ ಜ್ಞಾನೇಶ್ವರಿ ಕರ್ನಾಟಕದ ಮೂಲೆಮೂಲೆಯಲ್ಲಿ ವ್ಯಾಪಿಸಿ ಜನರ ಮನಸ್ಸಿನಲ್ಲಿ ನೆಲಸಿದೆ.

ಈ ಜನರು ಆ ಗ್ರಂಥವನ್ನು ಅರ್ಥಮಾಡಿಕೊಳ್ಳದೆಯೇ ಪಠಿಸುತ್ತಾರೆಂದಲ್ಲ. ಅದನ್ನು ಕನ್ನಡದಲ್ಲಿ ಗದ್ಯದಲ್ಲಿ ಓದಿ ಅರ್ಥಮಾಡಿಕೊಳ್ಳುವ ಪ್ರವೃತ್ತಿ ಅನೇಕರಲ್ಲಿದೆ. ಕಳೆದ ಏಳೆಂಟು ದಶಕಗಳಲ್ಲಿ ಅನೇಕರಿಂದ ಅದರ ಕನ್ನಡ ಅನುವಾದ ನಡೆದಿರುವುದೇ ಇದಕ್ಕೆ ಸಾಕ್ಷಿ.

ಈ ಕಾರ್ಯವನ್ನು ಆರಂಭಿಸಿದವರಲ್ಲಿ ಪ್ರಪ್ರಥಮ ವ್ಯಕ್ತಿ ರಾಘವೇಂದ್ರ ಸುಬ್ಬರಾವ್ ಮೂಡ್ಕಟ್ಟೆ ಅವರು. ವೃತ್ತಿಯಿಂದ ಅವರು ತಹಶೀಲ್ದಾರರು. ಆದರೆ ಅವರು ತಮ್ಮನ್ನು ಬಾರಿಬಾರಿಗೂ 'ಗುರು ದತ್ತಾತ್ರೇಯರ ಭಕ್ತ'ನೆಂದು ಕರೆದುಕೊಂಡಿದ್ದಾರೆ. ಅವರಿಗಿದ್ದ ಶ್ರದ್ಧೆಯೇ ಈ ಕಾರ್ಯದಲ್ಲಿ ಮುಂದುವರೆಯಲು ಪ್ರೇರಣೆಯಾಗಿತ್ತು. ಇದಕ್ಕೆ ಮುಂಚೆ ಅವರು ಕನ್ನಡದಲ್ಲಿ ಎಂದಿಗೂ ಪದ್ಯ ರಚನೆ ಮಾಡಿರಲಿಲ್ಲ. ನಿಪ್ಪಾಣಿ'ಯಲ್ಲಿದ್ದ ವಿಷ್ಣು ಪಂತ ಎಂಬ ಗುರುಗಳ ಆದೇಶದಂತೆ ಅವರು ಈ ಕಾರ್ಯವನ್ನು ಕೈಗೆತ್ತಿಕೊಂಡರು. ಆರಂಭಕ್ಕೆ ಅವರು ೯-೧೨-೧೮ನೇ ಅಧ್ಯಾಯಗಳ ಪದ್ಯಾನುವಾದ ಮಾಡಿದರು. ಮೂರು ತಿಂಗಳಲ್ಲಿ ಅದನ್ನು ಪೂರೈಸಿದರು. ಅನಂತರ ಮೊದಲನೆಯ ಅಧ್ಯಾಯದಿಂದ ಮುಂದುವರೆಯುತ್ತಾ ಬಂದಂತೆ ೧೩ನೇ ಅಧ್ಯಾಯಕ್ಕೆ ಬಂದಾಗ ಅವರ ಕೈ ತಡೆಯಿತು. ಅವರಿಗೆ 'ಚರಕಸಂಹಿತೆ'ಯ 'ಶರೀರ ಸಾಧನ' ಪ್ರಕರಣ ಓದುವಂತೆ ಕನಸಿನಲ್ಲಿ ಆದೇಶವಾಯಿತೆಂದು ಹೇಳುತ್ತಾರೆ. ಏನೇ ಇರಲಿ, ಇಡಿ ಜ್ಞಾನೇಶ್ವರಿಯ ಅನುವಾದ ಕಾರ್ಯವನ್ನು ಅವರು ಪೂರ್ತಿಗೊಳಿಸಿದರು. ಅದನ್ನು ಯಾರಾದರೂ ತಿದ್ದಬೇಕೆಂದು ಯೋಚಿಸಿದರು. ಮತ್ತೆ ಅವರಿಗೆ ಕುಮಟಾದ ನಾರಾಯಣಾಚಾರ್ಯ ಎಂಬವರ ಬಳಿಗೆ ಹೋಗಲು ಕನಸಿನಲ್ಲಿ ಆದೇಶ ದೊರಕಿತು.

ಕೆಲವರಿಂದ ಹಣಕಾಸಿನ ನೆರವು ಪಡೆದು, ತಮ್ಮ ಹಣವನ್ನೂ ಸೇರಿಸಿ ಆ ಗ್ರಂಥದ ಎರಡು ಭಾಗಗಳನ್ನು ಪ್ರಕಟಿಸಿದರು. ಈ ಘಟನೆ ಅವರ ಶ್ರದ್ಧೆ ಹಾಗೂ ನಿಷ್ಠೆಯ ದ್ಯೋತಕವಾಗಿದೆ.

ಭಾಮಿನೀ ಷಟ್ಪದಿಯಲ್ಲಿ ಆರು ಸಾವಿರ ನುಡಿಗಳಲ್ಲಿ ಈ ಕೃತಿ ಅನುವಾದಗೊಂಡಿದೆ. ಇದು ಹಳೆಗನ್ನಡದ ಜನಪ್ರಿಯ ಛಂದೋರೂಪವಾಗಿದೆ. ಆರು ಸಾಲಿನ ರಚನೆಯಾದ್ದರಿಂದ ಮರಾಠಿಯ 'ಓವಿ' ಛಂದಸ್ಸಿನ ವಿಸ್ತೃತ ರೂಪವಾಗಿದೆ. ಮೂಲ ಕೃತಿಯ ಒಂದೂ ಭಾವವನ್ನು ಬಿಟ್ಟಿಲ್ಲ. ಅನುವಾದದಲ್ಲಿ ಶಬ್ದಕ್ಕಾಗಿ ತಡಕಾಡಿಲ್ಲ. ಸುಲಭವಾಗಿ ಓದಬಲ್ಲ ಹಾಗೂ ಅಭ್ಯಾಸ ಮಾಡಲು ಯೋಗ್ಯವಾದ ರೂಪಾಂತರ ಸಿದ್ಧಪಡಿಸಿದ ಮೂಡಕಟ್ಟೆಯವರ ಪ್ರಯತ್ನ ಪ್ರಶಂಸನೀಯ. ಶ್ರಾವಣ ಪ್ರತಿಪದೆಯಿಂದ ಕೃಷ್ಣಾಷ್ಟಮಿಯವರೆಗೆ (ಎಂಟು ದಿನಗಳು) ಯಾವ ಯಾವ ಅಧ್ಯಾಯವನ್ನು ಓದಬೇಕೆಂಬುದರ ಬಗ್ಗೆಯೂ ವಿವರವನ್ನು ಇದರಲ್ಲಿ ನೀಡಲಾಗಿದೆ. ಲಾಲಿತ್ಯಪೂರ್ಣವಾದ ಹಾಗೂ ಶಾಶ್ವತ ಸುಖ ಒದಗಿಸಬಲ್ಲ ಈ ಕೃತಿಯ ಪಠಣ ಯಾವುದೇ ಆಸ್ತಿಕ ವ್ಯಕ್ತಿಯ ಮನಸ್ಸಿಗೆ ಸಂತೋಷ ಕೊಡುವಂಥಾದ್ದಾಗಿದೆ. ಆದರೆ ಮೂಲಕೃತಿಯ ಭಾವವನ್ನು ಗ್ರಹಿಸುವಲ್ಲಿ ಇದು ಎಷ್ಟರಮಟ್ಟಿಗೆ ಸಫಲವಾಗಿದೆ ಎನ್ನುವುದು ಅಭ್ಯಾಸ ಮಾಡಬೇಕಾದ ವಿಚಾರ.

> 'ಅನುಭವಾಮೃತ', 'ಚಾಂಗದೇವ' ಪ್ರಶಸ್ತಿ 'ಹರಿಪಥ', 'ನಮನ' ಹಾಗೂ 'ಅಭಂಗ ಗಾಥಾ'ಗಳಂತಹ ಅನೇಕ ಕೃತಿಗಳನ್ನು ಜ್ಞಾನೇಶ್ವರರು ರಚಿಸಿರುವರಾದರೂ ಅವರು ಬರೆದ ಕೃತಿಗಳಲ್ಲಿ 'ಜ್ಞಾನೇಶ್ವರಿ'ಯೇ ಎದ್ದು ಕಾಣುವಂಥಾದ್ದು. ಭಗವದ್ಗೀತೆಯನ್ನಾಧರಿಸಿದ ಅದು ಲಯಬದ್ಧವಾದ ಕಾವ್ಯ ರಚನೆಯಿಂದಾಗಿಯೂ ಜನಸಾಮಾನ್ಯರ ಮನಸ್ಸನ್ನು ಸೆಳೆದದ್ದಲ್ಲದೆ ಮಹಾರಾಷ್ಟ್ರದ ಭಕ್ತಿಪಂಥದ ಅದರಲ್ಲಿಯೂ ವಿಶೇಷತಃ ವಾರಕರಿಪಂಥದ ಸಂತಶ್ರೇಷ್ಠರ ಕಣ್ಮಣಿಯಾದದ್ದು ಆಶ್ಚರ್ಯವೇನಲ್ಲ.

ಇದರ ನಂತರ ೨೫ ವರ್ಷಗಳವರೆಗೆ ಜ್ಞಾನೇಶ್ವರಿಯ ಅನುವಾದದ ಬಗ್ಗೆ ಯಾರೂ ಗಮನ ಹರಿಸಲಿಲ್ಲ. ಸ್ವಾತಂತ್ರ್ಯಾನಂತರ ಜನರಿಗೆ ಇದನ್ನು ಪಠಿಸುವುದಕ್ಕಿಂತ ಅದರ ವಿಚಾರಗಳನ್ನು ತಿಳಿ

ಯುವ ಅಪೇಕ್ಷೆ ಹೆಚ್ಚಿದ್ದರಿಂದ ಅದರ ಗದ್ಯಾನುವಾದಕ್ಕೆ ಪ್ರೋತ್ಸಾಹ ದೊರಕಿತು. ಕಾಶೀನಾಥ ಕುರಡೀಕೇರಿ, ವಿ.ಕೆ. ಕುಲಕರ್ಣಿ, ವಿ.ಎಸ್.ದೇಶಪಾಂಡೆ ಮತ್ತು ಮೆಲೂರ್‌ನ ಬ್ರಹ್ಮ ವಿದ್ಯಾಶ್ರಮದ ಸ್ವಾಮೀಜಿ ಕೃಷ್ಣ ಭಾರತೀ ಈ ಕೃತಿಯ ಕನ್ನಡ ರೂಪಾಂತರ ಮಾಡಿದರು. ಇವೆಲ್ಲ ಗದ್ಯ ರಚನೆಗಳು. ಪ್ರವಚನ ರೂಪದಲ್ಲಿವೆ. ಎಲ್ಲಕ್ಕಿಂತ ಮಹತ್ವದ ವಿಚಾರವೆಂದರೆ ಇವುಗಳ ಅನೇಕ ಆವೃತ್ತಿಗಳು ಹೊರಬಂದಿವೆ (ಕೊನೆಯದನ್ನು ಬಿಟ್ಟು). ಈ ಎಲ್ಲ ಅನುವಾದಕರೂ ದಕ್ಷಿಣ ಕನ್ನಡ ಜಿಲ್ಲೆಯವರು ಹಾಗೂ ಇದನ್ನು ಅಭ್ಯಾಸಮಾಡುವವರೂ ಈ ಪ್ರದೇಶದವರೇ ಎನ್ನುವುದು ಗಮನಿಸತಕ್ಕ ವಿಷಯ.

'ಸಂತಶರಣ' ಎಂಬ ಕಾವ್ಯನಾಮದಿಂದ ಕನ್ನಡಿಗರಿಗೆ ಜ್ಞಾನೇಶ್ವರಿಯ ಪರಿಚಯ ಮಾಡಿಕೊಟ್ಟಿರುವ ವ್ಯಕ್ತಿಯ ಬಗ್ಗೆ ಪ್ರತ್ಯೇಕವಾಗಿ ಹಾಗೂ ವಿಶೇಷವಾಗಿ ಉಲ್ಲೇಖಮಾಡುವುದು ಅಗತ್ಯ. ಅವರ ಕಾರ್ಯವು ಸಣ್ಣ ಪ್ರಮಾಣದ್ದಾದರೂ ತನ್ನಷ್ಟಕ್ಕೆ ವಿಶೇಷ ಮಹತ್ವ ಪಡೆದಿದೆ. ಅವರು ಜ್ಞಾನೇಶ್ವರರ 'ಹರಿಪಾಠ'ವನ್ನು ಅನುವಾದಿಸುತ್ತಾ ನಾಮ ಮಹಿಮೆಯ ವಿವೇಚನೆಯನ್ನೂ ಮಾಡಿದ್ದಾರೆ. ಮತ್ತೊಂದು ಕೃತಿಯಲ್ಲಿ ಜ್ಞಾನೇಶ್ವರಿಯ ೧೦೮ 'ಓವಿ'ಗಳನ್ನು ಆಯ್ದು ಸರಳ ಗದ್ಯದಲ್ಲಿ ಅನುವಾದಿಸಿದ್ದಾರೆ.

ಜನಮನದಲ್ಲಿ ಇಷ್ಟು ನಿಕಟ ಸಂಬಂಧವಿದ್ದಂಥ ಈ ಕೃತಿಯ ನೆರಳು ಕೂಡ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಎಲ್ಲಿಯೂ ಕಾಣದೊರೆಯುವುದಿಲ್ಲ. ಹಾಗೆ ನೋಡಿದರೆ ಯಾವುದೇ ಪ್ರಸಿದ್ಧ ಮರಾಠಿ ಕೃತಿ ಪ್ರಾಚೀನ ಕನ್ನಡ ಸಾಹಿತ್ಯ ರಚನೆಯ ಕಾಲದಲ್ಲಿ ಅನುವಾದಗೊಂಡಿಲ್ಲ. ಇದಕ್ಕೆ ವಿರುದ್ಧವಾಗಿ ಕನ್ನಡದ ಎರಡು-ಮೂರು ಕೃತಿಗಳು ೧೭ನೇ ಶತಮಾನದಲ್ಲಿ ಮರಾಠಿಗೆ ಅನುವಾದಗೊಂಡಿವೆ. (ಕುಮಾರವ್ಯಾಸನ ಭಾರತದ ಕೆಲವು ಅಧ್ಯಾಯಗಳು, ನಿಜಗುಣ ಶಿವಯೋಗಿಗಳ ಒಂದು ಕೃತಿ ಮುಂತಾದವು) ಕಳೆದ ಶತಮಾನದಲ್ಲಿ ಹಾಗೂ ಇತ್ತೀಚೆಗೆ ಮಾತ್ರ ಮರಾಠಿಯ ಕೆಲವು ಕೃತಿಗಳು ಕನ್ನಡದಲ್ಲಿ ಉಪಲಬ್ಧವಿವೆ.

ಇದಕ್ಕೆ ಒಂದು ಸ್ಪಷ್ಟೀಕರಣವೂ ಇದೆ-ಮರಾಠಿ ಸಾಹಿತ್ಯ ತನ್ನ ಆರಂಭಾವಸ್ಥೆಯಲ್ಲಿದ್ದಾಗ ಕನ್ನಡ ಸಾಹಿತ್ಯ ಆರಂಭವಾಗಿ ಮೂರು ಶತಮಾನಗಳು ಕಳೆದಿದ್ದವಲ್ಲದೆ ಅದು ಕ್ರಿ. ಶ. ೧೩ನೇ ಶತಮಾನದ ಹೊತ್ತಿಗೆ ಪ್ರಬುದ್ಧಾವಸ್ಥೆಗೆ ತಲುಪಿತ್ತು. ಮತ್ತೊಂದು ಕಾರಣವೂ ಇದೆ. ಕನ್ನಡದಲ್ಲಿ ಜೈನ ಮತ್ತು ವೀರಶೈವ ಸಾಹಿತ್ಯಕ್ಕೆ ಹೋಲಿಸಿದರೆ ಬ್ರಾಹ್ಮಣ ಸಾಹಿತ್ಯದ ಪ್ರಮಾಣ ಕಡಿಮೆ ಮತ್ತು ಅದರ ಆರಂಭವೂ ಕೊನೆಕೊನೆಗೆ ಆಗಿದ್ದುದು. ಮೂರನೆಯ ಕಾರಣವೆಂದರೆ ಭಗವದ್ಗೀತೆಯ ಕನ್ನಡ ರೂಪಾಂತರಕ್ಕೆ ನಮ್ಮ ಜನ ಕಿಂಚಿತ್ತೂ ಗಮನಕೊಡದಿದ್ದುದು. ಮೂಲ ಮಹಾಭಾರತವನ್ನು ಕನ್ನಡಕ್ಕೆ ಸಮರ್ಥವಾಗಿ ತಂದುಕೊಟ್ಟ ಪಂಪ ಮತ್ತು ಕುಮಾರವ್ಯಾಸರು ಮೂಲ ಭಗವದ್ಗೀತೆಯನ್ನು ಹೆಸರಿಗೆ ಮಾತ್ರ ಉಪಯೋಗಿಸಿಕೊಂಡರು. ಮೊಟ್ಟಮೊದಲಿಗೆ ಗೀತೆಯನ್ನು ಕನ್ನಡಕ್ಕೆ ಅನುವಾದಿಸಿದವನು ೧೭ ನೇ ಶತಮಾನದ ನಾಗರಸ. ಸ್ಮಾರ್ತ ಭಾಗವತ ಸಂಪ್ರದಾಯದ ಈ ಕವಿ ಪಂಢರಾಪುರದ 'ವಿಠ್ಠಲರಾಯ'ನನ್ನು ಸ್ಮರಿಸಿದ್ದಾನೆ. ಆದ್ದರಿಂದ ಅವನಿಗೆ ಮರಾಠಿ ಸಂತ ಸಾಹಿತ್ಯ ತಿಳಿದಿತ್ತೆಂದು ಭಾವಿಸಬಹುದು. ಹೀಗೆ ಮೂಲ ಭಗವದ್ಗಿತೆಯೇ ಕನ್ನಡದಲ್ಲಿ ಅನುವಾದಗೊಂಡಿಲ್ಲವೆಂದಾಗ ಅದರ ಭಾಷ್ಯವಾದ 'ಜ್ಞಾನೇಶ್ವರಿ'ಯ ಕನ್ನಡ ಅನುವಾದ ಆಗದಿದ್ದುದು ಆಶ್ಚರ್ಯದ ಮಾತೇನಲ್ಲ.

ಇದಕ್ಕೆ ವಿರುದ್ಧವಾಗಿ ಮಧ್ಯಯುಗದಲ್ಲಿ ಕನ್ನಡದ ಪ್ರಭಾವವೇ ಮರಾಠಿ ಸಾಹಿತ್ಯದ ಮೇಲಾಗಿದ್ದಂತೆ ಕಂಡುಬರುತ್ತದೆ. ೧೩ನೇ ಶತಮಾನದವರೆಗೆ ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ರಾಜರ ಅಧಿಕಾರ ಇಂದಿನ ಮಹಾರಾಷ್ಟ್ರದ ಬಹುತೇಕ ಪ್ರದೇಶಗಳಲ್ಲಿತ್ತು. ಕರ್ನಾಟಕದ ರಾಜಕೀಯ, ಭಾಷಾ ಪ್ರಭುತ್ವ, ಸಾಹಿತ್ಯ ಸಿದ್ಧಿ ಹಾಗೂ ಆಧ್ಯಾತ್ಮಿಕ ಶ್ರೇಷ್ಠತೆಯ ಕಾರಣದಿಂದ ಕನ್ನಡವು ಮರಾಠಿಯನ್ನು ಪ್ರಭಾವಿತಗೊಳಿಸುವ ಪರಿಸ್ಥಿತಿಯೇ ಇದ್ದಿತು. ಈ ಕಾರಣದಿಂದಾಗಿಯೇ ಮಹಾರಾಷ್ಟ್ರದ ಹೆಚ್ಚಿನಂಶ

ಆಡಳಿತ ಶಿಲಾಲೇಖನಗಳು ಕನ್ನಡದಲ್ಲಿಯೇ ಇವೆ. ದೂರದ ಮುಂಬಯಿಯ ಸಮೀಪದ ಡೊಂಬಿವಲಿಯಂಥ ಹಳ್ಳಿಯ ಹೆಸರೂ ಕನ್ನಡ ಮೂಲದಿಂದ ಬಂದಿದೆ ಹಾಗೂ ಪಂಢರಾಪುರ ಎರಡೂ ಪ್ರದೇಶಗಳ ಜನರಿಗೆ ಏಕಪ್ರಕಾರವಾಗಿ ಶ್ರದ್ಧೆಯ ಕೇಂದ್ರವಾಗಿದೆ ಎನ್ನುವುದು ಗಮನಿಸತಕ್ಕ ವಿಷಯ.

ಈ ಕಾರಣದಿಂದಾಗಿ ಮರಾಠಿ ಸಾಹಿತ್ಯದ ಪ್ರಾರಂಭದ ಕೃತಿಗಳ ಮೇಲೆ ಕನ್ನಡದ ಪ್ರಭಾವ ಆಗಿದ್ದು ಸ್ವಾಭಾವಿಕವಾಗಿದ್ದಿತು. ಜ್ಞಾನೇಶ್ವರಿಯೂ ಇದಕ್ಕೆ ಹೊರತಲ್ಲ. ಜ್ಞಾನೇಶ್ವರಿಯ ಕೆಲವು ಅಭಂಗಗಳಲ್ಲಿ ಕನ್ನಡ ವಾಕ್ಯಗಳು ಸಿಗುತ್ತವೆ. 'ಕನಾಡಾ ಹೋ ವಿಠಲೂ' ಅಭಂಗವು ಕವಿಯ ಕನ್ನಡ ಪ್ರಜ್ಞೆ ಮತ್ತು ಕನ್ನಡ-ಮರಾಠಿ ಬಾಂಧವ್ಯದ ದ್ಯೋತಕವಾಗಿದೆ. ಒಂದು ಅಭಂಗವಂತೂ ಕನ್ನಡದಲ್ಲಿಯೇ ಇದೆ. ಅದರ ಬಗ್ಗೆ ಹೆಚ್ಚು ಆಳವಾಗಿ ಚಿಂತಿಸಬೇಕು.

ಈ ಕನ್ನಡ ಗೀತೆ 'ಸಕಲ ಸಂತ ಗಾಥಾ' ಎಂಬ ಬೃಹತ್ ಸಂಗ್ರಹದಲ್ಲಿ ಸೇರಿಕೊಂಡಿತ್ತು. ಕನ್ನಡ ತಿಳಿಯದವರ ಕಾರಣದಿಂದಾಗಿ ಅದು ಅನೇಕ ಕಡೆ ತಪ್ಪಾಗಿ ಮುದ್ರಿತವಾಗಿದೆ. 'ಕಸ್ತೂರಿ' ಮಾಸಪತ್ರಿಕೆಯ ೧೯೮೫ರ ಮೇ ತಿಂಗಳ ಸಂಚಿಕೆಯಲ್ಲಿ ಗಜೇಂದ್ರಗಡಕರ ಶಾಮರಾವ್ ಅವರು ಈ ಗೀತೆಯ ಸರಿಯಾದ ರೂಪ ಯಾವುದಿರಬಹುದೆಂದು ವಿವೇಚಿಸಿದ್ದಾರೆ. ಅದಕ್ಕೆ ಪ್ರತಿಕ್ರಿಯೆಗಳೂ ಪ್ರಕಟವಾಗಿವೆ.

ಆದರೆ ೧೯೧೨ರಲ್ಲಿಯೇ ನಾ. ಶ್ರೀ. ರಾಜಪುರೋಹಿತ ಎಂಬ ಇತಿಹಾಸ ಅಧ್ಯಾಪಕರು 'ಕರ್ನಾಟಕ ಮತ್ತು ಮಹಾರಾಷ್ಟ್ರ' ಎಂಬ ಕೇಸರಿ ಲೇಖನಮಾಲೆಯಲ್ಲಿ ಇದನ್ನು ಪ್ರಕಟಿಸಿದ್ದಾರೆ. ನನ್ನ ಪ್ರಕಾರ ಅದೇ ಹೆಚ್ಚು ಔಚಿತ್ಯಪೂರ್ಣವಾಗಿದೆ.

"ಅಕ್ಕಾ ನೀಕೇಳೆ, ಚಿಕ್ಕನ ಮಾತು,
ಕಾರಲೆದಾಸಿಗೆ ಮರುಳಾದನೆ
ಚೆಲುವನೆ ಚೆಲುವನೆ ಪಂಢರಿರಾಯ
ಚೆಲುವಾಗಿ ಎಲ್ಲಿ ದೊರಕುವನೆ
ಪುಂಡಲೀಕನ ಭಕ್ತಿಗೆ ಬಂದಾ
ರಕುಮಾದೇವೀವರ ವಿಠ್ಠಲನೆ"

ಇಲ್ಲಿ 'ಅಕ್ಕ' ಎಂಬ ಸಂಬೋಧನೆ ಬಹುಶಃ ಒಬ್ಬ ಗೋಪಿ ಮತ್ತೊಬ್ಬಳಿಗೆ ಹೇಳಿರಬೇಕು. 'ಚಿಕ್ಕ' ಎಂದರೆ ವಿಠ್ಠಲ (ಬಾಲಕೃಷ್ಣ) ಕಾರಲೆದಾಸಿ ಎಂದರೆ ಯಾರು? ಜ್ಞಾನದೇವನ ಸೋದರಿ ಮುಕ್ತಾ ಇರಬಹುದೇ? ಅಥವಾ ರಾಜಪುರೋಹಿತರ ಮತದಂತೆ ನಾಮದೇವರ ಮನೆಯಲ್ಲಿ ಕೆಲಸಮಾಡುತ್ತಿದ್ದ ಜನಾದಾಸಿ ಇರಬಹುದು. ನಾಮದೇವ ಜ್ಞಾನದೇವನ ಸಮಕಾಲೀನ. ಆದರೂ ಜ್ಞಾನದೇವನ ಅಲ್ಪಾಯುಷ್ಯದಲ್ಲಿ ಜನಾಬಾಯಿ ಜ್ಞಾನದೇವನ ಭಕ್ತಿಭಾವದಿಂದ ಅಷ್ಟೊಂದು ಪ್ರಭಾವಿತಳಾಗಿದ್ದಳೆ?

ಈ ಚಿಕ್ಕ ಪದ್ಯ ತನ್ನಷ್ಟಕ್ಕೆ ಅಮೂಲ್ಯವಾದ



ದ್ದೇನೂ ಅಲ್ಲ. ಆದರೆ ಐತಿಹಾಸಿಕ ದೃಷ್ಟಿಯಿಂದ ಮಹತ್ವಪೂರ್ಣವಾಗಿದೆ. ಮೊದಲನೆಯದಾಗಿ ಇಂದು ಮಹಾರಾಷ್ಟ್ರ ಎಂಬ ಹೆಸರಿನಿಂದ ಗುರುತಿಸುವ ಅನೇಕ ಪ್ರದೇಶಗಳಲ್ಲಿ (ಸೊಲ್ಲಾಪುರ ಮುಂತಾದ ಕಡೆ) ಕನ್ನಡದ ಜೊತೆಗೆ ಮರಾಠಿಯ ಬಳಕೆ ಇತ್ತು. ಮತ್ತೊಂದು ವಿಷಯವೆಂದರೆ ಈ ಹಾಡು ಕನ್ನಡದ ಮೊದಲನೇ ಹರಿಕೀರ್ತನೆ. ಮರಾಠಿಯಲ್ಲಿ ಸಂತಸಾಹಿತ್ಯವಿದ್ದಂತೆ ಕನ್ನಡದಲ್ಲಿ ಹರಿದಾಸ ಸಾಹಿತ್ಯ. ಅದರ ಮೂಲ ಪ್ರೇರಣೆ ಪಂಢರಿನಾಥ ವಿಠ್ಠಲನೇ. ಕನ್ನಡದ ಹಲವಾರು ಹರಿದಾಸರು ತಮ್ಮ ಹೆಸರಿನ ಮುಂದೆ ವಿಠಲ ಎಂಬ ಪದ ಜೋಡಿಸಿದ್ದಾರೆ. (ಪುರಂಧರ ವಿಠಲ, ರಂಗವಿಠಲ, ಜಗನ್ನಾಥ ವಿಠಲ) ನಮಗೆ ಪರಿಚಿತ

ವಾಗಿರುವ ಈ ಹರಿದಾಸಸಾಹಿತ್ಯ ೧೪ನೇ ಶತಮಾನದ ಕೊನೆಯ ಭಾಗದಿಂದ ಆರಂಭವಾಗುತ್ತದೆ. ಆದ್ದರಿಂದ ೧೩ನೇ ಶತಮಾನದ ಈ ಅಭಂಗ ಕನ್ನಡದ ಮೊಟ್ಟಮೊದಲ ದಾಸ-ಸಾಹಿತ್ಯ ಎಂದಾಗುತ್ತದೆ.

ಈ ವಿಚಾರಗಳನ್ನು ಗಮನದಲ್ಲಿರಿಸಿಕೊಂಡು ಜ್ಞಾನೇಶ್ವರಿಯ ಮೇಲೆ ಕನ್ನಡದ ಪ್ರಭಾವವನ್ನು ನೋಡಬಹುದು. ಮೊದಲಿಗೆ ಅದರಲ್ಲಿ ದೊರಕುವ ನೂರಾರು ಕನ್ನಡ ಪದಗಳು. ಪ್ರಾದೇಶಿಕ ಭಾಷೆಯಂತೆ ಅದರಲ್ಲಿ ಕಿಂಚಿತ್ ಬದಲಾವಣೆ ಕಂಡುಬರುತ್ತದೆ. ಈ ಶಬ್ದಗಳು ಲಾಲಿತ್ಯ ಪೂರ್ಣವಾಗಿವೆಯಷ್ಟೆ ಅಲ್ಲ, ಜೊತೆಗೆ ನಿಜವಾದ ಕವಿಯ ಪದ್ಯರಚನೆಯ ಮಾಂತ್ರಿಕ ಶಕ್ತಿಯನ್ನೂ ಪಡೆದಿವೆ. ಇದರಿಂದ ಕನ್ನಡದ ಶಬ್ದ ಸಂಪತ್ತು, ಮರಾಠಿ ಜನಮನದ ಆಳದವರೆಗೂ ವ್ಯಾಪಿಸಿತ್ತೆಂಬುದು ನೆನಪಾಗುತ್ತದೆ.

ಕನ್ನಡದ ನೂರಾರು ಶಬ್ದಗಳು ಈ ಕೃತಿಯಲ್ಲಿ ಕಾಣದೊರೆಯುತ್ತವೆ. ಇದರಲ್ಲಿ ಸಂದೇಹವೇ ಇಲ್ಲ. ರಾಜಪುರೋಹಿತರು ೧೦-೧೨ ಶಬ್ದಗಳ ಪಟ್ಟಿ ಕೊಟ್ಟಿದ್ದರು. ದ.ವೆ. ಕೇತ್ಕರರು ಅಂಕ್ಕಿಂತ ಹೆಚ್ಚು ಶಬ್ದಗಳ ಪಟ್ಟಿ ನೀಡಿದ್ದಾರೆ. (ನವಭಾರತ ಸಂ. ೧೨) ಉದಾಹರಣೆಗಾಗಿ ಕೆಲವು ಶಬ್ದಗಳನ್ನು ಇಲ್ಲಿ ಉಲ್ಲೇಖಿಸುತ್ತಿದ್ದೇನೆ.

ಜ್ಞಾನೇಶ್ವರಿಯಲ್ಲಿ ದೊರೆಯುವ ಶಬ್ದ	ಕನ್ನಡರೂಪ
ಅಡವೀಡಾ	ಅಡವಿ
ಅಡದರ	ಅಡದರ
ಉಲಿಂಗ	ಅಳಿಗ (ಊಳಿಗ)
ಕಡಿಯಾಳಿ	ಕಡಿವಾಣ
ಕೆಂಡ	ಕೆಂಡ
ಗಂಡು	ಗಂಡು
ಮದವಿ	ಮದುವೆ

ಶಬ್ದಗಳನ್ನು ನೋಡಿಯಾಯಿತು. ಇನ್ನು ಜ್ಞಾನೇಶ್ವರಿಯ ಸಂದರ್ಭದಲ್ಲಿ ಕನ್ನಡ-ಮರಾಠಿ ವ್ಯಾಕರಣದ ಸಾಹಚರ್ಯದ ಬಗ್ಗೆ ಸ್ವಲ್ಪ ಗಮನ ಹರಿಸಬಹುದು. ಈ ಬಗ್ಗೆ ಆದ್ಯ ರಂಗಾಚಾರ್ಯರು ಕೆಲಸ ಮಾಡಿದ್ದಾರೆ. ಆದರೆ ಅವರು ವಾ.ಲ. ಕುಲಕರ್ಣಿಯವರ ಲೇಖನ ಗಮನಿಸಿಲ್ಲವೆಂದು ತೋರುತ್ತದೆ. (ಆಗ ಅವರು ಆರ್.ವಿ. ಜಹಗೀರದಾರ್ ಆಗಿದ್ದರು) ಲಂಡನ್ ವಿ.ವಿ.ಕ್ಕೆ ಎಂ.ಎ. ಪದವಿಗಾಗಿ ಈ ಪ್ರಬಂಧ ಸಲ್ಲಿಸಲಾಗಿತ್ತು. ಕೆಲವು ಬದಲಾವಣೆಗಳೊಂದಿಗೆ ಈ ಪ್ರಬಂಧ (೧೯೫೨-೫೩) Annals M. Bhandarkar Oriental Research Institute ಪತ್ರಿಕೆಯಲ್ಲಿ ಬಂದಿತ್ತು ಈ ವಿಷಯದ ಬಗ್ಗೆ ಸಂಶೋಧನೆ ನಡೆಸಲು ಅವರಿಗೆ Bull M. the School M. Oriental Studies ಪತ್ರಿಕೆಯಲ್ಲಿ ಪ್ರಕಟವಾದ (೧೯೨೭) The Grammer of Jnaneswari ಲೇಖನದಿಂದ ಪ್ರೇರಣೆ ದೊರಕಿರಬೇಕು. ಅದರ ಲೇಖಕರು ಡೊಡೊರೆಟ್. ಅವರ ಹೇಳಿಕೆಯಂತೆ ಪ್ರಾಚೀನ ಮರಾಠಿಯ ಕೆಲವು ವ್ಯಾಕರಣ ವಿಶೇಷಗಳಿಗೆ ಇಂಡೋ-ಆರ್ಯನ್ ವ್ಯಾಕರಣ ಪ್ರಕ್ರಿಯೆಯ ಅನುಸಾರ ಅರ್ಥೈಸಲು ಸಾಧ್ಯವಿಲ್ಲ. ಬಹುಶಃ ಇದರಿಂದಲೇ ಜಹಗೀರದಾರರು ಈ ವೈಶಿಷ್ಟ್ಯಗಳಿಗೆ ಸಮೀಪದ ಭಾಷೆಯಾದ ಕನ್ನಡದ (ರಾಜಕೀಯದ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಮರಾಠಿಗಿಂತ ಶಕ್ತಿಶಾಲಿಯಾಗಿದ್ದರಿಂದ) ವ್ಯಾಕರಣ ನಿಯಮಗಳಿಗನುಸಾರ ಅರ್ಥೈಸಿರಬಹುದಾಗಿದೆ. ಈ ಬಗ್ಗೆ ವಿಶೇಷ ಅಧ್ಯಯನ ಮಾಡಿ ಅವರು ತಮ್ಮ ಅಮೂಲ್ಯ ವಿಚಾರಮಂಡಿಸಿದ್ದಾರೆ.

ಕನ್ನಡದ ನೇರ ಪ್ರಭಾವ ಮರಾಠಿಯ ಮೇಲಾಗಿದೆ ಎಂದು ಅವರು ಸಾಬೀತು ಮಾಡುತ್ತಿದ್ದಾರೆ ಎಂದು ಇದರರ್ಥವಲ್ಲ. ಜ್ಞಾನೇಶ್ವರಿಯಲ್ಲಿ ಕಂಡುಬರುವ ಕೆಲವು ವ್ಯಾಕರಣ ಸಂಬಂಧೀ ವೈಶಿಷ್ಟ್ಯಗಳಿಗೆ ಕನ್ನಡದಲ್ಲಿ ಸಮಾನಾಂಶಗಳು ಕಂಡುಬರುವುದು ಹಾಗೂ ಇದರಿಂದ ಕನ್ನಡ-ಮರಾಠಿ ಭಾಷೆಗಳ ಪರಸ್ಪರ ಸಂಬಂಧ ಮತ್ತು ಪ್ರಭಾವ ಇದ್ದಿತೆಂದು ಹೇಳುವುದು ಅವರ ಆಶಯ.

ಈ ರೀತಿಯ ಸಾಮಾನ್ಯಾಂಶಗಳು ಹಾಗೂ ಪ್ರಭಾವಕ್ಕೆ ಅವರು ಉತ್ತರಪದ ಪ್ರತ್ಯಯ, ಗುಣವಾಚಕ, ಕ್ರಿಯಾ. ವಿಭಕ್ತಿಗಳನ್ನೂ ಗಮನದಲ್ಲಿರಿಸಿ

ಕೊಂಡಿದ್ದಾರೆ. ಇವುಗಳಲ್ಲಿ ಒಂದರ ಬಗ್ಗೆ ಸ್ವಲ್ಪ ತಿಳಿದುಕೊಳ್ಳಬಹುದು. 'ಹಾಂ ರಾವೋವರೀ' ಇದು ಜ್ಞಾನೇಶ್ವರಿಯಲ್ಲಿನ ಒಂದು ಪ್ರಯೋಗ. ಇಲ್ಲಿ 'ವರೀ' ಎಂಬ ಉತ್ತರಪದ ಪ್ರತ್ಯಯದ ಅರ್ಥ ಇತರ ಇಂಡೋ ಆರ್ಯನ್ ಭಾಷೆಗಳಂತೆ ಅಥವಾ ಆಧುನಿಕ ಮರಾಠಿ ಭಾಷೆಯಂತೆ 'ಮೇಲೆ' ಎಂದಲ್ಲ; "ವರೆಗೆ" ಎಂದರ್ಥ. ಕನ್ನಡದಲ್ಲಿ ಇದೇ ಅರ್ಥದಲ್ಲಿ ಈ ರೂಪ ಬಳಕೆಯಲ್ಲಿದೆ. ಅದೂ ಕನ್ನಡದ ಪ್ರಪ್ರಥಮ ಗ್ರಂಥ 'ಕವಿರಾಜ ಮಾರ್ಗ'ದಲ್ಲಿಯೇ (೯ನೇ.ಶ.) ಇದೆ. 'ಕಾವೇರಿ ಯಿಂದ ಮಾ ಗೋದಾವರಿ ವರಮಿರ್ದ ನಾಡದಾ ಕನ್ನಡದೊಳ್!' ಇಲ್ಲಿನ 'ವರಮ್' ಹಾಗೂ ಜ್ಞಾನೇಶ್ವರಿಯ 'ವರೀ' ಎರಡೂ ಸಮಾನಾರ್ಥದ ಶಬ್ದಗಳೆಂಬುದು ಸ್ಪಷ್ಟವಾಗಿದೆ.

ಜ್ಞಾನೇಶ್ವರಿಯ ಛಂದೋರೂಪ 'ಓ.ವಿ.' ವಿಶಿಷ್ಟವಾದುದು. ಅದರ ವೈಶಿಷ್ಟ್ಯವನ್ನು ಅನ್ಯಭಾಷೆಯ ಲೇಖಕರು ಗುರುತಿಸಿದ್ದಾರೆ. ಕನ್ನಡದ ಹಿರಿಯ ಪಂಡಿತ ಸೇಡಿಯಾಪು ಕೃಷ್ಣಭಟ್ಟರು ತಮ್ಮ 'ಛಂದೋಗತಿ' ಎಂಬ ಕೃತಿಯಲ್ಲಿ ಇದರ ವಿವೇಚನೆ ಮಾಡಿರುವುದನ್ನು ಇಲ್ಲಿ ಉಲ್ಲೇಖಿಸುವುದು ಅವಶ್ಯ.

'ಓವಿ' ಇವು ಮೂಲತಃ ಹೆಂಗಸರ ಹಾಡುಗಳು ಕನ್ನಡದ ತ್ರಿಪದಿಗಳಂತ. 'ಪಹಲೀ ಮಾಝಿ ಓವಿ' ಎಂಬ ಹೆಸರಿನ ಪ್ರಸಿದ್ಧ ಜೋಗುಳದಲ್ಲಿ ಏಳು ಅಕ್ಷರಗಳ ಲಯವಿದೆ. ಆದರೆ ಜ್ಞಾನೇಶ್ವರಿಯಂಥ ಆಧ್ಯಾತ್ಮಿಕ ವಿಚಾರಗಳ ಅಭಿವ್ಯಕ್ತಿಗಾಗಿ ಅದನ್ನು ಬಳಸುವಾಗ ಅಕ್ಷರ ಸಂಖ್ಯೆಯ ನಿಯಮವನ್ನು ನಿರ್ಲಕ್ಷಿಸಲಾಗಿದೆ. ಇಲ್ಲಿನ ಓವಿಯ ಸಾಲುಗಳಲ್ಲಿ ೬ ರಿಂದ ೧೧ ಅಕ್ಷರಗಳವರೆಗೆ ಭಿನ್ನವಾಗಿದೆ. ಆದ್ದರಿಂದ ಅದರ ಲಯ ಸಹಜವಾಗಿಲ್ಲ. ಈ ಕಾರಣದಿಂದಾಗಿ ಅಕ್ಷರಗಳ ಉಚ್ಚಾರಣೆಯನ್ನೇನಾದರೂ ಹೆಚ್ಚು-ಕಡಿಮೆ ಮಾಡಿದರೆ ಅಮೋಘ ಅರ್ಥ ಸಂಪತ್ತಿನಿಂದ ಕೂಡಿದ ಗ್ರಂಥದ ಓದುವಿಕೆಯೇ ನಿರರ್ಥಕವಾಗುತ್ತದೆ. ಆದ್ದರಿಂದಲೇ ಓವಿಯನ್ನು ತಾಳವಿಲ್ಲದೆ, ಗುರು-ಲಘುಗಳ ಅಕ್ಷರ ಕ್ರಮಗಳನ್ನು ಗಮನದಲ್ಲಿರಿಸಿಕೊಂಡು ಓದಬೇಕಾಗುತ್ತದೆ. ಜ್ಞಾನೇಶ್ವರರಿಗೆ ತಾಳಜ್ಞಾನ ಇರಲಿಲ್ಲವೆಂದು ಇದರರ್ಥವಲ್ಲ. ಎಚ್.ಡಿ.ವೇಲಂಕರ್ ಅವರಂಥ ವಿದ್ವಾಂಸರು ಹೇಳಿದಂತೆ "ತಾಳ ಸಹಿತವಾದ ಓವಿಯನ್ನು ಪಂಡಿತ ಕವಿಗಳು ತಾಳ ರಹಿತವಾಗಿಸಿದರು" ಎನ್ನಬಹುದೇ!

ಇದಕ್ಕೆ ಸೇಡಿಯಾಪು ಕೃಷ್ಣಭಟ್ಟರ ವಿವರಣೆ ಹೀಗಿದೆ- "ಯೋಗೀಶ್ವರ ನಾಮದೇವರಿಗೆ ಈ ಭಾವಾರ್ಥ ದೀಪಿಕೆಯ ರಚನೆಯ ಮುಖ್ಯ ಉದ್ದೇಶ ಆತ್ಮಾನುಭವ ಪ್ರಕಾಶನ ಮಾತ್ರ ಆಗಿದ್ದಿತು. ಅವರ ಮೊದಲ ಪದ್ಯವೇ 'ಓಂ ನಮೋ ಜೀ ಆದ್ಯಾ- ವೇದ ಪ್ರತಿಪದ್ಯಾ' ತಾಳಸಹಿತವಾಗಿ ಆರಂಭವಾಗಿದೆ. ಮೂರನೇ ಸಾಲಿಗೆ ಬರುವ ಹೊತ್ತಿಗೆ ಭಾವಾವೇಶದಿಂದ 'ಜಯ ಜಯ ಸ್ವಯಂ ವೇದ್ಯಾ'. ಎಂದು ಎಂಟು ಅಕ್ಷರಗಳ ಸಾಲೂ ಹಾಡಿದರು. ಈ ರೀತಿ ತಾಳಮಾತ್ರ ರಹಿತವಾಗಲೂ ಕವಿಯ ಅಲೌಕಿಕ ಮನೋಧರ್ಮವೇ ಕಾರಣ. ಜ್ಞಾನೇಶ್ವರಿಯ ಓವಿಯ ಸಮರ್ಥನೆಯಲ್ಲಿ ಕೃಷ್ಣಭಟ್ಟರ ಈ ಅಭಿಪ್ರಾಯ ತುಂಬ ಮಹತ್ವಪೂರ್ಣದ್ದಾಗಿದೆ.

ಉಪಸಂಹಾರ: ಜ್ಞಾನೇಶ್ವರಿ ಧಾರ್ಮಿಕ ಗ್ರಂಥವಾಗಿ ಕರ್ನಾಟಕದಲ್ಲಿ ಪ್ರಚಲಿತವಿದೆ (ಮಹಾರಾಷ್ಟ್ರಕ್ಕೆ ಹೋಲಿಸಿದರೆ, ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಮುಂದಿದೆ) ಆದರೆ ಜ್ಞಾನೇಶ್ವರಿಯ ಅಂತರಾರ್ಥದ ಬಗ್ಗೆ ಅದರ ಸತ್ವದ ಬಗ್ಗೆ ಆಳವಾದ ಅಧ್ಯಯನ ಇದುವರೆಗೆ ಆಗಿಲ್ಲ ಅದೇ ರೀತಿ ಕನ್ನಡ-ಮರಾಠಿಯ ಸಾಹಚರ್ಯದ ಬಗೆಗೆ ಆಗಬೇಕಾದ ಕಾರ್ಯ ಇನ್ನೂ ಬಹಳಷ್ಟಿದೆ. ✪

ಅತಿ ದುಬಾರಿಯಾದ ಮಸಾಲೆ

ಫ್ರಾನ್ಸ್ ಹಾಗೂ ಇಟಲಿಗಳಲ್ಲಿ ನೆಲದಾಳದಲ್ಲಿ ಬೆಳೆಯುವ ಟ್ರೂಫಲ್ಸ್ ಎಂಬ ಶಿಲೀಂಧ್ರ ಜಗತ್ತಿನಲ್ಲಿ ಅತಿ ದುಬಾರಿಯಾದ ಮಸಾಲೆ. ಅದಕ್ಕೆ ಒಂದು ಕಿಲೋಗ್ರಾಂಗೆ ಹತ್ತು ಸಾವಿರಕ್ಕಿಂತಲೂ ಹೆಚ್ಚು ಬೆಲೆ.

ನೆನಪು ನೆರಳಿನಲ್ಲಿ

ಮೇ ತಿಂಗಳಲ್ಲಿ ನಡೆದ ಘಟನೆ ಇದು. ನಾನು ಹುಬ್ಬಳ್ಳಿಯಿಂದ ವಿಜಾಪುರಕ್ಕೆ ಬರುತ್ತಿದ್ದೆ. ಬಸ್‌ನಲ್ಲಿ ವಿಶೇಷ ಜನಸಂದಣಿಯಿರಲಿಲ್ಲ. ಸುಮಾರು ೩೦ ಪ್ರಯಾಣಿಕರಿದ್ದರು. ಕಂಡಕ್ಟರ್ ಎಲ್ಲರಿಗೂ ಟಿಕೆಟ್ ಕೊಟ್ಟು ಬರುತ್ತಿದ್ದ. ನಾನು ೧೦೦ ರೂ. ನೋಟು ಕೊಟ್ಟು ಟಿಕೆಟ್ ಪಡೆದೆ. ಕಂಡಕ್ಟರ್ ಚಿಲ್ಲರೆ ಹಣ ಕೊಟ್ಟ. ಅಷ್ಟರಲ್ಲಿ ಮುಂದಿನ ಸಾಲಿನಲ್ಲಿ ಕುಳಿತಿದ್ದ ಒಬ್ಬ ಆಸಾಮಿ ಕಂಡಕ್ಟರನೊಟ್ಟಿಗೆ ಜಗಳ ತೆಗೆದ. ಅವನ ಪ್ರಕಾರ ಅವನು ೧೦೦ ರೂ. ನೋಟು ಕೊಟ್ಟಿದ್ದ. ಟಿಕೆಟ್ ಕೊಡೆಂದು ಜಗಳ ತೆಗೆದ. ಆದರೆ ಕಂಡಕ್ಟರ್ ಆತ ೧೦೦ ರೂ. ಕೊಟ್ಟಿಲ್ಲವೆಂದೂ, ತಾನು ಹಣ ಕೊಡು ಎಂದು ಕೇಳಿದ ತಕ್ಷಣ ಜಗಳ ತೆಗೆದ ಎಂದೂ ಹೇಳಿದ. ಆತ ಕೊಟ್ಟಿದ್ದನ್ನು ನೋಡಿದವರಾರೂ ಅಲ್ಲಿ ಇರಲಿಲ್ಲ. ಕಂಡಕ್ಟರ್ ಕೈಯಲ್ಲಿ ೧೦೦ ರೂ. ನೋಟು ಇತ್ತು. "ಕಂಡಕ್ಟರ್ ನನ್ನ ಕಡೆ ತೋರಿಸಿ ಇವರು ಕೊಟ್ಟಿದ್ದು ೧೦೦ ರೂ. ನೋಟು ಇಲ್ಲಿದೆ. ನೀವು ನೂರು ರೂ. ಕೊಟ್ಟೇ ಇಲ್ಲ" ಎಂದು ಹೇಳಿದರು. ಆದರೆ ಆಸಾಮಿ ಆ ೧೦೦ ರೂ. ನೋಟು ತಾನೇ ಕೊಟ್ಟಿದ್ದೆಂದು ಹೇಳಿದ. ಕಂಡಕ್ಟರ್ ತನ್ನ ಕ್ಯಾಶ್‌ಬ್ಯಾಗ್, ಪ್ಯಾಂಟ್ ಕಿಸೆ, ಶರ್ಟ್ ಕಿಸೆ ತೋರಿಸಿ ತನ್ನಲ್ಲಿರುವ ನೋಟು ಅವನದಲ್ಲವೆಂದು ಮನವರಿಕೆ ಮಾಡಿಕೊಟ್ಟರೂ ಆತ ಕೇಳುವ ಸ್ಥಿತಿಯಲ್ಲಿರಲಿಲ್ಲ. ಜಗಳ ನಡೆಯುತ್ತಲೇ ಇತ್ತು. ನನ್ನಿಂದ ಸುಮ್ಮನಿರಲಾಗಲಿಲ್ಲ. ಕಂಡಕ್ಟರ್‌ಗೆ ಆ ೧೦೦ ರೂ. ನೋಟು ನನ್ನದೆ ಎಂದು ಹೇಳಿದೆ. ಆಗ ಆ ಆಸಾಮಿ ನನ್ನ ಕಡೆಗೆ ತಿರುಗಿ, "ಎಲ್ಲ ೧೦೦ ರೂ. ನೋಟುಗಳೂ ಒಂದೇ ರೀತಿ ಇರುವಾಗ ನೀವು ಆ ನೋಟು ನಿಮ್ಮದೆಂದು ಹೇಗೆ ಹೇಳುವಿರಿ?" ಎಂದು ಕೇಳಿದ. ನಾನು ಕಂಡಕ್ಟರ್‌ಗೆ ಕೊಟ್ಟಿದ್ದ ನೂರರ ನೋಟನ್ನು ಪಡೆದು ತನ್ನದೆಂದು ವಾದಿಸುತ್ತಿದ್ದವನ ಕಣ್ಣೆದುರು ಹಿಡಿದೆ. ಆ ಆಸಾಮಿ ತೆಪ್ಪಗೆ ಹಣಕೊಟ್ಟು ಟಿಕೆಟ್ ಪಡೆದ.

ನನಗೆ ಯಾವಾಗಲೂ ಒಂದು ಚಟ. ನನ್ನಲ್ಲಿರುವ ೫೦, ೧೦೦ ರೂ. ನೋಟುಗಳ ಮೇಲೆ ನನ್ನ ಸಹಿ ಮಾಡಿರುತ್ತೇನೆ. ಅದು ಎಲ್ಲೆಲ್ಲೋ ತಿರುಗಿ ಯಾವಾಗಲಾದರೂ ನನ್ನ ಬಳಿ ಬಂದು ಸೇರುತ್ತದೆ. ಕಂಡಕ್ಟರ್‌ಗೆ ಕೊಟ್ಟ ೧೦೦ ರೂ. ನೋಟಿನ ಮೇಲೆ ನನ್ನ ಸಹಿ ಇತ್ತು. ಆದ್ದರಿಂದ ಆತ ಸುಮ್ಮನಾಗಬೇಕಾಯಿತು.

• *ಡಾ. ದುರ್ಗಾದಾಸ ಜ. ನಾಯಕ*

ನಾವು ಚಿಕ್ಕವರಾಗಿದ್ದಾಗ ಕುಂಬಳಕಾಯಿಯನ್ನು ಹೆಂಗಸರು ಹೆಚ್ಚಬಾರದೆಂದೂ ಹೆಚ್ಚಿದರೆ ಒಳಗೆ ತುಂಡಾದ ಮಗುವಿನ ಶವ ಸಿಗುವುದೆಂದೂ ನಂಬಿಕೆ ಇತ್ತು. ಆದ್ದರಿಂದ ಕುಂಬಳಕಾಯಿಯನ್ನು ಹೆಚ್ಚಬೇಕಾದರೆ ಗಂಡಸರು ಸ್ವಲ್ಪ ಹೆಚ್ಚಿಕೊಡಬೇಕು; ಅನಂತರ ಉಳಿದಿದ್ದನ್ನು ಹೆಂಗಸರು ಹೆಚ್ಚಬೇಕು ಎಂಬ ನಿಯಮ ಅನೂಚಾನವಾಗಿ ನಡೆದುಕೊಂಡು ಬಂದಿತ್ತು. ಒಮ್ಮೆ ನಮ್ಮಕ್ಕ ಕುಂಬಳಕಾಯಿಯನ್ನು ಹೆಚ್ಚಲು ನಮ್ಮಣ್ಣನಿಗೆ ಹೇಳಿದರು. ಆತ ಅದೊಂದು ಮಹತ್ಕಾರ್ಯ ಎಂಬಂತೆ ಬೀಗುತ್ತ ಎಷ್ಟು ಹೇಳಿದರೂ ಹೆಚ್ಚಿ ಕೊಡಲೇ ಇಲ್ಲ. ಕೋಪಗೊಂಡ ನಮ್ಮಕ್ಕ, "ನಾನೇ ಹೆಚ್ತೇನಿ" ಎಂದು ಈಳಿಗೆ ಮಣೆ ಮೇಲೆ ಕುಂಬಳಕಾಯಿಯನ್ನು ಇಟ್ಟಾಗ ಅಣ್ಣ, "ಬೇಡಾ, ಹೆಚ್ಚಬೇಡ. ಒಳಗೆ ಮಗು ಇರುತ್ತೆ. ಕತ್ತಿ ತಗುಲಿದರೆ ರಕ್ತ ತೊಟ್ಟಿಕ್ಕುತ್ತೆ" ಎಂದು ನಮಗೆ ಗೊತ್ತಿರದವರ ಹೆಸರುಗಳನ್ನು ಹೇಳಿ, ಹೀಗೆ ಹೆಚ್ಚಿದಾಗ ಈಳಿಗೆ ಮಣೆಯಿಂದ ರಕ್ತ ಸುರಿದಿತ್ತೆಂದ. ಅಕ್ಕ, "ನಿನ್ನ ತಲೆ," ಎಂದು ಬೈದು ಕುಂಬಳಕಾಯಿಯನ್ನು ಈಳಿಗೆ ಮಣೆಗೆ ಒತ್ತಿದ ಕೂಡಲೇ ಅದರಿಂದ ಹನಿಹನಿಯಾಗಿ, ನಂತರ ಸ್ವಲ್ಪ ಜಾಸ್ತಿಯಾಗಿ ರಕ್ತ ತೊಟ್ಟಿಕ್ಕತೊಡಗಿತು. ಅದನ್ನು ಕಂಡ ನಾನು ಹೆದರಿ "ರಕ್ತ" ಎಂದು ಕಿರುಚಿದೆ. ಅಕ್ಕ ಕಿಟಾರನೆ ಚೀರಿ ಈಳಿಗೆಮಣೆಯಿಂದೆದ್ದು ಅಣ್ಣನನ್ನು ಹಿಡಿದುಕೊಂಡು, ಥರಥರ ನಡುಗುತ್ತ, "ಏನು ಮಾಡಲಿ?" ಎಂದು ಅಳಲಾರಂಭಿಸಿದಳು. ನಮ್ಮಣ್ಣ, "ಹೆದರಬೇಡ. ನನ್ನ ಯೋಗ ಮತ್ತು

ಜಪದ ಪ್ರಭಾವದಿಂದ ಎಲ್ಲಾ ಸರಿ ಮಾಡ್ತೀನಿ," ಎಂದು ವಿಜಯೋತ್ಸಾಹದಿಂದ ಮಣ ಮಣ 'ಮಂತ್ರ' ಹೇಳುತ್ತಾ ಕುಂಬಳಕಾಯಿಯನ್ನು ಹೆಚ್ಚಿದಾಗ ಅಲ್ಲಿ ಏನೂ ಇರಲಿಲ್ಲ.

ಹಿಂದಿನ ದಿನ ಬೀಟ್‌ರೂಟ್ ಹೆಚ್ಚಿದ ಈಳಿಗೆ ಮಣೆಯನ್ನು ತೊಳೆಯದೆ ಇಟ್ಟಿದ್ದರಿಂದ ಅದರ ಕರೆ ಈಳಿಗೆಮಣೆಯಲ್ಲಿದ್ದು, ಕುಂಬಳಕಾಯಿ ಒಳಗಿನ ನೀರು ತಗುಲಿದಾಗ ಕೆಂಪು ಹನಿಗಳು ಬಿದ್ದವೆಂದು ನಮ್ಮ ಇನ್ನೊಬ್ಬ ಅಣ್ಣ ತಿಳಿಸಿ ಹೇಳಿದ ಮೇಲೇ ನಮಗೆ ಸಮಾಧಾನ.

• *ಎಸ್.ಎಸ್. ಪ್ರಸಾದ್*

ಸರ್ಕಾರಿ ಕಾರ್ಖಾನೆಯೊಂದರ ಸಂಬಳ ವಿಭಾಗದಲ್ಲಿ ನಾನು ಮುಖ್ಯ ಮೇಲ್ವಿಚಾರಕನಾಗಿ ಕೆಲಸ ಮಾಡುತ್ತಿದ್ದಾಗ ನಡೆದ ಘಟನೆ. ಒಮ್ಮೆ ಹೆಚ್ಚುವರಿ ಕೆಲಸಕ್ಕಾಗಿ (Overtime) ನೀಡುವ ಪಗಾರದಲ್ಲಿ ಕಂಪ್ಯೂಟರ್‌ಗೆ ಕಳುಹಿಸುವ ವಿವರಗಳಲ್ಲಿ ವ್ಯತ್ಯಾಸವಾಗಿ ೮-೧೦ ಜನರ ಪಗಾರ ಬಿಟ್ಟು ಹೋಗಿತ್ತು. ಆ ಸಂಬಂಧದ ಕಾರ್ಮಿಕರು ನನ್ನಲ್ಲಿ ಬಂದು ಹಣ ದೊರೆಯದ್ದಕ್ಕಾಗಿ ರೇಗಾಡಿ ಗಲಾಟೆ ಎಬ್ಬಿಸಿದರು. ಅವರಲ್ಲಿ ಧಾಂಡಿಗನೊಬ್ಬನು ಅತಿಯಾಗಿ ಕೂಗಾಡಿ ನನ್ನ ಮೇಲೆ ಕೈ ಮಾಡಲು ಬಂದ. ನಾನು ಆದ ತಪ್ಪಿಗಾಗಿ ವಿಷಾದ ಸೂಚಿಸಿ ಮಾರನೆಯ ದಿನವೇ ಅವರಿಗೆಲ್ಲಾ ಸಲ್ಲಬೇಕಾದ ಹಣದ ವ್ಯವಸ್ಥೆ ಮಾಡುತ್ತೇನೆಂದು ಹೇಳಿ ಸಮಾಧಾನಪಡಿಸಿದೆ. ಆ ಧಾಂಡಿಗನನ್ನು ಬಿಟ್ಟು ಮಿಕ್ಕವರೆಲ್ಲಾ ಸರಿಯೆಂದು ಹೊರಟುಹೋದರು. ತೀರ್ಮಾನಿಸಿದಂತೆ ಅವರೆಲ್ಲರ ಬಾಕಿ ಹಣವನ್ನು ಮರುದಿನ ಪಾವತಿ ಮಾಡಲಾಯಿತು.

ಇದೆಲ್ಲಾ ನಡೆದು ಎಂಟತ್ತು ದಿನಗಳಾಗಿರಬಹುದು. ನಾನು ನನ್ನ ಪತ್ನಿಯೊಂದಿಗೆ ಬೆಂಗಳೂರು ಕೆಂಪೇಗೌಡ ರಸ್ತೆಯಲ್ಲಿರುವ ಜನತಾಬಜಾರಿಗೆ ಹೋಗಿದ್ದೆ. ಮನೆಗೆ ಬೇಕಾದ ಕೆಲವು ಸಾಮಗ್ರಿಗಳನ್ನು ಆರಿಸುತ್ತಿದ್ದಾಗ ನನ್ನ ಪಕ್ಕದಲ್ಲಿ ಅಜಾನುಬಾಹುವೊಬ್ಬ ಬಂದು ನಿರತಂತಾಯಿತು. ವ್ಯಕ್ತಿ ತೀರ ಹತ್ತಿರ ಬಂದಂತಾಗಿ ನಾನು ತಲೆಎತ್ತಿ ಅವನಕಡೆ ನೋಡಿದೆ. ಕಾರ್ಖಾನೆಯಲ್ಲಿ ನನ್ನ ಮೇಲೇರಿ ಬಂದು ಹೆದರಿಸಿದ ಧಾಂಡಿಗ ಆಸಾಮಿಯೇ. "ಅಮ್ಮಾವರು ಅಲ್ಲೇ ಇರಲಿ, ಹೀಗೆ ಬನ್ನಿ" ಎಂದಾಗ ವಿಧಿಯಿಲ್ಲದೆ ನನ್ನ ಪತ್ನಿಗೆ ತಿಳಿಸಿ ಅವನೊಡನೆ ನಡೆದು ಸ್ವಲ್ಪ ದೂರದಲ್ಲಿ ನಿಂತೆ. ನನ್ನ ಎದುರಿನಲ್ಲೇ ನಿಂತ ಅವನು ನನ್ನ ಎರಡೂ ಕೈಗಳನ್ನು ಹಿಡಿದು "ಸಾರ್, ಆದಿನ ಓಟಿ ಪೇಮೆಂಟ್‌ಗಾಗಿ ನಾನು ನಿಮ್ಮಲ್ಲಿಗೆ ಬಂದಾಗ ವಿಪರೀತವಾಗಿ ನಡೆದುಕೊಂಡು ಅಪಚಾರ ಮಾಡಿದ್ದು ತಪ್ಪು. ನೀವು ಕ್ಷಮಿಸಿದ್ದೇನೆಂದು ಹೇಳಿದರೆ ಮಾತ್ರ ನಿಮ್ಮ ಕೈಬಿಡುತ್ತೇನೆ" ಎಂದ. ಅದಕ್ಕೆ ನಾನು "ಆ ವಿಷಯ ನಿಮಗೆ ಹಣ ಪಾವತಿಯಾದಾಗಲೇ ಮರೆತಾಯಿತು. ಆಯಿತು. ಹೋಗಿಬನ್ನಿ ಚಿಂತಿಸಬೇಡಿ" ಎಂದೆ, ಏನನ್ನೋ ಯೋಚಿಸಿ. ಮನ ಕೆಡಿಸಿಕೊಂಡ ನನಗೆ ನಿರಾಳವಾಯಿತು. ಆತ "ಸಾರ್ ನಿಮ್ಮ ಮನಸ್ಸು ದೊಡ್ಡದು. ನನಗೆ ನಾಚಿಕೆಯಾಗುತ್ತೆ, ಮುಂದಿನವಾರ ಹೊಸಕೋಟೆಯಲ್ಲಿ ನನ್ನ ಮದುವೆ ಇದೆ. ನಿಮಗೆ ಇನ್‌ವಿಟೇಶನ್ ಕೊಡುತ್ತಾ ಇದ್ದೀನಿ. ದಯವಿಟ್ಟು ನೀವು ಅಮ್ಮಾವರ ಜೊತೆ ಖಂಡಿತ ಬಂದು ಆಶೀರ್ವಾದ ಮಾಡಬೇಕು, ಆಗ ಮಾತ್ರ ನನಗೆ ಪೂರ್ತಿಯಾಗಿ ಸಮಾಧಾನ" ಎಂದ. ಬರುತ್ತೇನೆಂದು ಹೇಳಿ ನಾನು ಪತ್ನಿಯ ಕಡೆ ತಿರುಗಿದಾಗ "ಸಾರ್, ಮತ್ತೊಂದು ಮಾತು, ಅಂದು ನಾನು ಹಾಗೆ ನಡೆದುಕೊಳ್ಳಲು ನನ್ನ ಪುಸಲಾಯಿಸಿ ನಿಮ್ಮಲ್ಲಿಗೆ ಕಳುಹಿಸಿದವರು ನಿಮ್ಮ ..... ಸೂಪರ್‌ವೈಸರೇ ಕಾರಣ. ಸಾರ್, ಅವನ ಬಗ್ಗೆ ನೀವು ಎಚ್ಚರಿಕೆಯಿಂದಿದ್ದರೆ ವಾಸಿ. ನಮಸ್ಕಾರ, ಬರ್ತೀನಿ ಸಾರ್" ಎಂದು ಹೊರಟುಹೋದ. ನನ್ನ ಕೆಳಗಿನ ಮೇಲ್ವಿಚಾರಕನೊಬ್ಬ ನನ್ನ ಮೇಲೆ ಕತ್ತಿಮಸೆಯುವ ವಿಷಯವನ್ನು ಇತರರೂ ನನಗೆ ತಿಳಿಸಿದ್ದರು.

• *ಸು. ವೆಂ. ಸುಬ್ಬರಾವ್*



ಭಯವೆಂಬುದು ಮತ್ತೇನೂ ಅಲ್ಲ; ಅಪಾಯವನ್ನು ಎದುರಿಸಲು ಸಿದ್ಧವಾಗೆಂದು ಮನಸ್ಸು ದೇಹಕ್ಕೆ ಕೊಡುವ ಮುನ್ಸೂಚನೆ.

ಮೂಲ ಇಂಗ್ಲಿಷ್: ಆ್ಯಂಥನಿ ಸ್ಟಾರ್
ಕನ್ನಡಾನುವಾದ: ಎಸ್.ಡಿ. ಶಾಂತಕುಮಾರ್

ಭಯವಿಲ್ಲದೆ ಯಾರೂ ಬದುಕಲಾರರು. ಜೀವಿಗಳಿಗೂ ಭಯಕ್ಕೂ ಅವಿಭಾಜ್ಯ ಸಂಬಂಧ ವಿದೆ. ಅನಿರೀಕ್ಷಿತ, ಅವಾಂಛಿತ ಪ್ರಸಂಗಗಳಲ್ಲಿ ಭಯ ಕಾಡುತ್ತದೆ. ಹಾಗೆ ನೋಡಿದರೆ ಜೀವಿತದ ಅವಧಿಯಲ್ಲಿ ಒಮ್ಮೆಯೂ ಭಯಪಡದ ಮನುಷ್ಯ ಇಲ್ಲವೇ ಇಲ್ಲ.

ಇಂದಿನ ವೈಜ್ಞಾನಿಕ ಯುಗದಲ್ಲಿ ನಾವು ವಿಭಿನ್ನ ಪರಿಸರ, ಪ್ರದೇಶ, ಪರಿಸ್ಥಿತಿಗಳಲ್ಲಿ ಜೀವಿಸುವ ಸಂದರ್ಭಗಳು ಬರುತ್ತವೆ. ಮನುಷ್ಯ ಅನೇಕ ಸಲ ರಾತ್ರಿ ವೇಳೆ ಹಗ್ಗವನ್ನು ತುಳಿದರೂ ಹಾವೆಂದು ಭ್ರಮಿಸಿ ಭಯಪಡುತ್ತಾನೆ. ತನಗಿಂತ ಶಕ್ತಿಶಾಲಿ ವ್ಯಕ್ತಿಗಳನ್ನು ಕಂಡು ಬೆಚ್ಚುತ್ತಾನೆ.

ಮನುಷ್ಯನನ್ನು ಕಾಲಕಾಲಕ್ಕೆ ಆವರಿಸುವ ಭಯಕ್ಕೆ ವೈಜ್ಞಾನಿಕ ವಿಶ್ಲೇಷಣೆ ಏನು? ಇದಕ್ಕೆ ಮನೋವಿಜ್ಞಾನಿಗಳು ಉತ್ತರ ನೀಡುತ್ತಲೇ ಬಂದಿದ್ದಾರೆ.

ಕೆಲವೊಮ್ಮೆ ನಾವು ಗ್ಯಾಸ್, ವಿದ್ಯುತ್ತು, ನೀರು, ಬೆಂಕಿ ಮತ್ತು ಹರಿತವಾದ ಆಯುಧಗಳನ್ನು ಕುರಿತು ಮಕ್ಕಳಿಗೆ ವಿವರಿಸಿ, ಅವುಗಳಿಂದ ಉಂಟಾಗುವ ಅಪಾಯಗಳ ಬಗ್ಗೆ ಅವರಲ್ಲಿ ಭೀತಿ ಹುಟ್ಟಿಸಿ ಅವುಗಳಿಂದ ದೂರ ಇರುವಂತೆ ಮಾಡುವುದು ಅನಿವಾರ್ಯವಾಗುತ್ತದೆ.

ಅನೇಕ ಬಾರಿ ಎಂಟು-ಹತ್ತು ತಿಂಗಳ ಮಕ್ಕಳೂ ತಮಗೆ ಅರಿವಿಲ್ಲದಂತೆ ಅಪಾಯದ, ಭಯದ ಭಾವನೆಗಳಿಗೆ ಒಳಗಾಗುತ್ತವೆ. ಎತ್ತರದ ಸ್ಥಳದಿಂದ ಕೆಳಗೆ ಬೀಳುವ ಭಯ ಅಥವಾ ಅಪರಿಚಿತ ವ್ಯಕ್ತಿಗಳನ್ನು ನೋಡಿ ಇಲ್ಲವೆ ಕರ್ಕಶ, ಭೀಕರ ಎನಿಸುವ ಶಬ್ದಗಳನ್ನು ಕೇಳಿ ಅವು ಭಯಕ್ಕೆ ಒಳಗಾಗುವುದೂ ಸಹಜ.

ದೊಡ್ಡವರು ಗದರಿಸಿದಾಗ ಯಾರು ಹೇಳಿಕೊಡದಿದ್ದರೂ ಮಗು ಭಯದಿಂದ ಅಳಲು ಆರಂಭಿಸುತ್ತದೆ. ಏಕೆಂದರೆ ಯಾವುದೇ ದೊಡ್ಡ ಶಬ್ದ ಉಂಟಾದರೂ ಮನುಷ್ಯ ಹಾಗೂ ಪ್ರಾಣಿಗಳಲ್ಲಿ ಭಯ ಉಂಟಾಗುತ್ತದೆ.

ಮನುಷ್ಯ ಎಷ್ಟು ಕ್ಲಿಷ್ಟಕರವಾದ ಸಂಘರ್ಷಮಯ ಜೀವಿ ಎಂದರೆ ಪರಿಸ್ಥಿತಿಯ ಅಧ್ಯಯನ, ವಿಶ್ಲೇಷಣೆಯಿಂದ ಆತನ ನಡತೆ ರೂಪುಗೊಳ್ಳುತ್ತದೆ. ಭಯ ಅವನ ಅನುಭವ ಮತ್ತು ಪರಿಸ್ಥಿತಿಯ ಪ್ರತಿಬಿಂಬವಾಗಿರುತ್ತದೆ.

ಭಯ ಹೇಗೆ ಆವರಿಸುತ್ತದೆ?

ಸೂಕ್ಷ್ಮ ಜೀವಿಗಳು, ಪಕ್ಷಿಗಳು ಅಥವಾ ಇತರ ಸಣ್ಣ ಪುಟ್ಟ ಪ್ರಾಣಿಗಳಲ್ಲಿ ಜನಿಸಿದೊಡನೆಯೆ ಅಪಾಯ ಮತ್ತು ಶತ್ರುಗಳನ್ನು ಗುರುತಿಸುವ ಗುಣ ಮೈಗೂಡಿರುತ್ತದೆ.

ನಗರ ಪರಿಸರದಲ್ಲಿ ಬೆಳೆಸಲ್ಪಟ್ಟ ಕಾಡು ಬಾತು ಕೋಳಿಯು ತನ್ನ ಆಜನ್ಮ ವೈರಿಯಾದ ನರಿಯನ್ನು ಒಮ್ಮೆಕೂಡ ಕಂಡಿರದಿದ್ದರೂ ನೀರಿನಲ್ಲಿ ಅದ್ದಲ್ಪಟ್ಟಿರುವ ಕಂದು ಬಣ್ಣದ ಚರ್ಮವನ್ನು ಕಂಡಕೂಡಲೇ ಹೆದರಿ ಹಿಂದೆ ಸರಿಯುತ್ತದೆ. ಹೆದರಿಕೆ ಎಂದು ಕರೆಯಲ್ಪಡುವ ಈ ಭಾವನೆ ಮನುಷ್ಯನ ಮೇಲೆಯೂ ತನ್ನದೇ ಆದ ವಿಶಿಷ್ಟ ಚಮತ್ಕಾರಿಕ ಪರಿಣಾಮ ಬೀರುತ್ತದೆ.

ಭಯ ಉಂಟಾದೊಡನೆ ಅಥವಾ ಅಪಾಯಕಾರಿ ಸನ್ನಿವೇಶ ಎದುರಾದೊಡನೆ ಹೃದಯ ಬಡಿತ ಹೆಚ್ಚಾಗುತ್ತದೆ. ರಕ್ತದ ಒತ್ತಡ ಏರುತ್ತದೆ. ಕೈಕಾಲುಗಳು ನಡುಗುತ್ತವೆ. ದೇಹ ಕಂಪಿಸಲು ಪ್ರಾರಂಭಿಸುತ್ತದೆ. ಆಡ್ರಿನಲ್ ಗ್ರಂಥಿಗಳಿಂದ ದ್ರವ ಸ್ರವಿಸಲು ಶುರುವಾಗುತ್ತದೆ. ಮೈ ಬೆವರುತ್ತದೆ. ಇದು ಭಯದ ವಾತಾವರಣಕ್ಕೆ ಸನ್ನದ್ಧವಾಗಲು, ತನ್ಮೂಲಕ ಅಪಾ

ಯವನ್ನು ಎದುರಿಸಲು ಸಿದ್ಧವಾಗಲು ಮನಸ್ಸು ದೇಹಕ್ಕೆ ಕೊಡುವ ಮುನ್ಸೂಚನೆ. ಹೆಚ್ಚು ಕಡಿಮೆ ಭಯ ಮತ್ತು ಆಕ್ರೋಶವನ್ನು ನಾವು ಒಂದೇ ದೃಷ್ಟಿಕೋನದಲ್ಲಿ ನೋಡುತ್ತೇವೆ. ಆದರೆ ವೈಜ್ಞಾನಿಕವಾಗಿ ಇವುಗಳಲ್ಲಿ ಬಹಳಷ್ಟು ವ್ಯತ್ಯಾಸಗಳು ಉಂಟು.

ಅಪಾಯ ಎದುರಾದ ಸಂದರ್ಭದಲ್ಲಿ ಜೀವಿಗಳು ಎದುರಾಳಿಯನ್ನು ಪ್ರತಿ ಬೆದರಿಕೆಯಿಂದ ಓಡಿಸುತ್ತವೆ. ಇಲ್ಲವೇ ತಾವೇ ಕಾಲಿಗೆ ಬುದ್ಧಿ ಹೇಳುವ ಮೂಲಕ ಪ್ರತಿಕ್ರಿಯೆ ವ್ಯಕ್ತಪಡಿಸುತ್ತವೆ. ಇದಕ್ಕೆ ಮನುಷ್ಯಪ್ರಾಣಿಯೂ ಹೊರತಾಗಿಲ್ಲ. ಮನುಷ್ಯನ ಭಾವನಾತ್ಮಕ ಸಮಸ್ಯೆಗಳನ್ನು ಪರಿಗಣಿಸಿ ಅವನಲ್ಲಿ ಅಪಾಯವನ್ನೂ ಭಯವನ್ನೂ ಎದುರಿಸುವ, ಪ್ರತಿಭಟಿಸುವ ಹಾಗೂ ಹೋರಾಟಕ್ಕೆ ಸಿದ್ಧವಾಗುವ ಗುಣಗಳು ರೂಪುಗೊಳ್ಳುತ್ತವೆ. ಉದ್ವೇಗ ಕುತೂಹಲಗಳೂ ಇದರ ಮೇಲೆ ಪರಿಣಾಮ ಬೀರುತ್ತವೆ.

ಫೋಬಿಯಾ ಎಂದರೇನು?

ಅದು ಯಾವಾಗಲೂ ಒಂದು ರೀತಿಯ ಮಿತಿ, ವ್ಯಾಪ್ತಿಯಲ್ಲಿರುತ್ತದೆ. ಪುರುಷರು, ಮಹಿಳೆಯರು ಹಲವು ರೀತಿಯ ಭಯದ ಸನ್ನಿವೇಶಕ್ಕೆ ಒಳಗಾಗುತ್ತಾರಾದರೂ ಅದರಿಂದ ಅವರ ಪ್ರಾಣಕ್ಕೆ ಗಂಡಾಂತರ, ಅಪಾಯ ಉಂಟಾಗುವುದು ತೀರಾ ಕಡಿಮೆ.

ಸೇತುವೆಯನ್ನು ದಾಟುವಾಗ, ಗಾಳಿಯಲ್ಲಿ ತೇಲುವಾಗ, ಅಂತರಿಕ್ಷದಲ್ಲಿರುವಾಗ, ಏಕಾಂಗಿಯಾಗಿರುವಾಗ, ಮಿಂಚು ಗುಡುಗು ಕಂಡಾಗ ಭಯ ಉಂಟಾಗುವುದು ಸಹಜವಷ್ಟೆ. ಇಂತಹ ಭಯಕ್ಕೆ ಮನಃಶಾಸ್ತ್ರಜ್ಞರು 'ಫೋಬಿಯಾ' (Phobia) ಎಂದು ಕರೆಯುತ್ತಾರೆ.

ಫೋಬಿಯಾ ಎಂಬುದು ಮನುಷ್ಯನ ಜೀವನದಲ್ಲಿ ತೀರಾ ಸಾಮಾನ್ಯವಾದುದು. ಮನುಷ್ಯ ತಾನು ಒಂದಲ್ಲ ಒಂದು ಪ್ರಸಂಗದಲ್ಲಿ ಪದೇ ಪದೇ ಈ ಪ್ರಕ್ರಿಯೆಗೆ ಒಳಗಾಗುತ್ತಲೇ ಇರುತ್ತಾನೆ.

ಕೆಲವು ಬಗೆಯ ಫೋಬಿಯಾಗಳು ಭಯಾನಕ ಅನುಭವಗಳ ಪರಿಣಾಮವಾಗಿ ಸೃಷ್ಟಿಗೊಂಡಿರುತ್ತವೆ. ಓರ್ವ ರೋಗಿಯು ಚಿಕ್ಕ ವಯಸ್ಸಿನಲ್ಲಿ ಮನೆಯ ಹೊರಗೆ ನಿಂತಾಗ ಸಿಡಿಲು ಮಿಂಚು ಅವನ ಸಮೀಪ ಹಾಯ್ದು ಹೋಗಿರುವುದು ಮನಸ್ಸಿನಾಳದಲ್ಲಿ ಹುದುಗಿ ಜೀವಮಾನ ಪೂರ್ತಿ ಈ ಗುಡುಗು ಸಿಡಿಲುಗಳಿಗೆ ಆತ ಭಯಪಡುತ್ತಿರುತ್ತಾನೆ.

ಇದೇ ರೀತಿ ಸೈನ್ಯದಲ್ಲಿರುವ ಯೋಧರಿಗೆ ಬಾಂಬ್ ಸಿಡಿದ ಸಂದರ್ಭಗಳಲ್ಲಿ ಯುದ್ಧದ ನೌಕೆ ಮುಳುಗಿ ನೀರು ಪಾಲಾದಂತಹ ಭಯ ಮಿಶ್ರಿತ ಭಾವನೆಗಳು ಉಂಟಾಗುತ್ತವೆ. ಇದನ್ನು ಅವರು ಕೊನೆಯವರೆಗೂ ಮನಸ್ಸಿನಾಳದಲ್ಲಿ ಉಳಿಸಿಕೊಳ್ಳುತ್ತಾರೆ. ಇದಕ್ಕೆ ದಿಢೀರ್ ಪರಿಸ್ಥಿತಿಯ ಫೋಬಿಯಾ ಎನ್ನಲಾಗುತ್ತದೆ.

ಆದರೆ ಬಹುತೇಕ ಹೆಚ್ಚಿನ ಫೋಬಿಯಾಗಳನ್ನು ವೈಜ್ಞಾನಿಕವಾಗಿ ವಿವರಿಸುವುದು ಕಷ್ಟದ ಕೆಲಸ. ಇದನ್ನು ಅರ್ಥ ಮಾಡಿಕೊಳ್ಳಲು ಮನುಷ್ಯನಲ್ಲಿ ಒಂದು ವಿಷಯದಿಂದ ಮತ್ತೊಂದು ವಿಷಯಕ್ಕೆ ಪರಿಸ್ಥಿತಿಯು ಬದಲಾದಾಗ ಎಷ್ಟರಮಟ್ಟಿಗೆ ಸಹನೆ, ಸಂವೇದನಾಶೀಲತೆ ಇರುತ್ತದೆ ಎಂಬುದನ್ನು ಅರಿತುಕೊಳ್ಳಬೇಕಾಗುತ್ತದೆ. ಬೇಕಾದ್ದನ್ನು ಸ್ವೀಕರಿಸುವ, ಬೇಡವಾದದ್ದನ್ನು ತಿರಸ್ಕರಿಸುವ ಈ ಪ್ರತಿಕ್ರಿಯೆಯನ್ನು ಮನುಷ್ಯ ಹೇಗೆ ನಿರ್ವಹಿಸುತ್ತಾನೆ ಎಂಬುದನ್ನು ಇದು ಅವಲಂಬಿಸಿರುತ್ತದೆ.

ಪ್ರಕಾರಗಳು

ಇದಕ್ಕೆ ಉದಾಹರಣೆ ಎಂದರೆ ಸಾಮಾನ್ಯ ಭಯದ ಮನೋಭಾವ (ಫೋಬಿಯಾ) ಎಂದು ಕರೆಯಲ್ಪಡುವ ಅಗೋರಾ ಫೋಬಿಯಾ ಅಂದರೆ ಖಾಲಿ ಜಾಗವನ್ನು ಒಬ್ಬನೇ ಯಾವುದೇ ಆಧಾರವಿಲ್ಲದೆ ದಾಟುವಾಗಿನ ಭಯ ಅಥವಾ ದಟ್ಟ ಕಾನನದಲ್ಲಿ ಅಥವಾ ಹಳ್ಳಿಗಾಡಿನಲ್ಲಿ ಒಂಟಿಯಾಗಿ ಅಲೆದಾಡುವಾಗ ಉಂಟಾಗುವ ಭಯ. ಇಂತಹ ಸಂದರ್ಭಗಳಲ್ಲಿ ಮನುಷ್ಯ ಒಬ್ಬನೇ ಕಾಡಿನಲ್ಲಿ ಸಂಚರಿಸಲು, ಸಣ್ಣ ಪುಟ್ಟ ಹಾದಿಯನ್ನು ಕ್ರಮಿಸಲು ಭಯಪಡುತ್ತಾನೆ. ಈ ಫೋಬಿಯಾವು ಬಾಲ್ಯದಲ್ಲಿ ಬೆಳೆದ ಪರಿಸರವನ್ನು ಅವಲಂಬಿಸಿರುತ್ತದೆ. ಇಂತಹ ಸಂದರ್ಭಗಳಲ್ಲಿ ಬಾಲ್ಯಾವಸ್ಥೆಯಲ್ಲಿ

ನಡೆದ ಹಾಗೂ ತನ್ನ ಮೇಲೆ ಬಹುವಾಗಿ ಪ್ರಭಾವ ಬೀರಿದ ಘಟನೆಗಳನ್ನು ಸ್ಮರಿಸಿಕೊಂಡು ಅವನು ಭಯಪಡುತ್ತಾನೆ. ಇಂಥವರು ಯಾವಾಗಲೂ ಸಿಡುಕು ಮನೋಭಾವದವರು, ಗಂಭೀರ ಸ್ವಭಾವದವರು ಮತ್ತು ಯಾವುದೇ ಸಂದರ್ಭದಲ್ಲಿ ತುಟಿ ಬಿಚ್ಚದವರೂ ಹೌದು.

ಇದಕ್ಕೆ ಪ್ರತಿಯಾಗಿ ಅಗೋರಾ ಫೋಬಿಯಾ ಇದ್ದವರಿಗೆ ವಿಶಾಲವಾದ ಕಟ್ಟಡದಲ್ಲಿ ಇರಲು ಅಥವಾ ವಿಸ್ತಾರವಾದ ಪ್ರದೇಶದಲ್ಲಿ ಏಕಾಕಿಯಾಗಿ ಓಡಾಡಲು ಭಯ. ಬಾಲ್ಯದಲ್ಲಿ ಅಲಕ್ಷ್ಯಕ್ಕೊಳಗಾದ ಮಕ್ಕಳಲ್ಲಿ ಇಂತಹ ಭಯ ತುಂಬಿಕೊಳ್ಳುವ ಪ್ರಸಂಗ ಹೆಚ್ಚು. ಲೈಂಗಿಕ ಅತೃಪ್ತಿಯಿಂದಲೂ ಇದು ಉಂಟಾಗುತ್ತದೆ.

ಅಕ್ರೋ ಫೋಬಿಯಾ ಎಂಬುದು ಎತ್ತರದ ಪ್ರದೇಶದಲ್ಲಿದ್ದಾಗ ಉಂಟಾಗುವ ಭಯ. ಕೆಳಗೆ ಬೀಳುವ ಸಾಧ್ಯತೆ ಇಲ್ಲವಾದರೂ ಬಿದ್ದೇಬಿಟ್ಟೆನೆಂಬ ಹೆದರಿಕೆ ಇದು. ಇಂತಹ ಫೋಬಿಯಾ ಉಳ್ಳವರು ಪ್ಯಾರಿಸ್ಸಿನ ಐಫೆಲ್ ಟಾವರ್ ಅಥವಾ ಅಮೇರಿಕಾದ ಎಂಪಾಯರ್ ಸ್ಟೇಟ್ ಬಿಲ್ಡಿಂಗ್‌ನಂತಹ ಎತ್ತರದ ಸ್ಥಳದಲ್ಲಿ ನಿಂತು ನಿಸರ್ಗ ಸೌಂದರ್ಯವನ್ನು ಸವಿಯಲಾರರು. ಈ ಅಕ್ರೋಫೋಬಿಕ್ ಮನೋಭಾವದ ಜನರಿಗೆ ಇಂತಹ ಎತ್ತರದ ಪ್ರದೇಶಗಳಿಗೆ ಹೋದಾಗ ಆತ್ಮಹತ್ಯೆ ಮಾಡಿಕೊಳ್ಳುವ ಭಯ ಉಂಟಾಗುತ್ತದೆ. ಇದು ಮನಸ್ಸಿನ ಆಂತರಿಕ ಭಾವನೆಗಳ ಸಂಘರ್ಷದ ಪರಿಣಾಮವಾಗಿರುತ್ತದೆ.

ಅದೇ ರೀತಿ ಕೆಲವು ರೀತಿಯ ಭಯಗಳು ತರ್ಕ ಮತ್ತು ಅತರ್ಕಗಳ ನಡುವಿನ ಸ್ವರೂಪದ್ದಾಗಿರುತ್ತವೆ. ಉದಾಹರಣೆಗೆ ಹಾವುಗಳನ್ನೇ ತೆಗೆದುಕೊಳ್ಳಿ. ಜಗತ್ತಿನ ಬಹುಭಾಗಗಳಲ್ಲಿ ಹಾವುಗಳ ಬಗ್ಗೆ ಇರುವ ಭಯ ಸಾಮಾನ್ಯ. ಆದರೆ ವಿಷಪೂರಿತ ಹಾವುಗಳು ಅಪರೂಪವಾಗಿ ಇರುವ ಬ್ರಿಟನ್ನಿನಂತಹ ದೇಶದಲ್ಲಿ ಇಂತಹ ಹೆದರಿಕೆ ಅವಾಸ್ತವಿಕವಾದದ್ದು. ಅರ್ಥಾತ್ ಫೋಬಿಯಾ ಸ್ವರೂಪದ್ದು.

ಬಾಲಕಿಯರು ಮತ್ತು ಯುವತಿಯರಲ್ಲಿ ಈ ಭಯ ಮೂಡಿದಾಗ ಅದರ ಮೂಲ ಲೈಂಗಿಕ ಸ್ವರೂಪದ್ದಾಗಿರುತ್ತದೆಂದು ಫ್ರಾಯ್ಡ್ ಹೇಳುತ್ತಾನೆ. ಭಯ ತಲೆತಲಾಂತರದಿಂದಲೂ ಸ್ವಭಾವಗತವಾಗಿರಬಹುದು ಅಲ್ಲದೆ ಕೆಲವು ರೀತಿಯ ಭಯಗಳು ಮಿದುಳಿನಲ್ಲಿ ಹಾಸುಹೊಕ್ಕಾಗಿರಬಹುದು ಎನ್ನುವುದನ್ನೂ ತಳ್ಳಿ ಹಾಕುವಂತಿಲ್ಲ. ಶಿಶುಗಳಿಗೆ ಕೆಳಗೆ ಬೀಳುವ ಭಯ ಹುಟ್ಟಿನಿಂದಲೇ ಇರುವುದನ್ನು ನಾವು ಗಮನಿಸಬಹುದು.

ಈ ಫೋಬಿಯಾಗಳನ್ನು ನಿವಾರಿಸಲು ಈಗ ಮನೋವೈಜ್ಞಾನಿಕ ಚಿಕಿತ್ಸಾ ಪದ್ಧತಿಗಳು ಬಳಕೆಗೆ ಬಂದಿವೆ. ಯಾರಾದರೂ ಫೋಬಿಯಾದಿಂದ ಬಳಲುತ್ತಿದ್ದರೆ (ಉದಾ: ಬೆಕ್ಕಿನ ಭಯ) ಅಂತಹ ಸಂದರ್ಭಗಳಲ್ಲಿ ಪಾವ್ಲೋವ್‌ನ ಪದ್ಧತಿಯಂತೆ ಅವರಲ್ಲಿನ ಭಯವನ್ನು ನಿವಾರಿಸಬಹುದು. ಅದಕ್ಕಾಗಿ ಮೊದಲು ಆಟಿಕೆಯ ಬೆಕ್ಕುಗಳನ್ನು ಹಾಗೂ ಬೆಕ್ಕಿನ ಮರಿಗಳನ್ನು ಅವನ ಸಂಪರ್ಕದಲ್ಲಿ ಬರುವಂತೆ ಮಾಡಿದ ನಂತರ ದೊಡ್ಡದಾದ ಹಾಗೂ ಕೊನೆಗೆ ಬೆಳೆದ ಬೆಕ್ಕುಗಳ ನಡುವೆ ಸಂಪರ್ಕ ಕಲ್ಪಿಸಿ ಹಂತಹಂತವಾಗಿ ಅವರಿಗೆ ಚಿಕ್ಕ ಬೆಕ್ಕುಗಳನ್ನು ಕಂಡರೆ ಉಂಟಾಗುವ ಭಯವನ್ನು ನಿವಾರಿಸಲು ಸಾಧ್ಯ.

ಪಾವ್ಲೋವ್, ಫ್ರಾಯ್ಡ್, ಕಾವುಡ್, ಲಾರೆಂಜ್ ಹಾಗೂ ಮತ್ತಿತರ ಮನಃಶಾಸ್ತ್ರಜ್ಞರು ವಿವರವಾಗಿ ಅಧ್ಯಯನ ಮಾಡಿ ಅಗೋರಾ ಫೋಬಿಯಾ, ಅಕ್ರೋಫೋಬಿಯಾ, ಕ್ಲಾಸ್ಟ್ರೋಫೋಬಿಯಾ ಮತ್ತಿತರ ರೀತಿಯ ಫೋಬಿಯಾಗಳ ನಡುವಿನ ಭಿನ್ನತೆ ಹಾಗೂ ಅವುಗಳನ್ನು ನಿವಾರಿಸುವ ಕ್ರಮಗಳನ್ನು ಸೂಚಿಸಿದ್ದಾರೆ.

ಫೋಬಿಯಾಗಳಿಗೂ ನಮ್ಮ ಜೀವನಶೈಲಿ ಭಾವನಾತ್ಮಕ ಪರಿಪಕ್ವತೆ, ಬೌದ್ಧಿಕ ಬೆಳವಣಿಗೆ ಇವುಗಳಿಗೂ ಜಟಿಲ ಸಂಬಂಧವಿದೆ. ಕೆಲವು ವೇಳೆ ಇಂತಹವರನ್ನು ಗುಣಪಡಿಸಲು ತಾಳ್ಮೆ ಮತ್ತು ದೀರ್ಘಕಾಲದ ಚಿಕಿತ್ಸೆ ಅಗತ್ಯ. ಇವೆಲ್ಲವುಗಳ ಹೊರತಾಗಿಯೂ ಕಪೋಲಕಲ್ಪಿತ, ಅವಾಸ್ತವಿಕ ಭಯಗಳನ್ನು ಪರಿಗ್ರಹಿಸಬಹುದಾದ ಆಶಾದಾಯಕ ಸ್ಥಿತಿಯೂ ಇದೆ. ಇಂತಹ ರೋಗಲಕ್ಷಣ ಇರುವವರು ಸಾಧ್ಯವಿದ್ದಷ್ಟು ಉತ್ತಮ ಮನೋವೈಜ್ಞಾನಿಕ

ರಿಂದ ಚಿಕಿತ್ಸೆ ಪಡೆಯಬೇಕು. ಅದೇನೇ ಇದ್ದರೂ ಮನುಷ್ಯ ವರ್ಗ ಸೇರಿದಂತೆ ಪ್ರಾಣಿಗಳ ಪ್ರಪಂಚದಲ್ಲಿ 'ಭಯ' ಎಂಬುದನ್ನು ಸಂಪೂರ್ಣವಾಗಿ ನಿವಾರಿಸಬಹುದು ಎಂಬುದು ಅವಾಸ್ತವಿಕ. ಅನಗತ್ಯವೂ ಹೌದು. ಭಯವನ್ನು ಚಿಕಿತ್ಸೆಯಿಂದ ನಿವಾರಿಸಬಹುದು. ಆದರೆ ನಮಗೆ ಭಯವೇ ಇಲ್ಲ ಎಂದಾದರೆ ಆಸೆ ಗುರಿಗಳೇ ಇಲ್ಲವೆಂದು ಅರ್ಥ. ನಾವು ಆಶಾವಾದಿಗಳಾದಾಗ ಜೀವನದ ಮಾರ್ಗದಲ್ಲಿ ಗುರಿಮುಟ್ಟದ ಭಯ ಇದ್ದೇ ಇರುತ್ತದೆ. ಅದೇ ನಮ್ಮನ್ನು ಮಾರ್ಗದಲ್ಲಿ ಮುನ್ನಡೆಯಲು ಪ್ರಚೋದಕವಾಗುತ್ತದೆ. ಆದರೆ ಅದು ಅತಿಯಾಯಿತೋ ಮಾರ್ಗಕ್ರಮಿಸುವ ನಮ್ಮ ವಾಂಛೆಯೆ ಕುಂಠಿತವಾಗುತ್ತದೆ. ಔಷಧಿ; ಅತಿಯಾದರೆ ವಿಷ: ಮಿತವಾದರೆ ನಿಷ್ಪ್ರಯೋಜಕ ಎನ್ನುವುದನ್ನು ಮರೆಯುವಂತಿಲ್ಲ.

('ರಿಯಲಿಟೀಸ್' ಪತ್ರಿಕೆಯಿಂದ)

ಪ್ಯಾರಾಚ್ಯೂಟ್‌ನ ಜನನ

ವಿಮಾನದಲ್ಲಿ ಪಯಣಿಸುವಾಗ ಆಪತ್ತೊದಗಿದರೆ ಜೀವರಕ್ಷಣೆಗೆಂದು ಬಳಸುವ ಪ್ಯಾರಾಚ್ಯೂಟನ್ನು ವಿಮಾನವನ್ನು ಕಂಡುಹಿಡಿಯುವುದಕ್ಕೆ ನೂರು ವರ್ಷ ಮೊದಲೇ ಕಂಡು ಹಿಡಿಯಲಾಗಿತ್ತು.

ಪ್ಯಾರಿಸ್‌ನ ಲಿಸಾರ್ ಮಂಡ್ ಎಂಬಾತ ೧೭೮೩ರಲ್ಲಿ ಪ್ಯಾರಚ್ಯೂಟನ್ನು ಸೃಷ್ಟಿಸಿದ. ದೊಡ್ಡ ದೊಡ್ಡ ಕಟ್ಟಡಗಳಿಗೆ ಬೆಂಕಿ ತಗುಲಿದರೆ, ಮಹಡಿಯಲ್ಲಿರುವ ವ್ಯಕ್ತಿಗಳು ಅಪಾಯದಿಂದ ಪಾರಾಗಲು ಪ್ಯಾರಚ್ಯೂಟನ್ನು ಬಳಸುತ್ತಿದ್ದರು.

೧೭೯೭ರಲ್ಲಿ ಮೂರು ಸಹಸ್ರ ಅಡಿ ಎತ್ತರದಲ್ಲಿ ಹಾರುತ್ತಿದ್ದ ಬಲೂನಿನಿಂದ ಕೆಳಕ್ಕೆ ಜಿಗಿದು ತೋರಿಸಿದಾತ ಫ್ರಾನ್ಸಿನ ಜಾಕಿಸ್ ಗಾರ್ನರಿನ್ ಎಂಬವ. ಅಂದಿನಿಂದ ಪ್ಯಾರಾಚ್ಯೂಟನ್ನು ವಿಮಾನಗಳಲ್ಲಿ ಬಳಸಲು ಆರಂಭಿಸಲಾಯಿತು.

• ಶಿ.ಜು. ಪಾಶ, ಶಿವಮೊಗ್ಗ

ರೂಪಾಯಿಯ ಕಥೆ

ರೂಪಾಯಿಯನ್ನು ಮೊಟ್ಟ ಮೊದಲು ಭಾರತದಲ್ಲಿ ಟಂಕಿಸಿ ಬಳಕೆಯಲ್ಲಿ ತಂದಾತ ಶೇರ್‌ಶಹ ಸೂರಿ. ಸುಮಾರು ೧೫೪೨ರ ಕಾಲಕ್ಕೆ ಆಗಿನ ಷಟಿಯೊಂದು ರೂಪಾಯಿಯ ನಾಣ್ಯ ಶುದ್ಧ ಬೆಳ್ಳಿಯಿಂದ ಮಾಡಿದ್ದು ೨೦ ಗ್ರಾಂ ತೂಕವುಳ್ಳದ್ದಾಗಿತ್ತು.

ಭಾರತದಲ್ಲಿ ರೂಪಾಯಿಯನ್ನು ಮೊಟ್ಟಮೊದಲು ಅಪಮೌಲ್ಯಗೊಳಿಸಿದ್ದು ೧೯೪೯ರಲ್ಲಿ.

• ಮುರಳೀಧರ ಕುಲಕರ್ಣಿ

ಚಿನ್ನದ ಮೀನು

ಎಲ್ಲರಿಗೂ ಚಿನ್ನವೆಂದರೆ ವ್ಯಾಮೋಹ. ಚಿನ್ನದ ಬಣ್ಣವೆಂದರೂ ಅಷ್ಟೇ, ಚಿನ್ನದ ಬಣ್ಣದ ಮೀನೆಂದರೂ ಅಷ್ಟೆ. ಆದ್ದರಿಂದ ಎಷ್ಟೋ ಜನ ಅವುಗಳನ್ನು ಮನೆಗೆ ತಂದು ಅಕ್ವೇರಿಯಂನಲ್ಲಿ ಬಿಡುತ್ತಾರೆ. ಆದರೆ ನೆನಪಿರಲಿ, ಅಕ್ವೇರಿಯಂ ಬೆಳಕು ಬೀಳುವ ಸ್ಥಾನದಲ್ಲಿದ್ದರೆ ಒಳ್ಳೆಯದು. ಕತ್ತಲಲ್ಲಿದ್ದರೆ ನಿಮ್ಮ ಚಿನ್ನದ ಮೀನಿನ ಬಣ್ಣ ಕ್ರಮೇಣ ಬಿಳುಪಾಗಿಬಿಡುತ್ತದೆ.

• ಗಣೇಶ್, ಪಿ. ನಾಡೋರ

ಕಡಿಮೆ ಉಪ್ಪಿನ ಸೇವನೆ ಕೆಟ್ಟದ್ದೆ?

• ಎಂ. ದೀಪಾ

ಅಧಿಕ ರಕ್ತದ ಒತ್ತಡ ಇರುವವರು ಆದಷ್ಟು ಕಡಿಮೆ ಉಪ್ಪನ್ನು ಸೇವಿಸಬೇಕೆಂದು ಡಾಕ್ಟರರು ಸೂಚಿಸುವುದುಂಟು. ಕೆಲವೊಮ್ಮೆ ರಕ್ತದ ಒತ್ತಡ ಅತ್ಯಧಿಕವೆಂದು ತೋರಿಬಂದಾಗ ಅದು ಪುನಃ ಸಾಮಾನ್ಯ ಮಟ್ಟಕ್ಕೆ ತಲುಪುವ ವರೆಗಾದರೂ ಉಪ್ಪನ್ನು ವರ್ಜಿಸಲು ಸೂಚಿಸುವುದುಂಟು.

ಆದರೆ ಉಳಿದೆಲ್ಲ ವಸ್ತುಗಳನ್ನು ಬಿಟ್ಟು ಉಪ್ಪನ್ನೇ ಏಕೆ? ಏನಿದೆ ಅದರಲ್ಲಿ ಅಂಥಾದ್ದು? ರಾಸಾಯನಿಕವಾಗಿ ಉಪ್ಪೆಂದರೆ ಸೋಡಿಯಂ ಕ್ಲೋರೈಡ್. ಇದರಲ್ಲಿನ ಸೋಡಿಯಂ ಅಂಶವೇ ಈ ಅವಾಂತರಕ್ಕೆ ಕಾರಣವಾದದ್ದು. ರಕ್ತಪರಿಚಲನೆಯ ವ್ಯವಸ್ಥೆಯ ಮೇಲೆ ಪ್ರಗಾಢವಾದ ಪ್ರಭಾವ ಬೀರುವ ಗುಣ ಸೋಡಿಯಮ್ಮಿಗಿದೆ. ಹರಿಯುವ ರಕ್ತದ ಪ್ರಮಾಣಕ್ಕನುಸಾರವಾಗಿ ಆಕುಂಚನ ಅಥವಾ ಪ್ರಸರಣಗೊಳ್ಳುವ ಗುಣ ರಕ್ತನಾಳಗಳಿಗಿದೆ. ಆದರೆ ಈ ಸೋಡಿಯಂ ರಕ್ತನಾಳಗಳು ಪ್ರಸರಣಗೊಳ್ಳುವ ಗುಣವನ್ನು ಕೆಲಮಟ್ಟಿಗೆ ಕುಗ್ಗಿಸುವುದರಿಂದ ರಕ್ತ ಹೆಚ್ಚು ಒತ್ತಡದಲ್ಲಿ ಹರಿದು ಅಧಿಕ ರಕ್ತದೊತ್ತಡಕ್ಕೆ ಕಾರಣವಾಗುತ್ತದೆ. ಅದನ್ನು ನಿಯಂತ್ರಿಸದೆ ಹೋದಾಗ ಹೃದಯಕ್ಕಷ್ಟೇ ಅಲ್ಲ, ಮೂತ್ರಪಿಂಡಕ್ಕೂ ಕ್ಷತಿಯನ್ನುಂಟುಮಾಡಿ ಮೂತ್ರಪಿಂಡದ ತೊಂದರೆಗಳು, ಹೃದಯಾಘಾತ, ಪಾರ್ಶ್ವಾಘಾತಗಳಿಗೆ ಕಾರಣವಾಗುವುದೆಂಬ ಭಾವನೆ ವೈದ್ಯಕೀಯ ವಲಯದಲ್ಲಿದೆ. ಅದನ್ನು ಪುಷ್ಟೀಕರಿಸಲು ಅಧಿಕ ಪ್ರಮಾಣದಲ್ಲಿ ಉಪ್ಪನ್ನು ಸೇವಿಸುವವರನ್ನು ಕುರಿತ ಅಧ್ಯಯನಗಳೂ ವೈದ್ಯರ ಬೆಂಗಾವಲಿಗಿವೆ.


ಪ್ರಾಣಿಗಳು ಉಪ್ಪನ್ನು ತಿನ್ನುತ್ತವೆಯೆ? ಇಷ್ಟಕ್ಕೂ ಅವುಗಳಿಗೆ ಉಪ್ಪಾದರೂ ಎಲ್ಲಿಂದ ದೊರೆಯಬೇಕು? ಏನಿದ್ದರೂ ಅವು ನೈಸರ್ಗಿಕವಾಗಿ-ವಿಶೇಷತಃ ಸಸ್ಯಮೂಲದಿಂದ ದೊರೆಯುವ ಉಪ್ಪನ್ನೇ-ಶರೀರದ ಅಗತ್ಯವನ್ನು ತುಂಬಿಕೊಳ್ಳಲು ಬಳಸಬೇಕು. ಅಂತೆಯೆ ಮಾನವನಿಗಾದರೂ ದಿನಕ್ಕೆ ಮೂರುಗ್ರಾಮ್‌ಗಳಿಗಿಂತ ಹೆಚ್ಚಿನ ಉಪ್ಪಿನ ಅಗತ್ಯವಿಲ್ಲ. ಇಷ್ಟು ಪ್ರಮಾಣದ ಉಪ್ಪು ಆತ ಸೇವಿಸುವ ತರಕಾರಿ, ಬೇಳೆಕಾಳು ಇತ್ಯಾದಿಗಳಿಂದಲೇ ದೊರೆಯುವ ಕಾರಣ ಆತ ಕೂಡ ಉಪ್ಪು ಸೇವಿಸುವ ಅಗತ್ಯವಿಲ್ಲ ಎಂದು ಹೇಳುವವರೂ ಇದ್ದಾರೆ.

ಆದರೆ ಈ ವರೆಗೆ ನಡೆದ ಅಧ್ಯಯನಗಳೆಲ್ಲವೂ ಕೇವಲ ಅಧಿಕ ಪ್ರಮಾಣದಲ್ಲಿ ಉಪ್ಪನ್ನು ಸೇವಿಸುವವರನ್ನು ಕುರಿತು ನಡೆದಿವೆಯೇ ಹೊರತು ಅಗತ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಉಪ್ಪನ್ನು ಸೇವಿಸುವವರನ್ನು ಕುರಿತು ನಡೆದಿಲ್ಲ. ಕಡಿಮೆ ಪ್ರಮಾಣದಲ್ಲಿ ಉಪ್ಪನ್ನು ಸೇವಿಸುವವರಲ್ಲಿ ರಕ್ತದೊತ್ತಡದ ತೊಂದರೆಯಾಗಲಿ ಮೂತ್ರಪಿಂಡ ಹಾಗೂ ಹೃದಯಕ್ಕೆ ಸಂಬಂಧಿಸಿದ ರೋಗಗಳಾಗಲಿ ಇರುವುದು ಕಡಿಮೆ ಎನ್ನುವುದನ್ನು ಅಂಕಿಸಂಖ್ಯೆಗಳು

ಮರ್ಥಿಸಿದರೆ, ಅಧಿಕ ಉಪ್ಪಿನ ಸೇವನೆ ದುಷ್ಪರಿಣಾಮಕಾರಕ ಎಂಬ ನಿರ್ಣಯಕ್ಕೆ ಖಂಡಿತವಾಯೂ ಬರಬಹುದು ಎಂದು ನಿರ್ಧರಿಸಿದ ಮೈಕೇಲ್ ಆಲ್ಡರ್‌ಮನ್ ಎಂಬ ವಿಜ್ಞಾನಿಗಳು ಉಪ್ಪನ್ನು ಕಡಿಮೆ ಪ್ರಮಾಣದಲ್ಲಿ ಸೇವಿಸುವವರ ಬಗ್ಗೆ ಅಧ್ಯಯನ ಕೈಗೊಂಡಾಗ ಆಶ್ಚರ್ಯವೊಂದು ಎದಿತ್ತು. ಅಧಿಕ ಪ್ರಮಾಣದಲ್ಲಿ ಉಪ್ಪನ್ನು ಸೇವಿಸುವವರಿಗಿಂತ ಕಡಿಮೆ ಉಪ್ಪು ಸೇವಿಸುವವರಲ್ಲಿಯೇ ಹೃದಯಾಘಾತದ ಪ್ರಮಾಣ ಹೆಚ್ಚಾಗಿತ್ತು. ಹೀಗೆ ಹೃದಯಾಘಾತಕ್ಕೆ ಒಳಗಾದವರಲ್ಲಿ ಹಿಂದೆ ಹೆಚ್ಚು ಪ್ರಮಾಣದಲ್ಲಿ ಉಪ್ಪನ್ನು ಸೇವಿಸಿ ಅನಂತರ ಕಡಿಮೆ ಉಪ್ಪಿನ ಆಹಾರಕ್ಕೆ ಒಗ್ಗಿಕೊಂಡವರೇ ಹೆಚ್ಚಾಗಿದ್ದರು.

ಆಹಾರಾಭ್ಯಾಸಕ್ಕೆ ಹೊಂದಿಕೊಂಡೇ ಶರೀರ ಕೆಲಸ ಮಾಡುತ್ತಿರುತ್ತದೆ. ಅದನ್ನು ವ್ಯತ್ಯಸ್ತಗೊಳಿಸಿದರೆ ಅದು ಅನೇಕ ಅವಾಂತರಗಳಿಗೆ ಕಾರಣವಾಗುತ್ತದೆ. ಉಪ್ಪಿನ ಸೇವನೆಯನ್ನು ಮಿತಗೊಳಿಸಿದಾಗ ಆದದ್ದೂ ಅದೇ. ಮೂತ್ರಪಿಂಡ ಸದಾ ರೆನಿನ್ ಎಂಬ ಚೋದಕವನ್ನು ಸ್ರವಿಸುತ್ತಿರುತ್ತದೆ. ರಕ್ತನಾಳಗಳನ್ನು ಕುಗ್ಗಿಸುವ ವಿಶೇಷ ಗುಣ ಅದಕ್ಕೆ. ಹೆಚ್ಚು ಪ್ರಮಾಣದಲ್ಲಿ ರೆನಿನ್ ಸ್ರಾವಗೊಂಡಷ್ಟೂ ರಕ್ತನಾಳಗಳ ಸಂಕೋಚನದ ಪ್ರಮಾಣವೂ ಹೆಚ್ಚು. ಉಪ್ಪು ರೆನಿನ್ನಿನ ಉತ್ಪಾದನೆಯನ್ನು ನಿಯಂತ್ರಿಸುವುದರಿಂದ ಉಪ್ಪಿನ ಸೇವನೆಯ ಪ್ರಮಾಣ ಕಡಿಮೆಯಾದಂತೆಲ್ಲ ಈ ನಿಯಂತ್ರಣವೂ ಸಡಿಲಗೊಂಡು ರೆನಿನ್ ಅಧಿಕ ಪ್ರಮಾಣದಲ್ಲಿ ಉತ್ಪಾದಿತವಾಗಿ, ತತ್ಪರಿಣಾಮವಾಗಿ ರಕ್ತನಾಳಗಳೂ ಹೆಚ್ಚು ಹೆಚ್ಚಾಗಿ ಸಂಕುಚಿತವಾಗಿ ನಾನಾ ಬಗೆಯ ಅವಾಂತರಗಳಿಗೆ ಕಾರಣವಾದವು ಎಂದು ಆಲ್ಡರ್‌ಮನ್ ಹೇಳುತ್ತಾರೆ. ಆದರೆ ಶರೀರಕ್ಕೆ ತಕ್ಕ ಪ್ರಮಾಣದಲ್ಲಿ ಕ್ಯಾಲ್ಶಿಯಂ ಆಗಲಿ ಪೊಟ್ಯಾಶಿಯಂ ಹಾಗೂ ಮ್ಯಾಗ್ನೇಶಿಯಂ ಆಗಲಿ ದೊರೆಯದಿದ್ದರೆ ಇದೇ ಬಗೆಯ ಪರಿಣಾಮಗಳು ಕಂಡುಬರುವವೆನ್ನುವುದನ್ನೂ ಅಲಕ್ಷಿಸುವಂತಿಲ್ಲ.

ಹಾಗಾದರೆ ಇದಕ್ಕೆಲ್ಲಾ ಏನು ಉಪಾಯ? ಮೈಕೇಲ್. ಆಲ್ಡರ್‌ಮನ್ ಅಜ್ಜಿ ಹೇಳುತ್ತಿದ್ದ ಮಾತನ್ನೇ ಸೂಚಿಸುತ್ತಾರೆ: ಅತಿಯೆನ್ನುವುದು ಯಾವಾಗಲೂ ಕೆಟ್ಟದ್ದು. ಹೌದು. ಅತಿ ಸರ್ವತ್ರ ವರ್ಜಯೇತ್.



“ವೇದಾಂತ ರೆಜಿಮೆಂಟ್”

ರಾಬರ್ಟ್ ಜೆ. ಇಂಜರ್‌ಸಾಲ್ ಅಮೇರಿಕದ ಒಬ್ಬ ವಿಚಾರವಾದಿ, ವಕೀಲ, ವಾಗ್ಮಿ ಮತ್ತು ಸಿವಿಲ್ ಯುದ್ಧಯೋಧ. ಮಾನವತಾವಾದವನ್ನು ತನ್ನ ಬರಹ ಮತ್ತು ಉಪನ್ಯಾಸಗಳ ಮೂಲಕ ಬೋಧಿಸಿದ ಈತ ತನ್ನ ಚಾರಿತ್ರ್ಯ ಮತ್ತು ವಿಚಾರದಿಂದ ಒಂದು ಜನಾಂಗವನ್ನೇ ಹೊಸ ಚಿಂತನೆಗೆ ಹಚ್ಚಿದ. ಈತನ ಉಪನ್ಯಾಸವನ್ನು ಸಂಗ್ರಹಿಸಿರುವವರು ಕನ್ನಡದ ಸುಪ್ರಸಿದ್ಧ ವೈಚಾರಿಕ ಬರಹಗಾರರಾದ ಬಿ.ವಿ. ವೀರಭದ್ರಪ್ಪ. ಅವರ “ವೇದಾಂತ ರೆಜಿಮೆಂಟ್” ಎಂಬ ಪುಸ್ತಕದಿಂದ ಉಧೃತವಾದ ಅಂಶಗಳಿವು.

ಲೇಖಕ: ಬಿ.ವಿ. ವೀರಭದ್ರಪ್ಪ ಪ್ರಕಾಶಕರು: ಪತ್ರಿಕೆ ಪ್ರಕಾಶನ, ನಂ. ೯, ಬಸವನಗುಡಿ, ಬೆಂಗಳೂರು. ಮುದ್ರಣ: ೧೯೯೫.

ಮಹಿಳೆಯರೆ ಮತ್ತು ಮಹನೀಯರೆ,

ಈ ಪ್ರಪಂಚ ಎಷ್ಟು ದುಃಖವನ್ನು ಅನುಭವಿಸಿದೆ ಎಂದು ನೆನೆದಾಗ ನನಗೆ ಅಚ್ಚರಿಯಾಗುತ್ತದೆ. ನಮ್ಮ ಪೂರ್ವಜರು ಎಷ್ಟು ಕಾಲ ಗುಲಾಮರಾಗಿದ್ದರು ಎಂದು ನೆನೆದಾಗ ನನಗೆ ದಿಗ್ಭ್ರಮೆಯಾಗುತ್ತದೆ. ನನ್ನ ಪ್ರಕಾರ ಅಮೆರಿಕದ ಅಧ್ಯಕ್ಷರಲ್ಲೆಲ್ಲ

ಅಬ್ರಹಾಂ ಲಿಂಕನ್ ಅತ್ಯಂತ ಮಹಾಪುರುಷ. ಆತನ ಸಮಾಧಿಯ ಮೇಲೆ ಈ ವಾಕ್ಯಗಳನ್ನು ಬರೆದರೆ ಅವು ಯಥಾರ್ಥವಾಗಿರುತ್ತವೆ: "ಪ್ರಪಂಚದ ಇತಿಹಾಸದಲ್ಲೆಲ್ಲ ಅನುಪಮ ವ್ಯಕ್ತಿಯಾದ ಆತ ಇಲ್ಲಿ ಮಲಗಿದ್ದಾನೆ, ಅತ್ಯಂತ ನಿರಂಕುಶ ಅಧಿಕಾರ ತನ್ನಲ್ಲಿದ್ದರೂ ಅದನ್ನು ದಯೆ ತೋರಿಸಲಲ್ಲದೆ ಬೇರಾವುದಕ್ಕೂ ಆತ ದುರುಪಯೋಗಪಡಿಸಿಕೊಳ್ಳಲಿಲ್ಲ."

ಎಷ್ಟು ದೀರ್ಘಕಾಲ ನಾವು ಗುಲಾಮಪದ್ಧತಿಗೆ ಜೋತು ಬಿದ್ದಿದ್ದೆವು, ಎಷ್ಟು ದೀರ್ಘಕಾಲ ಗುಲಾಮರ ದುಡಿಮೆಗೆ ಅವರ ಬೆತ್ತಲೆ ಮೈ ಮೇಲೆ ಬೀಳುತ್ತಿದ್ದ ಚಾಟಿ ಏಟುಗಳೇ ಪ್ರತಿಫಲವಾಗಿದ್ದವು ಎಂಬುದನ್ನು ಯೋಚಿಸಿ.

ಈ ದೇಶದಲ್ಲಿ ಯೇಸುವಿನ ಶಿಲುಬೆ ನಿರಪರಾಧಿಗಳನ್ನು ಚಾಟಿಯಿಂದ ದಂಡಿಸಲು ಕಟ್ಟುವ ಕಂಬವಾಗಿತ್ತು. ಈ ಪ್ರಪಂಚ ಕಳೆದ ೫೦ ವರ್ಷಗಳಿಂದ ಮಾತ್ರ ಸಭ್ಯ ಮನುಷ್ಯರ ವಾಸಕ್ಕೆ ಯೋಗ್ಯವಾಗಿದೆ ಎಂಬ ಮಾತು ಸತ್ಯವಲ್ಲವೆ, ನೀವೇ ಹೇಳಿ.

ನನ್ನ ದೇಹದಲ್ಲಿರುವ ಪ್ರತಿಯೊಂದು ರಕ್ತದ ತೊಟ್ಟಿನಿಂದಲೂ ನಾನು ಎಲ್ಲ ರೀತಿಯ ದಬ್ಬಾಳಿಕೆಯನ್ನೂ ಸರ್ವಾಧಿಕಾರವನ್ನೂ ದ್ವೇಷಿಸುತ್ತೇನೆ. ನಾನು ಸ್ವಾತಂತ್ರ್ಯವನ್ನು ಪ್ರೀತಿಸುತ್ತೇನೆ. ಹಾಗೆಂದರೇನು? ಇನ್ನೊಬ್ಬರ ಭೌತಿಕ ಸುಖದಲ್ಲಿ ಮಧ್ಯಪ್ರವೇಶಿಸದೆ ಏನು ಬೇಕಾದರೂ ಮಾಡುವ ಹಕ್ಕು, ವಿಚಾರ ಸ್ವಾತಂತ್ರ್ಯದಲ್ಲಿ ಸರಿಯಾಗಿ ಯೋಚಿಸುವ ಹಕ್ಕಿನ ಜೊತೆಗೆ ತಪ್ಪಾಗಿ ಯೋಚಿಸುವ ಹಕ್ಕೂ ಸೇರಿದೆ. ಏಕೆ? ಏಕೆಂದರೆ ಸತ್ಯದ ಸಾಕ್ಷಾತ್ಕಾರಕ್ಕೆ ಅದೊಂದೇ ಮಾರ್ಗ.

ನೀವು ವಿಶ್ವದ ಸಾರ್ವಭೌಮರೇ ಆಗಿರಬಹುದು. ಆದರೆ ನೀವು ಒಂದು ಕೋಮಲ ಹೃದಯದ ಸಾರ್ವಭೌಮರಾಗುವುದು ಅದಕ್ಕಿಂತ ಉತ್ತಮ. ಒಬ್ಬ ಒಳ್ಳೆಯ ಮಹಿಳೆಯ ಪ್ರೇಮಕ್ಕೆ ಪಾತ್ರನಾಗಿರುವ ಪುರುಷ ನಿರ್ಗತಿಕನಾಗಿ ಚರಂಡಿಯಲ್ಲಿ ಬಿದ್ದು ಸತ್ತರೂ ಅವನ ಜೀವನ ಯಶಸ್ವಿಯಾಯಿತು ಎಂದು ನಾನು ಭಾವಿಸುತ್ತೇನೆ.

ನಾನು ನನ್ನ ಮಗುವಿಗೆ ಏನು ಬುದ್ಧಿವಾದ ಹೇಳುತ್ತೇನೆಂದರೆ, "ನೀನು ಎಲ್ಲಿ ಬೇಕಾದರೂ ಹೋಗು, ಏನಾದರೂ ಮಾಡು, ಎಷ್ಟೇ ಆಳವಾದ ಪ್ರಪಾತಕ್ಕೆ ನೀನು ಬೀಳು... ಆದರೂ ನನ್ನ ಮನೆಯ ಬಾಗಿಲು, ನನ್ನ ತೋಳು, ನನ್ನ ಹೃದಯ ನಿನಗಾಗಿ ಸದಾ ತೆರೆದಿರುತ್ತದೆ. ನಾನು ಜೀವಿಸಿರುವವರೆಗೂ ನಿನಗೆ ಇಂತಹ ಇನ್ನೊಬ್ಬ ಸ್ನೇಹಿತ ಸಿಗುವುದಿಲ್ಲ."

ಸ್ನೇಹಿತರೆ, ನನ್ನ ವಿಚಾರಗಳು ಅದ್ಭುತವಾದುವೇನೂ ಅಲ್ಲ. ಆದರೆ ಅವು ನನ್ನ ಪ್ರಾಮಾಣಿಕ ವಿಚಾರಗಳು. ಇಂದಿನ ಪ್ರತಿಯೊಂದು ಮತ ಸಿದ್ಧಾಂತಗಳು ಸಂಕೋಲೆ ಮತ್ತು ಚಾಟಿಗಳನ್ನು ಪ್ರಮುಖವಾಗಿ ಹೊಂದಿವೆ. ಅವು ನನಗೆ ಇಷ್ಟವಿಲ್ಲ.

ಸಂಗ್ರಹ:

• ಜೆ.ಎಚ್. ಹರೀಶಚಂದ್ರ, ಮೂರ್ಕಲ್

ಅನುಭವ-ನೋವು-ಮಾತು

ಯಶವಂತ ಚಿತ್ತಾಲರ "ಪುರುಷೋತ್ತಮ" ಕಾದಂಬರಿಯಿಂದ ಆಯ್ದ ಕೆಲವು ಜೀವನದ ಸತ್ಯಗಳು. ಭಾರತೀಯ ಭಾಷಾ ಪರಿಷತ್ ಮತ್ತುಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳನ್ನು ಗಳಿಸಿರುವ ಈ ಕಾದಂಬರಿಯ ಪ್ರಕಾಶಕರು ಗೀತಾ ಬುಕ್ ಹೌಸ್ ಮೈಸೂರು.

ಮನುಷ್ಯ ತನ್ನ ಅನುಭವಗಳಲ್ಲಿ ತೀರ ಒಬ್ಬಂಟಿ. ನಾವು ಇನ್ನೊಬ್ಬರ ನೋವನ್ನು ಊಹಿಸಬಲ್ಲೆವು. ಅನುಭವಿಸಲಾರೆವು.

ಮನುಷ್ಯನಿಗೆ ಮಾತೇ ಇಲ್ಲದಿದ್ದರೆ ಯುದ್ಧಗಳೇ ಆಗುತ್ತಿರಲಿಲ್ಲವಂತೆ! ಆದರೆ ಇನ್ನೊಬ್ಬರ ನೋವಿನ ಕಲ್ಪನೆಯೂ ನಮಗೆ ಬರುತ್ತಿರಲಿಲ್ಲ. ಮಾತು ಇನ್ನೊಬ್ಬರ ನೋವನ್ನು ಅರಿಯುವ ಸಾಧನ ಮಾತ್ರವಲ್ಲ, ಸ್ವತಃ ತನ್ನ ನೋವನ್ನು ಕಡಿಮೆ ಮಾಡಿಕೊಳ್ಳುವ ಸಾಧನವೂ ಹೌದು. ಮನುಷ್ಯ ಅನುಭವಿಸಿದ್ದು ಮಾತಾಗುವುದಕ್ಕೂ ಮುಹೂರ್ತವಿದೆ....

ಸಂಗ್ರಹ: **ಮಾಧುರಿ ಎಮ್. ಗೋಪಾಲ್**

ಏಳು ದಿನಗಳ ಕಾಲ ಈ ಬೇಡಿಗೆ
ಸಂದಾಸ್ತ್ರಿಯೇ ಪ್ರೇರಕ!

ತಿರುಪತಿಯಲ್ಲಿ ಬೈಗುಳಗಳ ಜಾತ್ರೆ!

• ಕಂಬಳಿ ಆದವಾನಿ

ಆಂಧ್ರಪ್ರದೇಶದ ರಾಯಲಸೀಮೆ ಪ್ರದೇಶದ ಜಾತ್ರೆಗಳಲ್ಲೇ ವಿಲಕ್ಷಣವಾದುದು ತಿರುಪತಿ ಗಂಗಾ ಜಾತ್ರೆ. ದಿನಕ್ಕೊಂದು ವೇಷ, ಬೈಗಳುಗಳ ಸುರಿಮಳೆಯಿಂದ ನಡೆಯುವ ಈ ಜಾತ್ರೆಯಲ್ಲಿ ಎಲ್ಲರೂ ಭಾಗವಹಿಸುತ್ತಾರೆ.

ಹಿಂದೆ ರಾಯಲಸೀಮೆ 'ಪಾಳೆಗಾಳ್ಳು'ರ (ನಾಯಕರು) ಆಳ್ವಿಕೆಯಲ್ಲಿತ್ತು. ತಿರುಪತಿ ಪಾಳೆಗಾರನ ದುರಹಂಕಾರವೇ ಗಂಗಾ ಜಾತ್ರೆಗೆ ಕಾರಣ ಎಂದು ಹೇಳುತ್ತಾರೆ. ತಿರುಪತಿ ಗಂಗಾ ಜಾತ್ರೆಗೆ ಸಂಬಂಧಿಸಿದಂತೆ ಎಷ್ಟೋ ಕತೆಗಳು ಪ್ರಚಾರದಲ್ಲಿದ್ದರೂ ಒಂದು ಕತೆ ಮಾತ್ರ ವಿಲಕ್ಷಣವಾದದ್ದು.

ತಿರುಪತಿಯಲ್ಲಿ ಏಳುಜನ ಅಕ್ಕ-ತಂಗಿಯರಿದ್ದರಂತೆ. ಅವರಲ್ಲಿ ಚಿಕ್ಕವಳು ಸಣ್ಣ ಗಂಗಮ್ಮ ಅವಿವಾಹಿತಳು. ತಿರುಪತಿ ಪಾಳೆಗಾರನ ಕಣ್ಣು ಸಣ್ಣ ಗಂಗಮ್ಮನ ಮೇಲೆ ಬಿತ್ತು. ಆಕೆಯನ್ನು ಮೋಹಿಸಿದ. ಆಕೆ ತಿರಸ್ಕರಿಸಿದಳು. ಆದರೆ ಪಾಳೆಗಾರನು ಆಕೆಯನ್ನು ಬಲವಂತದಿಂದ ಅನುಭವಿಸುವ ಪ್ರಯತ್ನ ಮಾಡಿದ. ಸಣ್ಣ ಗಂಗಮ್ಮ ಮಹಿಮಾನ್ವಿತಳು. ಸಿಟ್ಟು, ಅವಮಾನದಿಂದ ಕುದಿದು ಆಕೆ ಒಂದು ವಾರದೊಳಗೆ ತಿರುಪತಿ ಪಾಳೆಗಾರನ ಪ್ರಾಣ ತೆಗೆಯುತ್ತೇನೆಂದು ಪ್ರತಿಜ್ಞೆ ಮಾಡಿದಳು. ಆಕೆಯ ಮಹಿಮೆ ತಿಳಿದುಕೊಂಡ ಪಾಳೆಗಾರನು ಪ್ರಾಣಭಯದಿಂದ ಓಡಿಹೋದ. ಸಣ್ಣ ಗಂಗಮ್ಮ ಪಾಳೆಗಾರನಿಗಾಗಿ ಬೇಟೆ ಪ್ರಾರಂಭಿಸಿದಳು. ದಿನಕ್ಕೊಂದು ಮಾರುವೇಷ ಧರಿಸಿ ಹುಡುಕಿದಳು.

ಮೊದಲನೆಯ ದಿನವಾದ ಬುಧವಾರ ಬೆಳಗ್ಗೆ ಬೈರಾಗಿ ವೇಷ, ಸಂಜೆ ಹಾವಾಡಿಗನ ವೇಷ ಹಾಕಿದಳು. ಗುರುವಾರ ಬೆಳಗ್ಗೆ ಗೊಲ್ಲನ ವೇಷ, ಸಂಜೆ ಖಂಡ ವೇಷ ಹಾಕಿದಳು. ಆದರೂ ಪಾಳೆಗಾರನು ಕಾಣಿಸಲಿಲ್ಲ. ಶುಕ್ರವಾರ ಬೆಳಗ್ಗೆ ಶೆಟ್ಟಿಯ ವೇಷ, ಸಂಜೆ ತೋಟಿ ವೇಷ ಹಾಕಿಕೊಂಡು ಹುಡುಕುತ್ತಾ ಹೊಲಸು ಬೈಗಳು ಬೈಯುತ್ತಾ ತಿರುಗಿದಳು. ಪಾಳೆಗಾರನು ಹೊರಗೆ ಬರಲಾರದುದನ್ನು ಕಂಡು ಶನಿವಾರ ಬೆಳಗ್ಗೆ ದೊರೆಯ ವೇಷ ಹಾಕಿಕೊಂಡು ಬಂದಳು. ಪಾಳೆಯಗಾರನು ದೊರೆಯ ಸಾಮಂತನಾದ್ದರಿಂದ ತನ್ನ ರಾಜನೇ ಬಂದನೆಂದು ಭ್ರಮಿಸಿ ಹೊರಗೆ ಬಂದ. ಪಾಳೆಗಾರನು ಹೊರಗೆ ಬಂದಕೂಡಲೇ ಗಂಗಮ್ಮ ಅವನ ತಲೆಯನ್ನು ಕತ್ತರಿಸಿ ಹಾಕಿದಳು. ಆದರೂ ಆತನ ಹೆಂಡತಿಯ ದುಃಖಕ್ಕೆ ಸಣ್ಣ ಗಂಗಮ್ಮ ವ್ಯಥೆಪಟ್ಟಳು. ರವಿವಾರ ಮಾತಂಗಿ ವೇಷ ಧರಿಸಿ ಬಂದು ಪಾಳೆಗಾರನ ಹೆಂಡತಿಯನ್ನು ಸಂತೈಸಿದಳು.

ಗಂಗಮ್ಮ ತಿರುಪತಿಗೆ ಮೂರು ಮೈಲು ದೂರದಲ್ಲಿರುವ ಅವಿಲಾಲ ಗ್ರಾಮದಲ್ಲಿ ಜನಿಸಿದಳೆಂದು ಪ್ರತೀತಿ ಇದೆ. ಅವಿಲಾಲ ಗ್ರಾಮದಲ್ಲಿ ಗಂಗಮ್ಮನ ಜಾತ್ರೆ ಮಾಡಿದ ನಂತರ ಅಲ್ಲಿಂದ ತಿರುಪತಿಗೆ. ಅರಿಶಿಣ ಕುಂಕುಮ ತರುತ್ತಾರೆ. ಜಾತ್ರೆಗೆ ಮೊದಲು ಜಾತ್ರೆಯ ಪ್ರಾರಂಭ ಸೂಚಿಸಲು ತಿರುಪತಿಯಲ್ಲಿ ಡಂಗುರ ಸಾರುತ್ತಾರೆ. ಸಾಮಾನ್ಯವಾಗಿ 'ಕೈಕಲ' ಕುಲಸ್ಥರು ಪರಂಪರಾಗತವಾಗಿ ಜಾತ್ರೆಯಲ್ಲಿ ವೇಷಗಳನ್ನು ಹಾಕುತ್ತಾರೆ. ಅಗಸರು

ಕೂಡ ಅವರೊಂದಿಗೆ ವೇಷಗಳನ್ನು ಧರಿಸುತ್ತಾರೆ. ಈ ಕಥೆಯಲ್ಲಿನ ಗಂಗಮ್ಮಳಂತೆ ಜನರು ಕೂಡ ದಿನಕ್ಕೊಂದು ವೇಷ ಧರಿಸುತ್ತಾರೆ. ಗಂಗಮ್ಮನಂತೆ ಬೈಯುತ್ತಾ ತಿರುಗುತ್ತಾರೆ.

ವೈವಿಧ್ಯಮಯ ವೇಷಗಳು

ಕೆಲವರು ಬೈರಾಗಿ ವೇಷವನ್ನು ಬುಧವಾರ' ಬೆಳಿಗ್ಗೆ ಹಾಕುತ್ತಾರೆ. ಗುಂಪಾಗಿ ಹೊರಟು ದಾರಿಯಲ್ಲಿ ಅವಾಚ್ಯ ಶಬ್ದಗಳಿಂದ ಬೈಯುತ್ತಾ, ಹಾಡುತ್ತಾ ಗಂಗಮ್ಮನ ಗುಡಿಗೆ ಹೋಗಿ ಕೊರಳಿನಲ್ಲಿದ್ದ ಮಣ್ಣಿನ ಮಣಿಯ ಹಾರಗಳನ್ನು ಗಂಗಮ್ಮನ ಕಲ್ಲಿನ ಪಾದಗಳ ಮೇಲೆ ಎಸೆಯುತ್ತಾರೆ.

ಎರಡನೆಯ ದಿನವಾದ ಗುರುವಾರ ಮಧ್ಯಾಹ್ನದಿಂದ ಖಂಡವೇಷ ಹಾಕುತ್ತಾರೆ. ಕೆಂಪು ಕುಂಕುಮವನ್ನು ಮೈಗೆಲ್ಲ ಬಳಿದುಕೊಂಡು ಮಂಡಕ್ಕಿ ಸರವನ್ನು ಕೊರಳಿನಲ್ಲಿ ಹಾಕಿಕೊಂಡು ಹೊಲಸು



ಪೂಜೆಗೊಳ್ಳುತ್ತಿರುವ ಸಣ್ಣಗಂಗಮ್ಮನ ವಿಗ್ರಹ

ಪದಗಳಿಂದ ಕೂಡಿದ ಹಾಡುಗಳನ್ನು ಹಾಡುತ್ತಾ ಗಂಗಮ್ಮನ ಗುಡಿಗೆ ಹೋಗಿ ಗಂಗಮ್ಮನನ್ನು ಬೈದು ಬರುತ್ತಾರೆ.

ಮೂರನೆಯ ದಿನವಾದ ಶುಕ್ರವಾರ ಮಧ್ಯಾಹ್ನ ತೋಟಿ ವೇಷ ಹಾಕುತ್ತಾರೆ. ಕಪ್ಪು ಮಸಿಯನ್ನು ಮೈಗೆಲ್ಲಾ ಬಳಿದುಕೊಂಡು ಬಿಳಿನಾಮ ಧರಿಸಿ ತಲೆಗೆ, ನಡುವಿಗೆ ರುಮಾಲು ಸುತ್ತಿಕೊಳ್ಳುತ್ತಾರೆ. ಹಳೇ ಕಸ ಪೊರಕೆ ಹಿಡಿದು ಗಂಗಮ್ಮನ ಗುಡಿಗೆ ಹೋಗುತ್ತಾರೆ. ಗಂಗಮ್ಮನ ಗುಡಿಯ ಮುಂದೆ ಬೇವಿನ ಎಲೆಯನ್ನೂ ಪೊರಕೆಯನ್ನೂ ಎಸೆದು ಬರುತ್ತಾರೆ. ಹೋಗುವಾಗಲೂ ಬರುವಾಗಲೂ ಹೊಲಸು ಹಾಡುಗಳನ್ನು ಹಾಡುವುದನ್ನು ಮರೆಯುವುದಿಲ್ಲ.

ಶನಿವಾರ ಮಧ್ಯಾಹ್ನ ದೊರೆಯ ವೇಷವನ್ನು ಕೈಕಲಕುಲದವರು ಹಾಗೂ ಮಂತ್ರಿಯ ವೇಷವನ್ನು ಆಗಸರು ಧರಿಸುತ್ತಾರೆ. ಈ ವೇಷವನ್ನು ಬೇರೆ ಯಾರೂ ಧರಿಸುವುದಿಲ್ಲ. ಪಾಳೆಗಾರನ ಮರದ ಶಿರಸ್ಸನ್ನು ಹಿಡಿದುಕೊಂಡ ಮಾಲದವನೊಂದಿಗೆ ಊರೆಲ್ಲಾ ತಾಳ-ಮೇಳದೊಂದಿಗೆ ಮೆರವಣಿಗೆ ಮಾಡುತ್ತಾರೆ. ದೊರೆಯ ವೇಷಕ್ಕೆ ಭಕ್ತರು ಹೊಸ ವಸ್ತ್ರಗಳನ್ನು ಕೊಡುತ್ತಾರೆ.

ರವಿವಾರ ಬೆಳಗಿನಿಂದಲೂ ಮಾತಂಗಿ ವೇಷವನ್ನು ಗುಡಿಯ ಕಡೆಯವರು, ಹರಕೆ ಹೊತ್ತಿರುವ ಸ್ಥಾನಿಕರು ಹಾಕುತ್ತಾರೆ. ಮಾತಂಗಿ ವೇಷವನ್ನು ಗಂಗಮ್ಮನ ವಿಶ್ವರೂಪವಾಗಿ ಭಾವಿಸುತ್ತಾರೆ. ಈ ವೇಷ ಧರಿಸುವವರು ಬಿಳಿ ಅಥವಾ ಅರಿಷಿಣ ಬಣ್ಣದ ಸೀರೆ, ಕುಪ್ಪಸ ತೊಟ್ಟು ತುರುಬಿನಲ್ಲಿ ಹೂ ಮುಡಿಯುತ್ತಾರೆ. ಕೊರಳಲ್ಲಿ ಹೂಮಾಲೆ ಧರಿಸುತ್ತಾರೆ. ಮೈತುಂಬಾ ಚುಕ್ಕೆ ಇಟ್ಟುಕೊಳ್ಳುತ್ತಾರೆ. ಮಾತಂಗಿ ಸಾವಿರ ಕಣ್ಣುಗಳ ದೇವತೆ ಎಂಬುದು ಅವರ ನಂಬಿಕೆ. ಮೇಳದೊಂದಿಗೆ ಮಾತಂಗಿ ವೇಷಗಾರರು ಕುಣಿಯುತ್ತಾ, ಕುಪ್ಪಳಿಸುತ್ತಾ ಗಂಗಮ್ಮನ ಗುಡಿಗೆ, ವಿವಿಧ ಗ್ರಾಮ ದೇವತೆಗಳ ಗುಡಿಗೆ ಹೋಗಿಬರುತ್ತಾರೆ.

ಜಾತ್ರೆಯ ಕೊನೆಯ ದಿನವಾದ ಮಂಗಳವಾರ ನಡುರಾತ್ರಿ 'ಪೇರಂಟಾಲು' ವೇಷವನ್ನು ಕೈಕಲ ಕುಲದವರು ಧರಿಸುತ್ತಾರೆ. ಇದು ತಿರುಪತಿ ಗಂಗಮ್ಮ ಜಾತ್ರೆಯಲ್ಲಿ ಹಾಕುವ ಕೊನೆಯ ವೇಷ. ಹುಲ್ಲಿನಿಂದ ತಯಾರಿಸಿದ ಪಾಳೆಯಗಾರನ ಬೊಂಬೆಯನ್ನು ಸುಟ್ಟು ನೇರವಾಗಿ ಸಣ್ಣ ಗಂಗಮ್ಮ ದೊಡ್ಡ ಗಂಗಮ್ಮರ ಗುಡಿಗಳಿಗೆ ಹೋಗಿ ಅಲ್ಲಿ ಮಣ್ಣಿನಿಂದ ತಯಾರಿಸಿದ ಗಂಗಮ್ಮನ ಗೊಂಬೆಯನ್ನು ಕಡಿದು ಜಾತ್ರೆ ಮುಗಿಸುತ್ತಾರೆ.


ಗಂಗಾಜಾತ್ರೆಯಲ್ಲಿ ಕೊನೆಯ ದಿನವಾದ ಮಂಗಳವಾರ ಬಹಳ ಪ್ರಧಾನವಾದದ್ದು. ಮಂಗಳವಾರ ರಾತ್ರಿ ಹುಲ್ಲು, ಮಣ್ಣಿನಿಂದ ಆರು ಅಡಿಗಳ ಗಂಗಮ್ಮನ ಗೊಂಬೆಯನ್ನು ತಯಾರಿಸುತ್ತಾರೆ. ನಂತರ ಪೇರಂಟ ವೇಷದವರು ಬಂದು ಗೊಂಬೆಯನ್ನು ಕಡಿಯುತ್ತಾರೆ. ಇಲ್ಲಿ ಕಡಿಯುವುದೆಂದರೆ ಗಂಗಮ್ಮನನ್ನು ಪೂಜಿಸಿ ಕಳುಹಿಸುವುದು. ವಿನಾಯಕನನ್ನು ಪೂಜಿಸಿ ನೀರಿನಲ್ಲಿ ವಿಸರ್ಜಿಸಿದಂತೆ ಮಾಡುವ ವಿಧಿಯದು. ನಂತರ ಆ ಗೊಂಬೆಯನ್ನು ಜನರು ತುಳಿದಾಡಿ ಮಣ್ಣು ತೆಗೆದುಕೊಳ್ಳುತ್ತಾರೆ. ಹೀಗೆ ತೆಗೆದುಕೊಂಡ ಮಣ್ಣಿನಿಂದ ತಮಗೆ ಶುಭವಾಗುವದೆಂದು ಭಾವಿಸುತ್ತಾರೆ.

ಏನೇ ಆಗಲಿ, ಫಾಲ್ಗುಣ ಮಾಸದಲ್ಲಿ ನಡೆಯುವ ಈ ಬೈಗಳ ಜಾತ್ರೆಯನ್ನು ನೋಡಲು ಸುತ್ತಮುತ್ತಲಿನ ಊರುಗಳಿಂದ ಸಾವಿರಾರು ಜನರು ಬರುತ್ತಾರೆ.

ಬೆಕ್ಕು-ನಾಯಿ

ಬೆಕ್ಕಿಗೆ ನೆನಪಿನ ಶಕ್ತಿ ಕಡಿಮೆ. ಆದರೆ ನಾಯಿಯದು ತದ್ವಿರುದ್ಧ. ನಾಯಿ ಬಾಲ ಆಡಿಸಿದರೆ ಅದು ಸ್ನೇಹಸೂಚಕ ಬದಲು ಬೆಕ್ಕು ಬಾಲ ಆಡಿಸಿದರೆ ಅದು ಎಚ್ಚರಿಕೆಯ ಸಂಕೇತ!

• *ಸಂಗ್ರಹ: ಗಣೇಶ*



ಕೇಳಿದ್ದೀರಾ? 'ಕಿವಿ' ಹಣ್ಣು!

• ಎಚ್.ಆರ್. ಸುರೇಶ್

[ಆಧಾರ: 'ನ್ಯಾಶನಲ್ ಜಿಯೊಗ್ರಫಿಕ್'ನಲ್ಲಿ ಪ್ರಕಟವಾದ ನೊಯೆಲ್ ವಿಯೆಟ್‌ಮೇಯರ್‌ರ ಲೇಖನ.]

ಸ್ಟ್ರಾಬೆರಿ, ಬಾಳೆ, ಕಲ್ಲಂಗಡಿ, ಅನಾನಸ್ ಈ ನಾಲ್ಕೂ ಹಣ್ಣುಗಳ ರುಚಿ ಇದೊಂದರಲ್ಲೇ ಅಡಕವಾಗಿದೆ.

"ಊಹುಂ. ನಮಗೆ ಕಿವಿ ಹಣ್ಣು ಮಾತ್ರ ಗೊತ್ತು. ಆ ಹೆಸರಿನ ಹಣ್ಣೂ ಇದೆಯೆ?" ಅಂತ ನಕ್ಕು, ನಮ್ಮನ್ನೇ ತಿರುಗಿ ಕೇಳ್ಬೇಡಿ.

"ಹೋಗಲಿ. 'ಕಿವಿ' ಹೆಸರಿನ ಮತ್ತಾವುದಾದರೂ ನಿಮಗೆ ಪರಿಚಿತವೆ?"

"ಹೂಂ. ನ್ಯೂಜಿಲ್ಯಾಂಡ್‌ನಲ್ಲಿ ಆ ಹೆಸರಿನ ಪಕ್ಷಿಯೊಂದಿದೆ ಅಂತ ಕೇಳಿ ಗೊತ್ತು. ಚಿತ್ರಾನೂ ನೋಡಿದೀವಿ. ಕೋಳಿಗಾತ್ರ, ಗಿಡ್ಡ ಕಾಲು, ಸಣ್ಣ ಕತ್ತು, ಉದ್ದ ಕೊಕ್ಕು, ಮಾಸಲು ಬೂದು ಬಣ್ಣದ ರೆಕ್ಕೆಗಳುಳ್ಳ ನಾಚಿಕೆ ಸ್ವಭಾವದ, ಹಾರಲಾರದ ಪಕ್ಷಿ ಅಂತ ವಿವರಣೇನೂ ಓದಿದೀವಿ."

ಹಾಂ... ಈಗ ನಾನು ಹೇಳತಿರೋ 'ಕಿವಿ' ಹಣ್ಣು ಕೂಡ ನ್ಯೂಜಿಲ್ಯಾಂಡಿನದೇ. 'ಕಿವಿ' ಎಂಬ ಪದದ ಬಗೆಗೆ ಆ ದೇಶದವರಿಗೆ ಅದೇನೋ ಮೋಹ. ತಮ್ಮನ್ನು 'ಕಿವೀಸ್' ಎಂದು ಕರೆದುಕೊಳ್ಳಲು ಅವರಿಗೆ ತುಂಬ ಹೆಮ್ಮೆ. ಈಗ್ಗೆ ತೊಂಬತ್ತೆರಡು ವರ್ಷಗಳ ಹಿಂದೆ ಚೀನಾ ದೇಶದಿಂದ ಇಲ್ಲಿಗೆ ಬಂದು ಈ ನೆಲದಲ್ಲಿ ಹುಲುಸಾಗಿ ಬೆಳೆದು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಥಾನ ಒದಗಿಸಿಕೊಟ್ಟ ಕಾಡು ಫಲಕ್ಕೆ ಇವರು ನಾಮಕರಣ ಮಾಡಿದ್ದು 'ಕಿವಿ' ಹಣ್ಣೆಂದೇ.

ಕಿವಿ ಹಣ್ಣಿನ ತೊಗಟೆ ಬೂದು ಬಣ್ಣದ ದಪ್ಪ ಕೂದಲಿನ ಅಂಗಿ ತೊಟ್ಟ ಬಾತುಕೋಳಿ ಮೊಟ್ಟೆಯಂತೆಯೆ. ನೋಡಲಿಕ್ಕೆ ಹೊರಭಾಗ ಅಷ್ಟೇನು ಸುಂದರವಾಗಿರದಿದ್ದರೂ ಹಣ್ಣಿನ ತಿರುಳು ಬಲು ಮನಮೋಹಕ. ಮೋಡವಾದಂತೆ ಘನೀಭವಿಸಿದ ಕೆನೆಯಂಥ ನಡುಭಾಗ. ಅದರಿಂದ ಸುತ್ತಲೂ ಸೂರ್ಯನ ಕಿರಣಗಳಂತೆ ಹರಡಿಕೊಂಡ ಬಿಳಿಯಾದ ಪಟ್ಟೆಗಳು. ಈ ಪಟ್ಟೆಗಳೊಳಗೆ ಅಡಗಿ ಕುಳಿತ ಕಪ್ಪಾದ ಬೀಜಗಳು. ಹೀಗೆಯೇ ಮುಂದೆ ಸಾಗುವ ಬಿಳಿ ಪಟ್ಟೆಗಳು ಇದ್ದಕ್ಕಿದ್ದಂತೆ ಅಂತ್ಯಗೊಂಡು ಗಾಢ ಹಸಿರಿನ ತಿರುಳು ತೊಗಟೆಯವರೆಗೂ ಹರಡಿಕೊಂಡು ಹಣ್ಣಿನ ಒಡಲನ್ನು ಮತ್ತಷ್ಟು ಅಂದಗೊಳಿಸಿದೆ. ನೋಡಿದವರ ಬಾಯಲ್ಲಿ ನೀರೂರಿಸುವಂಥ ಸೌಂದರ್ಯದಿಂದ ತುಂಬಿದೆ. ಇನ್ನು

ರುಚಿಯ ವಿಷಯಕ್ಕೆ ಬಂದರೆ ಸ್ಟ್ರಾಬೆರಿ, ಬಾಳೆ, ಕಲ್ಲಂಗಡಿ ಮತ್ತು ಅನಾನಸ್‌ಗಳ ಮಿಶ್ರಣದಂತಿದ್ದು ಹುಳಿ-ಸಿಹಿಗಳಿಂದ ಕೂಡಿದುದಾಗಿದೆ 'ಕಿವಿ.'

ಈ ಕಾಡುಹಣ್ಣು ಮೂಲತಃ ಚೀನಾ ದೇಶದ್ದೆಂದು ಹೇಳಿದೆನಷ್ಟೆ. ಅಲ್ಲಿ ಅದು ಚಿಕ್ಕ ಗಡುಸಾದ ಆಕಾರವನ್ನು ಪಡೆದಿದೆ. ಚೀನಾ ದೇಶದ ಯಾಂಗ್ ತ್ಸೆ ಎಂಬ ಕಣಿವೆ ಪ್ರದೇಶದಲ್ಲಿ ಬೆಳೆಯುವ ಬೀಜರಹಿತ ಹಣ್ಣು ಚೀನೀಯರಿಗೆ ನೆಚ್ಚಿನದು. ಎಂಟನೇ ಶತಮಾನದಷ್ಟು ಹಿಂದೆಯೇ ಅಲ್ಲಿನ ಕವನಗಳಲ್ಲಿ, ಹಾಡುಗಳಲ್ಲಿ ಈ ಕಾಡು ಹಣ್ಣಿನ ಗುಣಗಾನ ಮಾಡಿರುವುದು ಕಂಡುಬರುತ್ತದೆ. ಈಗಲೂ ಚೀನಿ ರೈತರು ಈ ಕಾಡು ಹಣ್ಣುಗಳನ್ನು ಆಯ್ದು ತಂಮ ಗ್ರಾಮೀಣ ಪ್ರದೇಶದ ಸಂತೆಗಳಲ್ಲಿ ಮಾರುತ್ತಾರೆ.

ನ್ಯೂಜಿಲ್ಯಾಂಡ್‌ನ್ನು ಈ ಕಾಡು ಹಣ್ಣು ಪ್ರವೇಶಿಸಿದ್ದು ಸಹ ಆಕಸ್ಮಿಕವಾಗಿಯೆ. ೧೯೦೪ರಲ್ಲಿ ಚೀನಕ್ಕೆ ಭೇಟಿ ನೀಡಿದ್ದ ನ್ಯೂಜಿಲ್ಯಾಂಡ್ ಪ್ರವಾಸಿಯೊಬ್ಬ ಸ್ವದೇಶಕ್ಕೆ ವಾಪಸಾಗುವಾಗ ಈ ಹಣ್ಣಿನ ಒಂದಷ್ಟು ಬೀಜಗಳನ್ನು ಜತೆಗೆ ತಂದ. ತನ್ನ ದೇಶದ ಉತ್ತರ ದ್ವೀಪದಲ್ಲಿ ತೋಟಗಾರಿಕೆ ಮಾಡಿಕೊಂಡಿದ್ದ ಅಲೆಕ್ಸಾಂಡರ್ ಆ್ಯಲಿಸನ್ ಎನ್ನುವವನಿಗೆ ಅವನ್ನು ನೀಡಿದ.

ಆ್ಯಲಿಸನ್ ಆ ಬೀಜಗಳನ್ನು ತನ್ನ ತೋಟದಲ್ಲಿ ಊರಿ ಬೆಳೆಸಿದನಾದರೂ ಹೆಚ್ಚಿನ ಗಮನವನ್ನೇನೂ ಈ ಬಳ್ಳಿಯ ಕಡೆ ನೀಡಲಿಲ್ಲ. ಹಾಗಾಗಿ ಈ ಹಣ್ಣು ಮಾರುಕಟ್ಟೆ ಪ್ರವೇಶಿಸಲು 'ಕಿವಿ ಹಣ್ಣಿನ ಜನಕ' ಎನ್ನಿಸಿಕೊಂಡ ದಿ. ಜೇಮ್ಸ್ ಮ್ಯಾಕ್ ಲೌಲಿನ್‌ನ ಆಗಮನದವರೆಗೂ, ಅಂದರೆ ೧೯೩೦ ರವರೆಗೂ, ಕಾಯಬೇಕಾಯ್ತು.

ತದ ನಂತರದಲ್ಲಿ ಈ ಹಣ್ಣು ವಿಶ್ವವ್ಯಾಪಿ ಖ್ಯಾತಿಗಳಿಸಿದ್ದು, ಜಗತ್ತಿನ ೩೦ ಕ್ಕೂ ಹೆಚ್ಚು ರಾಷ್ಟ್ರಗಳ ಜನರ ನಾಲಿಗೆಯಲ್ಲಿ ನೀರೂರಿಸಿದ್ದು ನ್ಯೂಜಿಲ್ಯಾಂಡ್‌ನಿಂದಾಗಿಯೆ.

ನ್ಯೂಜಿಲ್ಯಾಂಡಿನ ಉತ್ತರ ದ್ವೀಪದ ಪೂರ್ವ ಕರಾವಳಿಯಲ್ಲಿ ಟೇ ಪ್ಯೂಕ್ ಎಂಬ ಅಜ್ಞಾತ ಸ್ಥಳವೊಂದಿತ್ತು. ಅದೆಲ್ಲ ಜ್ವಾಲಾಮುಖಿ ಉಗುಳಿದ ಮಣ್ಣಿನಿಂದ ಆವೃತ್ತವಾದ ಪ್ರದೇಶ. ಬೆಟ್ಟನೆಯ ಪ್ರದೇಶದಂತಿದ್ದರೂ ತೇವಮಯವಾದ ವಾತಾವರಣ ಅಲ್ಲಿಯದು. ಈ ಹವಾಗುಣ ಚೀನಿ ಹಣ್ಣನ್ನು 'ಕಿವಿ' ಹಣ್ಣಾಗಿ ಪರಿವರ್ತಿಸಲು ಸಹಕಾರಿಯಾಯಿತು.

'ಕಿವಿ ಹಣ್ಣಿನ ಜನಕ' ಎಂದೇ ಖ್ಯಾತನಾದ ಜೇಮ್ಸ್ ಮ್ಯಾಕ್ ಲೌಲಿನ್ ಗುಮಾಸ್ತನಾಗಿ ಹಡಗು ಕಂಪನಿಯೊಂದರಲ್ಲಿ ದುಡಿಯುತ್ತಿದ್ದ. ಎಲ್ಲ ದೇಶಗಳಂತೆ ಅಲ್ಲೂ ಆರ್ಥಿಕ ಮುಗ್ಗಟ್ಟು ಅನೇಕರ ಕೆಲಸ ಕಸಿದುಕೊಂಡಿತ್ತು. ಆಗವನ ಹೆಂಡತಿಯ ಚಿಕ್ಕಮ್ಮ ಮ್ಯಾಕ್ ಲೌಲಿನ್‌ಗೆ ಟೆ ಪ್ಯೂಕ್‌ಗೆ ಬಂದು ನೆಲೆಸುವಂತೆ ಹೇಳಿದಳು. ಅಲ್ಲಿ ಆಕೆಯದೊಂದು ನಿಂಬೆ ತೋಟವಿದ್ದಿತು. ಕೆಲಸ ಕಳೆದುಕೊಂಡು ಕಂಗಾಲಾಗಿದ್ದ ಮ್ಯಾಕ್ ಲೌಲಿನ್ ಸಂಸಾರ ಸಮೇತ ಟೆ ಪ್ಯೂಕ್‌ಗೆ ತೆರಳಿದ.

"ಆಗ ನಿಂಬೆ ಹಣ್ಣಿಗೆ ಮಾರುಕಟ್ಟೆಯಲ್ಲಿ ವಿಪರೀತ ಬೇಡಿಕೆ. ಆದರೆ ಪಕ್ಕದ ತೋಟದವ ಅಲ್ಲಿದ್ದ ಒಂದೇ ಒಂದು ಕಿವಿ ಬಳ್ಳಿಯಿಂದ ಸಿಕ್ಕುತ್ತಿದ್ದ ಐದು ಪೌಂಡ್‌ಗಳಷ್ಟು ಹಣ್ಣನ್ನು ಮಾರಿ ೨೦ ಅಮೆರಿಕನ್ ಡಾಲರ್‌ಗಳನ್ನು ಗಳಿಸುತ್ತಿದ್ದ. ಆ ಹಣ ನನ್ನ ಪಾಲಿಗೆ ಬೃಹತ್ ಮೊತ್ತವಾಗಿತ್ತು. ಹಾಗಾಗಿ ಒಂದು ಎಕರೆ ಪ್ರದೇಶದಲ್ಲಿ ಕಿವಿ ಹಣ್ಣಿನ ಬಳ್ಳಿಗಳನ್ನು ಬೆಳೆಸುವ ಸಾಹಸಕ್ಕೆ ಇಳಿದುಬಿಟ್ಟೆ" ಇದು ಮ್ಯಾಕ್ ಲೌಲಿನ್‌ರ ಮಾತು.

ಟೆ ಪ್ಯೂಕ್‌ನ ಹವಾಗುಣಕ್ಕೆ ಒಗ್ಗಿಕೊಂಡ ಕಿವಿ ಬಳ್ಳಿಗಳು ಸಮೃದ್ಧವಾಗಿ, ಅಂದರೆ ೨೪ ಗಂಟೆಯ ಅವಧಿಯಲ್ಲಿ ಎಂಟು ಅಂಗುಲಗಳಷ್ಟು ಬೆಳೆದು ಕೆಲ ತಿಂಗಳುಗಳಲ್ಲಿಯೇ ಫಸಲನ್ನು ಕೊಡತೊಡಗಿದವು. ಇದನ್ನು ಕಂಡು ಅಕ್ಕಪಕ್ಕದ ತೋಟಗಾರರೂ ಕಿವಿ ಹಣ್ಣಿನ ಬಳ್ಳಿಗಳನ್ನು ಬೆಳೆಸತೊಡಗಿದರು. ಅದು ದ್ವಿತೀಯ ಮಹಾಯುದ್ಧದ ಕಾಲವಾದ್ದರಿಂದ ನ್ಯೂಜಿಲ್ಯಾಂಡ್‌ನಲ್ಲಿ ಬೀಡುಬಿಟ್ಟಿದ್ದ ಸೈನಿಕರನ್ನು ಕಿವಿ ಹಣ್ಣು ಮರುಳುಗೊಳಿಸಿಬಿಟ್ಟಿತು. ಅಂದ ಮೇಲೆ ತೋಟಗಾರರ ಅದೃಷ್ಟ ಖುಲಾಯಿಸಲು ಏನು ತಡ?

ಇದಾದ ನಂತರ ಕಿವಿ ಹಣ್ಣಿಗೆ ಬೇಡಿಕೆ ಮತ್ತಷ್ಟು

ಹೆಚ್ಚಿದ್ದು ೧೯೫೨ ರಲ್ಲಿ. ಆ ವರ್ಷ ಇಂಗ್ಲೀಷ್ ಆಮದುದಾರನೊಬ್ಬ ಒಂದು ಹಡಗು ತುಂಬ ನಿಂಬೆಹಣ್ಣಿಗಾಗಿ ಬೇಡಿಕೆ ಸಲ್ಲಿಸಿದ.

ಆದರೆ ನಿಗದಿಗಿಂತ ನಿಂಬೆ ಹಣ್ಣಿನ ಹತ್ತು ಪೆಟ್ಟಿಗೆಗಳು ಕಡಿಮೆ ಬಿದ್ದವು. ಅವುಗಳ ಸ್ಥಾನದಲ್ಲಿ ಕಿವಿ ಹಣ್ಣಿನ ಪೆಟ್ಟಿಗೆಗಳನ್ನು ಇಟ್ಟು ರವಾನಿಸುವ ಸಾಹಸಕ್ಕೆ ಮ್ಯಾಕ್ ಇಳಿದರು. ಬಂದರು ಕಾರ್ಮಿಕರು ಮುಷ್ಕರಕ್ಕೆ ಇಳಿದಿದ್ದರಿಂದ ಹಡಗು ಗುರಿ



ತಲುಪಲು ಐದು ವಾರಗಳಷ್ಟು ತಡವಾಯಿತು. ಆ ವೇಳೆಗೆ ನಿಂಬೆಹಣ್ಣುಗಳು ಕೊಳೆತಿದ್ದರೆ ಕಿವಿ ಹಣ್ಣುಗಳು ಮಾತ್ರ ಕಳಿತುಕೂತಿದ್ದವು. ಮಾರುಕಟ್ಟೆಯಲ್ಲಿ ಬಹುಬೇಗನೇ ಮಾರಾಟವಾಗಿ ಜನಪ್ರಿಯವೂ ಆದವು. ನ್ಯೂಜಿಲ್ಯಾಂಡಿಗೆ ಕಿವಿ ಹಣ್ಣಿನಿಂದಾಗಿ ವಿಶ್ವ ಮಾರುಕಟ್ಟೆಯ ಬಾಗಿಲು ತೆರೆದದ್ದು ಹೀಗೆ.

೧೯೭೬ ರಲ್ಲಿ ಏಜೆಂಟನೊಬ್ಬ ಕಿವಿ ಹಣ್ಣುಗಳು ತುಂಬಿದ ಪೆಟ್ಟಿಗೆಯೊಂದನ್ನು ಲಂಡನ್ನಿನ ಥಿಯೇಟರೊಂದರಲ್ಲಿ ಮಧ್ಯಂತರದ ವೇಳೆಗೆ ಇಟ್ಟುಬಿಟ್ಟ. ಆದಾಗ ರಿಪಬ್ಲಿಕನ್ ಸೈನಿಕರ ಬಾಂಬುದಾಳಿ ಜೋರಾಗಿದ್ದ ಸಮಯ. ಪೆಟ್ಟಿಗೆಯನ್ನು ನೋಡಿದ ಎಲ್ಲರಿಗೂ ಅನುಮಾನ. ಅದರಲ್ಲಿರುವವು ಬಾಂಬುಗಳೆಂದೇ ನಿರ್ಧರಿಸಿದರು. ತಕ್ಷಣ ಇಡೀ ಸಭಾಂಗಣವನ್ನು ಖಾಲಿ ಮಾಡಿಸಲಾಯಿತು. ಬಾಂಬು ನಿಷ್ಕ್ರಿಯಗೊಳಿಸುವ ತಂಡವನ್ನು ಕರೆಸಲಾಯಿತು. ಆ ತಂಡ ಪೆಟ್ಟಿಗೆಯಲ್ಲಿ ಬಾಂಬಿನಂತೆಯೇ ಕಾಣುವ



ಹಣ್ಣುಗಳನ್ನು ಪರೀಕ್ಷಿಸುವ ಗೋಜಿಗೆ ಹೋಗದೆ ನೀರಿಗೆ ಹಾಕಿಬಿಟ್ಟಿತು.

ಕಿವಿ ಹಣ್ಣು ಪರಿಚಯಗೊಳ್ಳುವ ಮುನ್ನಿನ ಪ್ರತಿ ಪ್ರಸಂಗವೂ ರೋಚಕ ಕಥೆಯೆ.

ಮ್ಯಾಕ್ ಕಿವಿ ಹಣ್ಣಿನ ಮೇಲೆ ಮತ್ತಷ್ಟು ಪ್ರಯೋಗಗಳನ್ನು ನಡೆಸಿದರು. ಇದು ಕಿವಿ ಹಣ್ಣಿಗೆ ಮಾತ್ರವಲ್ಲದೆ ಅದರ ತೋಟಗಾರಿಕೆಗೂ ಬೇಡಿಕೆ ಹೆಚ್ಚಿಸಿತು. ಹೀಗಾಗಿ ಅಜ್ಞಾತವಾಗಿದ್ದ ಟೆ ಪ್ಯೂಕ್ "ಕಿವಿ ಹಣ್ಣಿನ ರಾಜಧಾನಿ" ಎನ್ನಿಸಿಕೊಂಡಿತು.

ಇದನ್ನು ಕಂಡ ಅಮೆರಿಕ, ಫ್ರಾನ್ಸ್, ಇಟಲಿ, ಜಪಾನ್ ಮತ್ತಿತರ ದೇಶಗಳ ರೈತರೂ ಈ ಹಣ್ಣನ್ನು ಬೆಳೆಯಲು ತೊಡಗಿದರು. ಆದರೂ ನ್ಯೂಜಿಲ್ಯಾಂಡ್ ಪ್ರಥಮ ಸ್ಥಾನದಲ್ಲೇ ಉಳಿಯಿತು.

ಇಂದು ಟೆ ಪ್ಯೂಕ್‌ನ ಜನಸಂಖ್ಯೆ ೧೦,೦೦೦ದಷ್ಟಿದ್ದು ಹಣ್ಣುಗಳ ಕೊಯ್ಲಿನ ಸಮಯದಲ್ಲಿ ಅಂದರೆ ಮೇ ಜೂನ್‌ನಲ್ಲಿ ೧೫ ಸಾವಿರಕ್ಕೂ ಹೆಚ್ಚಾಗುತ್ತದೆ. ಕೊಯ್ಲಾದ ಕಿವಿಹಣ್ಣುಗಳನ್ನು ಶೈತ್ಯೀಕರಿಸುವುದರಲ್ಲಿ, ಪ್ಯಾಕ್ ಮಾಡುವುದರಲ್ಲಿ ಈ ಪ್ರದೇಶಕ್ಕೆ ಜಗತ್ತಿನಲ್ಲಿಯೇ ಮೊದಲ ಸ್ಥಾನ.

ಪಾಡುಗಾಯಿಗಳನ್ನು ಕೈಗಳಿಂದಲೇ ಗಿಡದಿಂದ ಕೊಯ್ಯಲಾಗುತ್ತದೆ. ಕೊಯ್ಲಿನ ಸಮಯವೆಂದರೆ ನ್ಯೂಜಿಲ್ಯಾಂಡ್‌ನಲ್ಲಿ ಎಲ್ಲಿಲ್ಲದ ಸಡಗರ-ಸಂಭ್ರಮ. ಸತತ ೧೨ ವಾರಗಳವರೆಗೆ ಸಾವಿರಾರು ಕಾರ್ಮಿಕರು ಮೇಲಂಗಿಯಂತಹ ಜೋಳಿಗೆಯಲ್ಲಿ ಹಣ್ಣುಗಳನ್ನು ಕೊಯ್ದು ತರುತ್ತಾರೆ. ನಂತರ ಅವನ್ನು ವಿಂಗಡಣಾ ಯಂತ್ರಗಳಿಗೆ ಸುರಿಯುತ್ತಾರೆ. ಯಂತ್ರಗಳು ಹಣ್ಣುಗಳನ್ನು ಗಾತ್ರಕ್ಕೆ ತಕ್ಕಂತೆ ವಿಂಗಡಿಸಿ ಪೊಟ್ಟಣಗಳನ್ನು ಜೋಡಿಸಿದಂತೆ ಜೋಡಿಸುತ್ತವೆ. ಅಲ್ಲಿಂದ ಶೀತಲೀಕರಣ ಯಂತ್ರಗಳುಳ್ಳ ಕಾರ್ಯಾಗಾರಗಳನ್ನು ಸೇರಿ ಶೂನ್ಯ ಡಿಗ್ರಿ ಸೆಲ್ಸಿಯಸ್‌ನಲ್ಲಿ ಪೇರಿಸಲ್ಪಡುತ್ತವೆ. ಹೀಗೆ ಪೇರಿಸಲ್ಪಟ್ಟ ಹಣ್ಣುಗಳು ಆರು ತಿಂಗಳು ಅಥವಾ ಅದಕ್ಕಿಂತ ಹೆಚ್ಚು ಕಾಲ ಸುಸ್ಥಿತಿಯಲ್ಲಿ ಇರಬಲ್ಲವು. ಮನೆಯಲ್ಲಿರುವ ಸಾಧಾರಣ ರೆಫ್ರಿಜರೇಟರ್‌ನಲ್ಲಿಟ್ಟರೂ ಕಿವಿಹಣ್ಣುಗಳು ವಾರಗಟ್ಟಲೇ ಕೆಡದಂತೆ ಇರುತ್ತವೆ.

೧೯೮೫ ರಲ್ಲಿ ೧,೫೦,೦೦೦ ಟನ್ ತಾಜಾ ಹಣ್ಣುಗಳು ಮತ್ತು ಒಂದು ಅಂದಾಜಿನಂತೆ ೨೦,೦೦೦ ಟನ್ ಘನೀಕರಿಸಲ್ಪಟ್ಟ, ಒಣಗಿಸಲ್ಪಟ್ಟ, ಡಬ್ಬಿಗಳಲ್ಲಿ ತುಂಬಿದ ಅಥವಾ ಪಾನೀಯವಾಗಿಸಿದ ಕಿವಿ ಹಣ್ಣುಗಳು ನ್ಯೂಜಿಲ್ಯಾಂಡ್‌ನಿಂದ ಹೊರದೇಶದ ಮಾರುಕಟ್ಟೆಯನ್ನು ಸೇರಿವೆ. ಇಸವಿ ೨,೦೦೦ದ ವೇಳೆಗೆ ಪ್ರತಿವರ್ಷ ನಾಲ್ಕು ಲಕ್ಷ ಟನ್‌ಗಳಷ್ಟು ಹಣ್ಣುಗಳು ರಫ್ತಾಗುವ ಸಾಧ್ಯತೆ ಇದೆ.

ಇತ್ತೀಚೆಗೆ ಕಿವಿಹಣ್ಣುಗಳಿಂದ ಗಟ್ಟಿಯಾದ ಪೇಯವನ್ನು ಸಹ ನ್ಯೂಜಿಲ್ಯಾಂಡ್‌ನಲ್ಲಿ ತಯಾರಿಸಲಾಗುತ್ತಿದೆ. ಈ ಕುರಿತಂತೆ ಪೇಯ ತಯಾರಿಕಾ ಘಟಕದ ಡೇವಿಡ್ ಮಾಂಟನ್ ಹೇಳುತ್ತಾರೆ: "ಕಿವಿ ಹಣ್ಣಿನ ಪೇಯ ಅದೆಷ್ಟು ಸೊಗಸಾಗಿರುತ್ತದೆಂದರೆ ಅದನ್ನು ಬಹಳಷ್ಟು ಜನ ದ್ರಾಕ್ಷಿಗಳಿಂದ ತಯಾರಾದುದಲ್ಲ ಎಂದು ನಂಬುವುದೇ ಇಲ್ಲ."

ಯೂರೋಪಿನ ಸ್ವರ್ಣ ಪದಕವನ್ನು ಗಳಿಸಿರುವ ಮಾಂಟನ್‌ನ ಕಿವಿ ಹಣ್ಣಿನ ಪೇಯವೆಂದರೆ ಜಪಾನಿನ ವಣಿಕ ಮಹಿಳೆಯರಿಗೆ ಬಲುಪ್ರೀತಿ. ಆದರಿಂದಾಗಿ ಅವರು ಪುರುಷರ ಪೇಯವಾದ ವಿಸ್ಕಿಯ ಬದಲಾಗಿ ಕಿವಿ ಹಣ್ಣಿನ ಪೇಯವನ್ನು ಉಪಯೋಗಿಸುತ್ತಾರೆ.

೧೯೩೦ ರಲ್ಲಿ ಅಮೆರಿಕದ ಕೃಷಿ ಇಲಾಖೆ ಸಂಶೋಧಕರು ಕಿವಿ ಹಣ್ಣಿನ ಬಳ್ಳಿಗಳನ್ನು ಶಿಕಾಗೊ, ಕ್ಯಾಲಿಫೋರ್ನಿಯಾಗಳಲ್ಲಿ ನೆಟ್ಟರು. ಅವೀಗ ಪ್ರತಿವರ್ಷ ೫೦ ದಶಲಕ್ಷ ಡಾಲರ್ ಮೊತ್ತವನ್ನು ಯೂರೋಪ್, ಜಪಾನ್ ಮತ್ತು ಕೆನಡಾ ದೇಶಗಳಿಗೆ ರಫ್ತಾಗುವ ಹಣ್ಣಿನಿಂದ ತಂದುಕೊಡುತ್ತಿವೆ. ಕ್ಯಾಲಿಫೋರ್ನಿಯಾದಲ್ಲಿ ಹಣ್ಣುಗಳು ಅಕ್ಟೋಬರ್‌ನಲ್ಲಿ ಕೊಯ್ಲಿಗೆ ಬಂದರೆ ನ್ಯೂಜಿಲ್ಯಾಂಡ್‌ನಲ್ಲಿ ಮೇನಲ್ಲಿ ಕೊಯ್ಲಿಗೆ ಬರುತ್ತವೆ. ಹಾಗಾಗಿ ಇಡೀ ವರ್ಷ ಕಿವಿ ಹಣ್ಣುಗಳು ದೊರಕುವಂತಾಗಿದೆ.

ಬಾದಾಮಿ ಹಣ್ಣಿನಂತೆಯೇ ಕಿವಿ ಹಣ್ಣು ಸಹ ತಿನ್ನಲು ಬರುವಂತಾದಾಗ ಮೃದುವಾಗಿರುತ್ತದೆ. ಹಣ್ಣನ್ನು ಎರಡು ಹೋಳಾಗಿಸಿ ತಿರುಳನ್ನು ಚಮಚೆಯಿಂದ ಗೀರಿಕೊಂಡು ತಿನ್ನಲೂಬಹುದಾಗಿದೆ. ಇದರ ಬೀಜಗಳು ಸಹ ತಿನ್ನಬಹುದಾದಂಥವಾಗಿದ್ದು, ಹೋಳಾಗಿಸಿದ ಹಣ್ಣಿನ ಹಸಿರು ತಿರುಳನ್ನು ಗಾಳಿಗಿಟ್ಟರೆ ಕ್ರಮೇಣ ಬೂದುಬಣ್ಣಕ್ಕೆ ತಿರುಗುತ್ತದೆ. ಇದಲ್ಲದೆ ಈ ಹಣ್ಣಿನ ರಸಾಯನವನ್ನೂ ತಯಾರಿಸಬಹುದು. ಊಟದ ನಂತರ ಹೋಳುಗಳನ್ನು ತಿನ್ನಬಹುದು. ಹಣ್ಣಿನಲ್ಲಿರುವ ಕಿಣ್ವಗಳು ಈ ಹಣ್ಣಿಗೆ ಒಳ್ಳೆಯ ಮಾಂಸದಷ್ಟು ಮೃದುತ್ವವನ್ನು ತಂದುಕೊಟ್ಟಿವೆ.

ಮದನ ಕಾಮನ ಕಥೆಗಳು

ಅ

ಹೊಸ ಹುಂಜ ಕಳೆದುಹೋದುದರಿಂದ ಅರಮನೆಯ ಸೇವಕವರ್ಗದಲ್ಲೆಲ್ಲ ಹಾಹಾಕಾರವೇ ಎದ್ದಿತು. ಕೋಳಿ ಸಾಕಣೆಯ ವಿಭಾಗದ ಮುಖ್ಯಸ್ಥನಂತೂ ಕೈಕಾಲುಗಳನ್ನೇ ಕಳೆದುಕೊಂಡನು.

ಅವನು ತನ್ನ ಕೈಕೆಳಗಿನವರನ್ನೆಲ್ಲ ಕರೆದು ಅವರೊಂದಿಗೆ ಆ ಹುಂಜವನ್ನಿರಿಸಿದ್ದ ಪಂಜರವನ್ನು ಸೂಕ್ಷ್ಮವಾಗಿ ಶೋಧಿಸಲಾರಂಭಿಸಿದನು. ಪಂಜರದ ಉಕ್ಕಿನ ತಂತಿಗಳೆಲ್ಲ ಭದ್ರವಾಗಿಯೇ ಇದ್ದುವು; ಎಲ್ಲಿಯೂ ಮುರಿದ ಇಲ್ಲವೆ ಹಿಗ್ಗಿಸಿದ ಗುರುತುಗಳಿರಲಿಲ್ಲ. ಕೊನೆಗೆ ಆ ದೊಡ್ಡ ಪಂಜರವನ್ನು ಎತ್ತಿದಾಗ ರಹಸ್ಯ ಬಯಲಾದಂತಾಯಿತು. ಪಂಜರವನ್ನಿರಿಸಿದ ಸ್ಥಳದಲ್ಲಿಯೇ ನೆಲದಲ್ಲಿ ಹೆಗ್ಗಣದ

ಹುಂಜನಾಗಿದ್ದ ಹುಡುಗ ಕುದುರೆಯಾಗಿ ನಿಂತ...

ಹೋರು ಇತ್ತು. ಪಂಜರ ಉಕ್ಕಿನದಾದರೂ ಅದರ ತಳ ಕಟ್ಟಿಗೆಯದಾಗಿತ್ತು. ಅದರಲ್ಲೂ ಒಂದು ಹೆಗ್ಗಣ ಹಾಯಬಹುದಾದಷ್ಟು ದೊಡ್ಡ ತೂತು ಕೊರೆಯಲಾಗಿತ್ತು! ಅದನ್ನು ಕಂಡೊಡನೆ "ಹಾ! ಹೆಗ್ಗಣವೊಂದು ಹುಂಜವನ್ನು ಹೊತ್ತೊಯ್ದಿದೆಯಲ್ಲ!" ಎಂದು ಎಲ್ಲರೂ ಸಮಾಧಾನದ ನಿಟ್ಟುಸಿರು ಬಿಟ್ಟರು.

ಇತ್ತ ಆ ಹುಂಜದ ಬಗ್ಗೆ ತೀವ್ರ ತನಗೇನೂ ತಿಳಿದುಬರದ್ದರಿಂದ ಅರಸನು ತುಂಬ ಕುಪಿತನಾದನು. ಕೋಳಿ ಸಾಕಣೆಯ ವಿಭಾಗದ ಮುಖ್ಯ ಸೇವಕ ಮತ್ತೆ ಬರಿಗೈಯಿಂದ ಬಂದುದನ್ನು ಕಂಡು ಅವನು ಇನ್ನೂ ತಪ್ತನಾದನು.

"ಎಲ್ಲಿದೆ ಆ ಹುಂಜ?"

ಸಿಂಹಾಸನದಿಂದಲೇ ಕಿರಚಿದ ಅರಸನ ಗುಡುಗು ಕೇಳಿ ಸೇವಕನ ಕೈ ಕಾಲುಗಳೇ ಹೋದವು. ಆದರೂ ಧೈರ್ಯ ತಂದುಕೊಂಡು, "ಹುಂಜವನ್ನು ಹೆಗ್ಗಣವೊಂದು ಅಪಹರಿಸಿಕೊಂಡು ಹೋಗಿದೆ ಮಹಾಸ್ವಾಮಿ," ಎಂದು ನಡುಗುತ್ತ ಹೇಳಿದನು.

"ಏನು, ಹೆಗ್ಗಣ ಹುಂಜವನ್ನು ಅಪಹರಿಸುವುದೇ?" ಅರಸ ಗದರಿದನು.

"ನಿಜ... ಮಹಾಸ್ವಾಮಿ...." ಸೇವಕ ಅರೆಸತ್ತವನಂತೆ ಮಾತಾಡಿದ.

ಆದರೆ ಅರಸನಿಗೆ ಮಾತ್ರ ಅದರಿಂದ ಸಮಾಧಾನವಾದಂತೆ ಕಾಣಲಿಲ್ಲ. ಸಿಂಹಾಸನದಿಂದ ಕೆಳಗಿಳಿದು ಬಂದವನೇ ಸೇವಕನ ಕುತ್ತಿಗೆಗೆ ಕೈ ಹಾಕಿ ಪಂಜರವಿಟ್ಟಿರುವೆಡೆ ದರದರನೆ ಎಳೆದುಕೊಂಡು ನಡೆದನು.

ಸೇವಕನ ಕಣ್ಣುಗಳಿಂದ ನೀರು ಧಾರೆಯಾಗಿ ಸುರಿಯುತ್ತಿತ್ತು. ಅವರಿಬ್ಬರೂ ಪಂಜರದ ಹತ್ತಿರ ಹೋದಾಗ ಹತ್ತಾರು ಜನ ಸೇವಕರು ಅಲ್ಲಿ ಸೇರಿ ಗುಜು ಗುಜು ಮಾತಾಡುತ್ತಿದ್ದರು. ಅರಸ ಬಂದೊಡನೆ ಅವರೆಲ್ಲ ಬದಿಗೆ ಸರಿದು ದಾರಿ ಮಾಡಿಕೊಟ್ಟರು.

ಅರಸನು ಸ್ವತಃ ಪಂಜರವನ್ನೂ ಹೆಗ್ಗಣದ ಹೋರನ್ನೂ ಪರೀಕ್ಷಿಸಿದನು. ತನ್ನ ಬೆಲೆಯುಳ್ಳ

ಹುಂಜವನ್ನು ಹೆಗ್ಗಣ ಅಪಹರಿಸಿಕೊಂಡು ಹೋದುದಕ್ಕಾಗಿ ಅವನಿಗೆ ಅದರ ಮೇಲೆ ತುಂಬ ಸಿಟ್ಟು ಬಂದಿತ್ತು.

"ಆ ಹೆಗ್ಗಣವನ್ನು ನಾನು ಅಷ್ಟಕ್ಕೆಯೇ ಬಿಡಲಾರೆ. ಅದಕ್ಕೆ ತಕ್ಕ ಶಾಸ್ತಿಯಾಗಲೇಬೇಕು.... ಸೇವಕರೆ, ನೀವೆಲ್ಲ ಬನ್ನಿರಿಲ್ಲಿ. ಈ ಅರಮನೆಯನ್ನೆಲ್ಲ ಕೆಡವಬೇಕಾಗಿಬಂದರೂ ಸರಿ, ಆ ಅಪರಾಧಿ ಹೆಗ್ಗಣವನ್ನು ಶೋಧಿಸಲೇಬೇಕು. ಅದನ್ನು ಹುಡುಕಲು ತಪ್ಪಿದರೆ ನಿಮ್ಮ ತಲೆಗಳನ್ನೆಲ್ಲ ಕತ್ತರಿಸಿ ಹಾಕುವೆ," ಎಂದು ಗರ್ಜಿಸುತ್ತ, ಕಾಲಪ್ಪಳಿಸುತ್ತ ಅರಸನು ಅಲ್ಲಿಂದ ಹೊರಟುಹೋದನು.

ಆ ಕ್ಷಣದಿಂದಲೇ ಸೇವಕರು ಅರಮನೆಯ ನೆಲ ಅಗೆಯುವುದಕ್ಕೆ ಆರಂಭಿಸಿದರು. ಅನೇಕ ದಿನಗಳವರೆಗೆ ಕಾರ್ಯ ಹಾಗೆಯೇ ಮುಂದುವರಿಯಿತು. ಹಲವಾರು ಕಟ್ಟಡಗಳು ನೆಲಸಮವಾದುವು. ಅರಮನೆಯ ಆವಾರ ಹಾಳುಗೆಡವಲಾದ ಕಟ್ಟಡಗಳ ಕಲ್ಲುಮಣ್ಣುಗಳ ರಾಶಿಯೇ ಆಯಿತು.

ನಿತ್ಯವೂ ಹೆಗ್ಗಣ ಸಿಕ್ಕಲಿಲ್ಲವೆಂಬ ಒಂದೇ ಧಾಟಿಯ ವರದಿ ಅರಸನಿಗೆ ಹೋಗಹತ್ತಿತು. ತನ್ನ ಕಣ್ಣೆದುರಿಗೆಯೆ ಬೆಲೆಬಾಳುವ ಅನೇಕ ಕಟ್ಟಡಗಳು ನಾಶವಾಗುತ್ತಿದ್ದುದನ್ನು ಕಂಡ ಅರಸನು ಒಂದು ದಿನ ತನ್ನ ಮೂರ್ಖತನವನ್ನು ಕಂಡುಕೊಂಡನು. ಒಡನೆಯೇ ಸೇವಕರನ್ನು ಕರೆದು ಕಟ್ಟಡ ಕೆಡಹುವುದನ್ನು ನಿಲ್ಲಿಸಿ ಇನ್ನು ಮತ್ತೆ ಕಟ್ಟಲಾರಂಭಿಸಬೇಕೆಂದು ಕಟ್ಟಪ್ಪಣೆ ಮಾಡಿದನು. ಆ ವೇಳೆಗಾಗಲೇ ಹುಂಜದ ವಿಷಯದಲ್ಲಿ ಅವನು ಆಸ್ಥೆಯನ್ನು ಕಳೆದುಕೊಂಡಿದ್ದನು.

ಹುಂಜವು ಕಳೆದುಹೋದುದು ಅರಸನ ಸೇವಕರಿಗೆ ಗೊತ್ತಾಗುವ ಸಮಯಕ್ಕಾಗಲೇ ಧರ್ಮನಂದನ ಕಿರಿಯ ಮಗ ಮಾನವರೂಪ ಧಾರಣ ಮಾಡಿ ತಂದೆತಾಯಿಗಳೆದುರು ಬಂದು ನಿಂತಿದ್ದನು. ಮಗನು ಸುರಕ್ಷಿತವಾಗಿ ಮರಳಿದುದರಿಂದ ಅವರಿಬ್ಬರಿಗೂ ಅಪಾರ ಆನಂದವಾಗಿತ್ತು.

ಧರ್ಮನಂದನು ಮಗನನ್ನಪ್ಪಿಕೊಂಡು, "ಅದೇಕೋ ನೀನು ಮರಳಿ ಬರುವವರೆಗೂ ನನಗೆ ಎಷ್ಟೂ ಧೈರ್ಯವಿರಲಿಲ್ಲ. ಈ ರೀತಿ ನಿನ್ನನ್ನು ಹುಂಜದ ರೂಪದಲ್ಲಿ ಹಣಕ್ಕಾಗಿ ಮಾರಾಟ ಮಾಡಿದುದಕ್ಕಾಗಿ ನನ್ನನ್ನು ನಾನೇ ಹಳಿದುಕೊಂಡೆ. ತಂದೆ ತಾಯಿಗಳು ಎಷ್ಟೇ ಬಡವರಾದರೂ ಮಗುವಿನ ಬೆಲೆಯನ್ನು ಹಣದ ರೂಪದಲ್ಲಿ ಕಟ್ಟಲಾಗದು. ಒಮ್ಮೆ ಮಾಡಿದ ತಪ್ಪನ್ನೇ ನಾನು ಇನ್ನೊಮ್ಮೆ ಮಾಡುವುದಿಲ್ಲ. ಅದಿರಲಿ, ನೀನು ಅರಮನೆಯಿಂದ ಪಾರಾಗಿ ಬಂದುದೆಂತು ಹೇಳು," ಎಂದು ಕೇಳಿದನು.

ಮಂದಹಾಸ ಬೀರುತ್ತ ಮಗನು ತನ್ನ ಹೆತ್ತವರ ಕುತೂಹಲವನ್ನು ತಣಿಸಲೋಸುಗ ತಾನು ಪಾರಾಗಿ ಬಂದುದರ ಕಥೆಯನ್ನು ಹೇಳತೊಡಗಿದನು. "ಅದೇನು ಅಂಥ ಕಠಿಣ ಕೆಲಸವಲ್ಲ. ಹುಂಜವೆಂದು ಅರಸನು ನನ್ನನ್ನು ಕೊಂಡುಕೊಂಡನಂತರ ನನ್ನನ್ನು ಭದ್ರವಾದ ಕಬ್ಬಿಣದ ಪಂಜರದಲ್ಲಿರಿಸಲಾಯಿತು. ಅದರಿಂದಾಗಿ ಅಲ್ಲಿಂದ ಹೊರಬೀಳುವುದೆಂತೆಂಬುದು ತಿಳಿಯದೆ ಅರೆಕ್ಷಣ ನಾನು ದಿಂಙ್ಮೂಢನೇ ಆದೆ. ಆದರೆ ಪಂಜರದ ತಳವು ಕಟ್ಟಿಗೆಯದಾಗಿರುವುದನ್ನು ಕಂಡಾಗ ಸುಲಭವಾದ ಮಾರ್ಗ ಹೊಳೆಯಲು ವೇಳೆ ಹಿಡಿಯಲಿಲ್ಲ. ತಕ್ಷಣ ಹೆಗ್ಗಣದ ರೂಪ ಧರಿಸಿ ಮೊದಲು ಕಟ್ಟಿಗೆಯನ್ನು ಕೊರೆದೆ. ನಂತರ ನೆಲವನ್ನೂ ಕೊರೆದು ಅರಮನೆಯ ಹೊರಗಡೆ ಬಂದೆ. ನಾನು ಸಹಜವಾಗಿ ಪಾರಾಗಿ ಬಂದುದೇನೋ ನಿಜ. ಆದರೆ ಪಾಪ! ಅರಮನೆಯ ಕೋಳಿಸಾಕಣೆಯ ವಿಭಾಗದ ಮುಖ್ಯ ಸೇವಕನ ಗತಿಯೇನಾಗಿದೆಯೋ? ಅರಸ ಅವನಿಗೆ ಕಠಿಣ ಶಿಕ್ಷೆ ವಿಧಿಸದಿದ್ದರೇ ಪುಣ್ಯ...."

"ಹೌದು," ತಂದೆ ಉತ್ತರಿಸಿದನು.

ಆ ದಿನ ಮೊಟ್ಟ ಮೊದಲ ಬಾರಿ ಅನೇಕ ವರುಷಗಳ ನಂತರ ತಂದೆ ಮಕ್ಕಳಿಬ್ಬರೂ ಹೊಟ್ಟೆ ತುಂಬ ಊಟ ಮಾಡಿದರು. ತಾಯಿ ಮಾಡಿದ ಅಡುಗೆಯ ರುಚಿಯನ್ನು ಅದೆಷ್ಟೋ ಯುಗಗಳ ನಂತರ ನೋಡಿದಂತಾಯಿತು ಮಗನಿಗೆ.

ಸುಮಾರು ಒಂದು ತಿಂಗಳು ಮೂವರೂ ಆನಂದದಿಂದ ವೇಳೆ ಕಳೆದಾಗ ಒಂದು ನೂರು ಚಿನ್ನದ ಮೊಹರುಗಳು ಕರಗಿ ಹೋದುದರ ಅರಿವೇ

ಅವರಿಗಾಗಲಿಲ್ಲ. ಒಂದೇ ಒಂದು ಮೊಹರು' ಉಳಿದಾಗ ಧರ್ಮನಂದ ಮಗನನ್ನು ಕರೆದು, "ಕಂದಾ, ನೀನು ಗಳಿಸಿದ ಹಣದಲ್ಲಿ ಇದು ಕೊನೆಯ ನಾಣ್ಯ. ನಾಳೆಯೊಂದು ದಿನ ದಾಟು ತ್ತದೆ. ನಾಡಿದ್ದಿನಿಂದ ಮತ್ತೆ ಮೊದಲಿನಂತೆ ಭಿಕ್ಷಾ ಪಾತ್ರೆ ಹಿಡಿಯೋಣ," ಎಂದರು.

"ಅಪ್ಪಾ, ಆದಕ್ಕಾಗಿ ನೀವು ಚಿಂತಿಸಬೇಡಿ. ನೀವು ತೊಂದರೆಪಡುವುದನ್ನು ನಾನು ಕಣ್ಣಾರೆ



ಕಾಣಲಾರೆ. ಏನೇ ಆದರೂ ಇನ್ನೊಮ್ಮೆ ನಿಮ್ಮ ಕೈಯಲ್ಲಿ ಭಿಕ್ಷಾಪಾತ್ರೆಯನ್ನು ನಾನು ಹಿಡಿಸುವುದಿಲ್ಲ ವೆಂದು ಬೇಕಾದರೆ ಪ್ರಮಾಣ ಮಾಡಿ ಹೇಳಬಲ್ಲೆ. ಈ ಸಲ ನಿಮಗೆ ನಾನು ಮೊದಲಿಗಿಂತ ಹೆಚ್ಚು ಹಣ ತರುವೆ.''

"ಕಂದಾ, ನಮಗಾಗಿ ನೀನು ನಿನ್ನ ಪ್ರಾಣವನ್ನು ಅಪಾಯಕ್ಕೊಡ್ಡುವುದು ಬೇಡ. ಭಿಕ್ಷೆಯಿಂದ ನಮ್ಮ ಹೊಟ್ಟೆಯನ್ನು ನಾವು ಹೇಗೂ ಹೊರೆಯಬ ಹುದು.''

"ಅಪ್ಪಾ, ನನ್ನ ಪ್ರಾಣವು ಅಪಾಯಕ್ಕೀಡಾಗಬ ಹುದೆಂಬ ಚಿಂತೆ ನಿಮಗೆ ಬೇಡ. ಎಂಥ ಕಠಿಣ ಪ್ರಸಂಗ ಬಂದರೂ ಸುರಕ್ಷಿತವಾಗಿ ಹೇಗೆ ಪಾರಾ ಗಬೇಕೆಂಬ ವಿದ್ಯೆ ನನಗೆ ಹಸ್ತಗತವಿದೆ. ಈ ಊರಲ್ಲಿ ಧನಪಾಲನೆಂಬೊಬ್ಬ ವ್ಯಾಪಾರಿಯು ಲಕ್ಷ್ಮೀಪುತ್ರನೇ ಸರಿ. ಅವನಿಗೆ ಅತ್ಯಂತ ಪ್ರೀತಿಗೆ ಪಾತ್ರನಾದ ಮಗನೊಬ್ಬನಿದ್ದಾನೆ. ಮಗನು ಹೆಸ ರಾಂತ ಅಶ್ವಾರೋಹಿಯಾಗಿರುವುದಲ್ಲದೆ ಉತ್ತಮ ಕುದುರೆಗಳನ್ನು ಕಂಡರೆ ಎಷ್ಟೇ ಬೆಲೆ ಕೊಟ್ಟಾದರೂ ಕೊಂಡುಕೊಳ್ಳುತ್ತಾನೆ. ನಿತ್ಯ ನಸುಕಿನಲ್ಲಿ ಸರೋವ ರದ ದಂಡೆಯ ಮೇಲೆ ಅವನು ಅಡ್ಡಾಡುವುದನ್ನು ಕಂಡಿದ್ದೇನೆ. ನಾಳೆ ಮುಂಜಾವು ನಾನು ಶ್ರೇಷ್ಠ ತರಗತಿಯ ಅರಬಸ್ಥಾನದ ಕುದುರೆಯ ರೂಪತಳೆ ಯುವೆ. ನೀವು ನನ್ನನ್ನು ನಸುಕಿನಲ್ಲಿ ಆ ಕೆರೆಯ ದಾರಿಯಲ್ಲಿ ಕರೆದೊಯ್ದರೆ ಅವನು ನಿಶ್ಚಯವಾ ಗಿಯೂ ನನ್ನನ್ನು ಕಂಡು ಮರುಳಾಗುತ್ತಾನೆ. ಅವನು ಬೆಲೆ ವಿಚಾರಿಸಿದರೆ ನೀವು ಒಂದು ಸಾವಿರ ಚಿನ್ನದ ಮೊಹರುಗಳೆಂದು ಹೇಳಿರಿ. ಅವನು ತನ್ನ ತಂದೆಯಿಂದ ಅಷ್ಟನ್ನು ಕೊಡಿಸಿಯೇ ತೀರುತ್ತಾನೆ.''

"ಕಂದಾ, ನೀನೆಂಥ ಅದ್ಭುತ ಬಾಲಕನಾಗಿ ದ್ದೀಯಾ? ನಿನ್ನ ಪ್ರಾಣಕ್ಕೆ ಯಾವ ಅಪಾಯವಿಲ್ಲ ದಿದ್ದರೆ ಮಾತ್ರ ನಿನ್ನ ಯೋಜನೆಯನ್ನು ನಾನು ಒಪ್ಪುತ್ತೇನೆ,'' ಧರ್ಮನಂದ ಉತ್ತರಿಸಿದ.

ಮರುದಿನ ಮುಂಜಾನೆ ಎಲ್ಲವೂ ಯೋಜಿಸಿ ದಂತೆಯೇ ನಡೆಯಿತು. ಧರ್ಮನಂದ ಭವ್ಯವಾದ ಕುದುರೆಯೊಡನೆ ಸರೋವರದ ದಂಡೆಗುಂಟ ನಡೆದಿದ್ದನು. ನಿತ್ಯದ ರೂಢಿಯಂತೆ ಸಿರಿವಂತ ವಣಿಕಪುತ್ರನೂ ಅದೇ ದಾರಿಯಲ್ಲಿಯೇ ಬಂದ. ಅಶ್ವಕುಲದಲ್ಲಿರುವ ಶ್ರೇಷ್ಠವೆಂಬಂತೆ ತೋರುತ್ತಿದ್ದ ಈ ಕುದುರೆ ಅವನನ್ನು ತುಂಬ ಆಕರ್ಷಿಸಿತು. ತಡೆಯಲಾಗದೆ ಅವನು ಧರ್ಮನಂದನ ಬಳಿಗೆ ಬಂದು, "ಸ್ವಾಮಿ, ಈ ಕುದುರೆಯನ್ನೇನಾದರೂ ತಾವು ನಮಗೆ ಮಾರಬಹುದೇ?'' ಎಂದು ವಿಚಾ ರಿಸಿದನು.

"ಏನು ಇದನ್ನು ನಿನಗೆ ಮಾರುವುದೇ? ಈ ಕುದುರೆಗಾಗಿ ನಾನು ಕೇಳುವಷ್ಟು ಹಣವಾದರೂ ನಿನ್ನಲ್ಲಿದೆಯೇ?''

"ನಾನು ಈ ಊರಿನ ಮಹಾ ಶ್ರೀಮಂತ ವ್ಯಾಪಾರಿಯಾದ ಧರ್ಮಪಾಲರ ಮಗನೆಂಬುದು ನಿಮಗೆ ತಿಳಿಯದೆ? ನೀವು ಈ ಕ್ಷಣ ನನ್ನೊಡ ನೆಯೆ ಬಂದುದಾದರೆ ನೀವು ಕೇಳಿದಷ್ಟು ಹಣ ಕೊಡಿಸುತ್ತೇನೆ.''

"ಆದರೆ ಒಂದು ಸಾವಿರ ಚಿನ್ನದ ಮೊಹರು ಗಳನ್ನು ಕೊಡಲು ಒಪ್ಪುವರೆ?''

"ಅದನ್ನೊಮ್ಮೆ ಬಂದು ನೋಡಿರಿ!'' ವಣಿಕ ಪುತ್ರ ಆತ್ಮವಿಶ್ವಾಸದಿಂದ ನುಡಿದ.

ನಂತರ ಇಬ್ಬರೂ ಕುದುರೆಯೊಂದಿಗೆ ಧನಪಾ ಲನ ಮನೆಗೆ ನಡೆದ.

ಶ್ರೇಷ್ಠ ಅಶ್ವದ ಸಕಲ ಲಕ್ಷಣಗಳಿಂದಲೂ ಕೂಡಿದ ಇಂಥ ಕುದುರೆಯನ್ನು ಧನಪಾಲ ಎಂದೂ ಕಂಡಿರಲಿಲ್ಲ. ಸುಲಭದಲ್ಲಿ ಹಣ ಕೈಬಿ ಡುವವನು ಅವನಲ್ಲವಾದರೂ ಧರ್ಮನಂದನು ಹೇಳಿದ ಬೆಲೆಯಲ್ಲಿ ಕಡಿಮೆ ಮಾಡಲು ಅವನು ಕೇಳಲಿಲ್ಲ. ಈ ಕುದುರೆಗೆ ಧರ್ಮನಂದನ ಹೇಳಿದ ಬೆಲೆ ಕಡಿಮೆಯೇ ಎಂದು ದಕ್ಷ ವ್ಯಾಪಾರಿಯಾದ ಅವನಿಗೆ ಗೊತ್ತು. ಅಂತೆಯೇ ಅವನು ಮರು ಮಾತಾಡದೆಯೇ ಒಂದು ಸಾವಿರ ಚಿನ್ನದ ಮೊಹ ರುಗಳನ್ನು ತರಿಸಿಕೊಟ್ಟನು. ಹಣ ಪಡೆದ ಧರ್ಮನಂ ದನ ಆನಂದದಿಂದ ಕುದುರೆಯನ್ನು ಅಲ್ಲಿಯೇ ಬಿಟ್ಟು ನಡೆದನು.

ಏನಾದರೊಂದು ಒಳ್ಳೆಯ ವಸ್ತುವನ್ನು ಕೊಂಡಾಗ ಅದನ್ನು ಇತರರಿಗೆ ತೋರಿಸದಿದ್ದರೆ

ಸಮಾಧಾನವಾಗದಿರುವುದೊಂದು ಸಾಮಾನ್ಯ ನಿಯಮವೆಂದೇ ಹೇಳಬೇಕು. ಈ ನಿಯಮ ಸಿರಿವಂತರಿಗೆ ಇನ್ನೂ ಹೆಚ್ಚಾಗಿ ಅನ್ವಯಿಸುತ್ತದೆ.

ಧನಪಾಲನೂ ಈ ನಿಯಮಕ್ಕೆ ಹೊರತಾಗಿರಲಿಲ್ಲ. ತನ್ನ ಮಗನಿಗಾಗಿ ತಾನು ಕೊಂಡುಕೊಂಡಿರುವ ಈ ಅಪೂರ್ವ ಅಶ್ವದ ಮೌಲ್ಯವನ್ನು ನಿಜವಾಗಿಯೂ ಗುರುತಿಸಿ ತನ್ನನ್ನು ಮೆಚ್ಚುವವನು ತನ್ನ ಮಗನ ಗುರು ಮಾತ್ರ ಎಂದು ನಿರ್ಧರಿಸಿ ಧನಪಾಲನು ಆ ಕುದುರೆಯೊಂದಿಗೆ ಗುರುವಿನ ಆಶ್ರಮದೆಡೆಗೆ ನಡೆದನು.

ಗುರುವಿನ ಆಶ್ರಮದಲ್ಲಿ ಅವನೆದುರಿಗೆ ತನ್ನ ಹೊಸ ಕುದುರೆಯನ್ನು ನಿಲ್ಲಿಸಿ, ಅತ್ಯಂತ ಅಭಿಮಾನದಿಂದ, "ಸ್ವಾಮಿ, ಈ ಕುದುರೆಯ ಬಗ್ಗೆ ತಮ್ಮ ಅಭಿಪ್ರಾಯವೇನು?" ಎಂದು ಕೇಳಿದ

ಗುರುವು ಮತ್ತಾರೂ ಆಗಿರದೇ ಧರ್ಮನಂದನ ಮಕ್ಕಳ ಗುರುವಾಗಿದ್ದನು. ಈ ಕುದುರೆ ಯಾರೆಂಬುದನ್ನು ಅವನು ಗುರುತಿಸಿದನು. ತನ್ನಿಂದಲೇ ವಿದ್ಯೆ ಕಲಿತು ತನಗೇ ಮೋಸಗೊಳಿಸಿದ ತಂದೆಯನ್ನು ಕೂಡಿಕೊಂಡಿದ್ದ ಧರ್ಮನಂದನ ಕಿರಿಯ ಮಗ, ತನ್ನ ಹಳೆಯ ಶಿಷ್ಯ ಕುದುರೆಯ ರೂಪದಲ್ಲಿರುವನೆಂದು ನಿರ್ಧರಿಸಿದನು. ತನ್ನ ಹಳೆಯ ಶಿಷ್ಯ ತನಗೆ ಕೈ ಕೊಟ್ಟಾಗಿನಿಂದಲೂ ಅವನಿಗೆ ತಕ್ಕ ಶಿಕ್ಷೆ ವಿಧಿಸಬೇಕೆಂದು ತಕ್ಕ ಸಮಯಕ್ಕಾಗಿ ಕಾಯುತ್ತಿದ್ದನವನು. ಮಾಗಿದ ಮಾವಿನ ಹಣ್ಣು ಕೈಗೇ ಬಿದ್ದಾಗ ಯಾರುತಾನೇ ಅದನ್ನು ಜಾರಿಹೋಗಗೊಡುವರು?

ಅಶ್ವರೂಪಿಯಾದ ತನ್ನ ಹಳೆಯ ಶಿಷ್ಯನ ಮೇಲೆ ಸೇಡು ತೀರಿಸಿಕೊಳ್ಳಲು ತಕ್ಕ ಸಮಯವಿದೆಂದು ಬ್ರಾಹ್ಮಣಗುರು ಮನದಲ್ಲಿಯೇ ನಿರ್ಧಾರ ಮಾಡಿಕೊಂಡು ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಂಡನು.

(ಮುಂದಿನ ಸಂಚಿಕೆ ನೋಡಿ)



೧೯೫೦ರಲ್ಲಿ ನಡೆದ ಸರಣಿಯ ನೆನಪು. ಜೆ.ಸಿ. ಗೊಡ್ಡಾರ್ಡ್ ನಾಯಕತ್ವದ ವೆಸ್ಟ್ ಇಂಡೀಸ್ ದೈತ್ಯರ ಬಳಗ ಇಂಗ್ಲೆಂಡ್ ಪ್ರವಾಸ ಕೈಗೊಂಡಿತ್ತು. ನಾಲ್ಕು ಟೆಸ್ಟ್‌ಗಳ ಸರಣಿಯಲ್ಲಿ ಯಾರ್ಡ್ಲೆ ಮುಂದಾಳತ್ವದ ಇಂಗ್ಲೆಂಡನ್ನು ೩-೦ ಅಂತರದಿಂದ ಹೀನಾಯವಾಗಿ ಹಣಿದು ತನ್ನ ದೇಶಕ್ಕೆ ಮರಳಿತ್ತು.

ಮೂರು ವರ್ಷಗಳ ನಂತರ ಸೋಲಿನ ಸೇಡನ್ನು ತೀರಿಸಿಕೊಳ್ಳುವ ಅವಕಾಶ ಪಡೆದಿದ್ದ ಇಂಗ್ಲೆಂಡ್ ಹೊಸಮುಖಗಳನ್ನು ಸೇರಿಸಿಕೊಂಡು ಲೆನ್ ಹಟನ್ ನಾಯಕತ್ವದಲ್ಲಿ ವೆಸ್ಟ್‌ಇಂಡೀಸಿಗೆ ಬಂದಿತ್ತು. ವಿಂಡೀಸ್ ತಂಡದಲ್ಲಿಯೂ ಸಹ ಕೆಲ ಬದಲಾವಣೆಯಾಗಿ ಸ್ಟಾಲ್‌ಮೇಯರ್ ನಾಯಕನ ಹೊಣೆ ವಹಿಸಿಕೊಂಡಿದ್ದ.

ವೆಸ್ಟ್ ಇಂಡಿಯನ್ನರ ಗೆಲುವಿನ ಅಟ್ಟಹಾಸ ವನ್ನು ಅವರ ನೆಲದಲ್ಲಿಯೇ ಚಿವುಟಿ ಹಾಕುವ ಗುರಿಯೊಂದಿಗೆ ಬಂದಿಳಿದಿದ್ದ ಹಟನ್ ಬಳಗ ಒಂದನೇ ಟೆಸ್ಟ್‌ಗೆ ಮುನ್ನ ತೀವ್ರ ಅಭ್ಯಾಸ ನಡೆಸಿದ್ದರೆ, ತಮ್ಮ ವಿಜಯದ ಯಾತ್ರೆಯನ್ನು ಇನ್ನಷ್ಟು ಭರ್ಜರಿಯಾಗಿ ಆಚರಿಸಬೇಕೆಂಬ ವಿಂಡೀಸ್, ಆಟಗಾರರಿಗೆಲ್ಲ ಫೀಲ್ಡಿಂಗ್ ಮೊದಲು ಮಾಡಿಕೊಂಡು ಪ್ರತಿಯೊಂದರಲ್ಲೂ ಕಠಿಣ ತರ ಬೇತಿ ನೀಡಿತ್ತು.

ಈ ಟೆಸ್ಟಿಗೆ ಮುಂಚೆ ನಡೆದ ನಾಲ್ಕು ಪಂದ್ಯ ಗಳಲ್ಲಿ ಕರಿಬಿಯನ್‌ರು ಎರಡು ಪಂದ್ಯಗಳನ್ನು ಗೆದ್ದು ಈ ಬಾರಿಯೂ ಸರಣಿ ಜಯ ತಮಗೆ ಎಂಬ ಸೂಚನೆ ನೀಡಿದ್ದರು. ಇಂಗ್ಲೆಂಡ್ ಪೂರ್ತಿ ಮರ್ಯಾದೆ ಕಳೆದುಕೊಳ್ಳುವದು ಬೇಡ ಎಂಬಂತೆ ಒಂದರಲ್ಲಿ ಗೆದ್ದು ಅಂತರವನ್ನು ೨-೧ಕ್ಕೆ ಇಳಿಸಿತ್ತು. ಉಳಿದೊಂದು ಪಂದ್ಯ 'ಡ್ರಾ'ದಲ್ಲಿ ಮುಗಿದಿದ್ದ ರಿಂದ ನಿರ್ಣಾಯಕವಾದ ಈ ಪಂದ್ಯಕ್ಕೆ ಹೆಚ್ಚಿನ ಮಹತ್ವ ಬಂದಿತ್ತು.



● ಆದಿಶೇಷವ

ಅಂದಿನ ಆಟ! ಇಂದಿನ ನೋಟ!

ಮುಖ್ಯವಾಗಿ ಇದೇ ಮೈದಾನದಲ್ಲಿ ನಡೆದ ಪ್ರಥಮ ಟೆಸ್ಟ್ ಪಂದ್ಯದಲ್ಲಿ ವೆಸ್ಟ್‌ಇಂಡೀಸ್ ಇಂಗ್ಲೆಂಡನ್ನು ೧೪೦ ರನ್‌ಗಳ ಭಾರೀ ಅಂತರ ದಿಂದ ಬಗ್ಗುಬಡಿದದ್ದರಿಂದ ಹಟನ್ ಬಳಗಕ್ಕೆ ಮತ್ತೆ ಸೋಲು ಗ್ಯಾರಂಟಿ ಎಂಬ ನಿರ್ಧಾರಕ್ಕೆ

ಪಂದ್ಯ: ವೆಸ್ಟ್ ಇಂಡೀಸ್- ಇಂಗ್ಲೆಂಡ್ ಐದನೇ ಟೆಸ್ಟ್.
ಸ್ಥಳ: ಸಬೀನಾ ಪಾರ್ಕ್, ಕಿಂಗ್‌ಸ್ಟನ್.
ದಿನಾಂಕ: ೧೯೫೪ ಮಾರ್ಚ್ ೩೦, ೩೧, ಏಪ್ರಿಲ್ ೧, ೨, ೩.

ಕ್ರಿಕೆಟ್ ಪರಿಣಿತರು ಬಂದಿದ್ದರು.

ಐದನೇ ಟೆಸ್ಟ್ ಪಂದ್ಯವನ್ನು ಹೇಗಾದರೂ ಮಾಡಿ ಗೆದ್ದೇ ತೀರಬೇಕೆಂಬ ಲೆಕ್ಕದಲ್ಲಿದ್ದ ಇಂಗ್ಲೆಂಡಿಗೆ ವೇಗದ ಬೌಲರ್ ಬ್ರಿಯನ್ ಸ್ಟಾಥಮ್ ಗಾಯಗೊಂಡು ಹಿಂದೆ ಸರಿದಿದ್ದು ದೊಡ್ಡ ಆಘಾತಉಂಟುಮಾಡಿತ್ತು. ಆದರೂ ಧೃತಿಗೆಡದ ನಾಯಕ ಹಟನ್, ಫ್ರೆಡ್ ಟ್ರೂಮನ್‌ನೊಂದಿಗೆ ಬೌಲಿಂಗ್ ಆರಂಭಿಸಲು ಉಪನಾಯಕ ಟ್ರೆವರ್ ಬೈಲಿಗೆ ಹೇಳಿದ್ದ.

ಮೈದಾನದಲ್ಲಿ

ಮೊದಲೆರಡು ಟೆಸ್ಟ್‌ಗಳನ್ನೂ ಗೆದ್ದು ಸರಣಿ ತನ್ನಂತೆ ಮಾಡಿಕೊಳ್ಳುವ ಆಸೆಯಿಂದ ಮೊದಲು ಸರದಿ ಆರಂಭಿಸಲು ಮೈದಾನಕ್ಕಿಳಿದ ಆತಿಥೇಯ ಸ್ಕೋರು ಕೇವಲ ೧೩. ತಂಡ ಶತಕವನ್ನು ಮುಟ್ಟುವದು ಅನುಮಾನವಾಗಿತ್ತು. ಒಂದು ತುದಿಯಲ್ಲಿ ವಿಕೆಟ್ ಮೇಲೆ ವಿಕೆಟ್ ಕಬಳಿಸಿ ಮಂದಹಾಸ ಬೀರುತ್ತಿದ್ದ ಬೈಲಿಗೆ ಸಿ.ಎಲ್. ವಾಲ್ಕಾಟ್ (೫೦) ತಲೆನೋವಾಗಿ ಕಾಡಿ ಐದನೇ ವಿಕೆಟ್ ಜೊತೆಯಲ್ಲಿ ಆಟ್‌ಕಿನ್‌ಸನ್(೨೧)ನೊಂದಿಗೆ ಅಮೂಲ್ಯ ೫೨ ರನ್ ಸೇರಿಸಿದ. ಇವರಿಬ್ಬರೂ ತಳ ಊರುತ್ತಿದ್ದಂತೆ ಕಂಡಾಗ ಮತ್ತೆ ಭೂತವಾಗಿ ಅವತರಿಸಿದ ಬೈಲಿ ಆಟ್‌ಕಿನ್‌ಸನ್ ವಿಕೆಟ್ ಬಲಿಹಾಕಿದ್ದಲ್ಲದೆ ಗೋಮೆಟ್ ಮತ್ತು ಮ್ಯಾಕ್‌ವಾಟ್ (೨೨)ರನ್ನು ಬೀಳಿಸಿ ವೆಸ್ಟ್‌ಇಂಡೀಸಿಗೆ ತಡೆದುಕೊಳ್ಳಲಾರದ ಪೆಟ್ಟು ನೀಡಿದ.

ಬ್ಯಾಟಿಂಗ್‌ಗೆ ಅನುಕೂಲ ಎನ್ನುತ್ತಿದ್ದ ಪಿಚ್‌ನಲ್ಲಿ

ಎದುರಾಳಿಯನ್ನು ತತ್ತರಗೊಳಿಸಿದ ಅಮೋಘ ಬೌಲಿಂಗ್

ವೆಸ್ಟ್‌ಇಂಡೀಸ್ ಕನಸು ಮನಸಿನಲ್ಲಿಯೂ ಎಣಿಸಲಾರದಂತಹ ಆಘಾತಕಾರಿ ಕುಸಿತ ಅನುಭವಿಸಿತು. ವೇಗದ ಬೌಲರ್ ಸ್ಟಾಥಮ್ ಸ್ಥಾನವನ್ನು ತುಂಬಿದ ಟ್ರೆವರ್ ಬೈಲಿ ವಿಂಡೀಸಿನ ಮೊದಲ ಮೂರು ವಿಕೆಟ್‌ಗಳನ್ನೂ ೧೩ ರನ್‌ಗಳಾಗುವಷ್ಟರಲ್ಲಿ ನುಂಗಿಹಾಕಿದ್ದ. ಅಂಪೈರ್‌ನಿಂದ ಗಾರ್ಡ್ ತೆಗೆದುಕೊಂಡು ಬ್ಯಾಟಿಂಗ್ ಮಾಡಲು ಅಣಿಯಾಗಿದ್ದ ಜೆ.ಕೆ. ಹಾಲ್ಟ್‌ಗೆ ಒಂದೂ ರನ್ ಮಾಡಲು ಬಿಡದೆ ಲಾಕ್ ಮೂಲಕ ವಿಕೆಟ್ ಎಗುರಿಸಿದ ಬೈಲಿ, ಜೆ.ಕೆ.ಯ ಬ್ಯಾಟಿಂಗ್ ಅಲ್ಲಿಯೇ ಹಾಲ್ಟ್ ಆಗುವಂತೆ ಮಾಡಿದ.

ವೆಸ್ಟ್ ಇಂಡೀಸಿನ ಮೊದಲ ನಾಲ್ಕು ಅತಿರಥ ಮಹಾರಥರು ಪೆವಿಲಿಯನ್‌ಗೆ ಮರಳಿ ಬಂದಾಗ ವೇಗದ ಬೌಲಿಂಗ್ ಹೊಡೆತಕ್ಕೆ ಸಿಕ್ಕು ನಲುಗಿದ ವೆಸ್ಟ್‌ಇಂಡಿಯನ್ನರು ಹಾಗೂ ಹೀಗೂ ತಿಣುಕಾಡಿ ೧೩೯ ರನ್ ಗಳಿಸಿದರು.

ಪ್ರತಿಯೊಬ್ಬ ಆಟಗಾರ, ಪ್ರೇಕ್ಷಕನಿಂದ ಪ್ರಶಂಸೆಯ ಮಾತುಗಳು ಬರುವಂತೆ ಅದ್ಭುತ ಬೌಲಿಂಗ್ ಪ್ರದರ್ಶನ ನೀಡಿದ ಎಸೆಕ್ಸ್ ಆಲ್‌ರೌಂಡರ್ ಟ್ರೆವರ್ ಬೈಲಿ ಕೇವಲ ೩೪ ರನ್ ನೀಡಿ ಏಳು ಕೆರಿಬಿಯನ್ ಬ್ಯಾಟ್ಸ್‌ಮನ್‌ಗಳನ್ನು ತನ್ನ ಜೇಬಿಗಿಳಿಸಿಕೊಂಡು ತಂಡದ ನಾಯಕನಿಗೆ ಆತಿಥೇಯರ ಮೇಲೆ ಬಿಗಿಹಿಡಿತ ಹೊಂದುವಂತೆ ಮಾಡಿಕೊಟ್ಟ.

ಹೆಚ್ಚಿಗೆ ಪರಿಶ್ರಮಪಡದೆ ವೆಸ್ಟ್‌ಇಂಡೀಸ್ ಸರದಿಯನ್ನು ಬೇಗನೇ ಮುಕ್ತಾಯಗೊಳಿಸಿದ

ಇಂಗ್ಲೆಂಡ್ ಈ ಪಿಚ್‌ನಲ್ಲಿ ಹೇಗೆ ಬ್ಯಾಟಿಂಗ್ ಮಾಡಬೇಕೆಂಬುದನ್ನು ತೋರಿಸಿಕೊಟ್ಟಿತು. ಆರಂಭಿಕ ಬ್ಯಾಟ್ಸ್‌ಮನ್ ರೂಪದಲ್ಲಿ ಆಡಲು ಬಂದ ನಾಯಕ ಲೆನ್ ಹಟನ್ ವೇಗದ ಬೌಲಿಂಗ್‌ಅನ್ನು ಲೀಲಾಜಾಲವಾಗಿ ಎದುರಿಸಿ ಮೊದಲ ಇನಿಂಗ್ಸ್ ಮುನ್ನಡೆ ಗಳಿಸುವ ಸ್ಪಷ್ಟ ಸೂಚನೆ ನೀಡಿದ.

ಪಂದ್ಯದ ಎರಡನೆ ದಿನದ ಆಟ ಮುಗಿದಾಗ ಇಂಗ್ಲೆಂಡ್ ಐದು ವಿಕೆಟ್‌ಗಳನ್ನು ಕಳೆದುಕೊಂಡಿತ್ತಾದರೂ ಆತಿಥೇಯರ ಮೇಲೆ ೫೫ ರನ್‌ಗಳ ಲೀಡ್ ಪಡೆದ ಸಾಧನೆ ಮಾಡಿತ್ತು. ಮೂರನೆ ದಿನ ಆಟಕ್ಕಿಳಿದ ಹಟನ್ (೨೦೫) ವಿದೇಶದ ಮೈದಾನದಲ್ಲಿ ದ್ವಿಶತಕ ಹೊಡೆದ ಮೊದಲ ಇಂಗ್ಲೆಂಡ್ ನಾಯಕ ಎಂಬ ದಾಖಲೆ ಬರೆದ.

ಒಂಭತ್ತು ತಾಸುಗಳ ಕಾಲ ಪಿಚ್‌ನಲ್ಲಿದ್ದ ಹಟನ್ ತನ್ನ ದ್ವಿಶತಕದಲ್ಲಿ ೨೩ ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದಿದ್ದ. ಕೊನೆಗೂ ವಾಲ್ಕಾಟ್‌ಗೆ ಹಟನ್ ಬಲಿಬಿದ್ದಾಗ ವೆಸ್ಟ್‌ಇಂಡೀಸ್ ಎದುರಾಳಿಯನ್ನು ಪೂರ್ಣವಾಗಿ ಔಟ್‌ಮಾಡಿದ ಸಮಾಧಾನ ಹೊಂದಿತು.

ಏಳನೆ ವಿಕೆಟ್ ಜೊತೆಯಾಟದಲ್ಲಿ ಹಟನ್‌ನೊಂದಿಗೆ ೧೦೮ ರನ್‌ಗಳನ್ನು ಸೇರಿಸಿದ್ದ ಜೆ.ಎಚ್.ವಾರ್ಡ್ಲೆ ೬೬ ರನ್‌ಗಳ ಉಪಯುಕ್ತ ಕಾಣಿಕೆ ನೀಡಿದ. ಯುವ ಬೌಲರ್ ಸೋಬರ್ಸ್ (೪-೭೫) ಮುಂದಿನ ಮೂರು ವಿಕೆಟ್‌ಗಳನ್ನು ಕೆಡವಿ ಇಂಗ್ಲೆಂಡ್ ಮೊತ್ತ ೪೧೪ಕ್ಕೆ ನಿಲ್ಲುವಂತೆ ನೋಡಿಕೊಂಡ.

೨೭೫ ರನ್‌ಗಳ ಮುನ್ನಡೆ ಪಡೆದುಕೊಂಡಿದ್ದ ಇಂಗ್ಲೆಂಡಿಗೆ ಒಂದೇ ಗುರಿ; ಆತಿಥೇಯರನ್ನು ಆದಷ್ಟು ಬೇಗ ಉರುಳಿಸಿ ಇನ್ನಿಂಗ್ಸ್ ಗೆಲುವು ಸಾಧಿಸಬೇಕೆಂಬುದು. ಅದಕ್ಕಾಗಿ ಲೆನ್ ಹಟನ್ ತಂಡದ ಉಳಿದ ಆಟಗಾರರೊಂದಿಗೆ ಗಂಭೀರ ಚರ್ಚೆ ನಡೆಸಿ ಪ್ರಥಮ ಸರದಿಯಲ್ಲಿ ಅಮೋಘ ಬೌಲಿಂಗ್ ಪ್ರದರ್ಶನ ನೀಡಿದ್ದ ಬೈಲಿ ಹಾಗೂ ಟ್ರೂಮನ್‌ಗೆ ಕೆಲವು ಸೂಚನೆಗಳನ್ನಿತ್ತ.

ಎರಡನೆ ಇನಿಂಗ್ಸ್ ಆರಂಭಿಸಿದ ವೆಸ್ಟ್‌ಇಂಡೀಸಿಗೆ ಶನಿರಾಯ ಮತ್ತೆ ಬೆನ್ನುಹತ್ತಿದ. ಈ ಬಾರಿ ಟ್ರೂಮನ್ ಆತಿಥೇಯರಿಗೆ ಮಾರಕವಾಗಿ ಕಂಡು ಬಹುಬೇಗನೇ ವಿಕೆಟ್‌ಗಳನ್ನು ಕಬಳಿಸಿದಾಗ ವೆಸ್ಟ್ ಇಂಡೀಸ್ ಇನ್ನಿಂಗ್ಸ್ ಸೋಲಿನ ಭೀತಿ ಎದುರಿಸಿತು. ನಾಲ್ಕು ಪ್ರಮುಖ ವಿಕೆಟ್‌ಗಳು ಕೇವಲ ೧೨೩ರನ್‌ಗಳಿಗೆ ಬಿದ್ದಾಗ ನಾಯಕ ಸ್ಟೋಲ್‌ಮೇಯರ್ (೬೪) ಜೊತೆಗೂಡಿದ ಸಿ.ಎಲ್. ವಾಲ್ಕಾಟ್ (೧೧೬) ಇಂಗ್ಲೆಂಡಿನ ಸಂಪೂರ್ಣ ಮೇಲುಗೈಗೆ ಅಡ್ಡಿಯಾಗಿ ಆಕರ್ಷಕ ಶತಕ ಬಾರಿಸಿದ್ದಲ್ಲದೆ ಬೀದಿಪಾಲಾಗುತ್ತಿದ್ದ ತಂಡದ ಮಾನವನ್ನು ಕಾಪಾಡಿದ. ವಾಲ್ಕಾಟ್ ಶತಕ ದಾಟಿ ಮತ್ತಷ್ಟು ಅಪಾಯಕಾರಿಯಾಗಿ ಕಾಣುತ್ತಿದ್ದಾಗ ಬೌಲಿಂಗಿಗೆ ಬಂದ ಜಿಮ್ಮ್ ಲೇಕರ್ (೪-೭೧) ಈ ವಿಕೆಟ್‌ನ್ನೂ ಎಗುರಿಸಿ ಇಂಗ್ಲೆಂಡ್ ಶಿಬಿರದಲ್ಲಿ ಸಂತಸ ಉಂಟುಮಾಡಿದ.

ವಾಲ್ಕಾಟ್ ಪತನದ ನಂತರ ಅಟ್ಕಿನ್‌ಸನ್ (೪೦) ಗೋಮೇಜ್ (೨೨) ಸ್ವಲ್ಪ ಹೊತ್ತು ಪ್ರತಿರೋಧ ಒಡ್ಡಿದರು. ಒಂಭತ್ತನೇ ಕ್ರಮಾಂಕದಲ್ಲಿ ಆಡಲು ಬಂದ ಗ್ಯಾರಿ ಸೋಬರ್ಸ್ ಲಾಕ್‌ಗೆ ವಿಕೆಟ್ ಒಪ್ಪಿಸುವ ಮುನ್ನ ೨೪ ರನ್ ಗಳಿಸಿದ. ಮುಂದೆ ೧೦ ರನ್ ಗಳಿಸಿದ್ದ ರಾಮಧಿನ್, ಲೆಕರ್‌ಗೆ ನಾಲ್ಕನೆ ಬಲಿಯಾಗುವ ಮೂಲಕ ವೆಸ್ಟ್ ಇಂಡೀಸ್‌ನ ಸರದಿ ೩೪೬ಕ್ಕೆ ಮುಕ್ತಾಯವಾಗಿ ಇಂಗ್ಲೆಂಡಿಗೆ ಜಯಗಳಿಸಲು ೭೫ ರನ್‌ಗಳ ಸುಲಭ ಸವಾಲು ಒಡ್ಡಿತು.

ಪಂದ್ಯದ ನಾಲ್ಕನೇ ದಿನ. ಇಂಗ್ಲೆಂಡಿಗೆ ಜಯ ಪಡೆಯಲು ತುರಾತುರಿಯಲ್ಲಿ ರನ್‌ಗಳಿಸುವ ಅವಶ್ಯಕತೆ ಇರಲಿಲ್ಲ. ಹೀಗಾಗಿ ಆಟದಲ್ಲಿ ಯಾವುದೇ ಆಸಕ್ತಿ ಉಳಿದಿರಲಿಲ್ಲ. ಆದರೆ ಇಲ್ಲಿ ವ್ಯಾಟ್ಸನ್ (ಔಟಾಗದೇ ೨೦) ಅವನೊಂದಿಗೆ ಸರದಿ ಆರಂಭಿಸಲು ಬಂದಿದ್ದ ಟಾಮ್ ಗ್ರಾವೆನಿಯನ್ನು ಮೊದಲ ಓವರ್‌ನಲ್ಲಿಯೇ ಕಬಳಿಸಿದ ಕಿಂಗ್ ವಿಂಡೀಸ್ ಪಾಲಿಗೆ ನೀರಸವಾಗಿ ಮುಗಿಯುತ್ತಿದ್ದ ಪಂದ್ಯಕ್ಕೆ ಕುತೂಹಲದ ತಿರುವು ನೀಡಿದ್ದ. ಈ ಹಂತದಲ್ಲಿ. ಬ್ಯಾಟಿಂಗ್ ಮಾಡಲು ಬಂದ ಪಿ.ಬಿ.ಎಚ್. ಮೇ (ಔಟಾಗದೆ ೪೦) ವ್ಯಾಟ್ಸನ್‌ನೊಂದಿಗೆ ಯಾವುದೇ ರೀತಿಯ ಒತ್ತಡಕ್ಕೊಳಗಾಗದೇ ವಿಂಡೀಸ್ ಬೌಲಿಂಗ್‌ಅನ್ನು ಧೈರ್ಯದಿಂದ

ಎದುರಿಸಿ ತಂಡಕ್ಕೆ ಅಮೋಘ ಗೆಲುವು ತಂದು ಕೊಟ್ಟ. ಇಂಗ್ಲೆಂಡ್ ಇನ್ನೂ ಒಂದು ದಿನದ ಆಟ ಬಾಕಿ ಇರುವಂತೆಯೇ ಒಂಭತ್ತು ವಿಕೆಟ್‌ಗಳ ನಿರಾಯಾಸ ಗೆಲುವು ತನ್ನಂತೆ ಮಾಡಿಕೊಂಡು ವೆಸ್ಟ್ ಇಂಡೀಸಿನ ಅಟ್ಟಹಾಸಕ್ಕೆ ಕಡಿವಾಣ ಹಾಕಿತು.

ಟ್ರೆವರ್ ಬೈಲಿ ಹೇಳಿದರು: "ಬ್ಯಾಟಿಂಗ್‌ಗೆ ಹೇಳಿ ಮಾಡಿಸಿದಂತಿದ್ದ ಈ ಪಿಚ್‌ನಲ್ಲಿ ನನ್ನ ಅಮೋಘ ಬೌಲಿಂಗ್ ಪ್ರದರ್ಶನದ ಬಗ್ಗೆ ನನಗೇ ಇನ್ನೂ ನಂಬಿಕೆಯಾಗುತ್ತಿಲ್ಲ. ನಿರ್ಜೀವ ಬೌಲಿಂಗ್ ಪಿಚ್‌ನಲ್ಲಿ ನನ್ನ ಬೌಲಿಂಗ್ ಪ್ರದರ್ಶನಕ್ಕೆ ಪ್ರತಿಯೊಬ್ಬರು ಆಶ್ಚರ್ಯ; ಪ್ರಶಂಸೆ ವ್ಯಕ್ತಪಡಿಸಿದರು. ನನ್ನ ಈ ಸಾಧನೆಗೆ ಕೆಲವು ಆಕರ್ಷಕ ಕ್ಷೇತ್ರರಕ್ಷಣೆ ಸಹ ಕಾರಣ. ಇದರಿಂದ ಉತ್ತೇಜನಗೊಂಡ ನಾನು ವೆಸ್ಟ್ ಇಂಡೀಸ್ ಚೇತರಿಸಿಕೊಳ್ಳದಂತೆ ಮಾಡಿದೆ. ಮುಖ್ಯವಾಗಿ ತಂಡದ ನಾಯಕ ಲೆನ್ ಹಟನ್ ಹೊಣೆಗಾರಿಕೆಯ ಆಟ ಪ್ರದರ್ಶಿಸಿ ದ್ವಿಶತಕ ಬಾರಿಸಿದ್ದು ನಮ್ಮ ಗೆಲುವಿಗೆ ಮೂಲ ಕಾರಣ."

ಗ್ಯಾರಿ "ಸೋಬರ್ಸ್: ಇದು ನನ್ನ ಪ್ರಥಮ ಟೆಸ್ಟ್ ಪಂದ್ಯವಾಗಿದ್ದರಿಂದ ನಾನು ಸಾಕಷ್ಟು ದಣಿದಿದ್ದೆ. ಆದರೆ ಪ್ರಥಮ ಇನಿಂಗ್ಸ್‌ನಲ್ಲಿ ನಾವು ತೀವ್ರವಾಗಿ ಕುಸಿದು ೧೫೦ ರನ್ ಸಹ ಗಳಿಸದೇ ಹೋದದ್ದು ನನಗೆ ನಂಬಿಕೆಯಾಗಲಿಲ್ಲ. ಸಬೀನಾ ಪಾರ್ಕ್‌ನಲ್ಲಿ ನಾವು ಅಜೇಯರು ಎಂಬ ಆತ್ಮವಿಶ್ವಾಸ ನನ್ನಲ್ಲಿ ಹೆಚ್ಚುತ್ತಲೇ ಹೋಗಿತ್ತು. ಆದರೆ ಟ್ರೆವರ್ ಬೈಲಿ ಅಮೋಘ ಬೌಲಿಂಗ್ ಪ್ರದರ್ಶಿಸಿ ನಮಗೆ ಸ್ಟ್ರೋಕ್ಸ್ ಹೊಡೆಯಲು ಅವಕಾಶ ನೀಡದೆ ಒಂದರ ಮೇಲೊಂದರಂತೆ ವಿಕೆಟ್ ಎಗುರಿಸಿದ್ದು ಅತ್ಯದ್ಭುತ. ನನ್ನ ಟೆಸ್ಟ್ ಜೀವನದ ಪ್ರಥಮ ವಿಕೆಟ್ ಪಡೆದ ಈ ಪಂದ್ಯವನ್ನು ನಾನು ಎಂದಿಗೂ ಮರೆಯುವುದಿಲ್ಲ. ನಮ್ಮವರ ಕುಸಿತಕ್ಕೆ ಬೈಲಿ ಕಾರಣವಾದರೂ ಲೆನ್ ಹಟನ್ ದ್ವಿಶತಕ ಬಾರಿಸಿದ್ದು ಇಂಗ್ಲೆಂಡ್ ಗೆಲುವಿಗೆ ಪ್ರಮುಖ ಕಾರಣವಾಯಿತು," ಎಂದು ಅಭಿಪ್ರಾಯಪಟ್ಟರು.

ದಾಖಲೆಯಲ್ಲಿ

ಮೊದಲೆರಡು ಟೆಸ್ಟ್‌ಗಳಲ್ಲಿ ಪರಾಜಯ ಅನುಭವಿಸಿ ೨-೦ ಅಂತರದಿಂದ ಹಿಂದಿದ್ದ ಇಂಗ್ಲೆಂಡ್ ಜಾರ್ಜ್‌ಟೌನ್ನಿನಲ್ಲಿ ಆತಿಥೇಯರಿಗೆ ತಿರುಗಿ ಬಿದ್ದು ಮೂರನೇ ಟೆಸ್ಟ್‌ಅನ್ನು ತಮ್ಮಂತೆ ಮಾಡಿಕೊಂಡಿದ್ದರು. ಈ ಪಂದ್ಯದಲ್ಲಿ ರನೌಟ್ ತೀರ್ಪಿನಿಂದ ಕುಪಿತರಾಗಿದ್ದ ಪ್ರೇಕ್ಷಕರು ಮೈದಾನದ ತುಂಬೆಲ್ಲ ಬಾಟಲಿಗಳನ್ನು ಎಸೆದು ಆಟಗಾರರಿಗೆ ಭೀತಿ ಹುಟ್ಟಿಸಿದ್ದರೂ ಇಂಗ್ಲೆಂಡಿನ ಗೆಲುವಿಗೆ ಅಡ್ಡಿಯಾಗಲಿಲ್ಲ. ತಂಡದ ಅರ್ಹ ವಿಜಯಕ್ಕೆ ಕಾರಣೀಭೂತನಾದ ಲೆನ್ ಹಟನ್ ಉಪಯುಕ್ತ ೧೬೯ ರನ್ ಹೊಡೆದಿದ್ದು ಬಹುಕಾಲ ನೆನಪಿನಲ್ಲಿ ಉಳಿಯುವಂತಾಯಿತು.

ಎರಡನೇ ಟೆಸ್ಟ್‌ನಲ್ಲಿ ವೆಸ್ಟ್‌ಇಂಡೀಸ್ ಪರ ಕ್ಲಾಯ್ಡ್ ವಾಲ್ಕಾಟ್ (೨೨೦) ದ್ವಿಶತಕ ಬಾರಿಸಿದರೆ ನಾಲ್ಕನೇ ಟೆಸ್ಟ್‌ನಲ್ಲಿ ಎವರ್ಟನ್ ವೀಕ್ಸ್ (೨೦೬) ಈ ಸಾಧನೆ ಮಾಡಿದ.

ಇನ್‌ಸುಲಿನ್‌ಅನ್ನು ನಿಯಮಿತವಾಗಿ ತೆಗೆದುಕೊಳ್ಳುವ ಮಟ್ಟವನ್ನು ತಲುಪದೆ ಬರಿ ಮಾತ್ರೆಗಳ ಮೇಲೆಯೇ ಇರುವ ಮಧುಮೇಹಿಗಳಿಗೊಂದು ಸಿಹಿಸುದ್ದಿ. ಇತರ ಮಾತ್ರೆಗಳು ಒಗ್ಗದಾದಾಗ ಬ್ರಿಸ್ಟೋಲ್-ಮೇಯರ್ಸ್-ಸ್ಕಿಬ್ ಕಂಪನಿಯ ವಿಜ್ಞಾನಿಗಳು ಸಂಶೋಧಿಸಿದ ಮೆಟ್‌ಫಾರ್ಮಿನ್ ಅಂಶವನ್ನೊಳಗೊಂಡ ಮಾತ್ರೆಗಳನ್ನವರು ತೆಗೆದುಕೊಂಡು ಮಧುಮೇಹವನ್ನು ನಿಯಂತ್ರಣದಲ್ಲಿಡಬಹುದು. ಅದು ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ಒಂದೇ ಮಟ್ಟದಲ್ಲಿ ಕಾಯ್ದುಕೊಳ್ಳುವುದಲ್ಲದೆ ಶರೀರದ ತೂಕವನ್ನಾಗಲಿ ಶರೀರದಲ್ಲಿನ ಸ್ನಿಗ್ಧದ ಅಂಶವನ್ನಾಗಲಿ ಹೆಚ್ಚಿಸುವುದಿಲ್ಲ. ಗ್ಲೊಕೋಫೇಜ್ ಎಂಬ ಹೆಸರಿನಿಂದ ಅಮೇರಿಕದಲ್ಲಿಗ ಮಾರಲ್ಪಡುವ ಈ ಮಾತ್ರೆಗಳು ಅನತಿ ಕಾಲದಲ್ಲೆ ಭಾರತದಲ್ಲೂ ಲಭ್ಯವಾಗಬಹುದು.

ಕಂಪ್ಯೂಟರ್ ವೈರಸ್:

ಹಾಗೆಂದರೇನು?

ರಾಜೇಶ್. ಎಸ್.

ಬಾಲಿವುಡ್‌ನ ಅದ್ಭುತ ಗಳಿಕೆಯ "ಹಮ್ ಆಪ್ ಕೆ ಹೈ ಕೌನ್?" ಚಿತ್ರ ನೋಡಿರುವಿರಲ್ಲ? ಈ ಚಿತ್ರದ ಅದ್ಭುತ ಗಳಿಕೆಗೆ ಇರುವ ಅನೇಕ ಕಾರಣಗಳಲ್ಲಿ ಒಂದು ಇಲ್ಲಿ ಪ್ರಸ್ತುತ. ಚಿತ್ರದ ಮೂಲ ಪ್ರತಿಗಳ ನಕಲಿಗೆ ವಿಧಿಸಿರುವ ಪ್ರತಿಬಂಧ. ಚಿತ್ರದ ನಕಲಿಗೆ ಆಸ್ಪದವಿಲ್ಲದಿರುವಾಗ ನಿರ್ಮಾಪಕರ ಶ್ರಮಕ್ಕೆ ನಿರೀಕ್ಷಿತ ಪ್ರತಿಫಲ.

ಈಗ ಕಂಪ್ಯೂಟರ್ ಜಗತ್ತನ್ನು ಪ್ರವೇಶಿಸೋಣ. ಯಾವುದೇ ಕಂಪ್ಯೂಟರ್ ಆಗಲಿ, ಒಂದು ಚಾಲಕನಿಲ್ಲದ ವಾಹನವಿದ್ದಂತೆ. ವಾಹನ ಎಷ್ಟೇ ಸುವ್ಯವಸ್ಥಿತವಾಗಿದ್ದರೂ ಚಾಲಕನಿಲ್ಲದೇ ಅದೊಂದು ನಿರುಪಯುಕ್ತ ವಸ್ತು. ವಾಹನಕ್ಕೆ ಚಾಲಕನಿದ್ದಂತೆ ಕಂಪ್ಯೂಟರ್ ಕಾರ್ಯಚಾಲನೆಗೆ ಚಾಲಕನ ಪಾತ್ರ ವಹಿಸುವ ಸಾಫ್ಟ್‌ವೇರ್ ಅತ್ಯಗತ್ಯ. ಸಾಫ್ಟ್‌ವೇರ್ ಎಂದರೆ ಕಂಪ್ಯೂಟರಿನ ಕಾರ್ಯ ನಿರ್ವಹಣೆಗಾಗಿ ಕ್ರಮಬದ್ಧವಾಗಿ ಹೆಜ್ಜೆ ಹೆಜ್ಜೆಗೂ ನೀಡುವ ಆದೇಶಗಳ ಗುಂಪು. ಒಬ್ಬ ಮಾಲಿಕ ತನ್ನ ನೌಕರನಿಗೆ ಹಲವು ಕೆಲಸಗಳನ್ನು ಹೇಳಿದರೆ, ನೌಕರ ಅದನ್ನೆಲ್ಲ ಜ್ಞಾಪಕವಿಟ್ಟುಕೊಂಡು ಕೆಲಸ ಮಾಡುವಂತೆ ಸಾಫ್ಟ್‌ವೇರ್ ಮಾಲಿಕನ ಸ್ಥಾನದಲ್ಲೂ ಹಾಗೂ ಕಂಪ್ಯೂಟರ್ ನೌಕರನ ಸ್ಥಾನದಲ್ಲೂ ಇದ್ದು ಕೆಲಸ ಮಾಡುತ್ತವೆ. ಯಾವುದೋ ಒಂದು ಸಂಸ್ಥೆ ಹಗಲಿರುಳು ದುಡಿದು, ಸಿಬ್ಬಂದಿ ವೆಚ್ಚ ಇತ್ಯಾದಿಗಳನ್ನೆಲ್ಲ ಭರಿಸಿ ಇಂತಹ ಒಂದು ಸಾಫ್ಟ್‌ವೇರನ್ನು ತಯಾರಿಸುತ್ತದೆ. ಐದರಿಂದ ಐವತ್ತು ಸಾವಿರ ರೂಪಾಯಿಗಳವರೆಗೆ ದರ ನಿಯೋಜಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತದೆ. ಮೂಲ ಪ್ರತಿ ಕೊಳ್ಳುವ ಪ್ರತಿಯೊಬ್ಬ ಇಷ್ಟೊಂದು ದುಬಾರಿ ವೆಚ್ಚವನ್ನು ಭರಿಸಲೇಬೇಕಾಗುತ್ತದೆ. ಮೂಲಪ್ರತಿಯಿಂದ ಮತ್ತೊಬ್ಬ ಕಡಿಮೆ ವೆಚ್ಚದಲ್ಲಿ ನಕಲು ಪ್ರತಿ ಮಾಡಿಕೊಳ್ಳುತ್ತಾನೆ. ಅವನಿಂದ ಮತ್ತೊಬ್ಬ, ಮಗದೊಬ್ಬ, ಹೀಗೆ ಒಂದು ಮೂಲ ಪ್ರತಿಯಿಂದ ಸಾವಿರಾರು ನಕಲು ಪ್ರತಿಗಳು ಹುಟ್ಟಿಕೊಳ್ಳುತ್ತವೆ. ಶ್ರಮಪಟ್ಟು ಮೂಲಪ್ರತಿ ತಯಾರಿಸಿದ ಸಂಸ್ಥೆ ನಷ್ಟಕ್ಕೊಳಗಾಗಬೇಕಾಗುತ್ತದೆ. ಇಂತಹ ಸ್ಥಿತಿಯಲ್ಲಿ ಮೂಲಪ್ರತಿಯನ್ನು ನಕಲು ಮಾಡಿಕೊಳ್ಳುವವನಿಗೆ ಮಾತ್ರ ಹಾನಿ ಮಾಡುವಂತೆ ಮತ್ತೊಂದು ಸಣ್ಣ ಸಾಫ್ಟ್‌ವೇರ್ ಪ್ರೋಗ್ರಾಮ್‌ನ್ನು ಮೂಲಪ್ರತಿಯಲ್ಲೇ ತಯಾರಿಸಿ ಇಟ್ಟಿರುತ್ತಾರೆ. ಇದರ ಹೆಸರೇ "ವೈರಸ್" (VIRUS)

Vital Information Resource Under Seize ಇದರ ಸಂಕ್ಷಿಪ್ತ ರೂಪವೇ VIRUS. ಹೆಸರೇ ಹೇಳುವಂತೆ ಅತಿಮುಖ್ಯ ಮಾಹಿತಿಯ ಮೂಲವನ್ನೇ ಪ್ರತಿಬಂಧಿಸುವುದು ಇದರ ಕೆಲಸ.

ವೈರಸ್ಸಿನ ಮೂಲಧ್ಯೇಯ ನಕಲು ಪ್ರತಿ ಮಾಡಿಕೊಳ್ಳುವವನ ಕಂಪ್ಯೂಟರಿನಲ್ಲಿ ಅಲ್ಲೋಲ ಕಲ್ಲೋಲವೆಬ್ಬಿಸಿ ನಕಲುಗಾರನಿಗೆ ಹಾನಿಯುಂಟು ಮಾಡುವುದು. ಈ ವೈರಸ್ ಮೂಲ ಪ್ರತಿಯಲ್ಲಿದ್ದು ಯಾರಾದರೂ ನಕಲು ಮಾಡುವದನ್ನೇ ಕಾಯುತ್ತಿ

ರುತ್ತದೆ. ನಕಲನ್ನು ಮಾಮೂಲಾಗಿ ಫ್ಲಾಪಿ ಡಿಸ್ಕಿನಲ್ಲಿ (ಒಂದು ರೀತಿಯ ಕ್ಯಾಸೆಟ್) ಮಾಡಿಕೊಳ್ಳುತ್ತೇವೆ. ಫ್ಲಾಪಿಯೊಳಗೆ ಶೇಖರವಾಗಿರುವ ಸಾಫ್ಟ್‌ವೇರ್‌ಗಳನ್ನು ನಾವು ಹೆಚ್ಚು ಸಂಗ್ರಹಣಾ ಸಾಮರ್ಥ್ಯವಿರುವ ಹಾರ್ಡ್ ಡಿಸ್ಕಿಗೆ (Hard Disk) ವರ್ಗಾಯಿಸುತ್ತೇವೆ. ಇಲ್ಲಿಂದ ಮುಂದೆ ವೈರಸ್ ವಿಜೃಂಭಿಸುತ್ತದೆ. ಹೆಂಡ ಕುಡಿದ ಚಾಲಕ, ವಾಹನದ ಮೇಲಿನ ನಿಯಂತ್ರಣ ಕಳೆದುಕೊಂಡು ಎಡ್ರಾಬಿರ್ರಿಯಾಗಿ ಓಡಿಸುವಂತೆ ವೈರಸ್ಸಿನಿಂದ ಗಾಸಿಗೊಂಡ ಸಾಫ್ಟ್‌ವೇರ್ ಕಂಪ್ಯೂಟರಿನ ಮೇಲಿನ ನಿಯಂತ್ರಣ ಕಳೆದುಕೊಳ್ಳುತ್ತದೆ. ಈ ಪರಿಸ್ಥಿತಿಯಲ್ಲಿ ಕಂಪ್ಯೂಟರ್ ತನ್ನ ಕಾರ್ಯವನ್ನೇ ನಿಲ್ಲಿಸಬಹುದು, ಅನಿರೀಕ್ಷಿತ ಪರಿಣಾಮಗಳನ್ನು ಕೊಡಬಹುದು ಅಥವಾ ಈಗಾಗಲೇ ತನ್ನಲ್ಲಿ ಸಂಗ್ರಹವಾಗಿರುವ ಅಮೂಲ್ಯ ಮಾಹಿತಿಯನ್ನೇ ಧ್ವಂಸಗೊಳಿಸಬಹುದು. ಒಟ್ಟಾರೆ ಕಂಪ್ಯೂಟರ್ ನಿಷ್ಪ್ರಯೋಜಕವಾಗುವ ಹಂತವನ್ನು ತಲುಪಬಹುದು. ಮೂಲಪ್ರತಿಗಳ ನಕಲಿಗೆ ತಡೆಯೊಡ್ಡುವ ರಾಮಬಾಣವೇ ವೈರಸ್.

ಹಾನಿಕಾರಕ ಉದ್ದೇಶಕ್ಕಾಗಿಯೇ ಜನಿಸಿದ ಕಂಪ್ಯೂಟರ್ ಜಗತ್ತಿನ ಮೊದಲ ವೈರಸ್ "ಪಾಕಿಸ್ತಾನಿ ಬ್ರೈನ್." ಹೆಸರೇ ಸೂಚಿಸುವಂತೆ ಇದನ್ನು ಅಭಿವೃದ್ಧಿಪಡಿಸಿದವರು ಪಾಕಿಸ್ತಾನಿಗಳು. ಅನಂತರ ಸಾವಿರಾರು ವೈರಸ್ಸುಗಳು ಬೇರೆ ಬೇರೆ ಸಾಫ್ಟ್‌ವೇರ್ ತಯಾರಿಸುವ ಸಂಸ್ಥೆಗಳಿಂದ ಹುಟ್ಟಿಕೊಂಡಿವೆ.

ಕಂಪ್ಯೂಟರಿನ ಕಾರ್ಯಾಚರಣೆಯನ್ನು ಯಾವ ರೀತಿ ತಡೆಹಿಡಿಯಬಹುದೆಂದು ಯೋಚಿಸಿ ಅದರಂತೆ ವೈರಸ್ಸುಗಳನ್ನು "C" ಎನ್ನುವ ಕಂಪ್ಯೂಟರ್ ಭಾಷೆಯಲ್ಲಿ ಹೆಚ್ಚಾಗಿ ಬರೆಯಲಾಗುತ್ತದೆ. ಈ ಹಿಂದೆ ಹೇಳಿದಂತೆ ಕಂಪ್ಯೂಟರ್ ಚಾಲನೆಗೆ ಚಾಲಕನ ಸ್ಥಾನದಲ್ಲಿರುವ ಸಾಫ್ಟ್‌ವೇರ್ ಬೇಕಾಗುತ್ತದೆ. ಇಂಥವಕ್ಕೆ ಸಿಸ್ಟಮ್ ಸಾಫ್ಟ್‌ವೇರ್ ಎನ್ನುತ್ತೇವೆ. ಉದಾಹರಣೆಗೆ ಡಾಸ್ (DOS) ಯುನಿಕ್ಸ್ (UNIX.) ಯಾವುದೇ ಕಂಪ್ಯೂಟರಿನ ಕಾರ್ಯಚಾಲನೆಗೆ ಈ ಸಿಸ್ಟಮ್ ಸಾಫ್ಟ್‌ವೇರ್ ಅತ್ಯಗತ್ಯ. ಇದಾದ ನಂತರ ಅಪ್ಲಿಕೇಶನ್ ಸಾಫ್ಟ್‌ವೇರ್ ಎಂಬ ಇನ್ನೊಂದು ವಿಧದ ಸಾಫ್ಟ್‌ವೇರ್ ಇದೆ. ಉದಾಹರಣೆಗೆ ವರ್ಡ್‌ಸ್ಟಾರ್, ಡಿ ಬೇಸ್ ಇತ್ಯಾದಿ. ಇದು ಬಸ್ಸಿನಲ್ಲಿರುವ ನಿರ್ವಾಹಕನಂತೆ. ಚಾಲಕನ ಹಿಡಿತ ಬಸ್ಸಿನ ಮೇಲಿದ್ದರೆ, ನಿಲುಗಡೆಯ ಸ್ಥಳಗಳನ್ನು ನಿರ್ಧರಿಸುವ ಮೂಲಕ ಚಾಲಕನ ಮೇಲೆ ನಿರ್ವಾಹಕ ನಿಯಂತ್ರಣ ಹೊಂದುತ್ತಾನೆ. ಅಂತೆಯೇ ಸಿಸ್ಟಮ್ ಸಾಫ್ಟ್‌ವೇರಿನಿಂದ ಕಂಪ್ಯೂಟರ್ ಚಾಲನೆಯಾದ ಮೇಲೆ, ಅಪ್ಲಿಕೇಶನ್ ಸಾಫ್ಟ್‌ವೇರ್ ಸಿಸ್ಟಮ್ ಸಾಫ್ಟ್‌ವೇರಿನ ಮೇಲೆ, ತನ್ಮೂಲಕ ಕಂಪ್ಯೂಟರಿನ ಮೇಲೆ ಹಿಡಿತ ಸಾಧಿಸುತ್ತದೆ. ಹೀಗಾಗಿ ವೈರಸ್ಸುಗಳ ಲಕ್ಷ್ಯ ಸಿಸ್ಟಮ್ ಸಾಫ್ಟ್‌ವೇರ್‌ಗಳ ಮೇಲಾಗಲಿ ಅಥವಾ ಅಪ್ಲಿಕೇಶನ್ ಸಾಫ್ಟ್‌ವೇರ್ ಮೇಲಾಗಲಿ ಅಥವಾ ಒಟ್ಟಾಗಿ ಇವೆರಡರ ಮೇಲಾಗಲಿ ಇರುತ್ತದೆ. ಯಾವ ಸಾಫ್ಟ್‌ವೇರ್ ಮೇಲೆ ವೈರಸ್ಸು ತನ್ನ ಗುರಿಯನ್ನು ಕೇಂದ್ರೀಕರಿಸಿದೆ ಎನ್ನುವ ಆಧಾರದ ಮೇಲೆ ವೈರಸ್ಸುಗಳನ್ನು ಎರಡು ವಿಧವಾಗಿ ವಿಂಗಡಿಸಲಾಗಿದೆ.

೧) ಸಿಸ್ಟಮ್ ಇನ್‌ಫೆಕ್ಟರ್ಸ್ (System infectors): ಕೇವಲ ಸಿಸ್ಟಮ್ ಸಾಫ್ಟ್‌ವೇರ್‌ಗಳನ್ನು ಮಾತ್ರ ಹಾಳು ಮಾಡಿ ಆ ಮೂಲಕ ಕಂಪ್ಯೂಟರ್ ಚಾಲನೆಯಾಗದಂತೆ ತಡೆಯುತ್ತದೆ.

೨) ಜೆನೆರಿಕ್ ಇನ್ಫೆಕ್ಟರ್ಸ್ (Generic infectors) ಸಿಸ್ಟಮ್ ಸಾಫ್ಟ್‌ವೇರ್ ಮತ್ತು ಅಪ್ಲಿಕೇಶನ್ ಸಾಫ್ಟ್‌ವೇರ್ ಎರಡನ್ನೂ ಹಾಳು ಮಾಡುತ್ತದೆ.

ಈ ವೈರಸ್ಸುಗಳಿಗೆ ರಂಗುರಂಗಿನ ಹೆಸರೂ ಉಂಟು. ಉದಾಹರಣೆಗೆ ಮಂಕಿ, ಜೋಶಿ, ಡಾರ್ಕ್ ಅವೆಂಜರ್, ಗುಮ್‌ನಾಮ್, ಪಿಂಗ್ ಪಾಂಗ್, ಟ್ರೋಜಾನ್ ಇತ್ಯಾದಿ.

ರಾಮಾಯಣದ ವಿಲಕ್ಷಣ ಪಾತ್ರಗಳಲ್ಲಿ ಕುಂಭಕರ್ಣನದು ಮಹತ್ವದ ಪಾತ್ರ. ದೀರ್ಘ ನಿದ್ದೆಯ ನಂತರ ಎಚ್ಚರಗೊಂಡ ಕೂಡಲೇ ಸಿಕ್ಕಿದ್ದನ್ನೆಲ್ಲ ಕಬಳಿಸಿ, ಹಾಹಾಕಾರವೆಬ್ಬಿಸಿ ಮತ್ತೆ ಮಲಗುವುದು ಈತನ ವೈಶಿಷ್ಟ್ಯ. ಈತನ ವಂಶದ್ದಿರಬಹುದೆಂಬ ಅನುಮಾನ ಹುಟ್ಟಿಸುವಂತಹ ವೈರಸ್ ಒಂದಿದೆ. ಅದೇ "ಮಾರ್ಚ್ ಒಂದು." ಇದು ವರ್ಷಪೂರ್ತಿ ಕಂಪ್ಯೂಟರಿನಲ್ಲಿ (ಹಾರ್ಡ್ ಡಿಸ್ಕ್ ಅಥವಾ ಫ್ಲಾಪಿ ಡಿಸ್ಕಿನಲ್ಲಿ) ಮಲಗಿ ಮಾರ್ಚ್ ಒಂದರಂದು ಎಚ್ಚತ್ತುಕೊಂಡು ಕಂಪ್ಯೂಟರ್ ಕಾರ್ಯ ನಿರ್ವಹಣೆಯನ್ನು ಹಾಳುಗೆಡವಿ, ಇದರಲ್ಲಿರುವ ಮುಖ್ಯ

ಮಾಹಿತಿಗಳನ್ನು ನಿರ್ನಾಮಮಾಡಿ ವೀರವಿಹಾರಗೈಯುತ್ತದೆ.

ಪೊಲೀಸನು ಚಾಪೆಯ ಕೆಳಗೆ ನುಸುಳಿದರೆ ಕಳ್ಳನು ರಂಗೋಲಿ ಕೆಳಗೆ ತೂರುತ್ತಾನೆ ಎನ್ನುವ ಮಾತಿದೆ. ನಕಲು ಮಾಡುವುದನ್ನು ಪ್ರತಿಬಂಧಿಸಲು ಕೆಲವರು ವೈರಸ್ಸುಗಳನ್ನು ಬರೆದರೆ ಅದನ್ನು ಪ್ರತಿರೋಧಿಸಿ ಅದನ್ನು ನಿವಾರಿಸಲು ಆ್ಯಂಟಿ ವೈರಸ್ (Anti-VIRUS) ಎನ್ನುವ ಸಾಫ್ಟ್‌ವೇರ್ ಪ್ರೋಗ್ರಾಮನ್ನು ಬರೆಯುವವರ ದಂಡೇ ಇದೆ. ಪರೋಕ್ಷವಾಗಿ ಇವರು ನಕಲು ಮಾಡುವವರನ್ನು ಬೆಂಬಲಿಸುತ್ತಾರೆ. ಯಾವುದೋ ಸಂಸ್ಥೆ ತನ್ನ ಮೂಲಪ್ರತಿಯಲ್ಲಿ ಬರೆದಿಟ್ಟಿರುವ ವೈರಸ್ಸನ್ನು ಆ್ಯಂಟಿವೈರಸ್ ಸಂಸ್ಥೆಯವರು ಅಭ್ಯಸಿಸುತ್ತಾರೆ. ನಂತರ ಅದರ ನಿವಾರಣೆಗೆ ಅನುಕೂಲವಾದ ಆ್ಯಂಟಿವೈರಸ್ ಪ್ರೋಗ್ರಾಮನ್ನು ಬರೆದು ಮಾರುಕಟ್ಟೆಗೆ ಸುಮಾರು ಒಂದರಿಂದ ಐದು ಸಾವಿರದವರೆಗೆ ದರ ನಿಯೋಜಿಸಿ ಬಿಡುಗಡೆಮಾಡುತ್ತಾರೆ. ದುಬಾರಿಯಾದ ಸಾಫ್ಟ್‌ವೇರ್ ಖರೀದಿಸುವುದಕ್ಕಿಂತ ಅದನ್ನು ನಕಲುಮಾಡಿ ನಂತರ ಆ್ಯಂಟಿವೈರಸ್ ಮೂಲಕ ವೈರಸ್ಸನ್ನು ತೆಗೆಯಬಹುದಾದ್ದರಿಂದ ಜನ ಇದಕ್ಕೆ ಮುಗಿಬೀಳುತ್ತಾರೆ. ಕೆಲವು ಬುದ್ಧಿವಂತರು ಈ ಆ್ಯಂಟಿ ವೈರಸ್‌ಸಾಫ್ಟ್‌ವೇರನ್ನು ಕೂಡ ನಕಲು ಮಾಡುತ್ತಾರೆ. ಕಳ್ಳನನ್ನು ಕಾಯಲು ಕಳ್ಳನನ್ನು ನೇಮಿಸಿದಂತೆ ಆ್ಯಂಟಿವೈರಸ್ ಸಂಸ್ಥೆಯವರೂ ತಮ್ಮ ಮೂಲಪ್ರತಿಯಲ್ಲಿ ಒಂದೊಂದು ವೈರಸ್ ಬರೆದಿಟ್ಟಿರುತ್ತಾರೆ. ಹೀಗೆ ಎಲ್ಲಾ ದಿಕ್ಕಿನಿಂದಲೂ ವೈರಸ್ಸುಗಳ ಸಂತತಿ ಬೆಳೆಯುತ್ತದೆ.

ವೈರಸ್ಸಿನಿಂದ ಗಾಸಿಗೊಂಡ ಕಂಪ್ಯೂಟರಿನ ಗುಣಲಕ್ಷಣಗಳೆಂದರೆ:

೧) ವಿನಾಕಾರಣ ಕಂಪ್ಯೂಟರ್ ಕೆಲಸಮಾಡದೆ ಧರಣಿ ಹೂಡುತ್ತದೆ.

೨)ಕೆಲಸ ಮಾಡಿದರೂ ಅನಿರೀಕ್ಷಿತ ಪರಿಣಾಮಗಳನ್ನು ಕೊಡುತ್ತದೆ.

ವೈರಸ್ಸುಗಳು ಹರಡದಂತೆ ಮಾಡಲು ಕೆಲವು ಉಪಾಯಗಳಿವೆ.

೧. ಯಾವುದೇ ಸಾಫ್ಟ್‌ವೇರ್ ಕೊಂಡರೂ ಸಾಧ್ಯವಾದಷ್ಟು ಮೂಲ ಪ್ರತಿಯನ್ನೇ ಕೊಳ್ಳುವುದು..

೨. ಮಾನವನಿಗೆ ತಗುಲಿಕೊಳ್ಳುವ ವೈರಸ್ಸುಗಳಿಗೆ ಗಾಳಿ, ಆಹಾರ ಇತ್ಯಾದಿಗಳು ಮಾಧ್ಯಮವಾಗಿರುವಂತೆ ಕಂಪ್ಯೂಟರ್ ವೈರಸ್‌ಗಳಿಗೆ ಫ್ಲಾಪಿ ಡಿಸ್ಕ್ ಪ್ರಥಮ ಹಾಗೂ ಹಾರ್ಡ್ ಡಿಸ್ಕ್ ದ್ವಿತೀಯ ಮಾಧ್ಯಮವಾಗುತ್ತದೆ. ಸಾಧ್ಯವಾದಷ್ಟು ಬೇರೆ ಕಡೆಯಿಂದ ತಂದ ಫ್ಲಾಪಿಗಳನ್ನು ನಮ್ಮ ಕಂಪ್ಯೂಟರಿನಲ್ಲಿ ಹಾಕಬಾರದು. ಹಾಕಲೇಬೇಕಾದಂಥ ಸಂದರ್ಭವಿದ್ದಾಗ ಆ್ಯಂಟಿ ವೈರಸ್ ಉಪಯೋಗಿಸಿ ಈ ಫ್ಲಾಪಿಗಳಲ್ಲಿ ವೈರಸ್ ಇಲ್ಲವೆಂದು ಖಾತ್ರಿ ಪಡಿಸಿಕೊಂಡ ನಂತರವೆ ಉಪಯೋಗಿಸಬೇಕು.

೩. ನಮ್ಮ ಕಂಪ್ಯೂಟರಿನಲ್ಲಿ ವೈರಸ್ ಇದೆಯೆಂದು ಖಾತ್ರಿಯಾದ ಕೂಡಲೆ ಕೆಲಸವನ್ನು ಮುಂದುವರಿಸಕೂಡದು. ಆ್ಯಂಟಿವೈರಸ್ ಉಪಯೋಗಿಸಿ ವೈರಸ್ ನಿವಾರಣೆ ಮಾಡಿದ ಮೇಲೆಯ ಕೆಲಸ ಮುಂದುವರಿಸಬೇಕು.

ಪ್ರತಿದಿನವೂ ಸಾವಿರಾರು ಕಂಪ್ಯೂಟರ್‌ಗಳು ವೈರಸ್ಸಿನ ಹಿಡಿತದಿಂದ ನರಳುತ್ತಿವೆ. ಮೇಲೆ ಹೇಳಿದ ಕ್ರಮಗಳನ್ನು ಕೈಗೊಳ್ಳುವ ಸಂದರ್ಭವನ್ನು ಆಹ್ವಾನಿಸುವುದಕ್ಕಿಂತ ಜನ ಸ್ವಯಂಪ್ರೇರಣೆಯಿಂದ ಮೂಲ ಪ್ರತಿಗಳನ್ನೇ ಕೊಂಡು ವೈರಸ್ಸಿನ ಸಂತತಿ ನಶಿಸುವುದಕ್ಕೆ, ತನ್ಮೂಲಕ ಕಂಪ್ಯೂಟರ್ ಸುಗಮವಾಗಿ ಉಸಿರಾಡುವುದಕ್ಕೆ ನೆರವಾಗುವರೆಂದು ಆಶಿಸೋಣವೆ?

ಉಳಿದವರಿಗೆ ಹೋಲಿಸಿದರೆ ಪ್ರಬಲ ವಿದ್ಯುದಯಸ್ಕಾಂತ ಕ್ಷೇತ್ರದಲ್ಲಿ ಹೆಚ್ಚು ಕಾಲ ಕೆಲಸ ಮಾಡುವವರಿಗೆ ದೀರ್ಘಾವಧಿಯಲ್ಲಿ ಮಿದುಳಿನ ಕ್ಯಾನ್ಸರ್ ತಗಲುವ ಸಂಭವ ಹೆಚ್ಚು.

ಪುಸ್ತಕ ವಿಭಾಗ



"ಜೋಜಿಲಾ ವೀರ"

• ಸಂಗ್ರಹ: **ಗೋವಾ**

"ಅಲ್ಲಿ ವಾಹನ ನಡೆಸಲು ಎಂಟೆದೆಯೇ ಬೇಕು..."

"ಹೌದಪ್ಪಾ.... ನಾನಂತೂ ಅಲ್ಲಿಗೆ ಹೋಗುವ ಮೊದಲು ಮನೆಯ ಜನರೆಲ್ಲರ ಮುಖಗಳನ್ನು ಮತ್ತೆ ಮತ್ತೆ ಕಣ್ಣಲ್ಲಿ ತುಂಬಿಕೊಂಡೇ, 'ದೇವರೆ, ಈ ಮುಖಗಳನ್ನು ಮತ್ತೆ ನೋಡುವಂತೆ ಮಾಡುವುದು ನಿನ್ನನ್ನೇ ಕೂಡಿದೆ' ಎಂದು ಪ್ರಾರ್ಥಿಸಿಕೊಂಡೇ ಹೊರಡುವುದು...."

-ಇದು ಜೋಜಿಲಾ ಘಾಟಿನಲ್ಲಿ ವಾಹನ ನಡೆಸುವ ಇಬ್ಬರು ಡ್ರೈವರುಗಳ ಮಾತು. ಆದರೆ ಆ ಮಾರ್ಗವಾಗಿ ಹೋಗಿ ಬರುವ ಎಲ್ಲ ವಾಹನ ಚಾಲಕರೂ ಹೀಗೆಯೇ ಅಂದುಕೊಳ್ಳುವಷ್ಟು ಅಪಾಯಕಾರಿಯಾದ ರಸ್ತೆ ಅದು.

ಶ್ರೀನಗರ-ಲೇಹ್ ದಾರಿಯಲ್ಲಿ, ಶ್ರೀನಗರದಿಂದ ೮೪ ಕಿಲೋಮೀಟರುಗಳ ಅಂತರದ ಮೇಲೆ ಸೋನ್‌ಮಾರ್ಗ್ ಬರುತ್ತದೆ. ಶ್ರೀನಗರದಿಂದ ಇಲ್ಲಿಯವರೆಗಿನದು ಸಾಮಾನ್ಯ ಗುಡ್ಡಗಾಡಿನಲ್ಲಿರುವಂಥ ರಸ್ತೆಯೆ. ಸೋನ್‌ಮಾರ್ಗ್ ದಾಟಿದರೆ ಮುಗಿಯಿತು. ಜೋಜಿಲಾ ಪರ್ವತದ ಏರು ರಸ್ತೆ ಶುರು. ಅತ್ಯಂತ ದುರ್ಗಮ ಹಾದಿ. ಇದರ ಒಂದು ತುದಿಗೆ ಸೋನ್‌ಮಾರ್ಗ್ ಇದ್ದರೆ ಆ ತುದಿಗೆ ಇರುವುದೇ ದರಾಸ್. ಈ ದರಾಸ್ ಜಗತ್ಪ್ರಸಿದ್ಧ ಸ್ಥಳ. ಪ್ರಪಂಚದಲ್ಲೇ 'ಎರಡನೆಯ ಅತ್ಯಂತ ಚಳಿಯ ಪ್ರದೇಶ'ವೆಂದು ಇದು ಪ್ರಖ್ಯಾತ.

ಸೋನ್‌ಮಾರ್ಗ್ ಮತ್ತು ದರಾಸ್ ನಡುವಿನ ಜೋಜಿಲಾ ಘಟ್ಟ ಸಮುದ್ರಮಟ್ಟದಿಂದ ೧೨,೫೦೦ ಅಡಿ ಎತ್ತರದಲ್ಲಿದೆ. ಜೋಜಿಲಾ ಶಿಖರವನ್ನು 'ಕ್ಯಾಪ್ಟನ್ ಮೂರ್ ಶಿಖರ'ವೆಂದೂ ಕರೆಯುವುದುಂಟು.

ಈ ಹಾದಿಯ ಬಗ್ಗೆ ಒಂದಿಷ್ಟು ಹೇಳಬೇಕು. ಪಕ್ಕಾ ರಸ್ತೆ ಇದಲ್ಲ. ತೆಳುವಾದ ಧೂಳು ತುಂಬಿರುವ ಈ ರಸ್ತೆಯಲ್ಲಿ ಆಳದವರೆಗೂ ಹುದುಗಿಕೊಂಡಿರುವ ಬಂಡೆಗಳ ತುದಿಗಳಿವೆ. ಅಕ್ಕಪಕ್ಕದಲ್ಲೂ ಅಂಥವೇ ಕಲ್ಲುಗಳು ಕೀಳಲಾರದ ಸ್ಥಿತಿಯಲ್ಲಿ ನಿಂತಿವೆ. ಬೃಹತ್ ವಾಹನವೊಂದು ಹೊರಟಿತೆಂದರೆ ಏಳುವ ಧೂಳು ಆವರಿಸಿ ರಸ್ತೆಯೆಲ್ಲ ಪರದೆ ಹಾಕಿದಂತೆ ಕಾಣುತ್ತದೆ. ಆದರಲ್ಲಿ ಈ ಕಲ್ಲು-ಬಂಡೆಗಳು ಬೇರೆ. ಒಂದು ರೀತಿಯಲ್ಲಿವು ವೇಗತಡೆಗಳೇ ಸೈ. ಸೋನ್‌ಮಾರ್ಗದ ಗಡಿಯಿಂದಲೇ ಶುರುವಾಗುವ ಪರ್ವತ ಪ್ರದೇಶದಲ್ಲಿ ಬಹುದಿನಗಳ-ಬಹುಜನಗಳ ಅವಿರತ ಪ್ರಯತ್ನದಿಂದ ಕಲ್ಲು ಕಡಿಕಡಿದು ಈ ರಸ್ತೆಯನ್ನು ನಿರ್ಮಿಸಲಾಯಿತು. ಅಂತೂ ಒಂದು ರಸ್ತೆಯಾಯಿತು ನಿಜ. ಆದರೆ ತುಂಬ ಭಯಾವಹ ಮಾರ್ಗವಾಗಿ ಅದು ಪರಿಣಮಿಸಿತು.

ಕಡಿದಾದ ರಸ್ತೆಯೇ ಮೊದಲು ಶುರುವಾಗುತ್ತದೆ. ಸೋನ್‌ಮಾರ್ಗದಿಂದ ದರಾಸಕ್ಕೆ ಹೋಗುವುದೆಂದರೆ ವಾಹನ ಚಾಲಕ ಮೈಯೆಲ್ಲ ಕಣ್ಣಾಗಿಯೂ ಮತ್ತು ಆ ಎಲ್ಲ ಕಣ್ಣುಗಳನ್ನೂ ಎವೆಯಿಕ್ಕದಂತೆಯೂ ಇರಬೇಕು. ಏರುವಾಗ ಎದುರಿನಿಂದ ಯಾವುದಾದರೂ ವಾಹನ ಬಂತೆಂದರೆ ಶುರು ಪೀಕಲಾಟ. ಒಂದು ಸ್ಕೂಟರೂ ಪಕ್ಕದಲ್ಲಿ ಹಾಯ್ದು ಪಾರಾಗಿ ಹೋಗಲಾರದೆಷ್ಟು ಇಕ್ಕಟ್ಟಾದ ರಸ್ತೆ ಅದು. ಮೇಲೇರುವವನಿಗಂತೂ ಹಿಂದೆ ಸರಿಯಲಾಗದು. ಕೆಳಗಿಳಿಯುವಾತನೂ ಅಲ್ಲಿಂದ ಹಿನ್ನಡೆಯಲಾಗದು. ಆದಕ್ಕೆಂದೆ ಸೋನ್‌ಮಾರ್ಗ್ ಮತ್ತು ದರಾಸ್ ನಡುವಿನ ವಾಹನ ಸಂಚಾರ ಸುಗಮವಾಗಿರುವಂತೆ ನೋಡಿಕೊಳ್ಳಲು ಎರಡೂ ತುದಿಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ. ಒಂದು ಕಡೆಯಿಂದ ವಾಹನಗಳನ್ನು ಬಿಡುತ್ತಿದ್ದೇವೆಂಬ ಸೂಚನೆ ಇನ್ನೊಂದು ಚೆಕ್‌ಪೋಸ್ಟಿಗೆ ಹೋಗುತ್ತದೆ. ಅವರು ತಮ್ಮಲ್ಲಿಯ ವಾಹನಗಳನ್ನು ಅಲ್ಲಿಯೇ ತಡೆದು ನಿಲ್ಲಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ಇಷ್ಟಿಷ್ಟು ಗಂಟೆಗೆ ಇಂಥ ಕಡೆಯಿಂದ ವಾಹನಗಳು ಹೋಗಬೇಕು ಎಂಬ ವೇಳಾಪಟ್ಟಿಯನ್ನೂ ಮಾಡಿಕೊಳ್ಳಲಾಗಿದೆ. ಇದರೊಂದಿಗೆ ಇನ್ನೂ ಒಂದು ಎಚ್ಚರಿಕೆಯನ್ನು ಇಲ್ಲಿ ವಹಿಸಲಾಗುತ್ತದೆ. ಅದೆಂದರೆ ಒಂದು ಕಡೆಯಿಂದ ಹೊರಡುವ ವಾಹನಗಳೆಷ್ಟು, ಅವುಗಳಲ್ಲಿ ಕಾರುಗಳೆಷ್ಟು, ಲಾರಿಗಳೆಷ್ಟು, ಬಸ್ಸುಗಳೆಷ್ಟು, ಜೀಪುಗಳೆಷ್ಟು ಎಂಬುದನ್ನೂ ಅವುಗಳ

ನಂಬರನ್ನೂ ವಯರ್‌ಲೆಸ್ ಉಪಕರಣದ ಮೂಲಕ ತಿಳಿಸಲಾಗುತ್ತದೆ. ಹೀಗೆ ಬಿಡಲ್ಪಟ್ಟ ವಾಹನಗಳೆಲ್ಲ ಆ ತುದಿಯನ್ನು ತಲುಪಿ ಅಲ್ಲಿ ಅವುಗಳನ್ನು ಎಣಿಸಿ, ನಂಬರನ್ನು ನೋಡಿದ ನಂತರವೇ ಈ ಕಡೆಯಿಂದ ವಾಹನಗಳನ್ನು ಬಿಡುವ ಏರ್ಪಾಡಿದೆ. ಹೀಗೆ ಮಾಡುವುದರ ಉದ್ದೇಶವೆಂದರೆ ನಡುವೆ ಯಾವುದಾದರೂ ವಾಹನ ಅಪಘಾತಕ್ಕೀಡಾಗಿದೆಯೆ ಎಂಬುದನ್ನು ತಿಳಿದುಕೊಳ್ಳುವುದು. ಇದು ತುಂಬ ಎಡರು ತೊಡರುಗಳ ಸಂಚಾರ ಎಂದು ಈ ಮೊದಲೇ ತಿಳಿಸಿದ್ದೇನಷ್ಟೇ. ಹೀಗಾಗಿ ಒಂದು ಕಡೆಯಿಂದ ಇನ್ನೊಂದು ಕಡೆ ವಾಹನ ತಲುಪಲು ಸುಮಾರು ಮೂರು ಗಂಟೆಗಳು ಬೇಕು. ಆದ್ದರಿಂದ ದಿನದಲ್ಲಿ ಎರಡು ಸಲ ಹೆಚ್ಚೆಂದರೆ ಮೂರು ಸಲ ಮಾತ್ರ ಒಂದು ಕಡೆಯಿಂದ ಇನ್ನೊಂದು ಕಡೆ ವಾಹನಗಳು ಹೋಗಲು ಅವಕಾಶವಿದೆ.

ನಾನೀಗ ಹೇಳಹೊರಟಿರುವ ಘಟನೆ ನಡೆದು ಹತ್ತು ವರ್ಷಗಳಾಯಿತು. ಆದರೂ ಅದಕ್ಕೆ ಮುನ್ನವಾಗಲಿ ಅದರ ನಂತರವಾಗಲಿ ಇಂಥ ಬೇರೆ ಘಟನೆ ನಡೆದಿಲ್ಲ. ಜತೆಗೆ ಈ ಘಟನೆ ನಡೆದಾಗ ಎಲ್ಲರೂ ಹೌಹಾರಿ ತಮ್ಮ ಕಥೆ ಮುಗಿದೇ ಹೋಯಿತೆಂದು ಕುಳಿತಾಗ ವಾಯುಪಡೆಯ ವಿಂಗ್ ಕಮಾಂಡರ್ ಒಬ್ಬನ ಪ್ರಸಂಗಾವಧಾನ, ಧೈರ್ಯದ ಕಾರ್ಯಾಚರಣೆಗಳು ೧೯೨ ಜನರ ಪ್ರಾಣವನ್ನುಳಿಸಿದುವು.

೧೯೮೭ರ ನವೆಂಬರ್ ೧೪, ದೇಶವೆಲ್ಲ ಮಕ್ಕಳ ದಿನಾಚರಣೆಯ ಸಂಭ್ರಮದಲ್ಲಿ ಮುಳುಗಿತ್ತು. ಆದರೆ ಈ ದಾರಿಯಲ್ಲಿ ಮಾತ್ರ ೧೯೨ ಜನ ಸಾವು ಸನ್ನಿಹಿತವಾದವರಂತೆ ಗರಬಡಿದು ಕುಳಿತಿದ್ದರು.

ಅಂದು ಸೋನ್‌ಮಾರ್ಗ್ ಕಡೆಯಿಂದ ಹೊರಟ ವಾಹನಗಳು ದರಾಸ್ ತಲುಪಿದವು. ಕೊನೆಯ ವಾಹನ ಅಲ್ಲಿಗೆ ತಲಪುವ ಹೊತ್ತಿಗೆ ಸರಿಯಾಗಿ ದರಾಸ್ ಕಡೆಯಿಂದ ಸೋನ್‌ಮಾರ್ಗ್ ದೆಡೆ ವಾಹನಗಳನ್ನು ಬಿಡಲಾಯಿತು. ಮಧ್ಯಾಹ್ನವಾಗಿತ್ತು. ಅದು ಲೇಹ್‌ದಿಂದ ಶ್ರೀನಗರಕ್ಕೆ ಹೋಗುವ ವಾಹನಗಳ ಸಾಲು. ಈ ಸಾಲಿನಲ್ಲಿದ್ದವುಗಳು ಒಟ್ಟು ೧೧೦ ವಾಹನಗಳು. ಟ್ರಕ್ಕುಗಳು, ಖಾಸಗಿ ಬಸ್ಸುಗಳು, ಸೇನೆಯ ಲಾರಿಗಳು, ಗಡಿಭದ್ರತಾ ಪಡೆಯವರ ಗಾಡಿಗಳು, ಹಾಗೂ ಕೆಲವು ವಿದೇಶಿ ಯಾತ್ರಿಕರ ವಾಹನಗಳು ಈ ಸಾಲಿನಲ್ಲಿದ್ದವು. ಸಾಲಿನ ಮೊಟ್ಟ ಮೊದಲ ವಾಹನ ಒಂದು ಪೆಟ್ರೋಲ್ ಟ್ಯಾಂಕರು. ಆಗ ಅಲ್ಲಿಂದ ಹೊರಟ ವಾಹನಗಳು ಸಂಜೆಯ ಹೊತ್ತಿಗೆ ಶ್ರೀನಗರ ಮುಟ್ಟಬೇಕು.

ಆಕಾಶವು ಒಗೆದು ಒಣಗಲು ಹರಡಿದ ಶುಭ್ರ ನೀಲಿ ಬಟ್ಟೆಯ ಹಾಗಿದ್ದ ಸಮಯ ಅದು. ನವೆಂಬರ್ ತಿಂಗಳಲ್ಲಿ ಅಲ್ಲಿ ಹೆಚ್ಚು ಚಳಿಯಿರುವುದಿಲ್ಲ. ದರಾಸ್‌ನಿಂದ ರವಾನಿಸಲ್ಪಟ್ಟ ವಾಹನಗಳ ಸಾಲು ಅತ್ಯಪಾಯಕಾರಿಯೆನಿಸಿದ 'ಕ್ಯಾಪ್ಟನ್ ಮೂರ್ ಶಿಖರ'ದ ರಸ್ತೆಗೆ ಬಂತು. ಎಲ್ಲವೂ ಒಂದಷ್ಟು ಸಾಗಿ, ಮತ್ತೊಂದಿಷ್ಟು ನಿಂತು ಮುಂದೆ ಹೊರಡಬೇಕಾಗಿತ್ತು. ಎಷ್ಟೇ ಸಾವಕಾಶವಾಗಿ ನಡೆಸಿದರೂ ರಸ್ತೆಯ ತಿಳುವಾದ ಧೂಳು ಎದ್ದು ಅಲ್ಲೆಲ್ಲ ಆವರಿಸುವುದು ತಪ್ಪಿರಲಿಲ್ಲ. ಇಂಥದರಲ್ಲಿ ಇದ್ದಕ್ಕಿದ್ದ ಹಾಗೆಯೇ ತೀರ ಮುಂದಿದ್ದ ಆ ಪೆಟ್ರೋಲ್ ಟ್ಯಾಂಕರು ನಿಂತುಬಿಟ್ಟಿತು. ಇಂಜಿನ್ನು ಕೆಲಸ ಮಾಡುತ್ತಲಿದ್ದರೂ ಗಾಲಿಗಳು ತಿರುಗುತ್ತಲಿದ್ದರೂ ಅದಕ್ಕೆ ಮುಂದೆ ಹೋಗುವುದು ಅಸಾಧ್ಯವಾಗಿತ್ತು. ಅದರ ಡ್ರೈವರ್ ಮತ್ತು ಕ್ಲೀನರ್ ಗಾಡಿಯನ್ನು ಮುಂದೆ ನಡೆಸುವ ಎಲ್ಲ ಉಪಾಯಗಳನ್ನೂ ಪ್ರಯತ್ನಿಸಿ ನೋಡಿದರು. ಊಹುಂ. ಗಾಡಿ ಮಿಸುಗಲಿಲ್ಲ.

ಡ್ರೈವರ್ ಅನಿವಾರ್ಯವಾಗಿ ಕೆಳಗಿಳಿಯಲೇಬೇಕಾಯಿತು. ಇಂಜಿನ್ನಿನಲ್ಲಿ ಏನಾದರೂ ತೊಂದರೆಯಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ಇದ್ದರೆ ದುರಸ್ತಿಮಾಡಿಕೊಳ್ಳಲೇಬೇಕೆಂದು ಮೊದಲು ಬಾನೆಟ್ಟನ್ನು ತೆರೆದ. ಇಂಜಿನ್ನು ಸರಿಯಾಗೇ ಇತ್ತು. ಈಗಾತ ಟ್ಯಾಂಕರಿನ ಹಿಂಭಾಗದ ನಿರೀಕ್ಷಣೆಗೆ ತೊಡಗಿದ.

ಬಾಗಿದ ಆತನ ಎದೆ ಧಸಕ್ಕೆಂದಿತು. ಟ್ಯಾಂಕರಿನ ಆ್ಯಕ್ಸೆಲ್ಲು ಮುರಿದು ನೇತಾಡತೊಡಗಿತ್ತು!

ಈ ಆ್ಯಕ್ಸೆಲ್ ಯಾವುದೇ ವಾಹನದ ಮಹತ್ವದ ಅಂಗ. ವಾಹನವನ್ನು ಮುನ್ನಡೆಸುವುದು ಇದೇ. ಇತರ ಬಿಡಿಭಾಗಗಳಂತೆ ಇದನ್ನು ಸುಲಭವಾಗಿ ಬದಲಿಸಲಾಗುವುದಿಲ್ಲ. ಈ ಅಂಗವೇ ಮುರಿದು ಹೋಯಿತೆಂದರೆ ಟ್ಯಾಂಕರು ನಿಂತಲ್ಲೇ ನಿಲ್ಲುವುದಂತೂ ಸರಿಯೆ. ಅದರ ಹಿಂದೆ ಉಳಿದ ೧೦೯ ವಾಹನಗಳೂ ವಿನಾಕಾರಣ ಸ್ಥಗಿತಗೊಳ್ಳಬೇಕಲ್ಲ! ಬೇರೆಡೆಯಾದರೆ ಟ್ಯಾಂಕರನ್ನು ಉಳಿದ ಜನರ ಸಹಾಯದಿಂದ ದೂಡಿ ಒಂದು ಬದಿಗಾದರೂ ನಿಲ್ಲಿಸಿ ಇತರ ವಾಹನಗಳು ಸರಿದು ಹೋಗಲು ಅನುವು ಮಾಡಿಕೊಬಹುದಾಗಿತ್ತು. ಇಲ್ಲಿ ಅದೂ ಸಾಧ್ಯವಿಲ್ಲವಲ್ಲ!

ಹೋಗಲಿ, ಸಮೀಪ ಎಲ್ಲಿಯಾದರೂ ವಾಹನಗಳ ಬಿಡಿಭಾಗಗಳು ದೊರೆಯುತ್ತವೆ ಎನ್ನುವ ಹಾಗೂ ಇಲ್ಲ. ಶ್ರೀನಗರ ಇಲ್ಲವೆ ಸೋನ್‌ಮಾರ್ಗಕ್ಕೇ ಹೋಗಬೇಕು. ಅದೂ ನಡೆದುಕೊಂಡು ಹೋಗಿ ನಡೆದುಕೊಂಡೇ ವಾಪಸಾಗಬೇಕು. ಬೇರಾವ ನೆರವೂ ಬೇಗನೇ ದೊರೆಯುವ ಆಶೆ ಮತ್ತು ಸಂಭವವೂ ಇಲ್ಲ.

ಆ ಎಲ್ಲ ನೂರಹತ್ತು ವಾಹನಗಳು ಮತ್ತು ಅವುಗಳಲ್ಲಿದ್ದ ೧೯೨ ಜನ ೧೨,೫೦೦ ಅಡಿ ಎತ್ತರದಲ್ಲಿ ಅನಿವಾರ್ಯವಾಗಿ ಬಂಧನಕ್ಕೀಡಾಗಬೇಕಾದ ದುಃಸ್ಥಿತಿಯಿಂದಾಗಿ ಕಂಗೆಟ್ಟರು. ಆ ರಾತ್ರಿಯನ್ನವರು ಅಲ್ಲಿಯೇ ಕಳೆಯಬೇಕಾದ ಪರಿಸ್ಥಿತಿ. ಒಂದಷ್ಟು ಜನ ವಾಹನ ಚಾಲಕರು, ಟ್ಯಾಂಕರಿನವನನ್ನು ಬೈದುಕೊಂಡರು. ಇನ್ನು ಕೆಲ ಚಾಲಕರು "ನಿಮಗೇ ಅಂಥ ಪರಿಸ್ಥಿತಿ ಒದಗಿದ್ದರೇನು ಮಾಡುತ್ತಿದ್ದಿರಿ?'' ಎಂದು ಬೈದವರ ಬಾಯಿ ಮುಚ್ಚಿಸಿದರು.

ಅಂತೂ ಒಂದು ಅಭಿಪ್ರಾಯಕ್ಕೆ ಅವರೆಲ್ಲ ಬರುವಂತಾಯಿತು. ದರಾಸ್ ಕಡೆಯಿಂದ ಹೊರಟ ವಾಹನಗಳ ಸಾಲು ತಲಪಬೇಕಾದ ಸಮಯವಾಗಿ ಹೋದರೂ ಇನ್ನೂ ತಲಪಿಲ್ಲವೆಂಬ ವಿದ್ಯಮಾನ ಖಂಡಿತವಾಗಿ ಸೋನ್ ಮಾರ್ಗ್ ಚೆಕ್‌ಪೋಸ್ಟಿನವರನ್ನು ಕಳವಳಕ್ಕೀಡುಮಾಡುತ್ತದೆ. ಹಾಗಾಗಿ ಅಲ್ಲಿಂದೇನಾದರೂ ನೆರವು ಬಂದೇ ಬರುತ್ತದೆ ಎಂಬ ಆಶಾಭಾವದ ಅಭಿಪ್ರಾಯ ಅದು.

ಅಷ್ಟೆತ್ತರದಲ್ಲಿ ಆ ಕಾಲದಲ್ಲಿ ಹಗಲು ಹೊತ್ತು ಹೆಚ್ಚು ಚಳಿ ಇರುವುದಿಲ್ಲವೆಂದರೂ ರಾತ್ರಿ ಹೇಗೋ ಎಂದು ಹೇಳಲಾಗುವುದಿಲ್ಲ. ಹೇಗೂ ಬೇಗ ತಲಪುತ್ತೇವಲ್ಲ ಎಂಬ ಭಾವನೆಯಿಂದ ದಪ್ಪದ ಉಣ್ಣೆ ಬಟ್ಟೆಗಳನ್ನು ಯಾರೂ ತಂದಿರಲಿಲ್ಲ. ಕೆಲವು ಲಾರಿಗಳ ಡ್ರೈವರು-ಕ್ಲೀನರುಗಳಂತೂ ಕೇವಲ ಲುಂಗಿ-ಜುಬ್ಬಗಳನ್ನು ತೊಟ್ಟಿದ್ದರು.

ಸೂರ್ಯನಿಗೇಕೆ. ಇವರೆಲ್ಲರ ಚಿಂತೆ? ನನ್ನ ಡ್ಯೂಟಿ ಮುಗಿಯಿತು ಎಂದು ಎದ್ದು ಹೋಗುವ ನೌಕರನಂತೆ ಆತ ಮೆಲ್ಲಗೆ ಕಾಲುಕಿತ್ತ. ಬೇಗ ಕತ್ತಲೆಯಾಗುತ್ತಿದ್ದ ಆ ದಿನಗಳಲ್ಲಿ ರಾತ್ರಿ ತೀವ್ರವೇ ಆವರಿಸಿಬಿಡುತ್ತಿತ್ತು. ಆ ಪ್ರದೇಶವೆಲ್ಲ ಕರಿಬಟ್ಟೆ ಹೊದ್ದು ಕುಳಿತಿತು. ನಿರಭ್ರ ಆಕಾಶದಲ್ಲಿ ನಕ್ಷತ್ರಗಳು ನಗುತ್ತಿದ್ದವು. ವಾಹನಗಳಲ್ಲಿದ್ದವರು ಲಭ್ಯವಿದ್ದಷ್ಟೇ ದೀಪ ಹಾಕಿಕೊಂಡು ತಮ್ಮ ಅನುಕೂಲಾನುಸಾರ ರಾತ್ರಿ ಕಳೆಯುವ ಏರ್ಪಾಡು ಮಾಡಿಕೊಳ್ಳತೊಡಗಿದರು.

ರಾತ್ರಿ ಹತ್ತರ ತನಕದ ನಾಲ್ಕುಗಂಟೆಗಳು ಅವರ ಪಾಲಿಗೆ ನಾಲ್ಕು ಯುಗಗಳಂತೆ ಭಾಸವಾದುವು. ಇನ್ನು ಹೇಗಪ್ಪಾ ಆ ಉಳಿದ ಏಳೆಂಟು ಗಂಟೆಗಳನ್ನು ಕಳೆಯುವುದು ಎಂಬ ಚಿಂತೆ. ಇದಕ್ಕೆ ಇನ್ನಷ್ಟು ಖಾರ ಬೆರೆಸಿದಂತೆ ದಿಢೀರನೆ ವಾತಾವರಣದಲ್ಲಿ ಏರುಪೇರುಕಂಡಿತು. ಬಲವಾದ ಗಾಳಿ, ಜತೆಗೆ ವಿಪರೀತ ಚಳಿ. ಇಷ್ಟು ಸಾಲದೆಂಬಂತೆ ಹಿಮಪಾತ ಶುರುವಾಯಿತು. ಅದರ ಹೊಡೆತವೂ ಸಾಕಷ್ಟು ಬಿರುಸಾಗಿಯೇ ಇತ್ತು.

ಸಿಕ್ಕಿಬಿದ್ದ ಜನ ತತ್ತರಿಸದೇ ಇನ್ನೇನು?

ಅತ್ತ ಸೋನ್‌ಮಾರ್ಗ್ ಚೆಕ್‌ಪೋಸ್ಟ್‌ನಲ್ಲಿಯ ಜನಕ್ಕೆ ರಾತ್ರಿ ಹನ್ನೊಂದಾದರೂ ದರಾಸ್‌ನಿಂದ ಹೊರಟ ವಾಹನಗಳು ತಲುಪಲಿಲ್ಲವೆಂಬ ಆತಂಕ

ಶುರುವಾಯಿತು. ಇನ್ನಷ್ಟು ಕಾದು ನೋಡಿದರು. ಊಹುಂ. ಹೇಗೆ ಬಂದಾವು ಆ ವಾಹನಗಳು? ಏನೋ ದುರ್ಘಟನೆ ಸಂಭವಿಸಿದೆ ಎಂಬ ಅನುಮಾನ ಕಾಡತೊಡಗಿತು. ಕೂಡಲೇ ಶ್ರೀನಗರಕ್ಕೆ ಸಂದೇಶ ಕಳುಹಿಸಿ ಸ್ಥಿತಿಯನ್ನು ವಿವರಿಸಿ ನೆರವು ನೀಡುವಂತೆ ಕೋರಿಕೊಂಡರು.

ಸಿಕ್ಕಿ ಬಿದ್ದವರು ಗಮನಾರ್ಹ ಸಂಖ್ಯೆಯಲ್ಲಿದ್ದುದರಿಂದ ರಾಜ್ಯ ಸರಕಾರ ಚುರುಕಿನ ಕಾರ್ಯಾಚರಣೆಗೆ ಮುಂದಾಯಿತು. ತುರ್ತುಸಭೆ, ವಿಚಾರ-ವಿನಿಮಯಗಳ ನಂತರ ವಾಯುಸೇನೆ ಮಾತ್ರ ಇದರಲ್ಲಿ ಏನಾರೂ ಮಾಡಲು ಸಾಧ್ಯ ಎಂಬ ಅಭಿಪ್ರಾಯಕ್ಕೆ ಬರಲಾಯಿತು. ಅಲ್ಲಿಂದ ಹೆಲಿಕಾಪ್ಟರುಗಳ ಸಹಾಯ ಪಡೆಯುವ ಯೋಚನೆಯೇ ಸರಿಯಾದುದೆಂದು ಉಚ್ಚಾಧಿಕಾರಿಗಳ ಒಮ್ಮತದ ನಿರ್ಣಯವಾಯಿತು.

ಶ್ರೀನಗರದಿಂದ ಹಿಂಡನ್ ಎಂಬಲ್ಲಿನ ಹೆಲಿಕಾಪ್ಟರ್ ಬೇಸ್‌ಗೆ ತುರ್ತು ಸಂದೇಶ ಹೋಯಿತು. ಬೇಸ್‌ನ ಅಧಿಕಾರಿಗಳು ಕೂಡಲೇ ಕಾರ್ಯಪ್ರವೃತ್ತರಾದರು. ಜೋಜಿಲಾದಂಥ ಅಪಾಯಕಾರಿ ಜಾಗದಲ್ಲಿ ಹಗುರವಾದ ಹೆಲಿಕಾಪ್ಟರುಗಳು ಮಾತ್ರ ಅಡೆತಡೆಯಿಲ್ಲದೆ ಕಾರ್ಯನಿರ್ವಹಿಸಬಹುದು ಎಂದೆಲ್ಲ ಅವರು ನಿರ್ಣಯಿಸಿದರು. ಇದಕ್ಕಾಗಿ ಎಂ.ಐಯ್. ೧೭ ಹೆಲಿಕಾಪ್ಟರು ಸಾಕು ಎಂದರು ಅಧಿಕಾರಿಗಳು.

ಎಂ.ಐಯ್.೧೭ ಆದೇ ಹೊಸದಾಗಿ ಭಾರತೀಯ ವಾಯುಸೇನೆಯಲ್ಲಿ ಸಮ್ಮಿಳಿತಗೊಂಡ ಹೆಲಿಕಾಪ್ಟರು. ರಶಿಯದಲ್ಲಿ ನಿರ್ಮಿಸಲ್ಪಟ್ಟ ಅದು ತನ್ನ ಹಗುರತ್ವ, ಸಣ್ಣ ಆಕಾರ ಮತ್ತು ವಿನ್ಯಾಸಗಳಿಂದಾಗಿ ಜೋಜಿಲಾದಂಥ ಪರ್ವತಪ್ರದೇಶದಲ್ಲಿ ಕಾರ್ಯಾಚರಣೆ ನಡೆಸಬಲ್ಲಂಥದು. ವಿಂಗ್ ಕಮಾಂಡರ್ ಮಹೇಶ್ವರ ದತ್ ಎಂ.ಐಯ್. ೧೭ ಘಟಕದ ಮೊದಲ ಸ್ಕ್ವಾಡ್ರನ್ ಲೀಡರ್. ಅಲ್ಲದೆ ಉತ್ತರ ವಿಭಾಗದ ೨೩೦ ಹೆಲಿಕಾಪ್ಟರ್ ವಿಂಗಿನ ಕಮಾಂಡಿಂಗ್ ಆಫೀಸರರೂ ಅವರೇ. ಪರ್ವತ ಪ್ರದೇಶಗಳಲ್ಲಿ ಅವರಂತೆ ಉಡ್ಡಯನ ನಡೆಸಲು ಬೇರಾರಿಗೂ ಸಾಧ್ಯವಿಲ್ಲವೆಂದು ವಾಯುಸೇನೆಯಲ್ಲಿ ಜನಜನಿತವಾಗಿತ್ತು. ಆದ್ದರಿಂದ ಊಧಮ್‌ಪುರ ರೇಂಜಿನ ಏರ್‌ವೈಸ್ ಮಾರ್ಶಲ್‌ರು ಜೋಜಿಲಾ ಘಟ್ಟ ಪ್ರದೇಶದಲ್ಲಿ ಸಿಕ್ಕಿಬಿದ್ದವರನ್ನು ಪಾರು ಮಾಡಲು ಮಹೇಶ್ವರ ದತ್‌ರನ್ನೇ ಆಯ್ಕೆ ಮಾಡಿದರು.

ದತ್ ತತ್‌ಕ್ಷಣಕ್ಕೇ ಸಿದ್ಧರಾದರು. ರಾತ್ರಿಯೇ ಎಂ.ಐಯ್. ೧೭ನ್ನು ಶ್ರೀನಗರಕ್ಕೊಯ್ದರು. ಪಠಾನ್‌ಕೋಟ್‌ದಲ್ಲಿ ಒಂದಷ್ಟು ಕಾಲ ಇಳಿದ ಹೆಲಿಕಾಪ್ಟರು ಇಂಧನ ತುಂಬಿಸಿಕೊಂಡಿತು. ಅಲ್ಲಿಂದ ಊಧಮ್‌ಪುರಕ್ಕೆ ಹಾರಿತು. ಅಲ್ಲಿ ಮಹೇಶ್ವರ ದತ್ ಘಟನಾಸ್ಥಳದ ನಕ್ಷೆ ಬಿಡಿಸಿದರು. ಕೂಲಂಕಷವಾಗಿ ಅದನ್ನು ಅರಿತುಕೊಳ್ಳುವ ಪ್ರಯತ್ನ ಅವರದು. ಜತೆಗಿದ್ದ ಉಚ್ಚಾಧಿಕಾರಿಗಳೂ ಇವರಿಗೆ ಸಲಹೆಗಳನ್ನಿತ್ತರು. ಅಂತೂ ಒಂದು ಯೋಜನೆ ಸಿದ್ಧವಾಯಿತು.

ಸಿಕ್ಕಿಬಿದ್ದವರಿಗೆ ಮೊಟ್ಟಮೊದಲು ಕಂಬಳಿ, ಉಣ್ಣೆಬಟ್ಟೆ ಹಾಗೂ ಆಹಾರೌಷಧಿ ಸಾಮಗ್ರಿಗಳನ್ನು ನೀಡಬೇಕೆಂದು ಒಮ್ಮತದಿಂದ ನಿರ್ಣಯಿಸಿದರು ಅವರೆಲ್ಲ. ಹಿಮಪಾತ ನಿಲ್ಲುವವರೆಗಾದರೂ ಆ ಜನಕ್ಕೆ ಆಸರೆ ಬೇಕಲ್ಲ. ಇಂಥ ನೆರವು ದೊರೆಯುತ್ತಿದೆ ಎಂಬುದು ಗೊತ್ತಾದರೆ ಅಷ್ಟೇ ಅವರಿಗೆ ಸಮಾಧಾನ. ತಮ್ಮನ್ನು ಪಾರುಗಾಣಿಸುವ ಪ್ರಯತ್ನ ನಡೆದಿದೆ ಎಂಬುದೇ ಅವರಲ್ಲಿ ಒಂದಷ್ಟು ಭರವಸೆಯನ್ನು ಮೂಡಿಸುವಂಥ ವಿಚಾರ.

ನವೆಂಬರ್ ೧೫ರ ಬೆಳಗು. ಸೂರ್ಯೋದಯದ ಕೆಂಪಿನಲ್ಲಿ ಎಂ.ಐಯ್. ೧೭ ಹೊಸಕಳೆ ತುಂಬಿಕೊಂಡು ಉಡ್ಡಯಿಸಲಾರಂಭಿಸಿತು. ಯೋಚಿಸಿದ್ದಂತೆ ಎಲ್ಲ ಸಾಮಗ್ರಿಗಳು ಅದರಲ್ಲಿದ್ದವು. ಮಹೇಶ್ವರ ದತ್ ಹಾಡಿಕೊಂಡೇ ಹೆಲಿಕಾಪ್ಟರು ಹಾರಿಸುತ್ತಲಿದ್ದರು.

ಜೋಜಿಲಾ ಘಾಟ್ ಕಡಿದಾದ ಶಿಖರವಾದ್ದರಿಂದ ಅಲ್ಲಿ ಅಷ್ಟಾಗಿ ಹಿಮಶೇಖರಣೆಯಾಗುವುದಿಲ್ಲ. ಆ ರಾತ್ರಿ ಹಾಗೇ ಆಗಿತ್ತು. ಅದೆಲ್ಲ ಸುರಿದು ಸುರಿದು ರಸ್ತೆಗೆ ಬಿದ್ದಿತ್ತು. ವಾಹನಗಳಿಗೆ ಅದರಿಂ

ದಾದ ಆಘಾತ ಅಷ್ಟಿಷ್ಟಲ್ಲ. ಕೆಲವು ವಾಹನಗಳು ಆ ಹೊಡೆತ, ರಭಸಕ್ಕೆ ತಮ್ಮ ದಿಕ್ಕು ಬದಲಿಸಿಕೊಂಡಿದ್ದರೆ ಇನ್ನು ಕೆಲವು ವಾಹನಗಳಂತೂ ಸಾಕಷ್ಟು ದೂರಕ್ಕೆ ಒತ್ತಲ್ಪಟ್ಟಿರುತ್ತಿದ್ದವು.

ಏಳು-ಏಳೂವರೆಯಾಗಿರಬೇಕು. ಆಗಸದಲ್ಲಿ ಬಾಲ ಸೂರ್ಯನ ಕಿರಣಗಳನ್ನು ಪ್ರತಿಬಿಂಬಿಸುತ್ತ ತಿರುಗುತ್ತಿರುವ ವಿದ್ಯುತ್‌ಪಂಖ ಕಂಡಂತಾಯಿತು. ಅದರೊಳಗಿಂದ ಕೆಳಗೆ ನೋಡಿದರೆ ಮಹೇಶ್ವರ ದತ್‌ಗೆ ಹಿಮದ ಚಾದರು ಹೊದ್ದು ಮಲಗಿದ ಜೋಜಿಲಾ ಘಾಟ್ ಕಂಡಿತು. ಕಣ್ಣು ಕುಕ್ಕಿಸುವ ಶುಭ್ರ ಹಿಮ. ಇಂಥದರಲ್ಲಿ ಆ ದಾರಿಯನ್ನು ಹೇಗೆ ಗುರುತಿಸುವುದು? ಆ ವಾಹನಗಳ ಸಾಲು ಎಲ್ಲಿದೆಯೆಂದು ಹೇಗೆ ಪತ್ತೆ ಮಾಡುವುದು? ಅಲ್ಲಿ ಸಿಕ್ಕಿಬಿದ್ದ ಜನರನ್ನು ಪಾರು ಮಾಡುವ ಕೆಲಸ ಅಷ್ಟು ಸುಲಭದ್ದಲ್ಲ ಎಂಬ ಸತ್ಯ ಅವರ ಅರಿವಿಗೆ ಬಂತು. ವಾಹನಗಳು ಯಾವ ಸ್ಥಿತಿಯಲ್ಲಿವೆ, ಅವುಗಳೊಳಗಿನ ಜನರ ಪಾಡೇನು ಎಂಬುದು ಗೊತ್ತಾದರೆ ತಾನೆ?

ಸೂರ್ಯ ಇನ್ನಷ್ಟು ಮೇಲೆ ಬಂದು ಚುರುಕು ಮುಟ್ಟಿಸತೊಡಗಿದರೆ ಹಿಮ ಕರಗೀತು, ಆಗ ವಾಹನಗಳು ಸ್ಪಷ್ಟವಾಗಿ ಕಂಡಾವು ಎಂದುಕೊಂಡರು ಮಹೇಶ್ವರ ದತ್.

ಆದರೆ ಅವರ ನಿರೀಕ್ಷೆ ಸುಳ್ಳಾಯಿತು. ಮತ್ತೆ ಹಿಮಪಾತ ಶುರುವಾಯಿತು. ಅದೂ ಮತ್ತಷ್ಟು ಜೋರಾಗಿ. ಜೋಜಿಲಾ ಘಾಟ್ ಪ್ರದೇಶವೆಲ್ಲ ಇನ್ನಷ್ಟು ದಪ್ಪದ ಚದ್ದರು ಹೊದ್ದು ಕೂತಂತೆನಿಸತೊಡಗಿತು ದತ್‌ಗೆ.

"ನಾವು ಇಡೀ ಪ್ರದೇಶವನ್ನು ಸುತ್ತು ಹಾಕಿ ನಿರೀಕ್ಷಿಸೋಣ," ಜತೆಗಾರ ಪೈಲಟ್ ಬಾಬು ಸೂಚಿಸಿದರು.

"ಹೌದು. ಅದರಲ್ಲೂ ವಿಶೇಷವಾಗಿ ವಾಹನಗಳು ಇಂಥಲ್ಲೇ ಬಹುಶಃ ಸಿಕ್ಕಿ ಬಿದ್ದಿದ್ದಾವೆಂದು ಸಂದೇಹ ಬರುವ ಜಾಗದ ಮೇಲೆ ಹೆಚ್ಚು ನಿಗಾ ಇಡೋಣ," ಮಹೇಶ್ವರ ದತ್ ಸಮ್ಮತಿಯೊಂದಿಗೆ ತಮ್ಮದೂ ಒಂದು ಸೂಚನೆ ಇತ್ತರು.

ಹೆಲಿಕಾಪ್ಟರು ಬೆಟ್ಟ ಸುತ್ತುವ ಕೆಲಸ ನಡೆಸಿತು. ಬಾಬೂರ ದೃಷ್ಟಿ ಆ ರಸ್ತೆ ಇರಬಹುದಾದೆಡೆಯೇ ನೆಟ್ಟಿತ್ತು.

ಅವರ ಸುತ್ತಾಟ ವ್ಯರ್ಥವಾಗಲಿಲ್ಲ.

ಹೆಲಿಕಾಪ್ಟರಿನ ಸದ್ದು ಕೇಳಿದ ಕೆಲವರು ತಮ್ಮ ವಾಹನಗಳಿಂದ, ಅಂಥ ಹಿಮಪಾತವನ್ನೂ ಲೆಕ್ಕಿಸದೇ, ಹೊರಗೆ ಬಂದರು. ಆದರೆ ಹಾಗೆ ಬಂದವರೆಲ್ಲ ಹೊರಗೆ ಹೆಜ್ಜೆಯಿಡುತ್ತಲೂ ಭುಜದ ತನಕ ಹಿಮದಲ್ಲಿ ಹೂತು ಹೋಗಿಬಿಡುತ್ತಿದ್ದರು. ಆದರೂ ತಲೆಯೆತ್ತಿ ಆಗಸದೆಡೆಯೇ ನೋಡುತ್ತಿದ್ದ ಅವರ ಮುಖಗಳಲ್ಲಿ 'ಅಂತರಿಕ್ಷದಿಂದ ಆಪದ್ಬಾಂಧವ ಅವತರಿಸಿಬಂದ' ಸಂಭ್ರಮ ಎದ್ದು ಕಾಣುತ್ತಿತ್ತು.

ಮಹೇಶ್ವರ ದತ್ ಮತ್ತು ಬಾಬೂ ಅವರಿಗೆ ಈ ಕೆಳಗಿನವರ ಕಷ್ಟದ ಅರಿವಾಯಿತು. ಅವರನ್ನು ಕಷ್ಟದಿಂದ ಪಾರು ಮಾಡುವ ಗಳಿಗೆ ಸಮೀಪಿಸಿತಲ್ಲ ಎಂಬುದು ಆ ಇಬ್ಬರಿಗೂ ತತ್‌ಕ್ಷಣಕ್ಕೆ ಅನ್ನಿಸದೇ ಇರಲಿಲ್ಲ.

ತಾವು ತುಂಬಿತಂದಿದ್ದ ಸಾಮಗ್ರಿಗಳನ್ನೆಲ್ಲ ಆ ಜನರಿರುವೆಡೆ ಸುರಿದ ಆ ಇಬ್ಬರೂ ಕೂಡಲೇ ಕಾರ್ಗಿಲ್ ಕಡೆ ಹೆಲಿಕಾಪ್ಟರನ್ನು ಓಡಿಸಿದರು.

ಕಾರ್ಗಿಲ್‌ನಲ್ಲಿಳಿದ ಮಹೇಶ್ವರ ದತ್ ತಮ್ಮ ಸಹೋದ್ಯೋಗಿಗಳು ಮತ್ತು ಉಚ್ಚಾಧಿಕಾರಿಗಳೊಂದಿಗೆ ಸ್ಥಿತಿಗತಿಯ ಕುರಿತು ವಿಚಾರ ವಿನಿಮಯ ನಡೆಸಿದರು. ಜೋಜಿಲಾದಲ್ಲಿ ಸಿಕ್ಕುಬಿದ್ದವರ ಪರಿಸ್ಥಿತಿ ಅದೆಷ್ಟು ಹೀನಾಯವಾಗಿತ್ತೆಂದರೆ ಬಟ್ಟೆ-ಬರೆ, ಔಷಧಿಗಳು ಮತ್ತು ಖಾದ್ಯ ಪದಾರ್ಥಗಳಿಂದಷ್ಟೇ ಅವರನ್ನು ಬಹುಕಾಲ ಜೀವದಿಂದಿರಿಸಲು ಆಗುತ್ತಿರಲಿಲ್ಲ. ತತ್‌ಕ್ಷಣವೇ ಅವರನ್ನೆಲ್ಲ ಅಲ್ಲಿಂದ ಪಾರು ಮಾಡದಿದ್ದರೆ ಆ ಹಿಮಪಾತದಿಂದಾಗಿ ಅವರು ಜೀವಂತ ಸಮಾಧಿ ಹೊಂದುವುದು ಮಹೇಶ್ವರ ದತ್‌ರಿಗೆ ಖಚಿತವಾಗಿಹೋಗಿತ್ತು.

"ಬಾಬು, ನೀವೇ ಹೇಳಿ. ಅವರೆಲ್ಲ ಆಗ ಭುಜಮಟ್ಟದ ಹಿಮದಲ್ಲಿ ಹೂತು ಹೋಗಿದ್ದರಲ್ಲವೆ?" ಮಹೇಶ್ವರ ದತ್ ಅಲ್ಲಿನ ಸ್ಥಿತಿಯನ್ನು

ಕಣ್ಣೆದುರು ನಿಲ್ಲಿಸುವಂಥ ಒಂದೇ ಒಂದು ಪ್ರಶ್ನೆ ಯೆಸೆದು ಜತೆಗಿದ್ದವರ ಗಮನ ಸೆಳೆದರು.


ಇದರೊಂದಿಗೆ ಇನ್ನೊಂದು ಎದೆಗೆಡಿಸುವ ಸುದ್ದಿ ಹವಾಮಾನ ನಿರೀಕ್ಷಕರ ಕಚೇರಿಯಿಂದ ಬಂತು: "ಮುಂದಿನ ೭೨ ಗಂಟೆಗಳವರೆಗೂ ಹಿಮಪಾತ ಹಾಗೇ ಮುಂದುವರಿಯಬಹುದು.".

"ನೀವೆಲ್ಲ ಒಂದು ನಿರ್ಧಾರಕ್ಕೆ ಬನ್ನಿ. ನಾನು ಮತ್ತೆ ಅಲ್ಲಿಗೆ ಪರಿಹಾರ ಸಾಮಗ್ರಿಗಳನ್ನು ಸರಬರಾಜು ಮಾಡಿ ಬರುತ್ತೇನೆ," ಎಂದವರೇ ಮಹೇಶ್ವರ ದತ್ ಅಲ್ಲಿಂದೆದ್ದರು.

ಜೋಜಿಲಾದೆಡೆ ಸಾಗುತ್ತಿದ್ದ ವಿಂಗ್ ಕಮಾಂಡರ್ ದತ್‌ರ ತಲೆಯಲ್ಲಿ ಒಂದೇ ವಿಚಾರ ಸುತ್ತುತ್ತಿತ್ತು; ಹೇಗಾದರೂ ಮಾಡಿ ವಾಹನಗಳು ಇರುವೆಡೆಯೇ ಹೆಲಿಕಾಪ್ಟರನ್ನು ಇಳಿಸಿ ಆ ಜನವನ್ನು ಅಲ್ಲಿಂದ ಬೇರೆಡೆ ಸಾಗಿಸುವಂತಾದರೆ.... ಅಲ್ಲಿ ಬಂದವರೆ ಮತ್ತೆರಡು ಸಲ ಪರಿಹಾರ ಸಾಮಗ್ರಿಗಳನ್ನು ಇಳಿಸಿ ಅವರು ಕಾರ್ಗಿಲ್‌ಗೆ ಮರಳಿದರು. ಜನರಲ್ ಹಾಂಡೂ ಮಾತ್ರ ಈ ವರೆಗೂ ಈ ವಿಚಾರವಾಗಿ ಚರ್ಚಿಸಿರಲಿಲ್ಲ. ನೇರ ಅವರನ್ನು ಕಂಡ ದತ್ ಆ ವಾಹನಗಳಿರುವಲ್ಲಿಯೇ ಹೆಲಿಕಾಪ್ಟರ್ ಇಳಿಸುವ ತಮ್ಮ ವಿಚಾರವನ್ನು ಬಿಚ್ಚಿಟ್ಟರು. ಜನರಲ್ ಹಾಂಡೂ ಸಮ್ಮತಿ ಸೂಚಿಸಿದರೂ "ಇದು ತುಂಬ ಯೋಚಿಸಿ ಮಾಡಬೇಕಾದ ಕೆಲಸ. ಯಾಕೆಂದರೆ ನನ್ನ ದೃಷ್ಟಿಯಲ್ಲಿ ಈ ಯೋಜನೆಯ ಸಫಲತೆ ಸಂದಿಗ್ಧವೇ," ಎಂದು ಊಧಮ್‌ಪುರ ಬೇಸ್‌ನವರೊಂದಿಗೆ ಸ್ವಲ್ಪ ಮಾತುಕತೆ ನಡೆಸಲು ಹೇಳಿದರು. ದತ್ ಅವರಿಂದ ಬೀಳ್ಕೊಂಡರು.

ಊಧಮ್‌ಪುರ ಬೇಸ್ ತಲಪಿದ ಮಹೇಶ್ವರ ದತ್ ಅಲ್ಲಿಯ ಏರ್‌ವೈಸ್ ಮಾರ್ಶಲ್‌ರನ್ನು ಸಂಪರ್ಕಿಸಿದರು. ಪರಿಸ್ಥಿತಿಯನ್ನೆಲ್ಲ ವಿವರಿಸಿ, "ಆ ಜನರನ್ನು ಆದಷ್ಟು ಬೇಗ ಬದುಕಿಸಲೇಬೇಕು. ಅದು ಜೋಜಿಲಾ ಘಾಟ್‌ನ ಆ ಘಟನಾಸ್ಥಳದಲ್ಲಿ ಹೆಲಿಕಾಪ್ಟರನ್ನು ಇಳಿಸಿದಾಗ ಮಾತ್ರ ಸಾಧ್ಯ. ಜೋಜಿಲಾದಲ್ಲಿ ಹೆಲಿಕಾಪ್ಟರನ್ನು ಇಳಿಸುವುದು ಹುಡುಗಾಟಿಕೆಯ ವಿಷಯವಲ್ಲ ಎಂಬುದು ನನಗೆ ಗೊತ್ತು. ಆದರೂ ನನಗೆ ಸರಿಕಂಡರೆ ಅಲ್ಲಿ ಇಳಿಯಲು ನನಗೆ ತಾವು ಅನುಮತಿ ನೀಡಬೇಕು," ಎಂಬುದಾಗಿ ವಿನಂತಿಸಿಕೊಂಡರು.

ಸಂಕಟಮಯ ಪರಿಸ್ಥಿತಿಗಳಲ್ಲಿ ಸ್ವಯಂನಿರ್ಣಯ ಕೈಗೊಳ್ಳುವ ಅಧಿಕಾರವನ್ನು ಪೈಲಟುಗಳಿಗೆ ನೀಡುವುದು ಭಾರತೀಯ ವಾಯುಸೇನೆಯ ವಿಶೇಷತೆ. ವಿಂಗ್ ಕಮಾಂಡರ್ ಮಹೇಶ್ವರ ದತ್‌ರಿಗೆ



ಇಂಥ ಅಧಿಕಾರ ನೀಡಲ್ಪಟ್ಟಿತು.

ಉಚ್ಚಾಧಿಕಾರಿಗಳ ಒಪ್ಪಿಗೆ ಪಡೆದ ನಂತರ ವಿಂಗ್ ಕಮಾಂಡರ್ ದತ್‌ರ ಮನೋಬಲ ಇಮ್ಮಡಿಸಿತು. ಅವರಲ್ಲೊಂದು ಹೊಸ ಶಕ್ತಿ ಸಂಚಾರವಾದಂತೆ ಕಂಡುಬಂತು. ತಮ್ಮ ಸಹೋದ್ಯೋಗಿಗಳಿಗೆ ವಿಶೇಷ ವ್ಯವಸ್ಥೆಯನ್ನೆಲ್ಲ ಮಾಡುವಂತೆ ತಿಳಿಸಿ ಸನ್ನದ್ಧರಾದರು. ಜತೆಗೆ ಫ್ಲೈಟ್ ಇಂಜಿನಿಯರ್ ಸಾರ್ಜೆಂಟ್ ಕುಮಾರ್, ಲೋಡ್ ಮಾಸ್ಟರ್ ಜ್ಯೂನಿಯರ್ ವಾರಂಟ್ ಆಫೀಸರ್ ಯಾದವ್ ಮತ್ತು ಜ್ಯೂನಿಯರ್ ಪೈಲಟ್ ಬಾಬೂ ಅವರನ್ನು ಕೂಡಿಕೊಂಡು ಜೋಜಿಲಾದೆಡೆ ಹಾರಿದರು.

ಹಿಮಪಾತ ಕಡಿಮೆಯಾಗುವ ಲಕ್ಷಣಗಳೇ ಇರಲಿಲ್ಲ. ಮಹೇಶ್ವರ ದತ್ ಅದನ್ನು ಲೆಕ್ಕಿಸಲೇ ಇಲ್ಲ.

ಜೋಜಿಲಾ ಘಟ್ಟದ ಮೇಲೆ ಬಂದು ತಲಪಿದ ಕೂಡಲೇ ಮಹೇಶ್ವರ ದತ್ ಆ ಸ್ಥಳವನ್ನೊಮ್ಮೆ ಸೂಕ್ಷ್ಮವಾಗಿ, ವಿಸ್ತೃತವಾಗಿ ಪರಿಶೀಲಿಸಿದರು. ಅದಕ್ಕಾಗಿ ಹೆಲಿಕಾಪ್ಟರನ್ನು ತೀರ ಕೆಳಕ್ಕಿಳಿಸುವುದು ಅವಶ್ಯವಿತ್ತು. ಆದರೆ ಹೆಲಿಕಾಪ್ಟರನ್ನು ಲ್ಯಾಂಡ್ ಮಾಡಲು ಸೂಕ್ತವಾದ ಸ್ಥಳವಾವುದೂ ಅವರಿಗೆ ಕಂಡುಬರಲಿಲ್ಲ. ಎಲ್ಲೋ ಒಂದೆಡೆ ಇಳಿಸಿ ಬಿಟ್ಟರೆ ಆಗಲಿಲ್ಲ, ಸಿಕ್ಕಿಬಿದ್ದ ಜನರಿಗೆ ತೀರ ಸಮೀಪದಲ್ಲಿಯೇ ಇಳಿಸಬೇಕಾದ್ದು ಅನಿವಾರ್ಯ ಅಂದುಕೊಂಡರು. ಇದಕ್ಕೆ ಆ ರಸ್ತೆಯ ಮೇಲಿನ ಯಾವುದಾದರೂ ಒಂದು ಜಾಗ ಸೂಕ್ತವಾದೀತು. ಅಂದರೆ ಮಾತ್ರ ಜನ ಆ ಹಿಮದಲ್ಲೇ ಕಾಲುಕಿತ್ತಿ ಕಿತ್ತಿ ಇಟ್ಟು ಹೆಲಿಕಾಪ್ಟರ್ ತಲಪಲು ಸಾಧ್ಯ.

ರಸ್ತೆಯ ಮೇಲೆಲ್ಲ ಹಿಮದ ಹಾಸುಗೆಯೇ. ಪೊಳ್ಳು ಅರಳೆಯ ಬೆಟ್ಟದ ಹಾಗೆ ತೋರಿಬರುತ್ತಿತ್ತು ಹಿಮ. ಹೆಲಿಕಾಪ್ಟರ್ ಇಳಿಯಲು ಗಟ್ಟಿಯಾದ ಜಾಗವೇ ಆಗಬೇಕು. ಇನ್ನೂ ಕಷ್ಟದ ಮಾತೆಂದರೆ ಎಲ್ಲೆಲ್ಲೂ ಹಿಮವೇ ಸುರಿಯುತ್ತಿದ್ದುದರಿಂದ ರಸ್ತೆ ಯಾವುದು, ಬಂಡೆಗಲ್ಲುಗಳು ಹಾಯ್ದು ನಿಂತದ್ದೆಲ್ಲಿ ಎಂಬುದನ್ನು ಗುರುತಿಸಲು ಆಗದೇ ಇದ್ದುದು.

ಅಂತೂ ಬಹಳಷ್ಟು ಸಲ ಸುತ್ತು ಹಾಕುತ್ತಲೇ ಇದ್ದರು. ಆದರೆ ಇಳಿಯುವ ಒಂದೇ ಒಂದು ಅವಕಾಶವನ್ನೂ ಹಿಮರಾಜ ನೀಡಲಿಲ್ಲ.

ತುಂಬ ವ್ಯಥೆಪಟ್ಟರು ಮಹೇಶ್ವರ ದತ್. ಸಂಜೆಯೂ ಬೇಗನೇ ಕವಿದುಬಿಟ್ಟಿತು. ಕೈಕೈ ಹಿಸುಕಿಕೊಂಡು ಅಲ್ಲಿಂದ ಮರಳದೆ ವಿಧಿಯಿರಲಿಲ್ಲ.

ಆ ರಾತ್ರಿಯನ್ನವರು ಕಾರ್ಗಿಲ್‌ನಲ್ಲೇ ಕಳೆದರು. ಆದರೆ ಕಣ್ಣಿಗೆ ಕಣ್ಣು ಹತ್ತಲಿಲ್ಲ. ರಾತ್ರಿಯಿಡೀ ತಮ್ಮ ಸಾಮರ್ಥ್ಯವನ್ನೂ ಹೆಲಿಕಾಪ್ಟರಿನ ಸಾಮರ್ಥ್ಯವನ್ನೂ ಕುರಿತ ಯೋಚನೆ ಅವರಿಗೆ.

ನವೆಂಬರ್ ೧೬ರ ನಸುಕಿನ ಹೊತ್ತಿಗಾಗಲೇ ಮತ್ತೆ ಉಡ್ಡಯನಕ್ಕೆ ಸಿದ್ಧಗೊಂಡರು ದತ್. ತಮಗೆ ಮಾರ್ಗದರ್ಶನ ನೀಡಲೆಂದು ಜೋಜಿಲಾ ಕ್ಷೇತ್ರದ ಗಡಿಭದ್ರತಾ ಪಡೆಯ ಒಬ್ಬ ನಿಷ್ಣಾತ ಯೋಧನನ್ನು ಜತೆಗಿರಿಸಿಕೊಂಡರು. ಆ ದಿನವೂ ಹಿಮಪಾತವಾಗುತ್ತಲೇ ಇತ್ತು. ಈಗ ಸ್ವಲ್ಪ ದೊಡ್ಡ ಹಿಮಪದರವೇ ಅಲ್ಲಿ ಕಾಣತೊಡಗಿತ್ತು.

ಮತ್ತೆ ದತ್ ಯತ್ನಿಸಿದ್ದು ಹೆಲಿಕಾಪ್ಟರನ್ನು ಇಳಿಸಲು ಎಲ್ಲಿಯಾದರೂ ಸೂಕ್ತ ಜಾಗ ಸಿಕ್ಕುವುದೆ ಎಂದು. ಕಾರ್ಗಿಲ್‌ನಲ್ಲಿ ನಿದ್ರೆ ಬಾರದ ಹೊತ್ತಿನಲ್ಲಿ ಅವರಿಗೆ ಒಂದು ವಿಚಾರ ಬಂದಿತ್ತು:

ಪರ್ವತಮಾರ್ಗಗಳು ತಿರುವುಗಳಲ್ಲಿ ಸಾಕಷ್ಟು ಅಗಲವಾಗಿರುತ್ತವೆ. ಆದ್ದರಿಂದ ಅಂಥ ಯಾವುದಾದರೂ ಒಂದು ತಿರುವು ಹೆಲಿಕಾಪ್ಟರ್ ಇಳಿಸಲು ಅನುಕೂಲ ಎಂದು....

ಸ್ವಲ್ಪ ಹೊತ್ತು ಶೋಧ ನಡೆಸಿದ ಮೇಲೆ ದತ್‌ಗೆ ಇನ್ನುಳಿದ ತಿರುವುಗಳಿಗಿಂತ ಸಾಕಷ್ಟು ಅಗಲವೂ, ಸಿಕ್ಕಿಬಿದ್ದ ವಾಹನಗಳಿಗೆ ಸಮೀಪವೂ, ಹೆಲಿಕಾಪ್ಟರ್ ಇಳಿಸಲು ಅನುಕೂಲಕರವೂ ಆದಂಥ ಒಂದು ತಿರುವು ಕಂಡಿತು. ಅಲ್ಲಿಯೇ ಲ್ಯಾಂಡ್ ಮಾಡಲು ನಿರ್ಧರಿಸಿಬಿಟ್ಟರು ದತ್.

ಆದರೂ ಸಮಸ್ಯೆ ಇಷ್ಟಕ್ಕೇ ಅಂತ್ಯ ಕಾಣುತ್ತಿರಲಿಲ್ಲ. ಎಂ.ಐಯ್. ೧೭ರ ತಾಂತ್ರಿಕ ವೈಶಿಷ್ಟ್ಯಗಳ ಕಾರಣದಿಂದಾಗಿ ಹೆಲಿಕಾಪ್ಟರನ್ನು ಕಡಿಯೆಯೆಂದರೆ ಮೂರು ಕಿಲೋಮೀಟರು ಎತ್ತರದಿಂದಲೇ ಇಳಿಸುವ ಕಾರ್ಯ ಆರಂಭಿಸಬೇಕು ಮತ್ತು ನೆಲಕ್ಕೆ

ಇಳಿಯಲು ಕನಿಷ್ಠ ೧೦೦ ಮೀಟರ್ ಉದ್ದ ೫೦ ಮೀಟರ್ ಅಗಲವಾದ ಜಾಗಬೇಕೇ ಬೇಕು. ದತ್ ಆಯ್ದುಕೊಂಡಿದ್ದ ತಿರುವು ಆ ಮಾನದಲ್ಲಿ ಇಕ್ಕಟ್ಟಾದುದೇ. (ಎಷ್ಟೋ ದಿನಗಳ ನಂತರ ಆ ಜಾಗವನ್ನು ಅಳೆದಾಗ ಅದು ೫ ಮೀಟರ್ ಉದ್ದ ೫ ಮೀಟರ್ ಅಗಲವೆಂದು ಗೊತ್ತಾಯಿತು) ಬೇರೆಲ್ಲೆಡೆಯೂ ಮೂತಿ ಹಾಯಿಸಿಕೊಂಡು ನಿಂತ ಕಲ್ಲು ಬಂಡೆಗಳೇ.

ಹಿಮಪಾತ ಪ್ರತಿ ಘಂಟೆಗೆ ೭೦ ಕಿಲೋಮಿಟರ್ ವೇಗದಲ್ಲಿ ಆಗುತ್ತಿತ್ತು. ಇದು ಸಾಲದೆಂಬಂತೆ ಹಿಮಸಹಿತ ಬಿರುಗಾಳಿ ಬೀಸಿ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿತ್ತು. ಇಂಥ ಸಂದರ್ಭದಲ್ಲಿ ಸ್ವಲ್ಪ ಪ್ರಮಾದವಾದರೂ ಅದರ ಪರಿಣಾಮ ಘಾತುಕವೇ ಆಗಬಹುದು.

ದತ್ ಮುನ್ನುಗ್ಗಲು ನಿರ್ಧರಿಸಿಯೇ ಬಿಟ್ಟರು. "ನಾನು ಒಂದು ಒಳ್ಳೆಯ ಕೆಲಸಕ್ಕೆ ಹೊರಟಿದ್ದೇನೆ. ಒಳ್ಳೆಯ ಕೆಲಸಕ್ಕೆ ಹೊರಟವನಿಗೆ ಭಗವಂತ ಬೆನ್ನಿಗಿರುತ್ತಾನೆ," ಎಂದುಕೊಂಡರು. ಅಷ್ಟಲ್ಲದೆ ಭಾರತೀಯ ವಾಯುಸೇನೆಯ ಧ್ಯೇಯವಾಕ್ಯವಾದ 'ಎಂಥ ಜಾಗಕ್ಕೆ ನೀನು ಹೋಗಬೇಕೆಂದರೆ ಅಲ್ಲಿ ಸಂಕಟದಲ್ಲಿ ಸಿಲುಕಿದ ಜನಕ್ಕೆ ನಿನ್ನ ಅವಶ್ಯಕತೆ ಇರಬೇಕು,' ಎಂಬುದು ನೆನಪಾಯಿತು.

ದುರ್ಗಮ ಪರ್ವತ ಪ್ರದೇಶಗಳಲ್ಲಿ ೩೦,೦೦೦ ಅಡಿ ಎತ್ತರದಲ್ಲಿ ಉಡ್ಡಯನ ನಡೆಸಿದ ಅನುಭವಿ ಮಹೇಶ್ವರ ದತ್. ಅದೆಲ್ಲವನ್ನೂ ಏಕತ್ರಗೊಳಿಸಿ ಏಕಾಗ್ರಚಿತ್ತದಿಂದ ಅಲ್ಲಿ ಕಾರ್ಯಾಚರಣೆ ನಡೆಸಲು ದತ್ ನಿರ್ಧರಿಸಿದರು.

ಹೆಲಿಕಾಪ್ಟರನ್ನು ೨೦,೦೦೦ ಅಡಿ ಎತ್ತರಕ್ಕೇರಿಸಿದ್ದು ಅವರು ಮಾಡಿದ ಮೊದಲ ಕೆಲಸ. ಆ ಮೇಲೆ ಘಟನಾ ಸ್ಥಳದ ಕೆಲವು ಭಾಗಗಳನ್ನು ಮನಸ್ಸಿನಲ್ಲೇ ಗುರುತುಹಾಕಿಕೊಂಡರು. ಇದಕ್ಕಾಗಿ ಅವರು ಕೇಂದ್ರವನ್ನಾಗಿಸಿಕೊಂಡ ಜಾಗವೆಂದರೆ 'ಕಾಪ್ಟನ್ ಮೂರ್ ಶಿಖರ'. ಸುತ್ತು ಹಾಕುತ್ತಿರುವಾಗ ಒಂದು ವೇಳೆ ಆ ಶಿಖರ ಅತ್ತಿತ್ತ ದೂರವಾದಂತೆನಿಸಿದರೆ ತಾವು ಘಟನಾಸ್ಥಳದಿಂದ ದೂರದಲ್ಲಿದ್ದೇವೆ ಎಂಬುದು ಅವರಿಗೆ ಗೊತ್ತಾಗುತ್ತಿತ್ತು.

ಇವರೇನು ಮಾಡುತ್ತಿದ್ದಾರೆ ಎಂಬುದು ಜತೆಗಾರರಿಗೆ ಅರ್ಥವಾಗಲೇ ಇಲ್ಲ. ಹೀಗೆ ಸುಮ್ಮನೆ ಸುತ್ತು ಹಾಕಿದರೆ ಏನು ಬಂತು? ಎಂಬ ಭಾವನೆ ಅವರದು. ಆದರೆ ದತ್ ಅವರ ಮನಸ್ಸಿನ ಲೆಕ್ಕಾಚಾರವೇ ಬೇರೆ. ಈ ಕಾರ್ಯಾಚರಣೆಯ ಮೊದಲ ಹಾಗೂ ಮಹತ್ವದ ಅಂಗ ಇದು ಎಂಬುದು ಅವರ ದೃಷ್ಟಿ.

ಕೆಲವು ನಿಶ್ಚಿತ ಜಾಗಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ಮಹೇಶ್ವರ ದತ್ ಹೆಲಿಕಾಪ್ಟರನ್ನು ನೇರ ಹಾಗೂ ಸಮಕೋನ ಸ್ಥಿತಿಯಲ್ಲಿ ಮೆಲ್ಲನೆ ಕೆಳಗಿಳಿಸಲು ಆರಂಭಿಸಿದರು. ಈ ಸ್ಥಿತಿಯಲ್ಲಿ ಕೆಳಗಿಳಿಸುವಾಗ ಇಂಜನ್ನಿನ ಮೇಲೆ ಭಾರಿ ಒತ್ತಡ ಬೀಳುತ್ತದೆ. ಆದರೆ ಹಾಗೆ ಮಾಡದೆ ಅನ್ಯವಿಧಿ ಇರಲಿಲ್ಲ.

ಆಗ ಚಳಿ ಎಷ್ಟಿತ್ತೆಂದರೆ ಅದರಿಂದ ಹೆಲಿಕಾಪ್ಟರಿನ ಇಂಜಿನ್ನೂ ಸ್ಥಗಿತಗೊಳ್ಳಬಹುದಾಗಿತ್ತು. ಗಾಳಿಯೂ ಹೆಲಿಕಾಪ್ಟರಿನ ಸಮತೋಲವನ್ನು ತಪ್ಪಿಸುವಷ್ಟು ವೇಗದಲ್ಲಿ ಬೀಸುತ್ತಿತ್ತು. ಆದರೆ ದೇವರ ದಯೆಯಿಂದ ಹಾಗೇನೂ ಆಗದೆ ಹೆಲಿಕಾಪ್ಟರು ಮೆಲ್ಲನೆ ಕೆಳಕ್ಕಿಳಿಯಲಾರಂಭಿಸಿತು.

ಹದಿಮೂರು ಸಾವಿರ ಅಡಿಗಳವರೆಗೂ ಯಾವುದೇ ಸಮಸ್ಯೆ ಉದ್ಭವಿಸಲಿಲ್ಲ. ಆದರೆ ಅದಕ್ಕೂ ಕೆಳಕ್ಕಿಳಿಯುವುದು ಅಸಾಧ್ಯದ ಮಾತು. ವಿಂಗ್ ಕಮಾಂಡರ್ ದತ್ ಮೆಲ್ಲಮೆಲ್ಲನೆ ಅದನ್ನು ಇಳಿಸುತ್ತಲಿದ್ದರು. ತಾವು ನಿಶ್ಚಯಿಸಿಕೊಂಡಿದ್ದ ತಾಣ ಅವರ ಲಕ್ಷ್ಯದಲ್ಲಿತ್ತು. ಅಂತೂ ಒಮ್ಮೆ ಹೆಲಿಕಾಪ್ಟರಿನ ಗಾಲಿಗಳಿಗೆ ಹಿಮಸ್ಪರ್ಶವಾಯಿತು. ಅಲ್ಲಿಗೆ ಅವರೋಹಣ ಕಾರ್ಯವನ್ನವರು ಸ್ಥಗಿತಗೊಳಿಸಿದರು. ತುಂಬ ಖುಷಿಗೊಂಡಿದ್ದರು ದತ್. ಯೋಜನಾಬದ್ಧ ಕಾರ್ಯಕ್ಕೆ ದೊರೆತ ಯಶಸ್ಸು ಅದು! ಆದರೆ ತಮ್ಮ ಯಶಸ್ಸಿಗಾಗಿ ಆದ ಖುಷಿಯಲ್ಲ, ಸಿಕ್ಕಿ ಹಾಕಿಕೊಂಡವರನ್ನು ಪಾರಾಗಿಸಬಹುದಾದ ಅವಕಾಶ ಇನ್ನೂ ಹತ್ತಿರವಾಯಿತಲ್ಲ ಎಂಬ ಖುಷಿ. ಜತೆಗಿದ್ದ ಲೋಡ್ ಮಾಸ್ಟರ್ ಜ್ಯೂನಿ

ಯರ್ ವಾರಂಟ್ ಆಫೀಸರ್ ಯಾದವ್ ಅವರಿಗೆ ಅಲ್ಲಿಂದ ಕೆಳಕ್ಕೆ ಜಿಗಿಯುವಂತೆ ದತ್ ಸೂಚಿಸಿದರು.

ಕೆಳಕ್ಕೆ ಜಿಗಿದ ಯಾದವ್ ಎದೆಮಟ್ಟದ ಹಿಮದಲ್ಲಿ ಹುಗಿದುಹೋದ. ದತ್‌ಗೆ ಹೆಲಿಕಾಪ್ಟರನ್ನು ಅಲ್ಲಿ ಲ್ಯಾಂಡ್ ಮಾಡಲು ಸಾಧ್ಯವಾಗುವುದಿಲ್ಲ ಎಂಬುದು ಅರಿವಾಗಿ ಹೋಯಿತು. ಅದನ್ನು ಹಾಗೆಯೆ ಅಂತರಾಳದಲ್ಲಿ ನಿಲ್ಲಿಸಬೇಕಾದ್ದು ಅನಿವಾರ್ಯ. ಈ ಅಸಹಾಯತೆಯಿಂದ ದತ್ ಸ್ವಲ್ಪ ನೊಂದುಕೊಂಡರಾದರೂ ಬೇರೇನೂ ಮಾಡಲು ಬರುವಂತಿರಲಿಲ್ಲ. ಲ್ಯಾಂಡೂ ಆಗದೆ, ಹಾರುತ್ತಲೂ ಇಲ್ಲದೆ, ಆದರೆ ಇಂಜಿನ್ನು ಚಾಲೂ ಸ್ಥಿತಿಯಲ್ಲೇ ಇರುವುದಿದೆಯಲ್ಲ ಇದು ಯಾವುದೇ ಚಾಲಕನಿಗೆ ಅತ್ಯಂತ ಉದ್ವೇಗಕಾರಿ ಕ್ಷಣ, ತುಮುಲಮಯ ಸನ್ನಿವೇಶ.

ಹಾಗೆಯೇ ವಾಹನಗಳ ಸಾಲು ಇದ್ದೆಡೆ ನೋಡಿದರು ದತ್. ಅವರ ಕಣ್ಣುಗಳು ತುಂಬಿದವು. ಅವರು ಅಕ್ಷರಶಃ ಬಿಕ್ಕಳಿಸಿದರು. ಹೆಲಿಕಾಪ್ಟರು ಇಳಿದಿರುವುದನ್ನು ನೋಡಿದ ಕೆಲವರು ಆ ಭುಜಮಟ್ಟದ ಹಿಮದಲ್ಲೇ ಹೇಗೆ ಹೇಗೋ ಸಾವರಿಸಿಕೊಂಡು ಇತ್ತ ಬರಲು ಪ್ರಯತ್ನಿಸುತ್ತಲಿದ್ದರು! ಆದರೆ ಹಿಮದ ಬಲದ ಮುಂದೆ ಆ ಅಶಕ್ತರ ಆಟ ಹೇಗೆ ನಡೆದೀತು? ಅವರ ಒದ್ದಾಟವನ್ನು ನೋಡಲಾರದೇ ದತ್, "ಹೂಂ, ಅವರಿಗೆ ನೆರವಾಗು" ಎಂದು ಯಾದವ್‌ಗೆ ಆದೇಶವಿತ್ತರು. ಯಾದವ್ ಆ ಜನರೆಡೆ ಪ್ರಯಾಸಪಟ್ಟು ಸಾಗಿಹೋದ. ಆ ಪೈಕಿ ಐವರನ್ನು ಮುನ್ನಡೆಸಿಕೊಂಡು ಹೆಲಿಕಾಪ್ಟರ್ ತನಕ ತಲಪಿಸಿದ.

ಆ ಐವರನ್ನೂ ನೂಲೇಣಿಯಿಂದ ಹೆಲಿಕಾಪ್ಟರ್ ಒಳಕ್ಕೆ ಹತ್ತಿಸಿಕೊಳ್ಳುವ ವ್ಯವಸ್ಥೆಯಾಯಿತು. "ಅಬ್ಬಾ!" ಅಂದುಕೊಂಡ ದತ್ ಕಾರ್ಗಿಲ್ ನೆಡೆ ಹೆಲಿಕಾಪ್ಟರ್ ಉಡಾಯಿಸಿದರು.

ಆ ೧೯೨ರ ಪೈಕಿ ಮೊದಲ ಹಂತವಾಗಿ ಐವರನ್ನು ಪಾರು ಮಾಡಿದ್ದು ದತ್‌ಗೆ ಅದುವರೆಗಿನ ಉದ್ವೇಗ, ಆತಂಕ, ಶ್ರಮ, ಅವಿಶ್ರಾಂತತೆ, ದಣಿವುಗಳನ್ನೆಲ್ಲ ಮರೆಸಿಬಿಟ್ಟಿತು.

ಕೂಡಲೇ ವಯರ್‌ಲೆಸ್ ಮೂಲಕ ಊಧಮ್‌ಪುರ ಬೇಸ್‌ಗೆ ಸುದ್ದಿ ತಿಳಿಸಿಬಿಟ್ಟರು. ಅತ್ತಲಿಂದ ಅಭಿನಂದನೆಗಳು ಬಂದರೆ "ಅವೆಲ್ಲ ಕೇವಲ ನನ್ನೊಬ್ಬನಿಗೆ ಸಲ್ಲತಕ್ಕವಲ್ಲ, ಇದರಲ್ಲಿ ತಮಗೂ ಪಾಲಿದೆ," ಎಂದು ವಿನಯಪೂರ್ವಕವಾಗೇ ಹೇಳಿದರು ದತ್.

ಅವರಿಗೀಗ ಭೀಮಬಲ ಬಂದಿತ್ತು. ಅದನ್ನು ಹನುಮಬಲವೆಂದರೂ ಸರಿಯೆ. ಹೆಲಿಕಾಪ್ಟರ್ ಮತ್ತೆ ಜೋಜಿಲಾ ಹಾದಿ ಹಿಡಿಯಿತು.

ಹೀಗೆ ಕಾರ್ಗಿಲ್-ಜೋಜಿಲಾಗಳ ನಡುವೆ ೧೪ ಉಡ್ಡಯನಗಳನ್ನುನಡೆಸಿದ ದತ್ ಸಕುಶಲವಾಗಿ ಪಾರುಮಾಡಿದ್ದು ೪೬ ಮಂದಿಯನ್ನು.

ಎಂ.ಐಯ್. ೧೭ಕ್ಕೆ ತನ್ನದೇ ಆದ ಮಿತಿಗಳಿದ್ದವು. ಆ ಹೆಲಿಕಾಪ್ಟರು ೧೨,೫೦೦ ಅಡಿ ಎತ್ತರದಲ್ಲಿ ಒಮ್ಮೆಲೆ ಎಂಟು ಜನರನ್ನು ಮಾತ್ರ ಹೊತ್ತು ಹಾರಬಹುದಾದಂಥದು. ಮುಖ್ಯ ಮತ್ತು ಸಹಾಯಕ ಪೈಲಟ್ಟುಗಳಂತೂ ಇರಲೇಬೇಕು. ಈ ಕಾರಣದಿಂದಾಗಿಯೇ ಬಚಾವು ಕಾರ್ಯ ತೀರ ನಿಧಾನವಾಗತೊಡಗಿತು. ಇದು ದತ್‌ರಿಗೆ ಇದ್ದ ದೊಡ್ಡ ಚಿಂತೆ. ಮೊದಲ ದಿನ ಅಂದರೆ ನವೆಂಬರ್ ೧೬ ರಂದು ಅವರು ೧೪ ಸಲ ಮಾತ್ರ ಕಾರ್ಯಾಚರಣೆ ನಡೆಸಿದರು.

ಹಾಗೆ ನೋಡಿದರೆ ಜೋಜಿಲಾದಲ್ಲಿ ಸಿಕ್ಕುಬಿದ್ದದ್ದು ೧೧೦ ವಾಹನಗಳು. "ಒಂದು ವೇಳೆ ಪ್ರತಿವಾಹನದಲ್ಲೂ ಸರಾಸರಿ ೧೦ ಜನರಿದ್ದಾರೆ ಎಂದಿಟ್ಟುಕೊಂಡರೂ ಅಲ್ಲಿ ಅಸಹಾಯ ಸ್ಥಿತಿಯಲ್ಲಿ ಇರುವವರು ೧೧೦೦ ಜನ ಎಂದಾಯಿತು. ದಿನವೊಂದಕ್ಕೆ ಕೇವಲ ೪೬ ಜನರನ್ನು ಮಾತ್ರ ಅಲ್ಲಿಂದ ಪಾರು ಮಾಡಬಹುದಾದರೆ ಅಷ್ಟೆಲ್ಲ ಜನಕ್ಕೆ ಎಷ್ಟು ದಿನಗಳು ಹಿಡಿದಾವು? ಅಲ್ಲದೆ ಅವರು ಇದೇ ಸ್ಥಿತಿಯಲ್ಲಿ ಎಷ್ಟು ದಿನ ಜೀವದಿಂದ ಉಳಿದಾರು?" ಎಂದೆಲ್ಲ ಚಿಂತೆ ಹಚ್ಚಿಕೊಂಡು ಕೊರಗಿದರು ದತ್.

ಆದಷ್ಟು ಬೇಗನೇ ಬಚಾವು ಕಾರ್ಯ ಮುಗಿದು

ಬಿಡಬೇಕು ಎಂಬುದು ಅವರ ಮನೀಷೆ. ಆದರೆ ನಿರಂತರ ಹಿಮಪಾತ ಮತ್ತು ಹಿಮಸಹಿತ ಬಿರುಗಾಳಿಗಳು ಅವರನ್ನು ವಿವಶರನ್ನಾಗಿಸಿದವು.

ಹೆಲಿಕಾಪ್ಟರ್ ಮೂಲಕ ತಮ್ಮನ್ನು ಪಾರುಮಾಡಲಾಗುತ್ತಿದೆ ಎಂಬುದು ಸಮಾಧಾನವನ್ನು ತಂದಿತ್ತಂತೆಯೇ ಆ ಜನರಲ್ಲಿ ಒಂದು ರೀತಿಯ ಪೈಪೋಟಿಯನ್ನೂ ಹುಟ್ಟಿಸಿತು. ತಾನೇ ಮೊದಲು ಪಾರಾಗಬೇಕೆನ್ನುವ ಪೈಪೋಟಿ. ಅಂಥ ಸ್ಥಿತಿಯಲ್ಲಿ ಅದು ಸಹಜವೂ ಹೌದು. ಹೆಲಿಕಾಪ್ಟರ್‌ನ ಸದ್ದು ಕೇಳಿದ ಕೂಡಲೇ ವಾಹನಗಳಿಂದ ಇಳಿದು ಅವರು ಓಡಿಬರಲು ಯತ್ನಿಸಬೇಕು, ಹಿಮದಲ್ಲಿ ಹೆಜ್ಜೆ ಹೂತು ಹೆಜ್ಜೆ ಕಿತ್ತಲಾಗದೇ ಕಿತ್ತು ಹೆಲಿಕಾಪ್ಟರು ತಲುಪುವ ಯತ್ನದಲ್ಲಿ ತೊಡಗಬೇಕು.

ಆದರೆ ಅಲ್ಲಿಂದಿಲ್ಲಿಗೆ ಬರಲು ಬಹು ಹೊತ್ತು ಹಿಡಿಯುತ್ತಿತ್ತು. ಅಲ್ಲಿಯತನಕ ಆ ಹಿಮಗಾಳಿಯ ಹೊಡೆತಕ್ಕೆ ತತ್ತರಿಸದಂತೆ ಹೆಲಿಕಾಪ್ಟರನ್ನು ಸಂಬಾಳಿಸುವುದೆಂದರೆ ಸಾಮಾನ್ಯವಲ್ಲ. ತುಂಬ ಪರಿಶ್ರಮದ ಕೆಲಸ ಅದು. ಅಲ್ಲದೆ ಜೋಜಿಲಾದಿಂದ ಕಾರ್ಗಿಲ್ ಸಾಕಷ್ಟು ದೂರವೇ ಇತ್ತು. ಅಲ್ಲಿಗೆ ಹೋಗಿ ವಾಪಸ್ಸಾಗಲು ಬೇಕಷ್ಟು ಸಮಯ ಬೇಡವೆ?

ಹೀಗೊಂದು ಸಲ ದತ್‌ಗೆ "ಕೆಲವರು ಸ್ಕೀಯಿಂಗ್ (ಹಿಮಜಾರು) ಪಟುಗಳು ದೊರೆತರೆ ಎಷ್ಟು ಚೆನ್ನ!" ಅನಿಸಿತು. ಹಾಗೆ ದೊರೆತರೆ ವಾಹನಗಳಿಂದ ಜನರನ್ನು ಶೀಘ್ರವೇ ಹೆಲಿಕಾಪ್ಟರ್‌ವರೆಗೆ ತಲಪಿಸುವುದು ಸಾಧ್ಯ. ಇದರಿಂದ ಸಮಯ ಪೋಲಾಗದೇ ಇನ್ನಷ್ಟು ಹೆಚ್ಚು ಬಾರಿ ಸಂಚರಿಸಬಹುದು. ಇದರೊಂದಿಗೆ ಇನ್ನೂ ಒಂದು ಯೋಚನೆ ಅವರಿಗೆ ಬಂತು, "ಜೋಜಿಲಾದಿಂದ ಕಾರ್ಗಿಲ್‌ಗೆ ಹೋಗದೆ ಸಮೀಪದ ದರಾಸ್‌ನಲ್ಲಿ ಜನರನ್ನು ಇಳಿಸಿದರೆ ಈ ಸಂಚಾರ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಬಹುದು. ದರಾಸ್‌ನಿಂದ ಅವರನ್ನೆಲ್ಲ ಕಾರ್ಗಿಲ್‌ಗೆ ತಲಪಿಸುವ ಬೇರೆ ವ್ಯವಸ್ಥೆ ಮಾಡಬಹುದು...."

ಮತ್ತೆ ಐವರೊಂದಿಗೆ ಕಾರ್ಗಿಲ್‌ಗೆ ಬಂದಿಳಿದಾಗ ದತ್ ತಮ್ಮ ಯೋಚನೆಯನ್ನು ಉಚ್ಚಾಧಿಕಾರಿಗಳ ಎದುರು ಇಟ್ಟರು. ಅಲ್ಲಿಯ ಕಾರ್ಯಾಚರಣೆ ಅದೆಷ್ಟು ಜಟಿಲವೆಂಬುದೀಗ ಅವರಿಗೆಲ್ಲ ಮನದಟ್ಟಾಗಿರಬೇಕು. ದತ್‌ಗೆ ಬೇಕಾದ ಎಲ್ಲ ನೆರವಿನ ವ್ಯವಸ್ಥೆಯನ್ನವರು ಮಾಡಲು ಉದ್ಯುಕ್ತರಾದರು. ಜತೆಗೆ ಒಂದು ವೈದ್ಯಕೀಯ ತಂಡ ಹಾಗೂ ಕೆಲವು ವಾಹನಗಳು ರವಾನಿಸಲ್ಪಟ್ಟವು.

ಈ ಒಳಗಾಗಿ ಜೋಜಿಲಾ ಘಟನೆ ಮತ್ತು ಬಚಾವು ಕಾರ್ಯದ ವಾರ್ತೆ ಆಕಾಶವಾಣಿ, ಬಿ.ಬಿ.ಸಿ.ಗಳ ಮೂಲಕ ಬಿತ್ತರಿಸಲ್ಪಟ್ಟಿತ್ತು. ಜತೆಗೆ ಮಹೇಶ್ವರ ದತ್‌ರ ಅವಿರತ ಸೇವಾಭಾವವನ್ನೂ ಆ ಮಾಧ್ಯಮಗಳು ಕೊಂಡಾಡಿದ್ದವು. ಆಚ್ಚರಿಯೆಂದರೆ ಈ ಸುದ್ದಿ ತಿಳಿದ ಕೆಲವು ಹಿಮಜಾರುಪಟುಗಳು ಸ್ವಯಂಸ್ಫೂರ್ತಿಯಿಂದ ಕಾರ್ಗಿಲ್‌ನ ವಾಯುಪಡೆಯ ಅಧಿಕಾರಿಗಳನ್ನು ಭೇಟಿಮಾಡಿದ್ದು. ಅವರೆಲ್ಲ ಕಷ್ಟದಲ್ಲಿದ್ದವರಿಗೆ ನೆರವಾಗಲು ಸಿದ್ಧರಾಗೇ ಬಂದಿದ್ದರು.

ನವೆಂಬರ್ ೧೭.

ವಿಂಗ್ ಕಮಾಂಡರ್ ದತ್ ಈಗ ಮುನ್ನಿಗಿಂತ ಹೆಚ್ಚು ಉತ್ಸಾಹದಿಂದ ಹೊರಟಿದ್ದರು. ತಮ್ಮೊಂದಿಗೆ ಸ್ಕೀಯಿಂಗ್ ಪಟುಗಳೂ ಇದ್ದುದು ದತ್‌ಗೆ ಎಷ್ಟೋ ಹಗುರವಾಗಿತ್ತು.

ಅಂತೂ ಶುರುವಾಯಿತು ಶೀಘ್ರ ಪರಿಹಾರ ಕಾರ್ಯ. ಸ್ಕೀಯಿಂಗ್ ಪಟುಗಳು ಕ್ಷಿಪ್ರಗತಿಯಲ್ಲಿ ಜನರನ್ನು ವಾಹನಗಳಿಂದ ಇಳಿಸಿ ಹೆಲಿಕಾಪ್ಟರ್‌ವರೆಗೆ ತಂದು ಮುಟ್ಟಿಸಬೇಕು. ಐದೈದು ಜನರಂತೆ ಅವರನ್ನು ದತ್ ದರಾಸ್‌ಗೆ ಒಯ್ದು ಇಳಿಸಬೇಕು. ಅವರು ಮರಳಿ ಬರುವುದರೊಳಗಾಗಿ ಮತ್ತೆ ಐವರು ಪೀಡಿತರು ಸ್ಕೀಯಿಂಗ್ ಪಟುಗಳ ನೆರವಿನಿಂದ ಹೆಲಿಕಾಪ್ಟರು ನಿಲ್ಲುವ ಜಾಗ ತಲಪಿರಬೇಕು..... ದತ್ ಯೋಚಿಸಿದ್ದು ಸರಿಯಾಗೇ ಇತ್ತು. ಜನರನ್ನು ಪಾರು ಮಾಡುವ ಕೆಲಸ ಜೋರು ಪಡೆಯಿತು.

ಆದರೆ ಎಲ್ಲವೂ ಸುಗಮವಾಗಿ ಸಾಗುತ್ತದೆಂದು ಹೇಳಲು ಬಂದೀತೇ? ಕೆಟ್ಟ ಸುದ್ದಿಯೊಂದು

ದತ್‌ರನ್ನು ಖಿನ್ನರನ್ನಾಗಿಸಿತು.

ಸ್ಕೀಯಿಂಗ್ ಪಟುಗಳು ಹಾಗೂ ಅವರಿಂದ ಬಚಾವು ಮಾಡಲ್ಪಟ್ಟವರು ಹೇಳಿದ ಸುದ್ದಿ ಅದು: "ಸಿಕ್ಕಿ ಬಿದ್ದವರಲ್ಲಿ ಕೆಲವರು ಚಳಿಯಿಂದ ಮರಗಟ್ಟಿ ಸತ್ತಿದ್ದಾರೆ. ಇನ್ನು ಸಾವನ್ನು ಸಮೀಪಿಸಿದವರ ಸಂಖ್ಯೆಯೂ ಸಾಕಷ್ಟಿದೆ...."

ಛತ್! ಯಾವುದು ಆಗಬಾರದು ಎಂದು ದತ್ ಬಡಕೊಂಡರೋ ಅದು ಆಗಿಯೇ ಹೋಯಿತು. ಅಂದರೆ ಇದರರ್ಥ ತಾವು ವಿಳಂಬ ಮಾಡಿದ್ದೇವೆ ಎಂದಲ್ಲವೆ? ದತ್ ಮನಸ್ಸು ಅಳುಕಿತು, ಅತ್ತಿತು.

ಆದರೆ ಇನ್ನು ಹೆಚ್ಚು ಮಂದಿಯನ್ನು ಸಾವಿನ ಮನೆಗೆ ತಳ್ಳದಂತೆ ನೋಡಿಕೊಳ್ಳಬೇಕು.... ದತ್ ದೃಢನಿರ್ಧಾರಗೈದರು.

ಪ್ರತಿ ಸಾರಿಗೂ ಇನ್ನಷ್ಟು ಹೆಚ್ಚು ಮಂದಿಯನ್ನು ಹೆಲಿಕಾಪ್ಟರಿನಲ್ಲಿ ಕೂಡಿಸಿಕೊಂಡು ಒಯ್ಯಲು ಅನುಕೂಲವಾದರೆ ಒಳ್ಳೆಯದಲ್ಲವೆ? - ದತ್ ಮತ್ತೊಂದು ಹೊಸ ಆಸೆ ಚಿಗುರಿಸಿಕೊಂಡರು.

ವಿಮಾನ ಚಾಲನೆಯ ಸಂಬಂಧವಾಗಿ ಒಂದು ಅಂತಾರಾಷ್ಟ್ರೀಯ ನಿಯಮವಿದೆ: ಪ್ರತಿಯೊಂದು ವಿಮಾನ ಅಥವಾ ಹೆಲಿಕಾಪ್ಟರು ಶೇಕಡಾ ೨೦ ರಷ್ಟು ಅತಿರಿಕ್ತ ಇಂಧನವನ್ನು ಹೊತ್ತು ಹಾರಬೇಕು: ದತ್‌ರ ಎಂ.ಆಯ್. ೧೭ ಹೆಲಿಕಾಪ್ಟರಿನಲ್ಲಿಯೂ ಈ ಕಾಯ್ದಿಟ್ಟ ಇಂಧನವಿತ್ತು. ಈ ಇಂಧನವನ್ನು ತೆಗೆದುಬಿಟ್ಟರೆ! ಎಂಬ ಮತ್ತೊಂದು ವಿಚಾರ ಅವರಲ್ಲಿ ಸುಳಿಯಿತು. ಅಂದರೆ ಆ ಭಾರಕ್ಕೆ ಸಮನಾಗುವಷ್ಟು ಕೆಲವು ಪೀಡಿತರನ್ನು ಸಾಗಿಸಬಹುದಲ್ಲ! ಕ್ಲುಪ್ತ ಸಮಯದಲ್ಲಿ ತನಗೆ ಸರಿ ಎನಿಸಿದಂತೆ ಮಾಡಲು ಸ್ವಾತಂತ್ರ್ಯವಿದ್ದೇ ಇತ್ತಲ್ಲ. ದತ್ ಆ ಯೋಚನೆಯನ್ನು ತಡಮಾಡದೆ ಕಾರ್ಯರೂಪಕ್ಕೆ ತಂದೇಬಿಟ್ಟರು. ಅವರ ಈ ಕ್ರಮ ಆತ್ಮಘಾತುಕವೂ ಆಗಬಹುದಿತ್ತು. ದತ್‌ಗೆ ಇದು ಗೊತ್ತಿರಲಿಲ್ಲವೆಂದಲ್ಲ. ಅವರಿಗೆ ತಮ್ಮ ಜೀವ ಮುಖ್ಯವಾದಷ್ಟೇ ಉಳಿದ ಜೀವಗಳೂ ಮುಖ್ಯ.

ಅವರು ಕಾಯ್ದಿಟ್ಟ ಇಂಧನವನ್ನು ತೆಗೆದುಬಿಟ್ಟದ್ದು ಜತೆಯಲ್ಲಿದ್ದವರಿಗೆ ಸರಿಬರಲಿಲ್ಲ. ಆದರೆ ದತ್ ಯೋಚನೆ ಮಾತ್ರ ಅವರನ್ನು ಅಚ್ಚರಿಗೀಡು ಮಾಡಿತು. ಹೆಚ್ಚೆಚ್ಚು ಜನರನ್ನು ಒಂದೊಂದು ಬಾರಿಗೂ ಸಾಗಿಸುತ್ತ ಅವರು ನವೆಂಬರ್ ೨೫ರವರೆಗೂ ಬಚಾವು ಕಾರ್ಯ ನಡೆಸಿದರು. ಈ ಎಲ್ಲ ದಿನಗಳಲ್ಲೂ ಹಿಮಪಾತವಿದ್ದೇ ಇತ್ತು. ಜತೆಗೆ ಪ್ರತಿಗಂಟೆಗೆ ೭೦-೮೦ ಕಿಲೋಮೀಟರ್ ವೇಗದಲ್ಲಿ ಬೀಸುತ್ತಿದ್ದ ಹಿಮ ಝುಂಝಾವಾತ!

ಮೊದಲ ನಾಲ್ಕು ದಿನಗಳಲ್ಲಿ ದತ್ ನಡೆಸಿದ್ದು ೫೬ ಸುತ್ತಾಟಗಳು. ಈ ಮೂಲಕ ಪಾರು ಮಾಡಲ್ಪಟ್ಟವರು ೧೪೫ ಜನ. ಇನ್ನುಳಿದ ಮೂರು ದಿನಗಳಲ್ಲಿ ೧೬ ಸಾರಿ ಹೆಲಿಕಾಪ್ಟರ್ ಹಾರಿಸಿದರು. ಈ ಅವಧಿಯಲ್ಲಿ ಬಚಾವಾದ ಭಾಗ್ಯಶಾಲಿಗಳು ೪೭ ಮಂದಿ. ಆ ಹಿಮ ಸಮುದ್ರದಲ್ಲಿ ಮುಳುಗದೇ ತಮ್ಮ ಪರಿವಾರದವರೊಂದಿಗೆ ಸೇರಿಕೊಳ್ಳುವ ಅವಕಾಶ ಪಡೆದವರು ಒಟ್ಟು ೧೯೨ ಪೀಡಿತರು ಮಾತ್ರ.

ಆದರೆ ಪ್ರಾಣ ಕಳೆದುಕೊಂಡವರು ಎಷ್ಟು ಜನ? ಎಷ್ಟೆಲ್ಲ ಯತ್ನಿಸಿದರೂ ಈ ಸಂಖ್ಯೆ ಗೊತ್ತಾಗಲೇ ಇಲ್ಲ. ಯಾಕೆಂದರೆ ವಾಹನಗಳಲ್ಲಿ ಕುಳಿತಲ್ಲೇ ಮರಗಟ್ಟಿ ಮರಣವಪ್ಪಿದವರ ಶವಗಳು ಮಾತ್ರ ಸಿಕ್ಕವು: ಹಿಮದಲ್ಲಿಳಿದು ಮುಂದೆ ನಡೆಯಲಾಗದೆಯೋ ಅಥವಾ ಆ ಚಳಿಯನ್ನು ತಾಳಲಾಗದೆಯೋ ಸತ್ತು ಹಿಮದಲ್ಲೇ ಹೂತು ಅದೆಲ್ಲಿಗೋ ಎಳೆದೊಯ್ಯಲ್ಪಟ್ಟವರು ಅದೆಷ್ಟೋ!

ಮಹೇಶ್ವರ ದತ್ ಯಾವ ರೀತಿ ಜೀವದ ಹಂಗು ದೊರೆದು, ಅನ್ನಾಹಾರ-ವಿಶ್ರಾಂತಿಗಳ ಗೊಡವೆಯನ್ನೂ ಬಿಟ್ಟು ಆ ೧೯೨ ಜನರ ಪ್ರಾಣ ರಕ್ಷಣೆಗಾಗಿ ಅವಿರತ ಶ್ರಮಿಸಿದರೆಂಬುದನ್ನು ಅವರ ಜತೆಗಿದ್ದ ಸಹಾಯಕ ಪೈಲಟ್ ಬಾಬೂ ಮತ್ತು ಜೂನಿಯರ್ ವಾರಂಟ್ ಆಫೀಸರ್ ಯಾದವ್‌ರ ಬಾಯಿಂದಲೇ ಕೇಳಬೇಕು.

ಇದನ್ನೆಲ್ಲ ವಾಯುಪಡೆಯ ಅಧಿಕಾರಿಗಳು ಕೇಳಿ ಅರಿತು ತಮ್ಮ ನಡುವೆ ಇಂಥ ಅಪ್ರತಿಮ ಸಾಹ

ಸಿಯೊಬ್ಬ ಇದ್ದಾನಲ್ಲ ಎಂಬುದಕ್ಕೆ ಅತ್ಯಂತ ಹೆಮ್ಮೆ ಪಟ್ಟುಕೊಂಡರು.

ಈ ಆಕಾಶದಲ್ಲಿನ ಆಪದ್ಬಾಂಧವ, ಅತಿಹೆಚ್ಚು ಜನರ ಪ್ರಾಣರಕ್ಷಕ ಮಹೇಶ್ವರ ದತ್‌ರ ಹೆಸರು ೧೯೮೭ನೆ ವರ್ಷದ ಗಿನ್ನಿಸ್ ದಾಖಲೆ ಪುಸ್ತಕದಲ್ಲಿ ನಮೂದಾಯಿತು.

ಅವರಿಗೆ 'ಜೋಜಿಲಾ ವೀರ' (Hero of Jojila) ಎಂಬ ಉಪಾಧಿಯಿಂದ ಸನ್ಮಾನವೂ ಸಂದಿತು.

೧೯೮೮ರ ಜನವರಿ ೨೬ರಂದು ಭಾರತದ ಆಗಿನ ರಾಷ್ಟ್ರಪತಿ ಆರ್.ವೆಂಕಟರಾಮನ್ ಈ ಎಂಟೆದೆಯ ಬಂಟನಿಗೆ 'ಕೀರ್ತಿ ಚಕ್ರ' ಪ್ರದಾನಗೈದರು. ಅಶೋಕ ಚಕ್ರ ಸರಣಿಯಲ್ಲಿನ ಈ ಪದಕ ಭಾರತದ ಎರಡನೆಯ ಅತ್ಯುಚ್ಚ ಗೌರವವಾಗಿದೆ. ವೀರತಾಪೂರ್ವಕ ಕಾರ್ಯಗೈದವರಿಗೆ ಇದು ಪ್ರದಾನಿಸಲ್ಪಡುತ್ತದೆ. (ಈ ಪದಕ ಪಡೆದವರಲ್ಲಿ ಅಂತರಿಕ್ಷಯಾತ್ರಿ ರಾಕೇಶ್ ಶರ್ಮಾ ಕೂಡ ಒಬ್ಬರು.)

ಸಾಹಸವೇ ಮೈವೆತ್ತು ಬಂದಂತಿರುವ ವಿಂಗ್ ಕಮಾಂಡರ್ ಮಹೇಶ್ವರ ದತ್‌ಗೆ ಈಗ ೫೦ ವರ್ಷ (ಜನನ: ೫, ಜನವರಿ ೧೯೪೬). ಹರ್ಯಾಣದ ಗುರಗಾಂವ್‌ನಲ್ಲಿ ಸಮಾಜಸೇವೆ, ದೀನ ಜನ ಸೇವೆಯೇ ಜೀವನಧ್ಯೇಯವನ್ನಾಗಿಸಿಕೊಂಡಿದ್ದ ಶಾಲಾ ಶಿಕ್ಷಕ ರೂಪಲಾಲ್ ದತ್ ಎಂಬವರ ಮಗ ಮಹೇಶ್ವರ ದತ್.

ಬಾಂದಳದಲ್ಲಿ ಹಕ್ಕಿಯಂತೆ ಹಾರಾಡುವುದು ಮಹೇಶ್ವರ ದತ್ ಬಾಲ್ಯದಿಂದಲೇ ಇರಿಸಿಕೊಂಡಿದ್ದ ಮಹತ್ವಾಕಾಂಕ್ಷೆ. ಆಗಸದಲ್ಲಿ ವಿಮಾನಗಳನ್ನು ಕಂಡಾಗಲೆಲ್ಲ ಅದು ಗರಿಗೆದರುತ್ತಿತ್ತು. ಸಾಹಸ ಪ್ರವೃತ್ತಿಯೂ ಅವರ ಎಳೆವಯದಿಂದಲೇ ಜತೆಯಲ್ಲಿ ಬೆಳೆದುಬಂದ ಗೆಳೆಯ. ಲುಧಿಯಾನದ ಸರಕಾರಿ ಕಾಲೇಜಿನಲ್ಲಿ ಈತ ಓದುತ್ತಿರುವ ವೇಳೆಯಲ್ಲಿ ಹೊತ್ತು ಕೂಡಿಬಂತು. ಜೋಧಪುರದ



ಏರ್‌ಫೋರ್ಸ್ ಫ್ಲಾಯಿಂಗ್ ಕಾಲೇಜಿಗೆ ಆಯ್ಕೆಯಾದರು. ೧೯೬೭ರ ಡಿಸೆಂಬರ್‌ನಲ್ಲಿ ಆ ಕಾಲೇಜಿನಿಂದ ಪದವಿಪಡೆದ ದತ್‌ಗೆ ೧೯೬೮ರ ಮೇ ೧೮ರಂದು ಏರ್‌ಫೋರ್ಸಿನಲ್ಲಿ ಪೈಲಟ್ ಆಫೀಸರ್ ಎಂದು ನೇಮಕಾತಿಯೂ ಬಂತು. ಅಲ್ಲಿಂದ ಅವರು ಹಾರಿದ್ದು ಯಾರೂ ಹಾರದ ಎತ್ತರಗಳನ್ನು; ಏರಿದ್ದು ಇನ್ನಾರಿಗೂ ಸಾಧ್ಯವಾಗದಂಥ ಮಜಲುಗಳನ್ನು. ೧೯೬೯ರಲ್ಲಿ ಅವರಿಗೆ ಫ್ಲಾಯಿಂಗ್ ಆಫೀಸರ್ ಎಂಬ ಪದೋನ್ನತಿ. ೧೯೭೧ರಲ್ಲಿ ಭಾರತ-ಪಾಕ್ ಯುದ್ಧ ನಡೆದಾಗ ದತ್ ಪೂರ್ವ-ಪಶ್ಚಿಮ ಕ್ಷೇತ್ರಗಳೆರಡರಲ್ಲೂ ತಮ್ಮ ಪರಾಕ್ರಮ ಮೆರೆದರು. ೧೯೭೩ರಲ್ಲಿ ಫ್ಲಾಯಿಂಗ್ ಲೆಫ್ಟಿನೆಂಟ್ ದರ್ಜೆಗೇರಿದ ಅವರು ೧೯೭೬ರಲ್ಲಿ ಸ್ಕ್ವಾಡ್ರನ್ ಲೀಡರ್ ಆದರು. ೧೯೮೪ರಲ್ಲಿ ಭಾರತೀಯ ವಾಯುಸೇನೆಯಲ್ಲಿ ರಶ್ಯನಿರ್ಮಿತ ಎಂ.ಆಯ್. ೧೭ ಹೆಲಿಕಾಪ್ಟರುಗಳ ಒಂದು ವಿಭಾಗ '೧೫೮ ಹೆಲಿಕಾಪ್ಟರ್ ವಿಂಗ್' ಎಂಬ ಹೆಸರಿನಿಂದ ಪ್ರಾರಂಭಿಸಲ್ಪಟ್ಟಿತು. ಸ್ಕ್ವಾಡ್ರನ್ ಲೀಡರ್ ಮಹೇಶ್ವರ ದತ್‌ರಿಗೆ ಸಿಯಾಚಿನ್ ಕ್ಷೇತ್ರದಲ್ಲಿನ ಈ ವಿಭಾಗದ ಹೊಣೆ ಬಂತು.

೧೯೮೪ರಲ್ಲಿ ಅಲ್ಲಿ ಗಡಿಬಿಡಿ. ಆ ದುರ್ಗಮ ಕ್ಷೇತ್ರದಲ್ಲಿ ಮಹೇಶ್ವರ ದತ್ ಪರಾಕ್ರಮ ಮೆರೆದರು. ಪರಿಣಾಮವಾಗಿ ಒದಗಿಬಂತು ದತ್ ನೇತೃತ್ವದ ಹೆಲಿಕಾಪ್ಟರ್ ವಿಂಗಿಗೆ 'ದಿ ಸಿಯಾಚಿನ್ ಟೈಗರ್ಸ್' ಎಂಬ ಉಪಾಧಿ. ೧೯೮೩ರಲ್ಲಿ ವಿಂಗ್ ಕಮಾಂಡರ್ ಎಂದು ನಿಯುಕ್ತಿಗೊಳಿಸಲ್ಪಟ್ಟರು ದತ್.

ನಾಗಾಲ್ಯಾಂಡ್-ಮಿಜೋರಾಮ್‌ಗಳ ಪರ್ವತ ಪ್ರದೇಶ; ಕಾಶ್ಮೀರ, ಸಿಯಾಚಿನ್ ಮತ್ತು ಲಡ್ಡಾಖ್‌ಗಳ ಅಗಮ್ಯ ಕ್ಷೇತ್ರಗಳಲ್ಲಿ ವಿಮಾನ ಮತ್ತು ಹೆಲಿಕಾಪ್ಟರ್ ನಡೆಸಿದ ಸಾಹಸಿ ಈತ. ಜೋಜಿಲಾ ಘಟನೆಯ ಹೊತ್ತಿಗಾಗಲೇ ಅವರಿಗಿದ್ದದ್ದು ೬೦೦೦ ಗಂಟೆಗಳಷ್ಟು ದೀರ್ಘಾವಧಿಯ ಉಡ್ಡಯಾನಾನುಭವ. ಈ ಪೈಕಿ ಅರ್ಧದಷ್ಟು ಕೇವಲ ಪರ್ವತ ಪ್ರದೇಶಗಳಲ್ಲಿನದು!

ಆದರೆ ಅವರ ಕೀರ್ತಿಯ ಸರಪಣಿ ಹಾಗೇ ಬೆಳೆಯುತ್ತದೆ. ೧೯೮೫ರ ಮಾತಿದು. ಜೋಜಿಲಾ ಬಚಾವು ಕಾರ್ಯ ಮುಗಿಸಿ ಒಂದು ವರ್ಷವೂ ಕಳೆದಿರಲಿಲ್ಲ. ಇನ್ನೊಂದು ಬೆರಗುಗೊಳಿಸುವ ಸಾಹಸವನ್ನು ಮಾಡಿಬಿಟ್ಟರು. ಮೋಂಬತ್ತಿಯ ಬೆಳಕಿನಲ್ಲಿ ಲೆಹ್‌ನಲ್ಲಿ ಹೆಲಿಕಾಪ್ಟರ್ ಇಳಿಸಿ ಜನರನ್ನು ನಿಬ್ಬೆರಗುಗೊಳಿಸಿದರು.

ಅದು ನಡೆದಿದ್ದು ಹೀಗೆ. ಜರ್ಮನಿಯಿಂದ ಬಂದ ಯಾತ್ರಿಗಳ ಒಂದು ತಂಡ ಟಿಬೆಟ್ ಮೂಲಕ ಭಾರತಕ್ಕೆ ಬರುತ್ತಲಿತ್ತು. ಒಟ್ಟು ಆರು ಜನರ ತಂಡ ಅದು; ಇಬ್ಬರು ಸುಪ್ರಸಿದ್ಧ ವಿಜ್ಞಾನಿಗಳು, ಒಬ್ಬ ಡಾಕ್ಟರ್, ಒಬ್ಬ ಮಹಿಳೆ ಹಾಗೂ ಇನ್ನಿಬ್ಬರು. ಜನ್ಸ್‌ಕರ್ ಘಾಟ್ ಎಂಬುದು ಮಾರ್ಗ ಮಧ್ಯದಲ್ಲಿನ ಪರ್ವತ. ಆ ರಸ್ತೆಯಲ್ಲಿ ಅವರು ಬರುತ್ತಿದ್ದ ಹಾಗೇ ಅಕಸ್ಮಾತ್ತಾಗಿ ಹಿಮಸಹಿತ ಬಿರುಗಾಳಿ ಎದ್ದಿತು. ಅದರೆದುರು ಇವರೇನು ಮುಂದುವರಿದಾರು? ಹಿಮಪಾತದ ಕಾರಣದಿಂದ ಇಬ್ಬರ ಸ್ಥಿತಿಯಂತೂ ಶೋಚನೀಯವಾಯಿತು. ಪಾರುಗಾಣುವ ದಾರಿ ಕಾಣದೆ ಆ ತಂಡದ ಮುಖ್ಯಸ್ಥ ತನ್ನ ವಯರ್‌ಲೆಸ್ ಸೆಟ್ ಮೂಲಕ ಸಂದೇಶ ರವಾನಿಸಿದ. ಕೇಳಿದ ಎಂಥವರ ಎದೆಯೂ ಕರಗಬೇಕು. ಅಂಥ ಹೃದಯವಿದ್ರಾವಿಕ ಸಂದೇಶ ಅದು. ಕೇಳಿದ ಯಾರೋ ಮತ್ತೊಬ್ಬರಿಗೆ, ಅವರು ಮಗುದೊಬ್ಬರಿಗೆ ಹೀಗೇ ಸುದ್ದಿ ರಾಜಧಾನಿಯವರೆಗೂ ತೇಲಿ ಹೋಯಿತು. ಆ ಯಾತ್ರಾರ್ಥಿಗಳು ವಿದೇಶೀಯರು. ಅದರಲ್ಲೂ ಇಬ್ಬರು ಸುಪ್ರಸಿದ್ಧ ವಿಜ್ಞಾನಿಗಳು ಬೇರೆ ಆ ತಂಡದಲ್ಲಿದ್ದರು. ಅವರನ್ನು ಉಳಿಸಬಲ್ಲ ವೀರ ಯಾರು? "ಮಹೇಶ್ವರ ದತ್ ಮಾತ್ರ" ಎಂಬುದು ವಾಯುಪಡೆಯವರ ಉತ್ತರವಾಯಿತು. ಕೇವಲ ಉತ್ತರವಲ್ಲ ಅದು, ಭರವಸೆಕೂಡ.

*

ಹಿಂಡನ್ ಬೇಸ್‌ನಿಂದ ಹೆಲಿಕಾಪ್ಟರ್‌ನಲ್ಲಿ ಕಾರ್ಗಿಲ್‌ನೆಡೆ ಸಾಗಿದರು ಮಹೇಶ್ವರ ದತ್. ಸೂರ್ಯ ಕಂತುವ ತಾಸು ಮೊದಲೇ ಅಲ್ಲಿ ತಲುಪುತ್ತಿರುವಂತೆಯೆ ಅವರಿಗೊಂದು ಯೋಚನೆ

ಬಂತು: ಪೂರ್ತಿ ಕತ್ತಲಾವರಿಸುವ ಮುನ್ನವೇ ಒಮ್ಮೆ ಜನ್ಸಕರ್ ಘಾಟನ್ನು ಸುತ್ತಿ ಬರಬಾರದೇಕೆ? ಅಲ್ಲೊಮ್ಮೆ ನಿರೀಕ್ಷಣೆ ನಡೆಸಿದರೆ ಬೆಳಿಗ್ಗೆದ್ದ ಕೂಡಲೇ ಆ ವಿದೇಶೀ ಪ್ರವಾಸಿಗಳನ್ನು ಸುಲಭವಾಗಿ ಶೀಘ್ರವಾಗಿ ಪಾರು ಮಾಡಲು ಅನುಕೂಲ. ಯೋಚನೆ ಸರಿಯಾದುದೇ. ಜತೆಗೆ ಜನ್ಸಕರ್ ಘಾಟ್‌ನ ದೂರ ಹಾಗೂ ಅಲ್ಲಿ ಹೋಗಿ ವಾಪಸಾಗಲು ಹಿಡಿಯಬಹುದಾದ ವೇಳೆಗಳನ್ನೂ ತಾಳೆ ನೋಡಿದರು. ತಾವು ತಮ್ಮ ಯೋಚನೆಯಂತೆ ನಿರೀಕ್ಷಣೆ ನಡೆಸಿ ಸೂರ್ಯ ಮುಳುಗುವ ಮೊದಲೇ ಕಾರ್ಗಿಲ್ ತಲಪಬಹುದೆಂಬುದರಲ್ಲಿ ಅವರಿಗೆ ಅನುಮಾನವೇ ಉಳಿಯಲಿಲ್ಲ. ಹೊರಟೇಬಿಟ್ಟರು.

ಜನ್ಸಕರ್ ಘಾಟ್ ಮೇಲೆ ಸುತ್ತಾಡುತ್ತ ಕೆಳಗೆ ಇಣುಕಿ ನೋಡಿದ ಅವರಿಗೆ ಕೆಲವು ಜನ ಕಣ್ಣಿಗೆ ಬಿದ್ದರು. ಕೈಬೀಸಿ ಹೆಲಿಕಾಪ್ಟರನ್ನು ಇಳಿಸುವಂತೆ ಆ ಮಂದಿ ಸಂಜ್ಞೆಮಾಡುತ್ತಿದ್ದಂತೆ ಕಂಡಿತು. ಅವರು ಜರ್ಮನ್ ಪ್ರವಾಸಿಗಳೇ ಇರಬೇಕು ಎಂದುಕೊಂಡ ದತ್ ಸರಿಯಾದ ನಿರ್ಧಾರ ಕೈಗೊಳ್ಳಲು ಮೀನ-ಮೇಷ ಎಣಿಸಲೇ ಇಲ್ಲ.

ಹೆಲಿಕಾಪ್ಟರೇನೋ ಘಟ್ಟದ ರಸ್ತೆಯ ಮೇಲೆ ಇಳಿಯಿತು. ಅಗಲವಾದ ರಸ್ತೆಯ ಒಂದು ಬದಿಯಲ್ಲಿ ಹೆಲಿಪ್ಯಾಡ್‌ನಂಥ ಸಪಾಟಾದ ಜಾಗವಿದ್ದುದು ಒಳ್ಳೆಯದೇ ಆಗಿತ್ತು. ಅಲ್ಲದೆ ಹಿಮಗಾಳಿಯಾಗಲಿ, ಹಿಮಪಾತವಾಗಲಿ ಇರಲಿಲ್ಲ. ಆ ಜನ ಇವರತ್ತಲೇ ಓಡಿಬಂದರು. ಅವರು ಜರ್ಮನ್ ಪ್ರವಾಸಿಗರೇ. ಆದರೆ ಹಿಮಮಾರುತದಿಂದ ಘಾಸಿಗೊಂಡವರಲ್ಲ. ತೀರ ಅಸ್ವಸ್ಥರಾದ ಇಬ್ಬರನ್ನೂ ಅಲ್ಲಿಯೇ ಬಿಟ್ಟು ಜತೆಗೆ ನೋಡಿಕೊಳ್ಳಲು ಒಬ್ಬರನ್ನು ಉಳಿಸಿ ಇವರು ನೆರವು ದೊರೆತೀತೆಂಬ ಆಸೆಯಿಂದ ಮುಂದೆ ಸಾಗಿ ಬಂದಿದ್ದರು.

ದತ್ ಒಂದು ರೀತಿಯ ಇಬ್ಬಂದಿಯಲ್ಲಿ ಸಿಲುಕಿದರು. ಈ ಸ್ವಸ್ಥ ಜನರನ್ನು ಇಲ್ಲಿಂದ ಪಾರು ಮಾಡಬೇಕು ನಿಜ. ಆದರೆ ಇವರು ಹಿಂದೆ ಬಿಟ್ಟು ಬಂದ ತೀರ ಅಸ್ವಸ್ಥರಿಗೆ ತುರ್ತಾಗಿ ನೆರವು ಅತ್ಯವಶ್ಯ. ಇಲ್ಲದಿದ್ದರೆ ಅವರು ಸತ್ತು ಹೋದಾರು.

"ದಯವಿಟ್ಟು ಆ ನಿಮ್ಮ ಅಸ್ವಸ್ಥ ಸಂಗಾತಿಗಳನ್ನು ಕೂಡಲೇ ಇಲ್ಲಿಗೆ ಕರೆತನ್ನಿ. ಕಾರ್ಗಿಲ್‌ಗೆ ಹೋಗೋಣ. ತಡಮಾಡಿದಷ್ಟು ತೊಂದರೆ ಜಾಸ್ತಿ.... ನಾನಿಲ್ಲಿಯೇ ನಿಮಗಾಗಿ ಕಾದಿರುತ್ತೇನೆ," ಜನರಿಗೆ ಹೇಳಿದರು ದತ್.

ಅವರು ಹಿಂದೆ ಸಾಗಿ ಆ ಅಸ್ವಸ್ಥರಿಬ್ಬರನ್ನೂ ಕರೆದುತರುವ ಹೊತ್ತಿಗೆ ಕತ್ತಲು ಮುಸುಕಿಬಿಟ್ಟಿತು. ಪರ್ವತ ಪ್ರದೇಶಗಳಲ್ಲಿಯಂತೂ ಅದು ತರಾತುರಿಯಿಂದ ಆವರಿಸಿ ಬಿಡುತ್ತದೆ. ದತ್ ಲಗುಬಗೆಯಿಂದ ಆ ಆರೂ ಮಂದಿಯನ್ನು ಹೆಲಿಕಾಪ್ಟರಿನೊಳಗೆ ಕೂರಿಸಿಕೊಂಡು ಕಾರ್ಗಿಲ್ ಪಾರಿ ಓಡಿದರು.

ದಿಕ್ಕು ದೆಸೆ ಗೊತ್ತಾಗದ ಕರಿಬಯಲಲ್ಲಿ ಹೆಲಿಕಾಪ್ಟರು ಹೊರಟಿತ್ತು. ಶಿಖರಗಳಿಗಿಂತ ಎತ್ತರಕ್ಕೆ ಹೋದರೆ ಖಂಡಿತ ಅಷ್ಟಿಷ್ಟು ಬೆಳಕು ಕಾಣುತ್ತದೆಂಬುದು ದತ್‌ಗೆ ಅನುಭವದಿಂದ ಗೊತ್ತಿತ್ತು. ಹಾಗೇ ಮಾಡಿದರು. ಸಂಜೆಬೆಳಕು ಪೂರ್ಣ ಲುಪ್ತಗೊಳ್ಳುವ ಮುನ್ನವೇ ಎತ್ತರಕ್ಕೆ ಹಾರಿದ್ದರು. ಮುಚ್ಚಂಜೆಯು ಮೀರುವ ಹೊತ್ತಿನ ಮೋಡವೇ ಮೋಡ. ಸುತ್ತ ದೃಷ್ಟಿ ಹಾಯಿಸಿದಲ್ಲೆಲ್ಲ ಪರ್ವತಗಳ ರೂಹು ಮಾತ್ರ ಕಾಣಿಸುತ್ತಿರುತ್ತದೆ. ಅದರಾಚೆ ಮಂದಾಗ್ನಿ ಜ್ವಲಿಸಿದ ಹಾಗೆ ತೋರುವ ಕೆಂಪು ಕ್ರಮೇಣ ಕಡಿಮೆಯಾಗುತ್ತ ಆ ರೂಹನ್ನೂ ಕತ್ತಲಿಗೆ ಒಪ್ಪಿಸಿ ಕೂತು ಬಿಡುತ್ತದೆ.

ಮೋದವೇನೋ ಸರಿ. ಅದು ಕ್ಷಣಿಕ. ಆದರೆ ಅದರಲ್ಲೇ ಮೈಮರೆತರೆ ಜೀವ ಕಳಕೊಳ್ಳಬೇಕಾದ ಪ್ರಸಂಗ. ಯಾಕೆಂದರೆ ಪರ್ವತ ಶಿಖರಗಳೇ ಕಾಣದೇ ಕತ್ತಲಲ್ಲಿ ಹೆಲಿಕಾಪ್ಟರು ಅವಕ್ಕೆ ಅಪ್ಪಳಿಸಿದರೆ ಅದರ ಸಹಿತ ಅವರೂ ಅಪ್ಪಚ್ಚಿಯಾಗಬೇಕಾದೀತು. ಆದ್ದರಿಂದ ಕಾರ್ಗಿಲ್ ತಲಪುವ ಯೋಚನೆಯನ್ನೇ ಬಿಟ್ಟುಬಿಡಬೇಕು.

ಬಿಟ್ಟು ಕೊಟ್ಟ ದತ್ ಲೇಹ್‌ನೆಡೆಗೆ ಮುಖ ತಿರುಗಿಸಿದರು.

ಅತ್ತ ಕಾರ್ಗಿಲ್‌ನಲ್ಲಿ ದತ್ ಈ ಹೊತ್ತಿಗಾಗಲೇ ಬರಬೇಕಿತ್ತಲ್ಲ ಎಂದು ಕಾದುಕಾದು ಸೈನ್ಯಾಧಿಕಾರಿ

ಗಳು ಚಿಂತೆ ಹೊತ್ತು ಕೂತರು. ವಯರ್‌ಲೆಸ್ ಮೂಲಕ ನಿರಂತರವಾಗಿ ಸಂದೇಶಗಳನ್ನು ಕಳುಹಿಸುವುದು ಮಾತ್ರ ಆಗ ಅವರು ಮಾಡಬಹುದಾದ ಕೆಲಸವಾಗಿತ್ತು. ಇಪ್ಪತ್ತೊಂದು ಸಾವಿರ ಅಡಿ ಎತ್ತರದಲ್ಲಿ ಉಡ್ಡಯನ ನಡೆಸುತ್ತಿದ್ದ ದತ್‌ಗೆ ಒಂದು ಸಂದೇಶ ಮಾತ್ರ ತಲಪಿದಾಗ ತಮ್ಮ ಉದ್ದೇಶವನ್ನು ಅವರು ಸ್ಪಷ್ಟವಾಗಿ ತಿಳಿಸಿಬಿಟ್ಟರು. ಇದರಿಂದ ನಿರುಮ್ಮಳಗೊಂಡ ಕಾರ್ಗಿಲ್ ಜನ ಲೇಹ್‌ನ ಸಹೋದ್ಯೋಗಿಗಳಿಗೆ ದತ್ ಬರುತ್ತಿರುವುದರ ಸೂಚನೆ ನೀಡಿದರು.

ಲೇಹ್ ಬಗ್ಗೆ ಕಣ್ಣು ಕಟ್ಟಿಕೊಂಡು ಬೇಕಾದರೂ ಹೇಳಿಬಿಡಬಲ್ಲಷ್ಟು ಮಾಹಿತಿಯಿದ್ದವರು ದತ್. ಇಪ್ಪತ್ತೊಂದು ಸಾವಿರ ಅಡಿಗಳಷ್ಟು ಎತ್ತರದಿಂದಲೇ ಕೆಳಗೆ ಹರಿಯುತ್ತಿದ್ದ ಸಿಂಧೂ ನದಿಯನ್ನು ದತ್ ಸರಿಯಾಗಿ ಗುರುತಿಸಿದರು. ಅದನ್ನು ಅನುಸರಿಸಿಯೇ ಹೊರಟರು. ತುಸು ದೂರ ಸಾಗುವಷ್ಟರಲ್ಲಿಯೇ ಅವರಿಗೆ ಲೇಹ್ ಬೇಸ್‌ನಿಂದ ವಯರ್‌ಲೆಸ್ ಸಂದೇಶಗಳು ಪ್ರಾಪ್ತವಾಗತೊಡಗಿದವು. ಕೆಲವು ಕ್ಷಣಗಳಲ್ಲೇ ಆ ನಗರದ ಮಿಣುಕು ದೀಪಗಳು ಸ್ವಾಗತಕೋರಿದವು. ಅಲ್ಲಿ ವಿಮಾನ ನಿಲ್ದಾಣ ಎಲ್ಲಿದೆ ಎಂಬುದು ದತ್ ಬಲ್ಲ ಸಂಗತಿ. ನೇರ, ಅದರ ಮೇಲೆಯೇ ಹೆಲಿಕಾಪ್ಟರನ್ನು ಕೊಂಡೊಯ್ದರು. ಕೆಳಗೆ ನಿಲ್ದಾಣ ಸಿಬ್ಬಂದಿಯೂ ಸರಿಯಾಗಿ ಗುರುತಿಸಿದ್ದೇವೆಂದು ಸಂಜ್ಞೆನೀಡುತ್ತಲಿದ್ದರು.

ಈಗ ಹೆಲಿಕಾಪ್ಟರನ್ನು ಇಳಿಸಬೇಕು.

ಅದೇ ದೊಡ್ಡ ಸಮಸ್ಯೆ.

ಲೇಹ್‌ನಲ್ಲಿ ಆಗ ವಿದ್ಯುತ್ ಪೂರೈಕೆ ಇರಲಿಲ್ಲ. ವಿಮಾನ ನಿಲ್ದಾಣಕ್ಕಂತೂ ಪರ್ಯಾಯ ಬೆಳಕಿನ ವ್ಯವಸ್ಥೆಯೂ ಸಾಧ್ಯವಾಗಲಿಲ್ಲ. ಏನೇ ಆದರೂ ಹೆಲಿಕಾಪ್ಟರನ್ನಂತೂ ಇಳಿಸಲೇಬೇಕಲ್ಲ.....

ದತ್ ನಿಲ್ದಾಣಾಧಿಕಾರಿಗಳಿಗೆ ಕೂಡಲೇ ಕೆಲವು ವಾಹನಗಳನ್ನು ತರಿಸಿ ಅವುಗಳ ಹೆಡ್‌ಲೈಟ್ ಬೆಳಕಿನ ವ್ಯವಸ್ಥೆ ಮಾಡಬೇಕೆಂದು ಕೋರಿದರು. ಆ ಬೆಳಕಿನಲ್ಲಿ ಏರೋಡ್ರೋಮ್ ಸ್ಪಷ್ಟವಾಗಿ ಕಂಡು ಇಳಿಯಲು ಅನುಕೂಲವಾಗುತ್ತದೆ ಎಂಬುದು ದತ್ ಲೆಕ್ಕಾಚಾರ.

ಅವರ ಅಪೇಕ್ಷೆಯಂತೆ ತುರ್ತಾಗಿ ವ್ಯವಸ್ಥೆ ಮಾಡಲಾಯಿತು.

ಈಗ ಏರೋಡ್ರೋಮಿನ ಎಡಗಡೆ ಸೀಮೆ ಎಣ್ಣೆಯಲ್ಲಿ ಕೆಲವು ಬಟ್ಟೆಗಳನ್ನು ಅದ್ದಿ ಬೆಂಕಿ ಹೊತ್ತಿಸುವಂತೆ ದತ್ ವಿನಂತಿಸಿಕೊಂಡರು. ಅದೂ ಪೂರೈಸಲ್ಪಟ್ಟಿತು.

ಲೇಹ್ ಪ್ರದೇಶ ಪರ್ವತಗಳ ಮಧ್ಯದಲ್ಲಿರುವಂಥದು. ಪರ್ವತ ಶಿಖರಗಳು ಮಸುಕಾಗಿಯಾದರೂ ತೋರದಷ್ಟು ಕತ್ತಲು. ಇಂಥದರಲ್ಲಿ ಹೆಲಿಕಾಪ್ಟರನ್ನು ಇಳಿಸುವುದೇನು ಸುಲಭವೆ? ದತ್ ಸಾವಧಾನದಿಂದ ಹೆಲಿಕಾಪ್ಟರು ತನ್ನ ಮೈಸುತ್ತ ಸುತ್ತುತ್ತಲೇ ಕೆಳಗೆ ಇಳಿಯುವಂತೆ ನೋಡಿಕೊಂಡರು. ಅವರು ರನ್‌ವೇಯ ಎಡಗಡೆ ಉರಿಯುತ್ತಿದ್ದ ಬಟ್ಟೆಗಳ ಬೆಂಕಿಯನ್ನೇ ಕೇಂದ್ರಬಿಂದುವನ್ನಾಗಿ ಮಾಡಿಕೊಂಡಿದ್ದರು. ಹೆಲಿಕಾಪ್ಟರು ಇಳಿಯಬೇಕಾದದ್ದು ಈ ಬೆಂಕಿಯ ಬಲಗಡೆಗೆ ಧೈರ್ಯ-ಆತ್ಮವಿಶ್ವಾಸಗಳೇ ಆಗ ಅವರ ನೆರವಿಗೆ ಬಂದದ್ದು. ಸಾಮಾನ್ಯ ಪರಿಸ್ಥಿತಿಗಳಲ್ಲಿ ಅಸಂಭವವೆನ್ನಬಹುದಾದ ಕಾರ್ಯ ಅದು. ಯಾಕೆಂದರೆ ರಾತ್ರಿ ಹೊತ್ತಿನಲ್ಲಿ ಹೆಲಿಕಾಪ್ಟರು ಇಳಿಸುವುದಕ್ಕೆ ಪ್ರಖರ ಬೆಳಕು ಅತ್ಯವಶ್ಯ ಬೇಕು. ಇಂಥ ಪ್ರಖರ ಬೆಳಕಿನೆದುರು ಈ ಸೀಮೆಯೆಣ್ಣೆಯ ಬೆಂಕಿಯ ಬೆಳಕು ಮೋಂಬತ್ತಿಯ ಪ್ರಕಾಶಕ್ಕೆ ಸಮ.

ಮುಂದೆ ವಿ.ವಿ.ಐ.ಪಿ. ಸ್ಕ್ವಾಡ್ರನ್‌ಗೆ ಅವರ ಆಯ್ಕೆಯಾಯಿತು. ನಂತರ ಕಾಲೇಜ್ ಆಫ್ ಡಿಫೆನ್ಸ್ ಮ್ಯಾನೇಜ್‌ಮೆಂಟನಲ್ಲಿ ಪ್ರಶಿಕ್ಷಣ ಪಡೆದರು.



೧೯೮೨ರ ಅಕ್ಟೋಬರ್ ೧೪.

ಹಿಮಾಚಲ ಪ್ರದೇಶದ ಸೋಲನ್ ಜಿಲ್ಲೆಯ ಪರ್ವತಾಗ್ರದ ಹೋಟಲು. ಬೆಳಗಿನ ಆರೂ ಕಾಲಿನಷ್ಟು ಹೊತ್ತಿಗಾಗಲೇ ಧ್ವನಿವರ್ಧಕ ಅರಚತೊಡಗಿತ್ತು.

ಯಾವುದೋ ಸಿನಿಮಾ ಹಾಡಲ್ಲ ಅದು:

ಟ್ರಾಲಿ ಟ್ರೇಲ್ ತ್ರಿಶಂಕುಗಳು



ಕಾಳಜಿಯುಕ್ತ, ಅನುಕಂಪಪೂರಿತ, ಕಳಕಳಿಯ ಧ್ವನಿ.

"ಪ್ರಿಯ ಯಾತ್ರಿಕರೆ, ನನ್ನ ಧ್ವನಿ ನಿಮ್ಮ ತನಕ ತಲಪುತ್ತಿದೆಯಾದರೆ ನಿಮ್ಮ ಯಾವುದಾದರೂ ಬಟ್ಟೆಯನ್ನು ಗಾಳಿಯಲ್ಲಿ ನೇತಾಡಿಸಿ. ಹಾಂ... ಗಾಬರಿಗೊಳ್ಳಬೇಡಿ. ಹೆಲಿಕಾಪ್ಟರು ನಿಮ್ಮನ್ನು ಪಾರು ಮಾಡಲು ಬರುತ್ತಲಿದೆ..."

ಒಂದಲ್ಲ, ನಾಲ್ಕು ಬಾರಿ ಅದನ್ನೇ ಪುನರಾವರ್ತಿಸಿದರು ಕಸೌಲಿಯ ೬೫ ಇನ್‌ಫಂಟ್ರಿ ಬ್ರಿಗೇಡಿನ ಕ್ಯಾಪ್ಟನ್ ನರೇಂದ್ರ ಸಿಂಹ.

ಸುತ್ತ ಸೇರಿದ ಸಾವಿರಾರು ಜನರೆಲ್ಲರ ದೃಷ್ಟಿ ಒಂದು ಸಾವಿರ ಅಡಿ ಎತ್ತರದಲ್ಲಿ ತೂಗಾಡುತ್ತಿದ್ದ ಟ್ರಾಲಿಯ ಮೇಲೆಯೇ ಕೇಂದ್ರೀಕೃತವಾಯಿತು.

ಸೇರಿದ್ದ ಜನರಲ್ಲಿ ಅನೇಕರು ಮುಖದಲ್ಲಿ ಆತಂಕ ಹೊತ್ತವರು. ಮೇಲೆ ನೇತಾಡುತ್ತಿದ್ದ ಟ್ರಾಲಿಯಲ್ಲಿದ್ದವರ ಸಂಬಂಧಿಗಳಿವರು. ಒಂದು ವೇಳೆ ಟ್ರಾಲಿಯಲ್ಲಿನ ಜನ ಬಟ್ಟೆಯನ್ನು ಗಾಳಿಯಲ್ಲಿ ಹಾರಾಡಿಸಿದರೆ ಅವರು ಸುರಕ್ಷಿತ ಎಂದು ಇವರಿಗೆ ಗೊತ್ತಾಗುತ್ತದೆ; ಅಷ್ಟರ ಮಟ್ಟಿಗೆ ದುಗುಡ ಕಮ್ಮಿಯಾಗುತ್ತದೆ ಎಂಬುದು ಕ್ಯಾ. ನರೇಂದ್ರ ಸಿಂಹರ ಉದ್ದೇಶ.

ಟ್ರಾಲಿಯತ್ತಲೇ ಕಣ್ಣು ಕೀಲಿಸಿದ್ದ ಜನ ಒಕ್ಕೊರಲಿಂದ 'ಹೋ' ಎಂದರು. ಕೆಲವರು ಚಪ್ಪಾಳೆ ತಟ್ಟಿದರು. ಆನಂದಾಶ್ರುಗಳನ್ನು ಸುರಿಸಿದ ಕಣ್ಣುಗಳೆಷ್ಟೊ. ಟ್ರಾಲಿಯ ಕ್ಯಾಬಿನ್ನಿನಿಂದ ಹೊರಗೆ ಹಳದಿ ಬಣ್ಣದ ದುಪಟ್ಟಾ ಹಾರಾಡಿದ್ದು ಅವರೆಲ್ಲ ತಮಗರಿವಿಲ್ಲದಂತೆ ಈ ರೀತಿ ಪ್ರತಿಕ್ರಿಯಿಸಿದ್ದಕ್ಕೆ ಕಾರಣ. ಕ್ಯಾಪ್ಟನ್ ನರೇಂದ್ರ ಸಿಂಹರಂತೂ ಉತ್ಸಾಹಿತರಾಗಿ ಮತ್ತೊಮ್ಮೆ ಘೋಷಿಸಿದರು:

"ಹೆಲಿಕಾಪ್ಟರು ನಿಮ್ಮನ್ನೆಲ್ಲ ಪಾರು ಮಾಡಲು ಬರುತ್ತಿದೆ."

ಟ್ರಾಲಿಯಲ್ಲಿ ಸಿಕ್ಕಿ ಹಾಕಿಕೊಂಡ ಯಾತ್ರಿಕರು ಅದೇನನ್ನೋ ಹೇಳಬಯಸಿದ್ದಂತೆ ಕಂಡಿತು. ಅಷ್ಟು ಎತ್ತರದಿಂದ, ಟ್ರಾಲಿಯ ಕ್ಯಾಬಿನ್ನಿನೊಳಗಿಂದಲೇ ಕೇಳಿ ಬರುತ್ತಿದ್ದ ಕೂಗು ಅಸ್ಪಷ್ಟವಾಗಿತ್ತು. ಕ್ಯಾ. ನರೇಂದ್ರ ಸಿಂಹ ಮತ್ತೆ ಮೈಕನ್ನೆತ್ತಿಕೊಂಡು ಅಲ್ಲಿ ಸೇರಿದ್ದವರನ್ನೆಲ್ಲ ದಯವಿಟ್ಟು ಶಾಂತರಾಗಿರುವಂತೆ ಕೋರಿಕೊಂಡರು.

ಮೌನ ನೆಲಸಿತು.

ಟ್ರಾಲಿಯ ಕ್ಯಾಬಿನ್ನಿನಿಂದ ತೂರಿ ಬಂತು ಒಂದು ಸ್ತ್ರೀಧ್ವನಿ.

"ನಾನು ಶ್ರೀಮತಿ ಟಂಡನ್. ದಯವಿಟ್ಟು ಹೇಳಿ ಕ್ಯಾಪ್ಟನ್.. ನಿನ್ನೆ ಕ್ಯಾಬಿನ್ನಿನಿಂದ ಹೊರಕ್ಕೆ ನೆಗೆದ ದೇಬಾಶಿಶ್ ಮತ್ತು ಅಟೆಂಡೆಂಟ್ ಈಗ ಹೇಗಿದ್ದಾರೆ?"

"ಇಬ್ಬರೂ ಸೌಖ್ಯವಾಗಿದ್ದಾರೆ. ಯಾರೂ ಕಾಳಜಿ ಮಾಡಬೇಡಿ. ಹಾಂ.. ನೀವು ಸೌಖ್ಯವಾಗಿದ್ದೀರಿ ತಾನೆ?"- ಕ್ಯಾ. ನರೇಂದ್ರ ಸಿಂಹ ಕೇಳಿದರು.

ಅತ್ತಲಿಂದ ಉತ್ತರವೇ ಬರಲಿಲ್ಲ. ಬಹುಶಃ ಕ್ಯಾಪ್ಟನ್ನರ ಮಾತು ಅವರಿಗೆ ನಂಬಿಕೆ ಹುಟ್ಟಿಸಿರಲಿಲ್ಲವೊ ಏನೊ. ಒಂದು ಸಾವಿರ ಅಡಿ ಎತ್ತರದಿಂದ ಕೆಳಕ್ಕೆ ನೆಗೆದ ವ್ಯಕ್ತಿಗಳು ಸೌಖ್ಯದಿಂದಿರಲು ಸಾಧ್ಯವೆ? ಎಂಬ ಶಂಕೆ ಟ್ರಾಲಿಯಲ್ಲಿದ್ದವರನ್ನು ಕಾಡಿರಬೇಕು. ನಿಜವಿದ್ದ ಸಂಗತಿಯೆಂದರೆ ಟ್ರಾಲಿಯ ಅಟೆಂಡೆಂಟ್ ಗುಲಾಂ ಹುಸೇನ್ ಅಷ್ಟೆತ್ತರದಿಂದ ಬಿದ್ದು ನೆಲಕ್ಕೆ ಅಪ್ಪಳಿಸುತ್ತಲೇ ಅಲ್ಲಾಹನಿಗೆ ಪ್ರಿಯನಾಗಿದ್ದ. ದೇಬಾಶಿಶನಂತೂ ಚಂಡೀಗಢದ ಪಿಜಿಐ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದಲ್ಲಿ ಜೀವನ್ಮರಣಗಳ ಮಧ್ಯೆ ತೂಗುಯ್ಯಾಲೆಯಾಡುತ್ತಲಿದ್ದ.

ಸೈನ್ಯಾಧಿಕಾರಿಯಿಂದ ಮೈಕ್ ಮೂಲಕ ಅಂತರಾಳದಲ್ಲಿ ಆತಂಕಗೊಂಡಿದ್ದವರಿಗೆ ಸಮಾಧಾನ-ಸೂಚನೆ ನೀಡುವ ಕೆಲಸವಿನ್ನೂ ಮುಂದುವರಿದೇ ಇತ್ತು. ಸೋಲನ್ ಜಿಲ್ಲಾಧಿಕಾರಿ, ಜಿಲ್ಲಾ ಮ್ಯಾಜಿಸ್ಟ್ರೇಟರು ಮತ್ತು ರಾಜ್ಯದ ಪ್ರವಾಸೋದ್ಯಮ ಮಂತ್ರಿಯೂ ಬಂದು ತಲುಪಿದರು.

ಮುಂಜಾನೆಯ ಹತ್ತೂವರೆಯ ವೇಳೆಗೆ ಸರಸಾವಾ ವಿಮಾನ ನಿಲ್ದಾಣದಿಂದ 'ಚೇತಕ್' ಎಂಬ ವಿಶೇಷ ಹೆಲಿಕಾಪ್ಟರು ಬರುವವರೆಗೂ ಟ್ರಾಲಿಯ ಕ್ಯಾಬಿನ್ನಿನಲ್ಲಿ ಸಿಕ್ಕಿ ಹಾಕಿಕೊಂಡಿದ್ದವರಿಗೆ ಜೀವದಲ್ಲಿ

ಜೀವವಿರಲಿಲ್ಲ. ಆದರೆ 'ಚೇತಕ್' ಕಾರ್ಯಾಚರಣೆಗೆಂದಲ್ಲ, ಕೇವಲ ಘಟನಾ ಸ್ಥಳದ ವೀಕ್ಷಣೆಗೆ ಬಂದದ್ದು ಎಂದು ತಿಳಿದಾಗ ಅವರೆಲ್ಲ ಮತ್ತೆ ಚಿಂತಿತರಾದರು. ಕೆಳಗೆ ಜನಸಾಗರದ ಪಾತ್ರ ಹೆಚ್ಚುತ್ತಲೇ ಸಾಗಿತ್ತು.

"ಹೆಲಿಕಾಪ್ಟರು ಬಂತ್ಯಾಕೆ? 'ಬಂದ' ಹಾದಿಯಲ್ಲೇ ಹೋತ್ಯಾಕೆ?" ಎಂಬುದರ ಕುರಿತು ತಮತಮಗೆ ತಿಳಿದಂತೆ ಕಾರಣ ಕಟ್ಟುತ್ತ ಆ ಜನ ಇನ್ನಷ್ಟು ಚಿಂತೆಯನ್ನು ತುಂಬಿಕೊಂಡರು.

ಆದರೆ ಕೆಲ ಕ್ಷಣಗಳಲ್ಲೇ ಅವರ ಚಿಂತೆಯನ್ನು ದೂರಕ್ಕೆ ತಳ್ಳಲು ಹಾರಿ ಬಂದವು 'ಚೀತಾ' ಮತ್ತು 'ಎಂ.ಆಯ್.೧೭' ಹೆಲಿಕಾಪ್ಟರುಗಳು. ಬಂದವಷ್ಟೇ. ಅವೂ ಹತ್ತಾರು ಸುತ್ತು ಹಾಕಿ ಹೊರಟು ಹೋದಾಗ ಸೇರಿದ್ದ ಜನರೆಲ್ಲ "ಈ ವಾಯುಪಡೆಯವರೇನು ಚೇಷ್ಟೆ ಮಾಡುತ್ತಿದ್ದಾರೆಯೆ?" ಎಂದೆಲ್ಲ ಬೈಯತೊಡಗಿದರು.

ಅಂತೂ ಹನ್ನೊಂದೂವರೆಗೆ ಪತ್ರಕರ್ತರು ಜನರ ತುಮುಲವನ್ನು, ತಳ್ಳಂಕವನ್ನು ಸೈನ್ಯಾಧಿಕಾರಿಗಳೆದುರು ತೆರೆದಿಟ್ಟರು. "ಯಾಕೆ ಈ ವಿಳಂಬ?" ಎಂದೂ ಕೇಳಿದರು.

"ನೋಡಿ, ಇದು ತುಂಬ ಯೋಚಿಸಿ ಮಾಡಬೇಕಾದ ಕೆಲಸ. ಚಂಡೀಗಢದ ಹೆಲಿಕಾಪ್ಟರ್ ವಿಂಗ್‌ನ ಮೇಜರ್ ಜನರಲ್ ಬಲದೇವ ಸಿಂಹರು ಇದರ ಕರ್ಣಧಾರತ್ವ ವಹಿಸಿದ್ದಾರೆ. ಅವರ ಸಾಮರ್ಥ್ಯವನ್ನು ನೀವೇ ನಿಮ್ಮ ಪತ್ರಿಕೆಗಳಲ್ಲಿ ಕೊಂಡಾಡಿದ್ದೀರಿ. ಅವರೆಂದೂ ಅವಸರದ ಹೆಜ್ಜೆಯಿಟ್ಟವರಲ್ಲ. ಇಟ್ಟ ಹೆಜ್ಜೆಗಳೆಲ್ಲ ಗಟ್ಟಿಯಾದವುಗಳೇ. ಈಗಲೂ ಅವರು ಅಂಥದೊಂದು ಗಟ್ಟಿ ಹೆಜ್ಜೆಯಿಡಲು ತಯಾರಿ ನಡೆಸಿದ್ದಾರೆ. ತಡೆದು ನೋಡಿರಲ್ಲ.." ಎಂದಷ್ಟೇ ಹೇಳಿದರು.

ಮತ್ತೆ ಮತ್ತೆ ಹೆಲಿಕಾಪ್ಟರುಗಳು ಹಾರಿ ಬರಬೇಕು. ಸುತ್ತಾಟ ನಡೆಸಿ ಮರಳಬೇಕು. ನಾಲ್ಕು ಗಂಟೆ ದಾಟಿದರೂ ಇದೇ ಮುಂದುವರಿದಾಗ ಬೇಸತ್ತ ಜನರಲ್ಲಿ ಕೆಲವರು ಮನೆಗೆ ತೆರಳಿದರು.

ಇನ್ನು ಕೆಲವರು "ಈ ವಾಯುಪಡೆಯವರ ಕೈಯಿಂದ ಆಗುವಂಥ ಕೆಲಸವಿದಲ್ಲ ನಡೆಯಿರೋ" ಎಂದು ಆಮೇಲೆ ಬರುವ ಇರಾದೆಯಿಂದ ಅಲ್ಲಲ್ಲಿ ಕೂತು ತಮ್ಮ ತಲುಬು ತೀರಿಸಿಕೊಳ್ಳುವ ತಯಾರಿ ನಡೆಸತೊಡಗಿದರು.

ಕಳೆದ ೨೪ ಗಂಟೆಗಳಿಂದಲೂ ಆ ಟ್ರಾಲಿಯ ಕ್ಯಾಬಿನ್ನಿನಲ್ಲಿ ಕೂತವರ ಗತಿ ಇನ್ನೇನಾಗಿರಬೇಡ? ಅಲ್ಲಿ ಅವರಿಗೇನು ನೀರೇ-ನಿಡಿಯೆ? ತಿನ್ನುಣ್ಣಲು ಸಿದ್ಧ ಎಡೆಯೆ? ಉಗುಳು ನುಂಗಿಕೊಂಡು ಗಂಟಲಾರದಂತೆ ನೋಡಿಕೊಂಡಿದ್ದ ಅವರಿಗೆಲ್ಲ ಕಣ್ಣೀರು ಕೂಡ ಬತ್ತಿ ಹೋಗಿತ್ತು. ಅಷ್ಟು ಎತ್ತರದಲ್ಲಿ ಚಳಿಯಲ್ಲಿ ಆದಾಗಲೇ ಒಂದು ರಾತ್ರಿಯನ್ನು ಕಳೆದಿದ್ದ ಆ ಜನ ಅನಿವಾರ್ಯವಾಗಿ ಇನ್ನೊಂದು ರಾತ್ರಿಯನ್ನು ಕಳೆಯುವುದಕ್ಕೆ ಮಾನಸಿಕವಾಗಿ ಸಿದ್ಧರಾಗತೊಡಗಿದ್ದರು.

ನಾಲ್ಕೂಕಾಲಿನ ಹೊತ್ತಿಗೆ ಅಲ್ಲಿಗೆ ಬಂದು ತಲಪಿದ ಟಿಂಬರ್ ಟ್ರೇಲ್‌ನ ಸುಪ್ರಸಿದ್ಧ ಇಂಜಿನಿಯರ್ ಕ್ರೂಪಿನ್ ವಿಕ್, "ಇದು ಈ ಹಿಂದೆಂದೂ ಕೇಳರಿಯದ ಸಂಗತಿ. ಯಾಕೆಂದರೆ ಹೀಗೆ ಟ್ರಾಲಿ ಮಧ್ಯದಲ್ಲೇ ಸ್ಥಗಿತಗೊಳ್ಳುವ ಶಕ್ಯವೇ ಇಲ್ಲ. ನಿಯಂತ್ರಣ ತಪ್ಪಿದರೆ ನೇರ ಹೋಗಿ ಪ್ಲಾಟ್‌ಫಾರ್ಮಿಗೆ ಅಪ್ಪಳಿಸಿ ನುಚ್ಚು ನೂರಾಗಬೇಕು. ಆದರೆ ಇದು ಹೀಗೆ ನಟ್ಟನಡುವೆಯೇ ಹೇಗೆ ನಿಂತಿತು ಎಂಬುದೇ ತಿಳಿಯದಾಗಿದೆ" ಎಂದು ಅಚ್ಚರಿ ವ್ಯಕ್ತಪಡಿಸಿದರು. "ಸದ್ಯ ದೇವರು ದೊಡ್ಡವನು. ಅದರಲ್ಲಿರುವವರ ಪ್ರಾಣಗಳನ್ನಾತ ರಕ್ಷಿಸಿದ್ದಾನಲ್ಲ..." ಎಂದು ಆಗಸದೆಡೆ ನೋಡಿ ಕೈಮುಗಿದರು.

ಅದೇ ವೇಳೆಗೆ ಎಂ.ಆಯ್. ೧೭ ಹೆಲಿಕಾಪ್ಟರು ಮತ್ತೊಂದು ಸಲ ಸುತ್ತಿತು: ಆಗ ನಾಲ್ಕೂವರೆಯಾಗಲು ಒಂದು ನಿಮಿಷವಷ್ಟೇ ಬಾಕಿ. ಹೆಲಿಕಾಪ್ಟರು ಟ್ರಾಲಿಯ ಸಮೀಪ ಇಳಿಯುವಲ್ಲಿ ಸಫಲವಾಯಿತೇನೋ ನಿಜ. ಆದರೆ ಹೆಲಿಕಾಪ್ಟರು ಬಂದಲ್ಲೆಲ್ಲ ಒಂದು ತೊಂದರೆ ಇದ್ದದ್ದೇ. ಅದರ ಪಂಖದ ಗಾಳಿಯ ಹೊಡೆತದ ತೊಂದರೆ. ಅದರಿಂದಾಗಿ ಟ್ರಾಲಿ ಅತ್ತಿತ್ತ ತೊಟ್ಟಿಲಂತೆ ಹೊಯ್ದಾಡತೊಡಗಿತು. ಅದರೊಳಗಿನ ಜನ ಬೊಬ್ಬೆ ಹೊಡೆಯ

ತೊಡಗಿದರು. ಎಂ.ಆಯ್. ೧೭ ಹೆಲಿಕಾಪ್ಟರು ಅಲ್ಲಿಂದ ಮೇಲಕ್ಕೇರದೇ ಅನ್ಯ ವಿಧಿಯಿರಲಿಲ್ಲ.

ಅದು ಮತ್ತೊಂದು ಸುತ್ತು ಬಂತು. ಆ ಮೇಲೆ ಅದೆಲ್ಲೋ ಮಟಾಮಾಯವಾಯಿತು.

ಈ ಸಲದ ಆದರ ಪ್ರಸ್ಥಾನ ಅದುವರೆಗಿನ ಎಲ್ಲ ಆತಂಕ, ಅನಿಶ್ಚಿತತೆಗಳಿಗೆ ತೆರೆ ಎಳೆಯಲೇನೋ ಎಂಬುದು ಯಾರ ಊಹೆಗೂ ಬಂದಿರಲಿಲ್ಲ. ಐದು ಗಂಟೆ ಇಪ್ಪತ್ತೈದು ನಿಮಿಷಕ್ಕೆ ಸರಿಯಾಗಿ ಬಂದ ಅದನ್ನು ಜನ ಕುತೂಹಲದಿಂದ ಸ್ವಾಗತಿಸಲೂ ಇಲ್ಲ.

ಆದರೆ...

ಮಹಾಸಾಹಸಿಕ ದೃಶ್ಯವೊಂದು ಅಲ್ಲಿ ಬಿಚ್ಚಿಕೊಳ್ಳತೊಡಗಿತು.

ಸರಸಾವಾದ '೧೫೨ ಹೆಲಿಕಾಪ್ಟರ್ ಯೂನಿಟ್'ನ ವೀರಚಕ್ರ ಪ್ರಶಸ್ತಿ ವಿಜೇತ ಪೈರಾ ಕಮಾಂಡೋದ ಕಮಾಂಡರ್ ಪಿ.ಸಿ. ಭಾರದ್ವಾಜ್ ಚಾಲಕರಾಗಿ ಬಂದಿದ್ದರೆಂಬುದು ಗೊತ್ತಿದ್ದ ಕ್ಯಾ. ನರೇಂದ್ರ ಸಿಂಹ ಈ ಆತಂಕದ ಕಥೆಗೊಂದು ಸುಖಾಂತ್ಯ ಒದಗಲಿದೆಯೆಂಬ ಭಾವ ಹೊತ್ತು ನಿಂತರು. ಪೈರಾ ಕಮಾಂಡೋದ ಗ್ರೂಪ್ ಕ್ಯಾಪ್ಟನ್ ಮೇಜರ್ ಇರ್ವಿನ್ ಜೊಸೆಫ್ ಕ್ರಸ್ಟೊ ತಮ್ಮ ಬದುಕನ್ನೇ ಪಣಕ್ಕೊಡ್ಡಿ ಅಸಾಧ್ಯ ಪರಾಕ್ರಮ ನಡೆಸಲು ಆರಂಭಿಸಿಯೇ ಬಿಟ್ಟರು.

ಆಕಾಶದಲ್ಲಿ ಸರ್ಕಸ್ ನಡೆಯುತ್ತಿದ್ದಂತಿತ್ತು ಆ ದೃಶ್ಯ. ಕೆಲವರು 'ದೊಂಬರಾಟ' ಎಂದು ಅಪಹಾಸ್ಯಗೈದದ್ದೂ ಉಂಟು.

ಮೇಜರ್ ಕ್ರಸ್ಟೊ ಒಂದು ಹಗ್ಗಕ್ಕೆ ತಮ್ಮನ್ನು ಬಂಧಿಸಿಕೊಂಡು ಹೆಲಿಕಾಪ್ಟರಿನಿಂದ ಇಳಿದು ಬರಲಾರಂಭಿಸಿದರು. ಕೆಳಗಿಂದ ನೋಡಿದವರಿಗೆ ಹಗ್ಗಕ್ಕೆ ಮಗುವಿನ ಗೊಂಬೆ ಕಟ್ಟಿದ್ದಾರೆ ಎನ್ನಿಸುವಷ್ಟು ಚಿಕ್ಕ ಆಕಾರ ತೋರಿಬಂತು. ಆದರೆ ಅದೇ ಆಕಾರ ಆಕಾಶದಲ್ಲಿ ಆಪದ್ಬಾಂಧವನಾಗಿ ಅವತರಿಸಿ ಬಂದು ಅದ್ಭುತ ಪವಾಡವನ್ನು ಕಣ್ಣೆದುರೇ ನಡೆಸಲಿದೆ ಎಂಬುದು ಯಾರಿಗೆ ಗೊತ್ತು?

ಆ ಹಗ್ಗದ ಕೊನೆ ಟ್ರಾಲಿಯ ಛತ್ತಿಗೆ ತಾಕುವಂತಿತ್ತು. ಮೇಜರ್ ಕ್ರಸ್ಟೋ ಛತ್ತಿನ ಮೇಲೆ ಕಾಲೂರಿ ನಿಂತರು.

ಸಾವಿರ ಅಡಿಗಳ ಎತ್ತರದಲ್ಲಿ ಹೊಯ್ದಾಡುತ್ತಿದ್ದ ಟ್ರಾಲಿಯ ಛತ್ತಿನ ಮೇಲೆ!

ಅಳ್ಳೆದೆಯವನಾದರೆ ಅದನ್ನು ನೋಡಿಯೇ ಬವಳಿ ಬಂದು ಬೀಳಬೇಕು. ಅಷ್ಟೆತ್ತರದಿಂದ ಕೆಳಗೆ ನೋಡಿದರೆ ಕಣ್ಣು ತಿರುಗಿ ತಲೆ ಸುತ್ತುವುದಂತೂ ಖಂಡಿತ. ಆದರೆ ಇದಕ್ಕೂ ಎಷ್ಟೋ ಎತ್ತರದಿಂದ ಅನೇಕ ಸಲ ಕೆಳಕ್ಕೆ ಇಣುಕಿದ ಅನುಭವ ಮೇಜರ್ ಕ್ರಸ್ಟೋರದು.

ಕ್ಯಾಪ್ಟನ್ ನರೇಂದ್ರ ಸಿಂಹ ಮೈಕ್ ಮೂಲಕ, ಸೇರಿದ ಜನಕ್ಕೆಲ್ಲ "ದಯವಿಟ್ಟು ಮಾತಾಡಬೇಡಿ. ನೀವು ಈಗ ವಹಿಸುವ ಮೌನ, ತಾಳ್ಮೆಗಳು ಬಚಾವು ಕಾರ್ಯಕ್ಕೆ ದೊಡ್ಡ ಬಲವಾಗುತ್ತವೆ" ಎಂದು ವಿನಂತಿಸಿಕೊಂಡರು.

ಜನಕ್ಕೆ ಸ್ವಲ್ಪ ಭರವಸೆ ಬಂದಂತಿತ್ತು. ಅವರು ಬಾಯಿ ತೆರೆದುಕೊಂಡು ಕಣ್ಣೆವೆಯಿಕ್ಕದೆಯೇ 'ಈ ಕೆಲಸದಲ್ಲಿ ಅವರಿಗೆ ಯಶ ಸಿಗಲಿ' ಎಂದು ಒಳಗೊಳಗೇ ಹಾರೈಸುತ್ತಲಿದ್ದರು.

ಆ ಟ್ರಾಲಿ ಒಟ್ಟು ಎಂಟು ದಪ್ಪ ತಂತಿಗಳ ಆಧಾರದ ಮೇಲೆ ನಡೆಯುವಂಥದು. ಮೇಜರ್ ಕ್ರಸ್ಟೋ ಛತ್ತಿನ ಮೇಲೆ ಕೂತು ತಂತಿಗಳನ್ನು ವೀಕ್ಷಿಸಿದರು. ಟ್ರಾಲಿ ನಟ್ಟನಡುವೆಯೇ ಸ್ಥಗಿತಗೊಂಡಿದ್ದರ ಕಾರಣ ಅವರಿಗೆ ಗೊತ್ತಾಯಿತು. ಎಂಟರ ಪೈಕಿ ಆರು ತಂತಿಗಳು ತುಂಡಾಗಿದ್ದವು. ಅಂದರೆ ಟ್ರಾಲಿ ನಿಂತಿರುವುದು ಎರಡೇ ತಂತಿಗಳ ಆಧಾರದ ಮೇಲೆ!

ಮೇಜರ್ ಕ್ರಸ್ಟೋ ಮನದಲ್ಲೇ ತಾಳೆ ಹಾಕಿದರು- ಅಂದರೆ ಟ್ರಾಲಿ ಇನ್ನು ಹೆಚ್ಚು ಭಾರ ಹೊತ್ತರೆ ಉಳಿದೆರಡು ತಂತಿಗಳೂ ತುಂಡಾಗುವುದು ದಿಟ. ಅದರ ಭಾರ ಹೆಚ್ಚಾಗದ ಹಾಗೆ, ಅದು ಹೆಚ್ಚು ತೂಗಾಡದ ಹಾಗೆ ನೋಡಿಕೊಳ್ಳುತ್ತಲೇ ಈ ಜನರನ್ನು ಪಾರುಗಾಣಿಸುವ ಯೋಜನೆ ಮಾಡಬೇಕು... ಅಂದರೆ ಈ ಕಾರ್ಯಕ್ಕೊಂದು ಮತ್ತೊಬ್ಬ ವ್ಯಕ್ತಿ ಹೆಲಿಕಾಪ್ಟರಿನಿಂದ ಇಳಿದು ಬಾರದ

ಹಾಗೆ ಮೊದಲು ನೋಡಿಕೊಳ್ಳಬೇಕು...

ಅವರು ತಮ್ಮ ವಯರ್‌ಲೆಸ್ ಸೆಟ್ ಮೂಲಕ ಪಿಸಿ. ಭಾರದ್ವಾಜರಿಗೆ ಆ ಇನ್ನೊಬ್ಬ ಇಳಿಯುವುದು ಬೇಡ ಎಂಬ ಸೂಚನೆಯಿತ್ತರು. ಹಾಗೆಯೇ ಟ್ರಾಲಿಯ ಸೂಕ್ಷ್ಮ ಸ್ಥಿತಿಯನ್ನೂ ವಿವರಿಸಿದರು.

ಜನ ಅವರ ಚಲನವಲನವನ್ನೇ ಗಮನಿಸುತ್ತಲಿದ್ದರು. ಅವರು ನೋಡುತ್ತಿದ್ದಂತೆಯೆ ಮೇಜರ್ ಕ್ರೆಸ್ಟೊ ಬಹು ಕುಶಲತೆಯೊಂದಿಗೆ ಟ್ರಾಲಿಯ ಒಳಗೆ ಇಳಿದುಬಿಟ್ಟರು! ಚಲಿಸುವ ಟ್ರೇನಿನ ಬೋಗಿಯಿಂದ ಬೋಗಿಗೆ ಬುಟ್ಟಿ ಹೊತ್ತುಕೊಂಡೇ ಸಾಗಿ ಹೋಗುವ ಸೇಂಗಾ ವ್ಯಾಪಾರಿಯ ಸಾಹಸವನ್ನು ನೋಡಿ, ದಂಗಾದ ಅನುಭವವಿದ್ದ ಜನ, ಮೇಜರ್ ಕ್ರೆಸ್ಟೋರ ಈ ಕ್ರಮದಿಂದ ಕಲ್ಲು ಗೊಂಬೆಗಳೇ ಆದರು.

ಆ ಕಲ್ಲುಗೊಂಬೆಗಳಿಗೆ ಇನ್ನೂ ಒಂದು ಅಚ್ಚರಿ ಕಾದಿತ್ತು.

ಮೇಜರ್ ಕ್ರೆಸ್ಟೊ ಕ್ಷಣಾರ್ಧದಲ್ಲೇ ಹರಿತ್ ಬಜಾಜ್ ಮತ್ತು ಆತನ ಮಗ ಸೋನುರನ್ನು ಹೆಗಲಮೇಲೆ ಕೂರಿಸಿಕೊಂಡರು. ಟ್ರಾಲಿಯ ಹೊರಗೆ ಕಾಣಿಸಿಕೊಂಡರು. ಹರಿತ್‌ರನ್ನು ಸಾವಧಾನದಿಂದ ಛತ್ತಿನ ಮೇಲೆ ಹತ್ತುವಂತೆ ಹೇಳಿ ಅವರಿಗೆ ನೆರವಾದರು ಕ್ರೆಸ್ಟೊ. ಛತ್ತಿನ ಮೇಲೇರಿದ ತಂದೆಗೆ ಮಗನನ್ನು ಎತ್ತಿಕೊಳ್ಳುವಂತೆ ಸೂಚಿಸಿದರು. ಆಮೇಲೆ ತಾವೂ ಏರಿನಿಂತು ಹೆಲಿಕಾಪ್ಟರಿನಿಂದ ತೂಗುತ್ತಿದ್ದ ಹಗ್ಗಕ್ಕೆ ಅವರಿಬ್ಬರನ್ನೂ ಬಂಧಿಸಿದರು.

ಆಕಾಶದಲ್ಲಿ ತನ್ನ ಮೈಸುತ್ತ ತಿರುಗುತ್ತ ಒಂದೆಡೆಯೆ ಸ್ಥಿತವಾಗಿದ್ದ ಹೆಲಿಕಾಪ್ಟರಿಗೆ ಕಟ್ಟಲ್ಪಟ್ಟಿದ್ದ ಆ ಹಗ್ಗದ ಉದ್ದ ಕಿರಿದಾಗುತ್ತ ಸಾಗಿತು.

ಹರಿತ್ ಹಾಗೂ ಮಗು ಸೋನು ಪಾರು ಮಾಡಲ್ಪಟ್ಟ ಸುದೈವಿಗಳಲ್ಲಿ ಮೊದಲಿಗರಾದರು. ಜನಕ್ಕೆ ಈಗ ಹರ್ಷ ವ್ಯಕ್ತಪಡಿಸಿ, ಹೋ ಎಂದು ಕೂಗಿ, ಚಪ್ಪಾಳೆ ತಟ್ಟಬೇಕೆಂಬುದನ್ನು ಮರೆಸಿಬಿಟ್ಟಿತ್ತು ಆ ಅಘಟಿತ ಘಟನೆ.

ಮೇಜರ್ ಕ್ರೆಸ್ಟೊ ಹೀಗೆ ನಾಲ್ಕು ಬಾರಿ



ಟ್ರಾಲಿಯಿಂದ ಟಾಪಿಗೆ ಸಾಗಿಸಿದ್ದು ಕೇವಲ ಐವರನ್ನು.

ಕತ್ತಲೆಗೆ ಆವರಿಸಿಕೊಳ್ಳುವ ಆತುರ. ಈ ಆತಂಕಿತರನ್ನೆಲ್ಲ ಪಾರುಮಾಡುವ ತನಕ ಕಾದಿರಬೇಕೆಂಬ ಅನುಕಂಪವೆಲ್ಲಿ ಅದಕ್ಕೆ?

ಕಾರ್ಯಾಚರಣೆಯನ್ನು ಅನಿವಾರ್ಯವಾಗಿ ಮುಂದೂಡಲೇಬೇಕಾಯಿತು.

ಆ ಟ್ರಾಲಿ ಒಂದು ಸಲಕ್ಕೆ ಅತ್ತಿಂದಿತ್ತ ಹತ್ತು ಜನರನ್ನು ಮಾತ್ರ ಸಾಗಿಸುವ ಸಾಮರ್ಥ್ಯವುಳ್ಳದ್ದು. ಅಂದರೆ ಒಳಗೆ ಉಳಿದವರು ಇನ್ನೈದು ಜನ. ಅವರ ಮನೋಬಲವನ್ನು ಕುಸಿಯದಂತೆ - ಮಾಡಲು ಮೇಜರ್ ಕ್ರಿಸ್ಟೊ ನಿರ್ಧರಿಸಿ ಅವರೊಂದಿಗೆ ಆ ರಾತ್ರಿ ಟ್ರಾಲಿಯಲ್ಲಿಯೇ ಉಳಿಯಬಯಸಿದರು. ಈ ಮೊದಲೇ ಯೋಚಿಸಿ ಬೆನ್ನಿಗೆ ಏರಿಸಿಕೊಂಡಿದ್ದ ಬ್ಯಾಗಿನಲ್ಲಿ ಬೆಚ್ಚನೆಯ ಬಟ್ಟೆಗಳು, ಮತ್ತಿತರ ಅತ್ಯವಶ್ಯ ಸಾಮಗ್ರಿಗಳಿದ್ದವು.

ಸಂಜೆ ಏಳು ಗಂಟೆಗೆ ಮೇಜರ್ ಕ್ರಿಸ್ಟೊ ವಯರ್‌ಲೆಸ್ ಮೂಲಕ ಕಮಾಂಡರ್ ಪಿ.ಸಿ. ಭಾರದ್ವಾಜರಿಗೆ "ಮತ್ತೆ ಮುಂಜಾನೆ ಸಿಗೋಣ" ಎಂದು ಹೇಳಿ ಟ್ರಾನ್ಸಿಸ್ಟರ್ ಹಚ್ಚಿಟ್ಟರು.

"ಮೈ ಆವಾರಾ ಹೂಂ... ಗರ್ದಿಶ್ ಮೆ ಮೈ ಆಸಮಾನ ಕಾ ತಾರಾ ಹೂಂ.."- ಮುಕೇಶ್ ಧ್ವನಿ ಮೆಲ್ಲನೆ ತೇಲಿ ಬಂದಾಗ ಸುತ್ತಲಿನ ನಕ್ಷತ್ರಗಳು ಟ್ರಾಲಿಯೊಳಗಿನ ಈ ನಕ್ಷತ್ರದೆಡೆ ಅಭಿಮಾನದಿಂದ ನೋಡಿದವು.

* *** *

ಹಿಮಾಚಲ ಪ್ರದೇಶದ ಸೋಲನ್ ಜಿಲ್ಲೆಯಲ್ಲಿ ಸಿಮ್ಲಾ-ಚಂಡೀಗಢ ರಾಷ್ಟ್ರೀಯ ಹೆದ್ದಾರಿಯ ಮೇಲೆ ಉದ್ಯಮ ನಗರವಾದ ಪರವಾಣು ಇದೆ. ಅದರ ಸಮೀಪದ ಪರ್ವತಗಳ ಮಡಿಲಲ್ಲಿದೆ ಹೋಟೆಲ್ ಟಿಂಬರ್ ಟ್ರೇಲ್. ಅದರ ಮಾಲಿಕ ಆರ್.ಕೆ. ಗರ್ಗ್ ಆ ರಾಜ್ಯದ ಸುಪ್ರಸಿದ್ಧ ಇಮಾರತು ಕಟ್ಟಿಗೆಯ ಕಾಂಟ್ರಾಕ್ಟರ್. ಹಿಮಾಚಲ ಪ್ರದೇಶ ಸರಕಾರದ ರಜ್ಜು ಮಾರ್ಗ (Rope-way) ಯೋಜನೆಗಳಿಂದ ಪ್ರೋತ್ಸಾಹಿತರಾದ ಗರ್ಗ್ ೧೯೮೮ರಲ್ಲಿ ತಮ್ಮ ಹೋಟೆಲಿಗೆ ಸುಮಾರು ಮೂರು ಕಿಲೋಮೀಟರ್ ಉದ್ದದ ರೋಪ್-ವೇಯನ್ನು ಹಾಕಿ ಪ್ರವಾಸಿಗಳಿಗೆ ಒಂದು ಹೊಸ ಆಕರ್ಷಣೆ ಹುಟ್ಟಿಸಿದರು.

ಪ್ರತಿ ಆರು ತಿಂಗಳಿಗೊಮ್ಮೆ ರೋಪ್-ವೇಯ ಪರಿವೀಕ್ಷಣೆ, ದುರಸ್ತಿಗಳು ನಡೆಯಬೇಕೆಂಬುದು ಆ ಪರಿಯೋಜನೆಯ ನಿರ್ಧಾರಿತ ಶರತ್ತುಗಳಲ್ಲೊಂದು. ಈ ರೋಪ್-ವೇ ೧೯೯೧ರ ಎಪ್ರಿಲ್‌ನಲ್ಲಿ ಅಂಥ ಪರಿವೀಕ್ಷಣೆಗೆ ಒಳಪಟ್ಟಿತ್ತು. ಅಕ್ಟೋಬರಿನಲ್ಲಿ ಮತ್ತೊಮ್ಮೆ ಆಗಬೇಕಿದ್ದ ಪರಿವೀಕ್ಷಣೆ ಮುಂದೂಡಲ್ಪಟ್ಟಿತ್ತು.

ಇಲಾಖೆ ಈ ಸಂಬಂಧದಲ್ಲಿ ಅನೇಕ ಬಾರಿ ಎಚ್ಚರಿಕೆ ನೀಡಿದ್ದರೂ ಗರ್ಗ್ ದಿವ್ಯ ನಿರ್ಲಕ್ಷ್ಯ ತಾಳಿದ್ದರು. ೧೯೯೨ರ ಸಪ್ಟೆಂಬರ್‌ವರೆಗೂ ಕೇವಲ ಪತ್ರ ವ್ಯವಹಾರ ನಡೆಯಿತೆ ಹೊರತು ಇನ್ನೇನೂ ಆಗಿರಲಿಲ್ಲ. ಕೊನೆಗೊಮ್ಮೆ ಪರಿವೀಕ್ಷಣೆ ನಡೆಸಲು ಒಪ್ಪಿ ದಿನಾಂಕವೂ ನಿರ್ಧರಿಸಲ್ಪಟ್ಟಿತು.

ಆದರೆ ಅತಿ ಪ್ರತಿಷ್ಠಿತರ ಆತಿಥ್ಯದ ಕಾರಣದಿಂದ ಪರಿವೀಕ್ಷಣಾ ತಂಡ ಬಂದ ದಾರಿಗೆ ಸುಂಕವಿಲ್ಲೆಂಬಂತೆ ಮರಳಿತ್ತು.

ಅಕ್ಟೋಬರ್ ೧೪ ರಂದು ಪರಿವೀಕ್ಷಣೆಯ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಳ್ಳಲು ಉದ್ಯುಕ್ತರಾಗಿದ್ದಂತೆ ಈ ಘಟನೆ ಸಂಭವಿಸಿತ್ತು.

ಹಿಂದಿನ ದಿನ ಅಂದರೆ ೧೯೯೨ರ ಅಕ್ಟೋಬರ್ ೧೩ರ ಸಂಜೆ ಸುಮಾರು ನಾಲ್ಕು ಗಂಟೆಗೆ ಹತ್ತು ಜನ ಪ್ರವಾಸಿಕರನ್ನು 'ರೋಪ್-ವೇ ಜಾಯ್ ರೌಂಡ್'ಗೆಂದು ಹತ್ತಿಸಿಕೊಂಡಿತು ಟ್ರಾಲಿ. ಸಂತಸ ವಿಹಾರದ ಸಂಭ್ರಮದಲ್ಲಿದ್ದವರಿಗೆ ಸಂಕಟ ಸ್ಥಿತಿ ಎದುರಿಸಬೇಕಾದೀತೆಂಬ ಕಲ್ಪನೆಯಾದರೂ ಹೇಗೆ ಬರಬೇಕು? ಈ ಟ್ರಾಲಿಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾತ ೪೦ ವರ್ಷದ ಗುಲಾಂ ಹುಸೇನ್ ಎಂಬಾತ. ತನ್ನ ವಯರ್‌ಲೆಸ್ ಸೆಟ್‌ನೊಂದಿಗೆ ಆತ ಟ್ರಾಲಿ ಚಲಾಯಿಸಿದ.

ಶಿವಾಲಿಕ್ ಪರ್ವತದ ಸುಮಾರು ಮೂರು


ಕಿಲೋಮೀಟರ್ ದೂರದ ಆ ವಿಹಾರ ಒಂದು ಹೊಸ ಅನುಭವವನ್ನೇ ನೀಡುವಂಥದು. ಆ ತುದಿಯಿಂದ ಹೊರಟು ಅದು ಟಿಂಬರ್ ಟ್ರೇಲ್ ಹೋಟೆಲಿನ ಪ್ಲಾಟ್‌ಫಾರ್ಮಿಗೆ ಬಂದು ತಲುಪಿ ಅಲ್ಲಿ ಜನರನ್ನಿಳಿಸಿ ಬೇರೆಯವರನ್ನು ಹತ್ತಿಸಿಕೊಂಡು ಮತ್ತೆ ವಾಪಸು ಹೊರಡುವುದು ವಾಡಿಕೆ.

ಅಂದು ಈ ಹತ್ತು ಜನ ಹತ್ತಿದರಲ್ಲ...ಅವತ್ತು ಟ್ರಾಲಿಯ ವೇಗ ಯಾಕೋ ಅಸಾಧಾರಣವಾಗಿದೆ ಎಂಬ ಸಂಶಯ ಗುಲಾಂ ಹುಸೇನ್‌ಗೆ ಬಂತು. ಸಾಮಾನ್ಯವಾಗಿ ಅದರ ವೇಗ ತೀರ ಕಡಿಮೆ. ಕಬ್ಬಿಣದ ಎಂಟು ಬಲವಾದ ತಂತಿಗಳ ಹಗ್ಗದ ಮೇಲೆ ಸಾಗುವ ಟ್ರಾಲಿ ಅದು. ಆ ದಿನ ಅತ್ತಲಿಂದ ಹೊರಟ ಆರೇ ನಿಮಿಷಗಳಲ್ಲಿ ಅತ್ಯಂತ ವೇಗವಾಗಿ ಸಾಗಿ ಹೋಟಲಿನ ಬಳಿಯ ಪ್ಲಾಟ್‌ಫಾರ್ಮಿಗೆ ಅಪ್ಪಳಿಸಿ ಹಿಂದೆ ಸರಿದು ನಟ್ಟನಡುವೆಯೇ ನಿಂತು ಬಿಟ್ಟಿತು.

ಆ ನಂತರ ತಿಳಿದು ಬಂದದ್ದೆಂದರೆ ಆ ದಿನ ಟ್ರಾಲಿ ಹುಚ್ಚು ವೇಗ ಪಡೆದಿತ್ತು. ಗಂಟೆಗೆ ೨೫೦ ಕಿಲೋಮೀಟರಿನ ವೇಗವಂತೆ ಅದು. ಆ ಎಂಟರ ಪೈಕಿ ಆರು ಹಗ್ಗಗಳು ಕಟಗರಿಸಿದ್ದವು. ಎರಡೇ ಹಗ್ಗಗಳ ಆಧಾರ ಟ್ರಾಲಿಗಿತ್ತು. ವಿಶೇಷಜ್ಞರ ಅಭಿಪ್ರಾಯ ಇನ್ನೂ ಎದೆಗೆಡಿಸುವಂಥದು. ಹಾಗೆ ತಂತಿಗಳು ಕಟಗರಿಸಿದ್ದರಿಂದಲೇ ವೇಗ ಗಂಟೆಗೆ ೨೫೦ ಕಿಲೋಮೀಟರುಗಳಷ್ಟಾಯಿತು. ಇಲ್ಲದಿದ್ದರೆ ಆ ಪ್ರಸಂಗದಲ್ಲಿ ಅದು ೫೦೦ ಕಿಲೋಮೀಟರ್ ವೇಗದಲ್ಲಿ ಸಾಗಬೇಕಿತ್ತು. ಹಾಗೆ ಸಾಗಿ ಪ್ಲಾಟ್‌ಫಾರ್ಮಿಗೆ ಅಪ್ಪಳಿಸಿದ್ದರೆ ಅದು ನುಚ್ಚು ನೂರಾಗಬೇಕಾಗಿತ್ತು. ಹಾಗಾಗಿದ್ದರೆ ಪರ್ಯಟಕರ ಶವಗಳ ಮೂಳೆಗಳೂ ಸಿಕ್ಕುತ್ತಿರಲಿಲ್ಲ.

ತುಂಡರಿಸಿದ ತಂತಿಗಳ ಪೈಕಿ ಒಂದು ಕೆಳಗೆ ಮರಕ್ಕೆ ಸುತ್ತು ಹಾಕಿಕೊಂಡಿತ್ತು. ಉಳಿದವು ಒಂದಕ್ಕೊಂದು ಹೆಣೆದುಕೊಂಡಿದ್ದವು. ಹೀಗಾಗಿಯೇ ಟ್ರಾಲಿ ಹಿನ್ನಡೆದು ಒಂದೂವರೆ ಕಿಲೋಮೀಟರ್ ಅಂತರದ ಮೇಲೆ ತ್ರಿಶಂಕುವಿನ ಸ್ಥಿತಿ ತಲುಪಿತ್ತು.

ಟ್ರಾಲಿಯ ಹಿಂದೋಟದಿಂದ ಗಾಬರಿಯಾದ



ಅಟೆಂಡೆಂಟ್ ಉಳಿದವರಂತೂ ಸಾಯುವುದು ಖಂಡಿತವೆಂದುಕೊಂಡನೋ ಏನೋ. ತಾನಾದರೂ ಬದುಕಿದರೆ ಸಾಕು ಎಂದು ಅಲ್ಲಿಂದ ಹೊರಕ್ಕೆ ಜಿಗಿದಿರಬೇಕು. ಆತನ ಹಿಂದೆಯೇ ದೇಬಾಶಿಶನೂ ಹಾರಿಕೊಂಡಿರಬೇಕು.

ಆ ಪ್ರಯಾಣಿಕರನ್ನು ಪಾರುಮಾಡುವ ಇಲ್ಲವೆ ಟ್ರಾಲಿಯನ್ನು ಪ್ಲಾಟ್‌ಫಾರ್ಮಿಗೆ ತರುವ ಉಪಾಯಗಳಾವವೂ ಹೋಟಲಿನ ವ್ಯವಸ್ಥಾಪಕರಿಗೆ ಹೊಳಿಯಲೇ ಇಲ್ಲ. ತಮ್ಮ ಸ್ಥಿತಿಯಿಂದ ಕಂಗಾಲಾದ ಆ ಮಂದಿ ಚೀರಾಡಿ-ಭೋರಾಡಿ ಅಳತೊಡಗಿದ್ದು ಯಾರಿಗೆ ಕೇಳಿಸಬೇಕು?

ಕೊನೆಗೊಮ್ಮೆ ಹೋಟಲಿನ ವ್ಯವಸ್ಥಾಪಕರು ವಾಯುಸೇನೆಯ ಅಧಿಕಾರಿಗಳೊಂದಿಗೆ ಸಂಪರ್ಕ ಬೆಳೆಸಿದಾಗ ಸಂಜೆ ಐದುಗಂಟೆ. ಅಧಿಕಾರಿಗಳು ಘಟನಾ ಸ್ಥಳಕ್ಕೆ ಆಗಮಿಸಿ ಕತ್ತಲಾಗುವುದು ತಡವಿಲ್ಲದ್ದರಿಂದ ಕೂಡಲೇ ಏನನ್ನೂ ಮಾಡುವುದು ಆಗಲಿಕ್ಕಿಲ್ಲವೆಂಬ ಅಭಿಪ್ರಾಯಕ್ಕೆ ಬಂದರು. ಬೆಳಗಾಗುತ್ತಿದ್ದಂತೆಯೇ ಬಚಾವು ಕಾರ್ಯವನ್ನು ಆರಂಭಿಸುವ ನಿರ್ಣಯ ಅವರದು.

ಪೊಲೀಸು ಮಹಾನಿರೀಕ್ಷಕರ ಆದೇಶದಂತೆ ಮುಖ್ಯಾಧಿಕಾರಿಗಳು ಪ್ಲಾಟ್‌ಫಾರ್ಮನ್ನು ಅಪಾಯರಹಿತವನ್ನಾಗಿಸುವ ಕೆಲಸಕ್ಕೆ ನಿಂತರು. ತೊಡಕಿಕೊಂಡ ತಂತಿಯ ಹಗ್ಗಗಳನ್ನು ಬಿಡಿಸಿಬಿಟ್ಟರೆ ಟ್ರಾಲಿ ಪ್ಲಾಟ್‌ಫಾರ್ಮಿನೆಡೆ ಸಾಗುತ್ತದೆ ಎಂಬುದು ಅವರ ಅಂದಾಜು. ಅಂತೆಯೇ ಅದು ಪ್ಲಾಟ್‌ಫಾರ್ಮಿಗೆ ಅಪ್ಪಳಿಸಿದರೂ ಅಪಾಯವಾಗಬಾರದೆಂಬ ಎಚ್ಚರಿಕೆ. ಅದಕ್ಕಾಗಿ ಅಲ್ಲೆಲ್ಲ ಮರಳು ತುಂಬಿದ ಚೀಲಗಳನ್ನು ಒಟ್ಟೆ ಪುಟ್ಟ ಬೆಟ್ಟವನ್ನೆಬ್ಬಿಸಿದರು. ಟ್ರಾಲಿ ಲಿಫ್ಟಿನ ತಜ್ಞರನ್ನೂ ಅವರು ಪರವಾಣುವಿಗೆ ಕರೆಸಿಕೊಂಡರು.

ಹೋಟಲಿನ ವ್ಯವಸ್ಥಾಪಕರಿಗೆ ಟ್ರಾಲಿಯಲ್ಲಿದ್ದವರ ಹೆಸರು-ದೆಸೆಗಳೇ ಗೊತ್ತಿರಲಿಲ್ಲ. ಆದರೆ ಆ ಮಂದಿಯ ಸಂಬಂಧಿಕರಿಗೆ ಸುದ್ದಿ ಗೊತ್ತಾಗಿ ಅಲ್ಲಿ ಬಂದು ಸೇರಿದ್ದರಿಂದಾಗಿ ಪೊಲೀಸರಿಗೆ ಹೆಸರು-ವಯಸ್ಸುಗಳ ವಿವರಗಳು ದೊರೆತವು.

ಪರಿಸರ ಮಾಲಿನ್ಯ ತಡೆಯುವ ಉಪಕ್ರಮವಾಗಿ ಟ್ರಾಲಿಯಲ್ಲಿ ತಿಂಡಿ-ತಿನಿಸುಗಳನ್ನಾಗಲಿ, ಮಿಠಾಯಿ-ಚಾಕಲೇಟುಗಳ ಪ್ಯಾಕೆಟ್ಟುಗಳನ್ನಾಗಲಿ ಕೊಂಡೊಯ್ಯುವುದನ್ನು ಪ್ರತಿಬಂಧಿಸಲಾಗಿತ್ತು. ನೀರನ್ನು ಮಾತ್ರ, ಅದೂ ತೀರ ಅಲ್ಪ ಪ್ರಮಾಣದಲ್ಲಿ, ಜತೆಗಿಟ್ಟುಕೊಳ್ಳಬಹುದಾಗಿತ್ತು.

ಇಪ್ಪತ್ತನಾಲ್ಕು ಗಂಟೆಗಳ ಕಾಲ ಅಲ್ಲಿ ಅನಿವಾರ್ಯ ಬಂಧನಕ್ಕೊಳಗಾಗಿದ್ದವರ ಸ್ಥಿತಿಯ ಅರಿವು ಬಂತಲ್ಲವೆ?

ಇಂಥ ಸ್ಥಿತಿಗೆ ಹಿಮಪಾತದ ಕಾರಣದಿಂದ ಬೀಸಿಬಂದ ಮೈಕೊರೆವ ಚಳಿಗಾಳಿಯ ಸಾಥ್ ಬೇರೆ. ದಪ್ಪ ಬಟ್ಟೆಗಳಿಲ್ಲದೆ ಬೆಟ್ಟ ಪ್ರದೇಶದ ಬಯಲಲ್ಲಿ ಅದೂ ಅಂತರಾಳದಲ್ಲಿ ಚಳಿಯನ್ನೆದುರಿಸುತ್ತ ಕಾಳರಾತ್ರಿಯನ್ನು ಕಳೆಯಬೇಕು...ದೊಡ್ಡವರೇ ಗದಗುಟ್ಟಿ ಹೋಗುತ್ತಾರೆಂದ ಮೇಲೆ ಇನ್ನು ಅವರೊಂದಿಗಿದ್ದ ಆ ನಾಲ್ಕು ವರ್ಷದ ಹಸುಳೆಯ ಪಾಡು ಇನ್ನೇನಾಗಿರಬೇಡ?

ಇದೆಲ್ಲ ಕೇವಲ ಅನುಕಂಪದ ಮಾತಾಯಿತೆ ವಿನಾ ಸೇನಾಧಿಕಾರಿಗಳೆ ಆಗಲಿ, ಪೊಲೀಸಿನವರೇ ಆಗಲಿ ಸಿಕ್ಕಿಬಿದ್ದವರ ಸಹಾಯಕ್ಕೆ ಬರುವ ಹಾಗೇ ಇರಲಿಲ್ಲ. ಸೇನಾಧಿಕಾರಿಗಳು ಒಂದು ಕೆಲಸ ಮಾಡಿದರು. ಕರಾಳ ರಾತ್ರಿಯ ಭಯವನ್ನು ಕಡಿಮೆಗೊಳಿಸುವ ಕೆಲಸ. ಎರಡು ಪ್ರಖರ ಸರ್ಚ್‌ಲೈಟುಗಳನ್ನು ಟ್ರಾಲಿಯೆಡೆ ಮುಖಮಾಡಿ ನಿಲ್ಲಿಸಿದರು.

ಆ ಬೆಳಕೇ ಆಗ ಸಿಕ್ಕಿಹಾಕಿಕೊಂಡವರ ಪಾಲಿನ ಸರ್ವಸ್ವ.

ಪೊಲೀಸರು ಮಾಡಿದ್ದೇನು? ಆ ಪ್ಲಾಟ್‌ಫಾರ್ಮನ್ನು ಸುಭದ್ರಗೊಳಿಸಿದ್ದು; ಜತೆಗೆ ಹೋಟಲಿನ ಮಾಲಿಕ ಮತ್ತು ವ್ಯವಸ್ಥಾಪಕರ ವಿರುದ್ಧ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆಯ ೩೩೬, ೩೩೭ ಹಾಗೂ ೩೦೪ನೆಯ ಕಲಮಿನನ್ವಯ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿಕೊಂಡದ್ದು. ಸದ್ಯ ಅವರು ಯಾರನ್ನೂ ಬಂಧಿಸಲಿಲ್ಲವೆಂಬುದೇ ದೊಡ್ಡಮಾತು.

* *** *

ಅಕ್ಟೋಬರ್ ೧೪ರ ಘಟನೆಗಳನ್ನೆಲ್ಲ ಈಗಾಗಲೇ ನೀವು ಓದಿದ್ದೀರಿ. ಅಂದು ರಾತ್ರಿಯ ದೃಶ್ಯವನ್ನಷ್ಟು ನೋಡೋಣ.

ಟ್ರಾಂಜಿಸ್ಟರಿನಲ್ಲಿ ಮುಖೇಶ್‌ನ ಹಾಡು ಕೇಳುತ್ತ ಸುತ್ತಲಿನ ನಕ್ಷತ್ರಗಳು ಟ್ರಾಲಿಯೊಳಗಿನ ಈ ನಕ್ಷತ್ರದೆಡೆ ಅಂದರೆ ಮೇಜರ್ ಕ್ರಿಸ್ಟೋರೆಡೆ ಅಭಿಮಾನದಿಂದ ನೋಡಿದವಷ್ಟೆ.

'ಚಂದ್ರನೊಬ್ಬ ತಾರೆ ಹಲವು' ಎಂಬುದು ವಾಸ್ತವವಾದರೂ ಆ ರಾತ್ರಿ ಟ್ರಾಲಿಯಲ್ಲಿ 'ತಾರೆಯೊಂದು ಚಂದ್ರರೈದು' ಎಂಬಂತಾಗಿತ್ತು. ಮೇಜರ್ ಕ್ರಿಸ್ಟೊ ಮಿನುಗು ತಾರೆಯಾಗಿದ್ದರೆ ಉಳಿದ ಐವರು ಯಾತ್ರಿಕರ ಮುಖಗಳು, ಪೂರ್ಣ ಚಂದ್ರನ ಹೊಳಪು ತಳೆದಿದ್ದವು.

ಮೇಜರ್ ಕ್ರಿಸ್ಟೊ ರಾತ್ರಿಯಿಡೀ ಯಾತ್ರಿಕರ ಮನೋಬಲ ಕುಸಿಯದಂತೆ ನೋಡಿಕೊಂಡರು. ತಮ್ಮ ಸೈನ್ಯಾನುಭವದ ರೋಚಕವಾದ, ರಂಜನೀಯವಾದ ಘಟನೆಗಳನ್ನೆಲ್ಲ ಅವರೆದುರು ನಿವೇದಿಸಿದರು. ಕಥೆ ಹೇಳಿದರು, ಹಾಡು ಹಾಡಿದರು, ಹಾಡಿನ ಬಂಡಿಯಲ್ಲಿ ಅವರೆಲ್ಲ ಪಾಲ್ಗೊಳ್ಳುವಂತೆ ಮಾಡಿದರು.

ಆ ರಾತ್ರಿ ಇನ್ನೊಂದು ಸಾಹಸಪೂರ್ಣ ಕಾರ್ಯವೂ ನಡೆಯಿತು. ಹೇಳಿದರೆ ಯಾರೂ ನಂಬದಂಥ ಸಾಹಸ ಅದು. ಗುಲಾಂ ಮೊಹಮ್ಮದ್ ಎಂಬ ಹೋಟಲಿನ ಕಾರ್ಮಿಕನೊಬ್ಬ ಬೆನ್ನಿಗೆ ಊಟದ ಪ್ಯಾಕೆಟ್ಟುಗಳನ್ನು ಕಟ್ಟಿಕೊಂಡು ರೋಪ್‌ವೇಯ ತಂತಿಗಳನ್ನು ಹಿಡಿದು ನೇತುಕೊಂಡೇ ಕೈ ಬದಲಿಸುತ್ತ ಮುಂದುವರೆದು ಟ್ರಾಲಿಯವರೆಗೂ ತಲಪಿದ. ಇದು ಜೀವವನ್ನೇ ಜೂಜಿಗೆ ಒಡ್ಡುವ ಕೆಲಸ. ಒಂದೂವರೆ ಕಿಲೋಮೀಟರುಗಳಷ್ಟು ಅಂತರವನ್ನು ರಾತ್ರಿಯ ಹೊತ್ತಿನಲ್ಲಿ ತಂತಿಯ ಹಗ್ಗ ಹಿಡಿದೇ ಕ್ರಮಿಸಿದ್ದೇನು ಸಾಮಾನ್ಯವೆ? ಆ ನಲವತ್ತರ ವ್ಯಕ್ತಿಗೆ ಟ್ರಾಲಿಯವರೆಗೆ ತಲಪಲು ಮೂರುವರೆ ಗಂಟೆ ಹಿಡಿಯಿತು. ತಂತಿಯ ಮೇಲೆ ನಡೆಯುವುದು ಎಂಬುದನ್ನು ಕೇಳಿ ಗೊತ್ತಿರುವ ಜನಕ್ಕೆ ಈತ ತಂತಿಯ ಕೆಳಗೆ 'ನಡೆದ' ಸಂಗತಿಯಿಂದ ಖಂಡಿತ ಆಶ್ಚರ್ಯವಾಗುತ್ತದೆ. ಜತೆಗೆ ಆತ ಇನ್ನೂ ಒಂದು ಅದ್ಭುತ ಕೆಲಸ ನಡೆಸಿದ. ಮೂರು ಕಿಲೋಮೀಟರ್ ಉದ್ದದ ನೈಲಾನ್ ಹಗ್ಗವನ್ನು ತನ್ನ ಸೊಂಟಕ್ಕೆ ಕಟ್ಟಿಕೊಂಡು ಬಂದಿದ್ದ ಗುಲಾಂ ಮೊಹಮ್ಮದ್. ಟ್ರಾಲಿ ತಲಪಿದ ಮೇಲೆ ಅದನ್ನು ಎಳೆದ. ನೈಲಾನ್ ಹಗ್ಗದ ಆ ತುದಿಗೆ ಒಂದು ತೊಟ್ಟಿಲಿತ್ತು. ಅದರಲ್ಲಿ ನೀರಿನ ಬಾಟಲು, ಕಂಬಳಿ ಇತ್ಯಾದಿ ಇತ್ಯಾದಿಗಳಿದ್ದವು. ನಡುವೆಯೆ ಕೈ ಸೋತು ಆತ ಬಿದ್ದಿದ್ದರೆ? ಸಾವಿರ ಅಡಿ ಕೆಳಗೆ ಬಿದ್ದ ಆತನ ಶವ ನುಜ್ಜುಗುಜ್ಜಾಗಿರುತ್ತಿತ್ತು.

ಅಕ್ಟೋಬರ್ ೧೫ರ ಮುಂಜಾವು. ಬಚಾವು ಕಾರ್ಯದ ಎರಡನೆಯ ಹಂತ ಶುರುವಾಯಿತು. ಆರೂವರೆ ಹೊತ್ತಿಗಾಗಲೇ ಕ್ಯಾಪ್ಟನ್ ವೀರೇಂದ್ರ ಸಿಂಹರ ಧ್ವನಿ ಮೈಕಿನಿಂದ ಟ್ರಾಲಿಯಲ್ಲಿದ್ದವರ ಕಿವಿ ತಲಪಿತು. ಮುಂದೆ ಹದಿನೈದೇ ನಿಮಿಷಗಳಲ್ಲಿ ಎಂ.ಆಯ್. ೧೭ ಹಾಗೂ 'ಚೀತಾ' ಹೆಲಿಕಾಪ್ಟರುಗಳು ಕಾಣಿಸಿಕೊಂಡವು. ಎಂ.ಆಯ್. ೧೭ನ್ನು ಪೈಲಟ್ ಎಸ್. ಚಂದ್ರಾ ಉಡಾಯಿಸುತ್ತಿದ್ದರೆ ಸ್ಕ್ವಾಡ್ರನ್ ಲೀಡರ್ ಟಿ. ಉಪಾಧ್ಯಾಯ ಅವರಿಗೆ ಸಹಾಯಕರಾಗಿದ್ದರು. ಕಮಾಂಡಿಂಗ್ ಆಫೀಸರ್ ಪಿಸಿ. ಭಾರದ್ವಾಜರ ನೇತೃತ್ವ ಅವರಿಗಿತ್ತು. 'ಚೀತಾ'ವನ್ನು ಮೇಜರ್ ವಿದ್ಯಮಾನ್ ಚಲಾಯಿಸುತ್ತಿದ್ದರು. ಏನಿದ್ದರೂ ಈ ಹೆಲಿಕಾಪ್ಟರ್ ನೆರವು ಹಾಗೂ ನಿರೀಕ್ಷಣೆಗೆಂದು ಇದ್ದದ್ದು. ಇದೇ ಹೆಲಿಕಾಪ್ಟರಿನಿಂದ ಬಚಾವು ಕಾರ್ಯಾಚರಣೆಯನ್ನು ಕ್ಯಾಮರಾದಲ್ಲಿ ಸೆರೆಹಿಡಿಯುವ ವ್ಯವಸ್ಥೆಯೂ ಆಗಿತ್ತು.

ಹಿಂದಿನ ದಿನದ ದೃಶ್ಯವೇ ಅಲ್ಲಿ ಪುನರಾವರ್ತಿಸಲ್ಪಟ್ಟಿತು. ಮೇಜರ್ ಕ್ರಿಸ್ಟೊ ಒಬ್ಬ ಸ್ತ್ರೀಯನ್ನು ಹೆಲಿಕಾಪ್ಟರಿನ ಹಗ್ಗದಿಂದ ಕಟ್ಟಿದರು. ಆಕೆಯೇನೋ ಸುರಕ್ಷಿತವಾಗಿ ಮೇಲೇರಿದಳು. ಆದರೆ ಮತ್ತೊಮ್ಮೆ ಇಳಿಬಿಟ್ಟ ಹಗ್ಗ ಟ್ರಾಲಿ ಕ್ಯಾಬಿನ್‌ವರೆಗೆ ತಲಪಲೇ ಇಲ್ಲ. ಹೀಗಾಗಿ ತೊಂದರೆಯ ನಿವಾರಣೆಗಾಗಿ ಹೆಲಿಕಾಪ್ಟರು ಅಲ್ಲಿಂದ ಮಾಯವಾಯಿತು.

ನಂತರದ ಎರಡು ಗಂಟೆಗಳ ಮೇಲೆ ಮತ್ತೊಂದು ಎಂ.ಆಯ್. ೧೭ ಹೆಲಿಕಾಪ್ಟರು

ಹಾರಿಬಂತು. ಮುಂಜಾನೆಯ ಹತ್ತು ಗಂಟೆಯ ಹೊತ್ತಿಗೆ ಉಳಿದ ಪ್ರಯಾಣಿಕರೂ ಪಾರು ಮಾಡಲ್ಪಟ್ಟು ಅದುವರೆಗಿನ ಆತಂಕವೆಲ್ಲ ದೂರವಾಯಿತು.

ಆ ಹತ್ತೂ ಮಂದಿಯಲ್ಲಿ ಎರಡು ನವವಿವಾಹಿತ ಜೋಡಿಗಳಿದ್ದವು. ಪಾಪ, ಮಧುಚಂದ್ರಕ್ಕೆಂದು ಸಿಮ್ಲಾಕ್ಕೆ ಹೊರಟಿದ್ದ ಆ ಜೋಡಿಗಳಿಗೆ ಅದು ಬದುಕಿನುದ್ದಕ್ಕೂ ಮರೆಯಲಾರದ ಕಹಿ ಘಟನೆ.

ಇನ್ನೊಬ್ಬ ತರುಣ ಬಿ.ಕಾಂ. ಪದವೀಧರ. ತನ್ನ ಹದಿಮೂರನೆಯ ವಯಸ್ಸಿನಲ್ಲೇ ಪರ್ವತಾರೋಹಣದ ಅನುಭವ ಪಡೆದಿದ್ದಾತ. ಘಟನೆಯ ಮೊದಲ ರಾತ್ರಿ ಆ ಹುಡುಗನಿಲ್ಲದಿದ್ದರೆ ಉಳಿದವರು ಅಂಜಿಕೊಂಡು ಎದೆಯೊಡೆದುಕೊಳ್ಳುತ್ತಿದ್ದರೋ ಏನೋ. ಆತ ತುಂಬ ಧೈರ್ಯವಂತ. ಅದೇ ಧೈರ್ಯವನ್ನಾತ ಇತರರಲ್ಲೂ ತುಂಬಿದ. ಜಯದೀಪನೆಂಬ ಹೆಸರಿನ ಆತ ಅಲ್ಲಿದ್ದವರ ಮಟ್ಟಿಗಿನ ಆಶಾದೀಪವೇ ಆದ.

ಟ್ರಾಲಿ ವೇಗದಿಂದ ಹೋಗಿ ಪ್ಲಾಟ್‌ಫಾರ್ಮಿಗೆ ಅಪ್ಪಳಿಸಿದಾಗ ಕ್ಯಾಬಿನ್ನಿನ ಕಿಟಕಿಯ ಗಾಜುಗಳು ಒಡೆದಿದ್ದವು. ಅವುಗಳ ಚೂರುಗಳು ಕೆಲವರಿಗೆ ನೆಟ್ಟಿದ್ದವು. ಕೆಲವರಿಗಂತೂ ಆ ಅಪ್ಪಳಿಸುವಿಕೆಯಿಂದಾಗಿ ತುಟಿಗಳಿಗೆ ಗಾಯವಾಗಿ ನೆತ್ತರು ಜಿನುಗಿತ್ತು. ತಲೆ ಒಡೆದುಕೊಂಡವರ ಬಟ್ಟೆಗಳಂತೂ ರಾಮಾರಕ್ತ.

ದಿಲ್ಲಿಯಿಂದ ಬಂದಿದ್ದ ಟಂಡನ್ ದಂಪತಿಯ ಬಳಿ ಅಪಾರ ಹಣವಿತ್ತು. ಅವರು ಬದುಕುಳಿಯುವ ಆಶೆಯನ್ನೇ ಬಿಟ್ಟುಕೊಟ್ಟಿದ್ದರಾದ್ದರಿಂದ ಆ ಹಣವನ್ನೆಲ್ಲ ಜಯದೀಪನ ಕೈಗಿತ್ತು "ನೀನು ಬಚಾವಾದರೆ ಈ ಹಣವನ್ನು ಬಡ-ಬಗ್ಗರಿಗೆ ಹಂಚಿಬಿಡು. ಅಂದರೆ ನಮ್ಮ ಆತ್ಮಕ್ಕೆ ಶಾಂತಿ ಸಿಗುತ್ತದೆ" ಎಂದಿದ್ದರು. ತರುಣ ಜಯದೀಪ ಅವರಿಗೆ ಹೇಳಿದನಂತೆ, "ನಾವೆಲ್ಲ ಬದುಕುತ್ತೇವೆ. ಬರೆದಿಟ್ಟುಕೊಳ್ಳಿ."

ಆಕಾಶದಿಂದ ಇಳಿದು ಬಂದ ಆಪದ್ಬಾಂಧವ ಮೇಜರ್ ಕ್ರಿಸ್ಟೊ ಅಂಥ ಧೈರ್ಯ ತುಂಬಿದ ಇನ್ನೊಬ್ಬ ಸಾಹಸಿ.


ಹೌದು. ಬದುಕುವ ಆಶೆ ನಮ್ಮೊಬ್ಬರಲ್ಲಿ ಇದ್ದರೆ ಸಾಲದು, ಅದನ್ನು ಮತ್ತೊಬ್ಬರಲ್ಲೂ ತುಂಬಬೇಕು.

●

● ● ●

ಹೋಮಿಯೋಪಥಿ ಚಿಕಿತ್ಸೆ ಪರಿಣಾಮಕಾರಿಯಾಗಿದೆಯೋ ಇಲ್ಲವೋ? ಇಲ್ಲವೆಂದು ಉತ್ತರಿಸುವ ಅಲೋಪಥಿಕ್ ಹಾಗೂ ಆಯುರ್ವೇದಿಕ್ ತಜ್ಞರೇ ಹೆಚ್ಚು. ನಿಕರಾಗುವಾದಲ್ಲಿ ಅತಿಸಾರದಿಂದಾಗಿ ಮಕ್ಕಳು ಮರಣಿಸುವ ಪ್ರಮಾಣ ಬಹಳ. ಅತಿಸಾರವುಂಟಾದಾಗ ಶರೀರಕ್ಕೆ ಕಳೆದುಕೊಂಡ ನೀರನ್ನೂ ಶಕ್ತಿಯನ್ನೂ ಒದಗಿಸುವ ಉದ್ದೇಶದಿಂದ ಪ್ರಾಥಮಿಕ ಕ್ರಮವಾಗಿ ಡಾಕ್ಟರರು ಸಕ್ಕರೆ, ಉಪ್ಪು ಬೆರೆತ ನೀರಿನ ದ್ರವವನ್ನು ವಿಧಿಸುವುದಿದೆ. ಜೆನಿಫರ್ ಜಾಕೋಬ್ಸ್ ಎಂಬ ಅಮೇರಿಕನ್ ತಜ್ಞೆ ನಿಕರಾಗುವಾದಲ್ಲಿ ಅತಿಸಾರಕ್ಕಾಗಿ ಮೇಲೆ ಹೇಳಿದ ದ್ರವವನ್ನು ವಿಧಿಸಿದಾಗ ಪರೀಕ್ಷಾರ್ಥವಾಗಿ ಅರ್ಧದಷ್ಟು ಮಕ್ಕಳಿಗೆ ಮಿಥ್ಯಾಮಾತ್ರೆಗಳನ್ನೂ ಇನ್ನರ್ಧದಷ್ಟು ಮಕ್ಕಳಿಗೆ ಹೋಮಿಯೋಪಥಿ ಮಾತ್ರೆಗಳನ್ನೂ ವಿಧಿಸಿದಳು. ಹೋಮಿಯೋಪಥಿ ಮಾತ್ರೆಗಳನ್ನು ತೆಗೆದುಕೊಂಡ ಮಕ್ಕಳಲ್ಲಿ ಮಾತ್ರ ಸುಧಾರಣೆಯ ಪ್ರಮಾಣ ಗಮನಾರ್ಹವಾಗಿತ್ತು. ಅವಳ ಸಂಶೋಧನಾ ಪ್ರಬಂಧವನ್ನು ಪ್ರಕಟಿಸಿದ ಅಮೆರಿಕದ ಶಿಶುರೋಗ ಅಕಾದಮಿ "ಈ ಸಂಶೋಧನೆಯಿಂದ ದೊರೆತ ಫಲಿತಾಂಶವನ್ನು ಲಘುವಾಗಿ ತಳ್ಳಿಹಾಕಲಾಗುವುದಿಲ್ಲ" ಎಂದು ಹೇಳಿದೆ.

● ● ●



ಟ್ಯೂಬೆಕ್ಟಮಿ ಶಸ್ತ್ರಕ್ರಿಯೆ

• ಡಾ. ಎಚ್. ಗಿರಿಜಮ್ಮ
ಸ್ತ್ರೀ ರೋಗ ತಜ್ಞರು, ಗೌಸಿಯಾ ಆಸ್ಪತ್ರೆ,
ಶಿವಾಜಿನಗರ, ಬೆಂಗಳೂರು-೫೬೦೦೦೧

ಟ್ಯೂಬೆಕ್ಟಮಿ ಶಸ್ತ್ರಕ್ರಿಯೆ

ಟ್ಯೂಬೆಕ್ಟಮಿ ಶಸ್ತ್ರಚಿಕಿತ್ಸೆಯು ಮಹಿಳೆಯರಿಗೆ ಮಾಡುವ ಶಾಶ್ವತ ವಿಧಾನವಾದ ಸಂತಾನನಿರೋಧ ಶಸ್ತ್ರಕ್ರಿಯೆ.

ಮೇಲಿಂದ ಮೇಲೆ ಗರ್ಭಿಣಿಯಾಗುವ ಅಥವಾ ಗರ್ಭಪಾತವಾಗುವ ಭಯ ಹೆಂಗಸರನ್ನು ಸದಾ ಕಾಡುತ್ತಿರುತ್ತದೆ. ಆದುದರಿಂದ ಈ ಭಯ ಹಾಗೂ ತೊಂದರೆಯಿಂದ ಪೂರ್ಣವಾಗಿ ಮುಕ್ತಗೊಳ್ಳಲು ಬಹುತೇಕವಾಗಿ ಅವರು ಬಯಸುವುದು ಟ್ಯೂಬೆಕ್ಟಮಿಯನ್ನೇ.

ಇದಲ್ಲದೆ ಹೆಂಗಸರಿಗಾಗಿ ಅಭಿವೃದ್ಧಿಪಡಿಸಲಾದ ಸಂತಾನನಿರೋಧ ಕ್ರಮಗಳು ಮುಖ್ಯವಾಗಿ ಎರಡು:

೧. ಮಿನಿ ಲ್ಯಾಪ್‌ರಾಟಮಿ, ೨. ಲ್ಯಾಪರಾಸ್ಕೋಪಿ

ಇವೆರಡೂ ಅತಿಕಡಿಮೆ ಸಮಯದಲ್ಲಿ ಅತ್ಯಂತ ಪರಿಣಾಮಕರವಾಗಿ ಮಾಡಲ್ಪಡುವ ಸರಳ ಹಾಗೂ ಸುಲಭ ಶಸ್ತ್ರಕ್ರಿಯೆಯ ವಿಧಾನಗಳು. ಇದಕ್ಕಾಗಿ ವೈದ್ಯರ ಬಳಿ ಆಸ್ಪತ್ರೆಯಲ್ಲಿ ಹೆಚ್ಚು ಕಾಲ ಇರಬೇಕಾಗಿಲ್ಲ.

೧೯೭೦ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ತಜ್ಞರ ಸಮಿತಿಯೊಂದು ಕುಟುಂಬ ಕಲ್ಯಾಣ ಕಾರ್ಯಕ್ರಮವನ್ನು ಈ ರೀತಿ ವಿವರಿಸಿದೆ:

೧. ಈ ಕಾರ್ಯಕ್ರಮವು ವ್ಯಕ್ತಿಗಳು ಮತ್ತು ಕುಟುಂಬಗಳು ಕೆಲವು ಉದ್ದೇಶಗಳನ್ನು ಸಾಧಿಸಲು ಅನುಸರಿಸಬೇಕಾದ ಅಭ್ಯಾಸಗಳನ್ನು ಸೂಚಿಸುತ್ತದೆ.

೨. ಇಷ್ಟವಿಲ್ಲದ ಜನನಗಳನ್ನು ತಪ್ಪಿಸುವುದು.

೩. ಇಷ್ಟದ ಜನನಗಳನ್ನು ಪಡೆಯುವುದು.

೪. ಪ್ರಸವಗಳ ಮಧ್ಯದ ಅಂತರವನ್ನು ನಿಯಂತ್ರಿಸುವುದು.

೫. ತಾಯಿ ತಂದೆಗಳ ವಯಸ್ಸಿಗನುಸಾರವಾಗಿ ಆಗುವ ಜನನಗಳನ್ನು ನಿಯಂತ್ರಿಸುವುದು.

೬. ಕುಟುಂಬದಲ್ಲಿರಬೇಕಾದ ಮಕ್ಕಳ ಸಂಖ್ಯೆಯನ್ನು ನಿರ್ಧರಿಸುವುದು.

ಕುಟುಂಬ ಕಲ್ಯಾಣ ಈಗ ಜನರ ಆಂದೋಲನವಾಗಿದೆ. ಭಾರತದಲ್ಲಿ ಜನಸಂಖ್ಯಾ ವಿಷಯವನ್ನು ದೇಶದ ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದ ಮುಖ್ಯ

✓


ಅಂಶವನ್ನಾಗಿ ಪರಿಗಣಿಸಲಾಗಿದೆ. ಕುಟುಂಬ ಕಲ್ಯಾಣ ಕಾರ್ಯಕ್ರಮವನ್ನು ಜನರಿಗೆ ಉತ್ತಮ ಜೀವನ ಕೊಡಿಸುವ ರಾಷ್ಟ್ರೀಯ ಪ್ರಯತ್ನವನ್ನಾಗಿ ರೂಪಿಸಲಾಗುತ್ತಿದೆ.

ಈ ಕುಟುಂಬ ಯೋಜನೆಯ ಸೇವೆಗಳು ಜನನ ನಿಯಂತ್ರಣಕ್ಕೆ ಮಾತ್ರ ಸೀಮಿತವಾಗಿರದೆ, ಬಹಳ ವಿಶಾಲ ವ್ಯಾಪ್ತಿ ಹೊಂದಿವೆ. ಅವು ಬಂಜೆತನಕ್ಕೆ ಸಲಹೆ, ಒಳ್ಳೆಯ ಪಾಲಕರಾಗಿರಲು ಸೂಕ್ತ ಸಲಹೆಗಳು, ಲೈಂಗಿಕ ಶಿಕ್ಷಣ, ಜನನೇಂದ್ರಿಯಗಳಿಗೆ ಸಂಬಂಧಿಸಿದ ಕಾಯಿಲೆಗಳ ಸಮೀಕ್ಷೆ ಮುಂತಾದ ವಿಷಯಗಳನ್ನೊಳಗೊಂಡಿವೆ.

ಮಕ್ಕಳಾಗುವುದನ್ನು ತಪ್ಪಿಸಲು ಪ್ರಪಂಚದಾದ್ಯಂತ ಸುಮಾರು ೧೪ ಕೋಟಿ ೫೦ ಲಕ್ಷ ದಂಪತಿಗಳು ಈ ಶಾಶ್ವತ ವಿಧಾನವನ್ನು ಅವಲಂಬಿಸಿದ್ದಾರೆ. ಸಂತಾನಹರಣದ ಕ್ರಮವಾಗಿ ಗಂಡಸರಿಗೆ ವ್ಯಾಸೆಕ್ಟಮಿ ಶಸ್ತ್ರಚಿಕಿತ್ಸೆಯಿದ್ದರೂ ಗಂಡಸರಿಗಿಂತ ಹೆಂಗಸರೇ ಹೆಚ್ಚಿನ ಸಂಖ್ಯೆಯಲ್ಲಿ ಈ ಶಸ್ತ್ರಚಿಕಿತ್ಸೆಯಿಂದ ಲಾಭ ಪಡೆಯುತ್ತಿದ್ದಾರೆ.

ಟ್ಯೂಬೆಕ್ಟಮಿ ಶಸ್ತ್ರಕ್ರಿಯೆ ಎಂದರೇನು ಎಂಬುದನ್ನು ತಿಳಿದುಕೊಳ್ಳುವ ಮೊದಲು ಸಂತಾನಶಕ್ತಿಗೆ ಇರುವ ಹೆಂಗಸರ ಮತ್ತು ಗಂಡಸರ ಅಂಗಗಳು, ಗರ್ಭಧಾರಣೆ ಕ್ರಿಯೆಯ ಬಗ್ಗೆ ಸ್ವಲ್ಪವಾಗಿಯಾದರೂ ತಿಳಿದುಕೊಂಡರೆ, ಮುಂದೆ ಸಂತಾನವಾಗುವುದನ್ನು ಸೂಕ್ತ ಕ್ರಮಗಳ ಮೂಲಕ ನಿಲ್ಲಿಸಬಹುದು.

ಸ್ತ್ರೀ ಪ್ರಜನನ ಅಂಗಗಳು





ಸ್ತ್ರೀ ಜನನೇಂದ್ರಿಯಗಳು

ಸ್ತ್ರೀ ಒಳ ಜನನೇಂದ್ರಿಯಗಳು ಗರ್ಭಧಾರಣೆ, ಪ್ರಸವ ಕ್ರಿಯೆಗೆ ಸಂಬಂಧಿಸಿದ್ದು ಸೃಷ್ಟಿಕ್ರಿಯೆಗೆ ಅನುಕೂಲವಾಗಿರುತ್ತವೆ. ಗರ್ಭಕೋಶವು ಸ್ನಾಯುಗಳಿಂದ ಕೂಡಿದ್ದು, ಬುಗುರಿಯಾಕಾರದಲ್ಲಿರುವ ಅದು ಗರ್ಭಕಂಠ ಮತ್ತು ಯೋನಿಯೊಡನೆ ಸಂಬಂಧ ಹೊಂದಿದೆ. ಗರ್ಭಕೋಶವು ಮುಂದುವರೆದು ಕಾಲುವೆಯಂತೆ ರಂಧ್ರದ ಮೂಲಕ ಯೋನಿಯೊಳಗೆ ಬಾಯಿ ತೆರೆಯುತ್ತದೆ.

ನಂತರದಲ್ಲಿ ಯೋನಿಯು, ಯೋನಿದ್ವಾರವಾಗಿ ಹೊರಗೆ ಕಾಣಿಸುತ್ತದೆ. ದಂಪತಿಗಳು ಲೈಂಗಿಕಕ್ರಿಯೆ ನಡೆಸಿದಾಗ ವೀರ್ಯಾಣುಗಳು, ಯೋನಿದ್ವಾರದಿಂದ ಗರ್ಭದ್ವಾರಕ್ಕೆ ಪ್ರವೇಶಿಸಿ ಗರ್ಭಾಶಯವನ್ನು ತಲುಪುತ್ತವೆ.

ಅಂಡಾಶಯವು ಜೋಡಿಯಲ್ಲಿ ಗರ್ಭಾಶಯದ ಹೊರಪಕ್ಕದಲ್ಲಿ ಗರ್ಭನಾಳಗಳಿಗೆ ತುದಿಯಲ್ಲಿ ಅಂಟಿಕೊಂಡಂತೆ ಕಂಡರೂ ಸಮೀಪದಲ್ಲಿರುತ್ತದೆ. (ಚಿತ್ರ ೨)ಗರ್ಭನಾಳಗಳೂ ಜೋಡಿಯಲ್ಲಿದ್ದು ಗರ್ಭಾಶಯದ ಹೊರಪಕ್ಕಗಳಲ್ಲಿವೆ. ಅಂಡಾಶಯದ ಹತ್ತಿರದಲ್ಲಿರುವುದರಿಂದ ಬಿಡುಗಡೆ ಹೊಂದಿದ ಅಂಡಾಣುಗಳು ಗರ್ಭನಾಳದ ಬಾಯಿಯ ಮೂಲಕ ಗರ್ಭಾಶಯವನ್ನು ಪ್ರವೇಶಿಸುತ್ತವೆ.

ಪುರುಷ ಜನನೇಂದ್ರಿಯಗಳು


ಪುರುಷ ಜನನೇಂದ್ರಿಯಗಳು ಎರಡು ವೃಷಣಗಳು, ಲಿಂಗ ಮತ್ತು ವೀರ್ಯನಾಳಗಳನ್ನು ಹೊಂದಿವೆ. ಲಿಂಗವು ಎರಡು ವೃಷಣಗಳ ಮಧ್ಯೆ ಇರುವ ನಾಳದಾಕಾರದ ಅಂಗ. ವೃಷಣಗಳಲ್ಲಿ ಪುರುಷ ಬೀಜಕೋಶವು ವೀರ್ಯಾಣುವಾಗಿ ಬದಲಾವಣೆ ಹೊಂದುತ್ತದೆ. ಈ ವೀರ್ಯಾಣುಗಳು, ಧಾತುವಿನೊಂದಿಗೆ ಸೇರಿ, ಸಂಭೋಗದ ಸಮಯದಲ್ಲಿ ಲಿಂಗದ್ವಾರದ ಮೂಲಕ ಸ್ತ್ರೀಯ ಯೋನಿಯೊಳಗೆ

✓

ಹೊರದೂಡಲ್ಪಡುತ್ತವೆ. ಲಿಂಗವು ಮೂತ್ರ ವಿಸರ್ಜನೆಯ ಕಾರ್ಯವನ್ನೂ ಮಾಡುವುದಲ್ಲದೆ ವೀರ್ಯವನ್ನು ಚಿಮ್ಮುವ ಕಾರ್ಯವನ್ನೂ ನೆರವೇರಿಸುತ್ತದೆ.


ವೃಷಣಗಳು ಚರ್ಮದ ಚೀಲದೊಳಗಿದ್ದು ಅದರೊಳಗೆ ಬೀಜಕೋಶಗಳಿರುತ್ತವೆ. ಪುರುಷ ಬೀಜಕೋಶವು ಲೈಂಗಿಕ ಚೋದನಿಕೆಗಳಿಂದ

ಋತು ಕ್ರಿಯೆ



ಸಂಖ್ಯೆಯಲ್ಲಿ ಅಭಿವೃದ್ಧಿಗೊಂಡು ವೀರ್ಯಾಣುಗಳಾಗುತ್ತದೆ. ಎಷ್ಟೇ ವೀರ್ಯಾಣುಗಳಿದ್ದರೂ, ಒಂದೇ ವೀರ್ಯಾಣು ಮಾತ್ರ ಪಕ್ವವಾದ ಸ್ತ್ರೀಯ ಅಂಡಾಶಯವನ್ನು ಫಲಿತಗೊಳಿಸಲು ಸಾಕು. ಉಳಿದವೆಲ್ಲಾ ಹೊರದೂಡಲ್ಪಡುತ್ತವೆ.

ಗರ್ಭಕಟ್ಟುವಿಕೆ



✓

ಋತುಕ್ರಿಯೆ

ಚಿತ್ರ: ೩

ಋತುಕ್ರಿಯೆಯು ೨೮ ದಿನಗಳಿಗೊಮ್ಮೆ ಅಥವಾ ಮೂವತ್ತು ದಿನಗಳಿಗೊಮ್ಮೆ ಸಂಭವಿಸುತ್ತದೆ. ಈ ಕ್ರಿಯೆಯು ನಿಯಮಿತವಾಗಿ ಪುನರಾವರ್ತಿಸಲ್ಪಡುತ್ತದೆ. ಇದು ಸ್ತ್ರೀಯರಲ್ಲಿ ಮಾತ್ರ ಸಂಭವಿಸುವ ಕ್ರಿಯೆ. ಗರ್ಭಾಶಯದಲ್ಲಿ ಒಳಪದರವು ಋತುಕ್ರಿಯೆ ನಡೆದ ವಾರದ ನಂತರ ಬೆಳೆಯಲು ಪ್ರಾರಂಭಿಸುತ್ತದೆ. ರಕ್ತನಾಳಗಳು ಅತ್ಯಂತ ಸೂಕ್ಷ್ಮವಾಗಿದ್ದು ಗ್ರಂಥಿಗಳನ್ನು ಹೆಚ್ಚಿಸಿಕೊಂಡು ಬೆಳೆಯತೊಡಗಿದ ಈ ಒಳಪದರವು ಭ್ರೂಣವನ್ನು ಸ್ವೀಕರಿಸಲು ಸಿದ್ಧವಾಗತೊಡಗುತ್ತದೆ. ಗರ್ಭವು ಆ ಅವಧಿಯಲ್ಲಿ ಕಟ್ಟದಿದ್ದರೆ ಒಳಪದರವು ಕುಗ್ಗತೊಡಗಿ, ತತ್ಪರಿಣಾಮವಾಗಿ ರಕ್ತನಾಳಗಳೂ ಬೇರ್ಪಟ್ಟು ಫಲಿಸದೇ ಹೋದ ಅಂಡಾಣುವಿನ ಜೊತೆ ಯೋನಿಯಿಂದ ಹೊರಗೆ ಸ್ರವಿಸತೊಡಗುತ್ತದೆ. ಇದೇ 'ಮುಟ್ಟಾಗುವುದು'. ಮಹಿಳೆಯರಲ್ಲಿ ೪೫-೫೦ ವರ್ಷಗಳ ನಂತರದಲ್ಲಿ ಈ ಕ್ರಿಯೆ ನಿಂತುಹೋಗುತ್ತದೆ.

ಗರ್ಭ ಕಟ್ಟುವಿಕೆ

ಚಿತ್ರ: ೪

ಸಂಭೋಗದ ನಂತರ ಅಂಡಾಣುವಿನೊಂದಿಗೆ ವೀರ್ಯಾಣುವು ಸೇರಿದಾಗ ಗರ್ಭವು ಕಟ್ಟುತ್ತದೆ. ನಂತರ ಕೋಶದ ವಿಭಜನೆಯ ಕ್ರಿಯೆಯ ಪ್ರಾರಂಭ. ಗರ್ಭಧಾರಣೆಯ ನಂತರ ಗರ್ಭಾಂಡವಾಗಿ ಅಂಡಾಣುವು, ಗರ್ಭಾಶಯದಲ್ಲಿ ಮೃದು ಪರದೆಯ ಮೇಲೆ ಗಟ್ಟಿಯಾಗಿ ನೆಲೆಸಿಬಿಡುತ್ತದೆ. ನಂತರ ಅಲ್ಲಿನ ರಕ್ತನಾಳಗಳ ಸಂಪರ್ಕ ಸ್ಥಾಪಿಸಿಕೊಳ್ಳುತ್ತಾ ನಿರಾತಂಕವಾಗಿ ಬೆಳೆಯತೊಡಗುತ್ತದೆ. ತೆಳ್ಳನೆಯ ಬೇರಿನಂತಹ ರಚನೆಗಳು ಹೊರಬಿದ್ದು ಅವು ಆಹಾರ ದ್ರವ್ಯವನ್ನು ತಾಯಿಯ ರಕ್ತದಿಂದ ಹೀರುವ ಅಂಗಗಳಾಗುತ್ತವೆ. ಹೀಗಾದಾಗಲೇ ಜನಸಾಮಾನ್ಯರು ಗರ್ಭವು ಬೇರು ಬಿಟ್ಟಿದೆ ಎನ್ನುತ್ತಾರೆ.

ಅನುಕೂಲಕರವಾದ ವಾತಾವರಣವಿದ್ದರೆ ಮುಂದೆ ಬೆಳವಣಿಗೆಗೊಳ್ಳುತ್ತಾ ಹೋಗಿ, ಕೋಶಗಳ ಮುದ್ದೆಯಂತಿರುವುದು ಆರೋಗ್ಯವಂತ ಮಗುವಾಗಿ ಹೊರಗೆ ಬರುತ್ತದೆ. ಹೀಗಾಗಲು ಅದಕ್ಕೆ ಪೋಷಣೆ ಅತ್ಯಗತ್ಯ.


ಅನೇಕ ಚಿಕ್ಕ ಕೋಶಗಳನ್ನು ಹೊಂದಿದ್ದು ಭ್ರೂಣವಾಗಿ ಗರ್ಭಾಶಯದಲ್ಲಿ ನೆಲೆಯೂರಲು ಅನೇಕ ವಾರಗಳು ಹಿಡಿಯುತ್ತವೆ. ಆಮ್ನಿಯಾಟಿಕ್ ಅಥವಾ ಗರ್ಭ ಪರಿವೇಷಿತ ದ್ರವವು ಪ್ರಾಕೃತಿಕವಾಗಿ ಸೂಕ್ತ ರಕ್ಷಣೆ ಪಡೆದು ಬೆಳೆಯತೊಡಗುತ್ತದೆ. ನಂತರ ತಾಯಿಯ ಮಾಸುವಿನಿಂದ ಹೊಕ್ಕಳಬಳ್ಳಿಯ ಮೂಲಕ ಶಿಶುವಿಗೆ ಆಹಾರಾಂಶದ ಪೂರೈಕೆಯು ಪ್ರಸವದವರೆಗೂ ಮುಂದುವರೆಯುತ್ತದೆ.

ಭ್ರೂಣವು ಬೆಳೆಯುತ್ತಿರುವಾಗ ಹೊಸ ಅಂಗಗಳು ಉದ್ಭವವಾಗಲು ಕೊನೆಯ ಪಕ್ಷ ಮೂರು ತಿಂಗಳುಗಳಾದರೂ ಬೇಕು. ಪತ್ತನೆಯ ವಾರದ ಅಂತ್ಯದಲ್ಲಿ ಕೈಕಾಲು,

✓

ಉಗುರುಗಳು, ಜನನೇಂದ್ರಿಯದ ಬಾಹ್ಯ ಭಾಗಗಳು ಪ್ರಕಟಗೊಳ್ಳುತ್ತವೆ. ಚಿತ್ರದಲ್ಲಿ ಭ್ರೂಣ ಮತ್ತು ಗರ್ಭಾಶಯವನ್ನು ಸುತ್ತಲೂ ನೀರಿರುವ ಚೀಲವನ್ನೂ ಕಾಣಬಹುದು. (ಚಿತ್ರ ೫).

ಭ್ರೂಣದ ಬೆಳವಣಿಗೆಯ ಹಂತ



ಭ್ರೂಣದ ಬೆಳವಣಿಗೆಯ ಹಂತ

ನಾಲ್ಕನೆಯ ತಿಂಗಳಲ್ಲಿ ತಾಯಿಯ ಮಾಸು (ಕಸ)ವಿನ ಪೂರ್ತಿ ಬೆಳವಣಿಗೆಯಾಗಿರುತ್ತದೆ. ಬಹುಕೋಶದ ಮುದ್ದೆಯಂತಿರುವುದರಿಂದ ವಿಕಾಸ ಹೊಂದಿ ಮಾನವಾಕೃತಿಯನ್ನು ಹೋಲುವಂತಹ ಬೆಳವಣಿಗೆ ಪ್ರಾರಂಭವಾಗುತ್ತದೆ. ಮೂರನೆಯ ವಾರದ ಭ್ರೂಣದ ಉದ್ದ ಸುಮಾರು ೧.೨೫ ಸೆಂಟಿಮೀಟರಿನಷ್ಟಿರುತ್ತದೆ. ತಾಯಿ ಮಾಸುವೇ ಭ್ರೂಣದ ಜೀವನಾಧಾರ. ಭ್ರೂಣದ ಉದರದ ಹೊಕ್ಕಳ ಬಳ್ಳಿಯು ತಾಯಿ ಮಾಸುವಿಗೆ ಸೇರುತ್ತದೆ. ಈ ಹೊಕ್ಕಳ ಬಳ್ಳಿಯು ರಕ್ತನಾಳಗಳಿಂದ ಕೂಡಿದ್ದು, ಇದರಿಂದ ಭ್ರೂಣದ ಬೆಳವಣಿಗೆಗೆ ಸಾಕಷ್ಟು ಪೌಷ್ಟಿಕಾಂಶವುಳ್ಳ ಆಹಾರ, ಆಮ್ಲಜನಕದ ಪೂರೈಕೆ ನಡೆದಿರುತ್ತದೆ.

ಈ ಅವಧಿಯಲ್ಲಿ ಸ್ತ್ರೀಯು ಎಂದಿನಂತೆ ಕೆಲಸ ನಿರ್ವಹಿಸಬಹುದು. ಮೊದಲ ಮೂರು ತಿಂಗಳ ಅವಧಿಯಲ್ಲಿ ವಾಂತಿ, ನಿದ್ದೆ ಮಾಡುವುದು ಹೆಚ್ಚಾದರೂ ಸಹಜವೇ ಆಗಿರುತ್ತದೆ. ತೀರಾ ಹೆಚ್ಚಾದರೆ ವೈದ್ಯರ ಸಲಹೆ ಪಡೆದುಕೊಳ್ಳಬಹುದು. ಆ ಅವಧಿಯಲ್ಲಿ ಗರ್ಭಪಾತಗಳೂ ಸಂಭವಿಸಬಹುದಾದುದರಿಂದ, ಆಗಾಗ

ವೈದ್ಯರಲ್ಲಿಗೆ ಹೋಗಿ ಸಲಹೆ ಪಡೆಯುವುದು ಒಳ್ಳೆಯದು.


ಮೂರನೆಯ ತಿಂಗಳ ನಂತರದಲ್ಲಿ ಗರ್ಭಸ್ಥ ಶಿಶುವಿನ ಬೆಳವಣಿಗೆ ತೀವ್ರತರವಾಗಿ ಆಗುತ್ತದೆ.

ನಾಲ್ಕು ಐದನೆಯ ತಿಂಗಳಲ್ಲಿ ಮಗುವಿನ ಮಿಸುಕಾಟವನ್ನು ತಾಯಿಯು ಅನುಭವಿಸುತ್ತಾಳೆ. ಉದರವು ಉಬ್ಬತೊಡಗಿದಂತೆ ತಾಯಿಯ ಸ್ತನಗಳು, ಮೊಲೆ ತೊಟ್ಟು ಸಹ ಗಾತ್ರದಲ್ಲಿ ದೊಡ್ಡದಾಗುತ್ತಾ ದುಗ್ಧ ರಸ ಗ್ರಂಥಿಗಳು ಮತ್ತು ಕ್ಷೀರನಾಳಗಳು ಹಾಲನ್ನು ತುಂಬಿಕೊಳ್ಳುವುದರಿಂದ ದೊಡ್ಡದಾಗುತ್ತಾ ಹೋಗುತ್ತವೆ. ಮೊಲೆ ತೊಟ್ಟಿನ ಮುಂಭಾಗವು ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಇದು ಗರ್ಭಧಾರಣೆಯ ಖಚಿತವಾದ ಚಿಹ್ನೆಯೂ ಹೌದು. ಹುಟ್ಟುವ ಮಗುವಿನ ಲಿಂಗವು ಈ ಸಮಯದಲ್ಲಿಯೇ ನಿರ್ಧಾರವಾಗುತ್ತದೆ.

ಶಿಶುವಿನ ಬೆಳವಣಿಗೆಯ ಹಂತ

ಗರ್ಭಸ್ಥ ಶಿಶುವು ಆಮ್ನಿಯಾಟಿಕ್ ಜಲವೆಂಬ ನೀರಿನ ಚೀಲದ ರಕ್ಷಣೆಯಿಂದಾಗಿ ಹೊರಗಿನ ಒತ್ತಡಗಳಿಂದ ಸುರಕ್ಷಿತವಾಗಿರುತ್ತದೆ.

ಈಗಾಗಲೇ ಹೇಳಿದಂತೆ ಆಮ್ನಿಯಾಟಿಕ್ ನೀರಿನ ಚೀಲದ ರಕ್ಷಣೆಯಿಂದ ಬೆಳೆಯುತ್ತಿರುವ ಮಗುವಿಗೆ ತಾಯಿ ಮಾಸುವಿನಿಂದ ಹೊಕ್ಕಳ ಬಳ್ಳಿಯ ಮೂಲಕ ಆಹಾರದ ಸರಬರಾಜು ಆಗುತ್ತದೆ. ಮಗುವು ಬೆಳೆದಂತೆಲ್ಲ ಉದರದ ಗಾತ್ರವೂ ಹೆಚ್ಚಿ ಗರ್ಭಿಣಿಯರಿಗೆ ಮುಂದಕ್ಕೆ ಬಾಗಲೂ ಕಷ್ಟವಾಗುತ್ತದೆ. ಮೂತ್ರಕೋಶದ ಮೇಲಿನ ಒತ್ತಡ ಹೆಚ್ಚಾದಂತೆ ಪದೇ ಪದೇ ಮೂತ್ರವಿಸರ್ಜಿಸಬೇಕೆನ್ನಿಸುತ್ತದೆ.



ಪೂರ್ಣ ಬೆಳೆದ ಶಿಶು



ಗರ್ಭಿಣಿ

✓

ಶ್ವಾಸಕೋಶದ ಮೇಲೂ ಒತ್ತಡ ಬೀಳುವುದರಿಂದ ಉಸಿರಾಟದ ವೇಗವೂ ತೀವ್ರವಾಗುತ್ತದೆ.

ಗರ್ಭಧಾರಣೆಯ ಅವಧಿ ಒಟ್ಟು ೨೮೦ ದಿನ ಅಥವಾ ೪೦ ವಾರಗಳಷ್ಟು. ಪ್ರಸವಕ್ಕೆ ಅನುಕೂಲವಾಗುವಂತೆ ಎಲುಬಿನ ಹಂದರದ ಕಿಳ್ಳುಗಿಯೂ ಮೃದುವಾಗುತ್ತಾ ಹೋಗಿ ಪ್ರಸವಕ್ಕೆ ಅನುವಾಗಲು ತಯಾರಾಗುತ್ತದೆ.

☆

ಮೊದಲೇ ಹೇಳಿದಂತೆ ಟ್ಯೂಬೆಕ್ಟಮಿಯು ಸಂತಾನ ನಿಯಂತ್ರಣಕ್ಕಾಗಿ ಹೆಂಗಸರು ಮಾಡಿಸಿಕೊಳ್ಳುವ ಒಂದು ಶಸ್ತ್ರಚಿಕಿತ್ಸೆ. ಮಕ್ಕಳಾಗದಂತೆ ತಡೆಯಲು ಇದೊಂದು ಶಾಶ್ವತ ವಿಧಾನ. ಸರಳ ಹಾಗೂ ಸುರಕ್ಷಿತವಾದ ಶಸ್ತ್ರಕ್ರಿಯೆಯೂ ಹೌದು.

ಶಸ್ತ್ರಕ್ರಿಯೆ ಮಾಡುವ ಮೊದಲು ಅದಕ್ಕೆ ಒಳಪಡುವ ಸ್ತ್ರೀ ಆರೋಗ್ಯದಿಂದ ಇದ್ದಾಳೆಯೋ ಇಲ್ಲವೋ ಎನ್ನುವುದನ್ನು ಅನೇಕ ಪರೀಕ್ಷೆಗಳಿಂದ ಖಚಿತಪಡಿಸಿಕೊಳ್ಳಬೇಕಾಗುತ್ತದೆ.

ಪ್ರಸವದ ನಂತರದ ಕೆಲವೇ ದಿನಗಳಲ್ಲಿಯೇ ಎಷ್ಟೋ ಮಹಿಳೆಯರು ಈ ಶಸ್ತ್ರಕ್ರಿಯೆಯನ್ನು ಮಾಡಿಸಿಕೊಳ್ಳಲು ಇಚ್ಛಿಸುತ್ತಾರೆ. ಮತ್ತೆ ಕೆಲವರು ಋತುಚಕ್ರವಾದ ನಂತರದಲ್ಲಿ ಬಂದು ಈ ಶಸ್ತ್ರಕ್ರಿಯೆಯನ್ನು ಮಾಡಿಸಿಕೊಳ್ಳುತ್ತಾರೆ.

ಈ ಶಸ್ತ್ರಕ್ರಿಯೆಗೆ ಒಳಪಡಲು ಇಚ್ಛಿಸುವ ಸ್ತ್ರೀ ಆಸ್ಪತ್ರೆಗೆ ದಾಖಲಾಗಬೇಕಾಗುತ್ತದೆ. ಆಕೆಯ ರಕ್ತ ಹಾಗೂ ಮೂತ್ರದ ಪರೀಕ್ಷೆಗಳು, ರಕ್ತದೊತ್ತಡ, ಅಲ್ಲದೆ ಆಕೆಗೆ ಶ್ವಾಸಕೋಶದ ಕಾಯಿಲೆಗಳಿವೆಯೇ ಎಂಬುದನ್ನು ಅನೇಕ ವಿಧಾನಗಳಿಂದ ಪರೀಕ್ಷಿಸಲಾಗುತ್ತದೆ. ಎಲ್ಲವೂ ಸರಿಯಾಗಿದೆ ಎಂದು ಕಂಡುಬಂದ ನಂತರವೇ ಬಾಣಂತಿ ಸೇವಾ ಕೇಂದ್ರದವರು ನೀಡುವ ಅರ್ಜಿಯನ್ನು ಭರ್ತಿ ಮಾಡಿ, ಆ ಮಹಿಳೆಯ ಪತಿಯ ಸಹಿಯನ್ನು ಪಡೆದುಕೊಳ್ಳಬೇಕಾಗುತ್ತದೆ. ಅವರು ತಮಗೆ ಒಂದೇ ಒಂದು ಮಗು ಸಾಕೆಂದು ಬಂದ ಅರ್ಹ ದಂಪತಿಗಳಾಗಿದ್ದರೆ, ಗಂಡ ಹೆಂಡತಿಯರಿಬ್ಬರೂ ಒಪ್ಪಿಗೆಯ ಸಹಿಯನ್ನು ಮಾಡಬೇಕಾಗುತ್ತದೆ. ಅನಂತರ ಅರಿವಳಿಕೆಯ ತಜ್ಞರಿಂದಲೂ ಪರೀಕ್ಷೆ ನಡೆಯುತ್ತದೆ. ಶಸ್ತ್ರಚಿಕಿತ್ಸೆಯ ದಿನ ಮಹಿಳೆಯನ್ನು ಖಾಲಿ ಹೊಟ್ಟೆಯಲ್ಲಿರುವಂತೆ ಹೇಳಲಾಗುತ್ತದೆ. ನಂತರದಲ್ಲಿ ಆಕೆಗೆ ಸುಸ್ತಾಗದಂತಿರಲು ಡ್ರಿಪ್‌ಗಳ ಮೂಲಕ ಗ್ಲೂಕೋಸ್ ದ್ರಾವಣವನ್ನು ಕೆಲವೊಮ್ಮೆ ನೀಡಲಾಗುತ್ತದೆ.

ಈ ಶಸ್ತ್ರಕ್ರಿಯೆಯು ಇದಕ್ಕೆ ಸಮನಾದ ಗಂಡಸರ ಶಸ್ತ್ರಕ್ರಿಯೆಯಾದ ವ್ಯಾಸೆಕ್ಟಮಿಗಿಂತ ಸ್ವಲ್ಪ ಜಟಿಲವೆನಿಸಿದರೂ, ಮಗುವನ್ನು ಹೆರುವುದಕ್ಕಿಂತ ಹೆಚ್ಚು ಸುರಕ್ಷಿತವೆಂಬುದರಲ್ಲಿ ಸಂಶಯವಿಲ್ಲ. ಇರುವ ಕಡಿಮೆ ಮಕ್ಕಳನ್ನೇ ಅಕ್ಕರೆಯಿಂದ, ಆಸಕ್ತಿಯಿಂದ ನೋಡುವುದಕ್ಕಿರಬೇಕು, ಈ ಸಂತಾನ ನಿಯಂತ್ರಣ ಶಸ್ತ್ರಚಿಕಿತ್ಸೆಯಿಂದ ಮಕ್ಕಳ ಸಾವಿನ ಸಂಖ್ಯೆಯು ಕಡಿಮೆಯಾದುದು ಕಂಡುಬಂದಿದೆ.

✓

ಶಸ್ತ್ರಕ್ರಿಯೆಯ ವಿಧಾನಗಳು


೧. ಟ್ಯೂಬೆಕ್ಟಮಿ

೨. ಮಿನಿ ಲ್ಯಾಪರಾಟಮಿ


೩. ಲ್ಯಾಪರಾಸ್ಕೋಪಿ

ಈ ಮೂರು ರೀತಿಯ ಶಸ್ತ್ರಕ್ರಿಯೆಗಳೂ ತುಂಬಾ ಸುರಕ್ಷಿತ. ಇವು ಅಷ್ಟೇ ಪರಿಣಾಮಕಾರಿಯೂ ಹೌದು. ಇವು ಶಾಶ್ವತವಾದ ವಿಧಾನಗಳೂ ಹೌದು. ಇನ್ನುಮುಂದೆ ತನಗೆ ಮಕ್ಕಳಾಗುವುದು ಬೇಡ ಎಂದು ಹೆಂಗಸಿಗೆ ಅನ್ನಿಸಿದಾಗ ಮಾತ್ರ ಈ ಶಸ್ತ್ರಕ್ರಿಯೆಯನ್ನು ಮಾಡಿಸಿಕೊಳ್ಳಬಹುದು.

ಟ್ಯೂಬೆಕ್ಟಮಿ ಶಸ್ತ್ರಕ್ರಿಯೆಯ ಹಂತಗಳು



ಚಿತ್ರ: ಅ. ಗರ್ಭನಾಳವನ್ನು ಮೇಲಕ್ಕೆ ಎತ್ತಿ ಉಂಗುರಾಕಾರದಲ್ಲಿ ಮೊದಲು ಮಡಿಸಲಾಗುವುದು.



ಚಿತ್ರ: ಬ. ಮಡಿಸಿದ ನಂತರದಲ್ಲಿ ಕೂಡಿಸಿದ ಈ ಗರ್ಭನಾಳವನ್ನು ಬಲವಾದ ದಾರ ಅಥವಾ "ಕ್ಯಾಟ್‌ಗಟ್"ನಿಂದ ಈ ರೀತಿ ಕಟ್ಟಲಾಗುವುದು.

✓



ಚಿತ್ರ: ಕ. ಮಡಿಚಿ ಕೂಡಿಸಲಾಗಿದ್ದಂತೆಯೇ ಹಿಡಿದ ಈ ಗರ್ಭನಾಳದ. ಭಾಗವನ್ನು ಹೀಗೆ ಕತ್ತರಿಸಲಾಗುವುದು.



ಚಿತ್ರ: ಡ. ಹೊಲಿಗೆ ಹಾಕಿದ ನಂತರ ಹೊಲಿಗೆ ಸರಿಯಾಗಿ ಸೇರಿಕೊಂಡಾಗ ಗರ್ಭನಾಳಗಳ ಕತ್ತರಿಸಿದ ತುದಿಗಳು ಬೇರ್ಪಡುತ್ತವೆ. ಗಾಯ ಮಾಗಿದ ನಂತರ ಕಣಗಳು ನಾಳಗಳ ತೆರೆದ ಭಾಗವನ್ನು ಮುಚ್ಚಿಬಿಡುತ್ತವೆ.

ಶಸ್ತ್ರಕ್ರಿಯಾ ವಿಧಾನ

ಮೊದಲೇ ಹೇಳಿದಂತೆ, ಮಹಿಳೆಯು ಪ್ರಸವವಾದ ಎರಡು ಮೂರು ದಿನಗಳ ನಂತರದಲ್ಲಿ ಅಥವಾ ಋತುಕ್ರಿಯೆಯ ಐದು ದಿನಗಳ ನಂತರದಲ್ಲಿ, ಶಸ್ತ್ರಕ್ರಿಯೆಗೆ ಒಳಪಡಬಹುದು. ಮಹಿಳೆಯು ಶಸ್ತ್ರಕ್ರಿಯೆಗೆ ಅರ್ಹಳೆಂದು ಖಚಿತಪಡಿಸಿ, ಬಳಿಕ ಆಕೆಯನ್ನು ಅದಕ್ಕೆ ಒಳಪಡಿಸಲಾಗುತ್ತದೆ.

ಉದರವನ್ನು ಎರಡು ಇಂಚುಗಳಷ್ಟು ಕೊಯ್ದು ನಂತರ, ಪದರ ಪದರಗಳನ್ನು ಭೇದಿಸಿ, ಉದರದೊಳಗೆ ಪ್ರವೇಶಿಸಿ, ಗರ್ಭನಾಳಗಳನ್ನು ಗುರುತಿಸಿ, ಚಿತ್ರದಲ್ಲಿ ತೋರಿಸಿರುವಂತೆ ಶಸ್ತ್ರಕ್ರಿಯೆ ಮಾಡಲಾಗುತ್ತದೆ.

ಕೆಲವರಿಗೆ ಮಂಪರುಬರುವ ಚುಚ್ಚುಮದ್ದುಗಳನ್ನು ನೀಡಿದ ನಂತರ ಸ್ಥಳೀಯವಾಗಿ ಮರಗಟ್ಟುವಂತಹ ಚುಚ್ಚುಮದ್ದು ನೀಡಿ, ಅನಂತರ ವೈದ್ಯರು, ಶಸ್ತ್ರಕ್ರಿಯೆ ಪ್ರಾರಂಭಿಸುತ್ತಾರೆ. ಶಸ್ತ್ರಕ್ರಿಯೆಗೆ ಒಳಗಾಗುವವರು ಅಪೇಕ್ಷೆಪಟ್ಟರೆ, ಪೂರ್ಣ ಅರಿವಳಿಕೆ ನೀಡಲೂಬಹುದು.

ಈ ಶಸ್ತ್ರಕ್ರಿಯೆಯಲ್ಲಿ ವೈದ್ಯರು ಮಹಿಳೆಯ ಗರ್ಭನಾಳಗಳಲ್ಲಿ ಒಂದು ಸಣ್ಣ

✓

ತುಂಡನ್ನು ಕತ್ತರಿಸಿ ಅನಂತರ ಕತ್ತರಿಸಿದ ತುದಿಯನ್ನು ಮುಚ್ಚಿಬಿಡುತ್ತಾರೆ. ಹೀಗೆ ಮಾಡುವುದರಿಂದ ಮಹಿಳೆಯ ಅಂಡಾಣುವು ಫೆಲೋಪಿಯನ್ ಟ್ಯೂಬ್ ಮೂಲಕ ಹೋಗುವಾಗ, ಅದರ ಮಾರ್ಗವನ್ನು ತಡೆದಂತಾಗುವುದು. ಆಗ ಅಂಡಾಣುವು ವೀರ್ಯಾಣುವಿನೊಡನೆ ಸೇರಲು, ತತ್ಪರಿಣಾಮವಾಗಿ ಗರ್ಭಧಾರಣೆಯಾಗಲು ಸಾಧ್ಯವಿಲ್ಲ.

ಶಸ್ತ್ರಕ್ರಿಯೆಯ ನಂತರದಲ್ಲಿ ರೋಗಿಯನ್ನು ಒಂದು ವಾರದವರೆಗೂ ಆಸ್ಪತ್ರೆಯಲ್ಲಿಯೇ ಇಟ್ಟುಕೊಂಡು ನಂಜುನಿರೋಧಕ ಔಷಧಿಗಳನ್ನು ನೀಡಿ, ನಂಜು ಅಥವಾ ಸೋಂಕು ತಗಲದಂತೆ ಎಚ್ಚರವಹಿಸಲಾಗುತ್ತದೆ. ಏಳು ದಿನಗಳನಂತರ ಹೊಲಿಗೆಯನ್ನು ಬಿಚ್ಚಿ, ಶಸ್ತ್ರಕ್ರಿಯೆ ನಡೆಸಿದ ಗಾಯ ಚೆನ್ನಾಗಿ, ಮಾಯ್ದಿರುವುದನ್ನು ಖಚಿತಪಡಿಸಿಕೊಂಡು ಮಹಿಳೆಯನ್ನು ಮನೆಗೆ ಕಳುಹಿಸಲಾಗುವುದು.

ಮನೆಗೆ ತೆರಳಿದ ನಂತರ ಒಂದೆರಡು ವಾರಗಳಷ್ಟು ವಿಶ್ರಾಂತಿ ತೆಗೆದುಕೊಳ್ಳುವುದನ್ನು ಬಿಟ್ಟರೆ ಮತ್ತಾವ ವಿಶೇಷ ಸಲಹೆಗಳನ್ನೂ ನೀಡಲಾಗುವುದಿಲ್ಲವಾದರೂ, ನೈರ್ಮಲ್ಯ ಹಾಗೂ ಊಟದ ಬಗೆಗೆ ಸೂಕ್ತ ಸಲಹೆ ನೀಡಲಾಗುವುದು.

ಕೆಲವರು ಗಾಯದ ಮೇಲೆ ಎಲೆಯನ್ನೋ, ಹತ್ತಿಯನ್ನೋ ಅಥವಾ ಪಟ್ಟಿಯನ್ನೋ ಅಡ್ಡವಾಗಿಟ್ಟುಕೊಂಡು ಸ್ನಾನ ಮಾಡುತ್ತಾರೆ. ಅದು ತಪ್ಪು. ವಾಸ್ತವವಾಗಿ ಗಾಯದ ಮೇಲೆ ನೀರು ಬಿದ್ದರೆ ಕೀವುಗಟ್ಟುವುದಿಲ್ಲ. ಈ ವಸ್ತುಗಳನ್ನು ಇಟ್ಟುಕೊಂಡು ಸ್ನಾನ ಮಾಡುವುದರಿಂದ ಕೊಳೆಯು ಅಲ್ಲಿಯೇ ಸೇರಿ, ಒಣಗಿದ ಗಾಯಕ್ಕೆ ಸೋಂಕು ತಗಲಬಹುದು. ಒಣಗಿದ ಗಾಯದೊಳಗೆ ಖಂಡಿತ ನೀರು ಹೋಗಲಾರದು. ಹೀಗಾಗಿ ಯಾವುದೇ ಅಪಾಯವಾಗಲಾರದು.

ಶಸ್ತ್ರಕ್ರಿಯೆಯ ನಂತರ ಕೆಲವರು ಭಯದಿಂದ ಹಾಸಿಗೆಯಿಂದ ಮೇಲೇಳುವುದೇ



ಡಾ. ಗಿರಿಜಮ್ಮ

ವೃತ್ತಿಯಿಂದ ಸ್ತ್ರೀರೋಗತಜ್ಞರಾದರೂ ಪ್ರವೃತ್ತಿಯಿಂದ ಲೇಖಕಿಯಾಗಿರುವ ಡಾ. ಎಚ್. ಗಿರಿಜಮ್ಮನವರು ೧೪ ಕಾದಂಬರಿಗಳನ್ನು, ೪ ಕಥಾಸಂಕಲನಗಳನ್ನು, ಅಸಂಖ್ಯ ವೈದ್ಯಕೀಯ ಲೇಖನಗಳನ್ನು ಪ್ರಕಟಿಸಿದ್ದಾರೆ. ದೂರದರ್ಶನಕ್ಕಾಗಿ ಅನೇಕ ಧಾರಾವಾಹಿಗಳನ್ನು ನಿರ್ಮಿಸಿರುವ ಡಾ. ಗಿರಿಜಮ್ಮನವರು ಸದ್ಯ ಬೆಂಗಳೂರಿನ ಗೌಸಿಯಾ ಆಸ್ಪತ್ರೆಯಲ್ಲಿ ಸ್ತ್ರೀರೋಗ ತಜ್ಞರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

✓

ಇಲ್ಲ. ಕುಳಿತಲ್ಲಿಯೇ ಪುಷ್ಟಿಕರವಾದ ಆಹಾರ-ಬೆಣ್ಣೆಗಳಂತಹ ಸ್ನಿಗ್ಧಪದಾರ್ಥಗಳನ್ನು ಸೇವಿಸಿ ಬೊಜ್ಜು ಬೆಳೆಸಿಕೊಳ್ಳುತ್ತಾರೆ. ಶಸ್ತ್ರಕ್ರಿಯೆಯಿಂದಲೇ ಬೊಜ್ಜು ಬಂದಿದೆಯೆಂದು ಭಾವಿಸುತ್ತಾರೆ. ಶಸ್ತ್ರಕ್ರಿಯೆಯನ್ನು ಮಾಡಿಸಿಕೊಳ್ಳದಿದ್ದರೂ ಕುಳಿತು ತಿಂದರೆ, ಯಾರಿಗಾದರೂ ಬೊಜ್ಜು ಬಂದೇ ಬರುತ್ತದೆನ್ನುವುದು ಅವರ ಗಮನಕ್ಕೆ ಬರುವುದೇ ಇಲ್ಲ.

ಶಸ್ತ್ರಕ್ರಿಯೆಯನ್ನು ಮಾಡಿ ಮಹಿಳೆಯನ್ನು ಕಳುಹಿಸಿದ ನಂತರ ಎರಡು ವಾರಗಳ ಬಳಿಕ ಮತ್ತೊಮ್ಮೆ ಪರೀಕ್ಷೆಗೆ ಬರಲು, ಮಧ್ಯೆ ಯಾವುದೇ ತೊಂದರೆಗಳುಂಟಾದರೂ ಬಂದು ಕಾಣಲು ವೈದ್ಯರು ಹೇಳುತ್ತಾರೆ.

ಟ್ಯೂಬೆಕ್ಟಮಿ ಶಸ್ತ್ರಕ್ರಿಯೆಯಿಂದಾಗಿ ತಾವು ಸ್ಥೂಲಕಾಯರಾಗುತ್ತೇವೆ, ಲೈಂಗಿಕ ಆಸಕ್ತಿ ಕಡಿಮೆಯಾಗುತ್ತದೆ, ಪುನಃ ಮಕ್ಕಳು ಆಗುವ ಸಾಧ್ಯತೆಗಳೂ ಇವೆ ಎಂಬ ತಪ್ಪು ಕಲ್ಪನೆ ಜನಸಾಮಾನ್ಯರಲ್ಲಿದೆ.

ಸ್ಥೂಲಕಾಯದ ಬಗ್ಗೆ ಈಗಾಗಲೇ ಹೇಳಿಯಾಗಿದೆ. ಶಸ್ತ್ರಕ್ರಿಯೆಯ ಮೂಲಕ ಗರ್ಭನಾಳವನ್ನು ಮಾತ್ರ ಸ್ವಲ್ಪವೇ ಕತ್ತರಿಸಿ ತೆಗೆದು, ಮಾರ್ಗವನ್ನು ಮಾತ್ರ ಮುಚ್ಚಲಾಗುತ್ತದೆ. ಆದುದರಿಂದ ಈ ಶಸ್ತ್ರಕ್ರಿಯೆಯಿಂದ ಕರುಳಿಗಾಗಲೀ ಜೀರ್ಣಾಂಗಗಳಿಗಾಗಲಿ ಅಥವಾ ಮತ್ತಾವುದೇ ಅಂಗಗಳಿಗಾಗಲಿ ಹಾನಿಯಾಗುವುದಿಲ್ಲ.

ಕೆಲವರು ಸೊಂಟನೋವು, ಬಿಳಿಸೆರಗಿನ ತೊಂದರೆಯೆಂದು ವರ್ಷಗಟ್ಟಲೆ ನೋವು ಅನುಭವಿಸುತ್ತಾರೆ. ದೇಹಕ್ಕೆ ಅಗತ್ಯವಾದಷ್ಟು ಪ್ರಮಾಣದಲ್ಲಿ ಕ್ಯಾಲ್ಸಿಯಂ ದೊರೆಯುತ್ತಿದ್ದರೆ ಮೂಳೆಗಳ ನೋವು ಬಾರದು. ಮಕ್ಕಳಿಗೆ ಎದೆ ಹಾಲುಣಿಸುವ ಸಂದರ್ಭಗಳಲ್ಲಿ ಕ್ಯಾಲ್ಸಿಯಂ ಹೆಚ್ಚು ಪ್ರಮಾಣದಲ್ಲಿ ದೇಹದಿಂದ ಹೊರಗೆ ಹೋಗುತ್ತದೆ. ಇದರ ಪರಿಣಾಮವಾಗಿ ಮಹಿಳೆಗೆ ಸೊಂಟನೋವಾಗಲಿ ಮೂಳೆಗಳ ನೋವಾಗಲಿ ಬರಬಹುದು.

ಇನ್ನು ಬಿಳಿಸೆರಗು ಅಥವಾ ಬಿಳಿಮುಟ್ಟಿನ ವಿಷಯ. ಅದು ಸೋಂಕಿನಿಂದ ಉಂಟಾದರೆ ಚಿಕಿತ್ಸೆ ನೀಡಿ ಗುಣಪಡಿಸಬಹುದು. ಆದರೆ ಸಂಭೋಗದ ನಂತರದಲ್ಲಿ, ಯೋನಿಯಿಂದ ಸ್ರವಿಸುವ ಧಾತುವನ್ನೇ 'ಬಿಳಿಮುಟ್ಟೆ'ಎಂದು ಭ್ರಮಿಸಿ ಭಯಪಡುವವರೇ ಹೆಚ್ಚು. ಇಂಥವರಿಗೆ ಸರಿಯಾಗಿ ತಿಳಿಹೇಳಿ ಭಯವನ್ನು ನಿವಾರಿಸಬಹುದು.

ಟ್ಯೂಬೆಕ್ಟಮಿಯಿಂದ ಹೆಣ್ಣಿನಲ್ಲಿ ಲೈಂಗಿಕಾಸಕ್ತಿ ಕಡಿಮೆಯಾಗುವುದೆಂಬ ವಾದದಲ್ಲಿ ಹುರುಳಿಲ್ಲ. ನಿಜವಾಗಿಯೆಂದರೆ ಈ ಶಸ್ತ್ರಕ್ರಿಯೆಯಿಂದ ಹೆಣ್ತನವನ್ನೂ ಲೈಂಗಿಕ ಆಸೆಗಳನ್ನೂ ಉತ್ತೇಜನಗೊಳಿಸುವ ಹಾರ್ಮೋನುಗಳ ಮೇಲಾಗಿ ಅಥವಾ ಇತರ ಗ್ರಂಥಿಗಳ ಮೇಲಾಗಲಿ ಯಾವುದೇ ದುಷ್ಪರಿಣಾಮವೂ ಉಂಟಾಗುವುದಿಲ್ಲ. ಋತುಸ್ರಾವ ಕೂಡ ಕ್ರಮಬದ್ಧವಾಗಿಯೇ ಆಗುತ್ತದೆ. ಅಂಡಾಣು ಸಹ ಮುಂಚಿನಂತೆಯೇ ಉತ್ಪತ್ತಿಯಾಗುತ್ತಿರುತ್ತದೆ. ಆದರೆ ಅಂಡಾಣು ಹಾಯ್ದುಹೋಗುವ ಮಾರ್ಗವನ್ನು ಮಾತ್ರ ಮುಚ್ಚಿಹಾಕಲಾಗಿರುವುದರಿಂದ ಗರ್ಭ

✓

ಧರಿಸುವ ಸಾಧ್ಯತೆ ಇರುವುದಿಲ್ಲ. ಟ್ಯೂಬೆಕ್ಟಮಿ ಶಸ್ತ್ರಕ್ರಿಯೆಯ ನಂತರವೂ ಎಲ್ಲಾ ಅಂಗಗಳೂ ಮೊದಲಿನಂತೆಯೇ ಕಾರ್ಯ ನಿರ್ವಹಿಸುತ್ತವೆ. ಸಂಭೋಗಕ್ರಿಯೆ ನಡೆಸಿದರೂ ಮಹಿಳೆ ಗರ್ಭ ಧರಿಸುವುದಿಲ್ಲ. ಮಾನಸಿಕವಾಗಿ, ತಾನಿನ್ನು ಮಕ್ಕಳನ್ನು ಹೆರುವುದಿಲ್ಲ, ಕೇವಲ ಲೈಂಗಿಕ ತೃಪ್ತಿಗಾಗಿ ಸಂಭೋಗವನ್ನು ನಡೆಸಬೇಕೆಂಬ ಭಾವನೆಯೂ ಮಹಿಳೆಯಲ್ಲಿ ಲೈಂಗಿಕಕ್ರಿಯೆಯ ಬಗೆಗೆ ನಿರಾಸಕ್ತಿಯನ್ನುಂಟುಮಾಡಬಹುದು. ಅದೂ ಅಲ್ಲದೆ ಯಾರೋ ಹೇಳಿದ ಕಟ್ಟುಕತೆಗಳಿಂದ, ಟ್ಯೂಬೆಕ್ಟಮಿಯಾದವರೂ ಒಮ್ಮೊಮ್ಮೆ ಗರ್ಭಧರಿಸುವುದುಂಟು ಎಂಬ ಭಾವನೆಯೂ ಲೈಂಗಿಕತೆಯ ಬಗ್ಗೆ ಆಸಕ್ತಿಯನ್ನು ಕುಂದಿಸಬಹುದಷ್ಟೇ ಹೊರತು ಟ್ಯೂಬೆಕ್ಟಮಿ ಶಸ್ತ್ರಕ್ರಿಯೆಯಿಂದಲ್ಲ.

ಒಮ್ಮೊಮ್ಮೆ ಈ ಶಸ್ತ್ರಕ್ರಿಯೆಗೆ ಒಳಗಾದರೂ ಗರ್ಭಧರಿಸಿದ ನಿದರ್ಶನಗಳಿವೆ ಎಂಬುದಕ್ಕೆ ಕಾರಣಗಳನ್ನು ಹೀಗೆ ಕೊಡಬಹುದು.

೧. ಶಸ್ತ್ರಕ್ರಿಯೆಯನ್ನು ಮಾಡಿಸಿಕೊಂಡ ಸಮಯದಲ್ಲಿ ಶಸ್ತ್ರಕ್ರಿಯೆಗೆ ಒಳಗಾದ ಮಹಿಳೆ ಗರ್ಭಿಣಿಯಾಗಿದ್ದಿರಬಹುದು. ಗರ್ಭಧರಿಸಿ ಎರಡು ವಾರಗಳಾಗಿದ್ದರೆ ತಿಳಿಯುವುದಿಲ್ಲ.

೨. ಗರ್ಭನಾಳಗಳನ್ನು ಸರಿಯಾಗಿ ಪತ್ತೆ ಹಚ್ಚದೇ ಇರಬಹುದು. ಪರಿಣಿತರಲ್ಲದ ವೈದ್ಯರಿದ್ದರೆ, ಗರ್ಭನಾಳವನ್ನು ಗುರುತಿಸಿ ಶಸ್ತ್ರಕ್ರಿಯೆ ಮಾಡಿದ್ದು ಸರಿಯಾಗಿರಲಿಕ್ಕಿಲ್ಲ.

೩. ಶಸ್ತ್ರಕ್ರಿಯೆಗೆ ಉಪಯೋಗಿಸಿದ ಉಪಕರಣಗಳು ಸರಿಯಾಗಿರದೇ ಇರಬಹುದು.

೪. ಒಮ್ಮೊಮ್ಮೆ ಎಷ್ಟೋ ವರ್ಷಗಳ ನಂತರ, ಗರ್ಭನಾಳದ ತುದಿಗಳು ತಾವಾಗಿಯೇ ಪುನಃ ಒಂದಕ್ಕೊಂದು ಸೇರಿಕೊಂಡು ಮರು ಸಂಪರ್ಕ ಸ್ಥಾಪಿತವಾಗಿದ್ದಿರಬಹುದು.

೫. ಆಕಸ್ಮಾತ್ತಾಗಿ ಗರ್ಭನಾಳದಲ್ಲಿ ಒಂದು ಪುಟ್ಟ ರಂಧ್ರವುಂಟಾಗಿದ್ದರೂ ಸಾಕು, ವೀರ್ಯಾಣುವು ಅಂಡಾಣುವಿನೊಂದಿಗೆ ಸೇರಿಕೊಂಡು ಗರ್ಭ ಧರಿಸಬಹುದು.

ಆದರೆ ಇಂತಹ ಪ್ರಕರಣಗಳು ನಡೆದಿರುವುದು ತೀರಾ ಕಡಿಮೆ. ಇವುಗಳನ್ನು ಆಧಾರವಾಗಿಟ್ಟುಕೊಂಡು ಟ್ಯೂಬೆಕ್ಟಮಿ ಶಸ್ತ್ರಕ್ರಿಯೆ ಮಾಡಿಸಿಕೊಳ್ಳಲು ಭಯಪಡುವ ಅಗತ್ಯವಿಲ್ಲ.

ಆದರೆ ಟ್ಯೂಬೆಕ್ಟಮಿ ಶಸ್ತ್ರಕ್ರಿಯೆಯನ್ನು ಈ ಕೆಲವು ಸಂದರ್ಭಗಳಲ್ಲಿ ಮಾಡುವುದಿಲ್ಲ:

೧. ಆಕೆ ಅತಿ ಸ್ಥೂಲಕಾಯದ ಅಥವಾ ಬೊಜ್ಜುಳ್ಳ ಮಹಿಳೆಯಾಗಿದ್ದರೆ.

೨. ಅವಳಿಗೆ ಯಾವುದೇ ವಿಧವಾದ, ಪ್ರಜನನ ಅಂಗಗಳ ಅಥವಾ ಸಂತಾನವನ್ನುಂಟುಮಾಡುವ ಅಂಗಗಳಲ್ಲಿ ಸೋಂಕುರೋಗ ತಗಲಿದ್ದರೆ.

೩. ಹೃದ್ರೋಗ, ಅಧಿಕ ರಕ್ತದೊತ್ತಡ, ಸಿಹಿಮೂತ್ರರೋಗ, ಆಸ್ತಮಾ ಅಥವಾ ಇನ್ನಿತರ ದೈಹಿಕ ತೊಂದರೆಗಳಿಂದ ಶಸ್ತ್ರಕ್ರಿಯೆಯ ಸಂದರ್ಭದಲ್ಲಿ ಮಹಿಳೆಗೆ

✓

ಯಾವುದೇ ತೊಂದರೆಯುಂಟಾಗುವಂತಿದ್ದರೆ, ವೈದ್ಯರು ಆಕೆಯನ್ನು ಮೊದಲೇ ಪರೀಕ್ಷೆಗಳಿಗೆ ಒಳಪಡಿಸಿ ತೀರ್ಮಾನ ತೆಗೆದುಕೊಳ್ಳುತ್ತಾರೆ.

ಈ ಶಸ್ತ್ರಕ್ರಿಯೆಯ ನಂತರದಲ್ಲಿ, ಮಕ್ಕಳೇನಾದರೂ ರೋಗಪೀಡಿತರಾದರೆ ಅಥವಾ ಸತ್ತುಹೋದರೆ ಪುನಃ ಶಸ್ತ್ರಕ್ರಿಯೆಯನ್ನು ಮಾಡಿ, ಗರ್ಭನಾಳಗಳನ್ನು ಜೋಡಿಸಿ ಮಕ್ಕಳಾಗುವಂತೆಯೂ ಮಾಡಬಹುದು.

ಇದೇ ವಿಧವಾಗಿ 'ಮಿನಿಲ್ಯಾಪ್‌ರಾಟಮಿ' ಶಸ್ತ್ರಕ್ರಿಯೆ ಮತ್ತು 'ಲ್ಯಾಪರಾಸ್ಕೋಪಿ' ಅಂದರೆ ಉದರದರ್ಶಕ ಸಂತಾನಹರಣ ಶಸ್ತ್ರಕ್ರಿಯೆಯಿಂದಲೂ ಸಂತಾನ ನಿಯಂತ್ರಣ ಸಾಧಿಸಬಹುದು. ಈ ಎರಡೂ ವಿಧಾನಗಳಿಂದ ದೊರೆಯುವ ಪರಿಣಾಮ ಒಂದೇ ತೆರನಾದದ್ದು.

ಇದರಿಂದಾಗಿ ಆಸ್ಪತ್ರೆಯಲ್ಲಿ ಶಸ್ತ್ರಕ್ರಿಯೆಯ ತರುವಾಯ ಮಹಿಳೆಯು ವಾರಗಟ್ಟಲೆ ಇರುವ ಅವಶ್ಯಕತೆಯಿಲ್ಲ. ನುರಿತ, ಪರಿಣತ ವೈದ್ಯರ ತಂಡವೇ ಈ ಶಸ್ತ್ರಕ್ರಿಯೆಯನ್ನು ಮಾಡಬೇಕಾಗಿರುವುದರಿಂದ ಹೆಚ್ಚಿನ ಜಾಗರೂಕತೆ, ಜವಾಬ್ದಾರಿಯೂ ಅವರ ಮೇಲಿರುತ್ತದೆ.

ಲ್ಯಾಪರಾಸ್ಕೋಪಿಯ ಪ್ರಯೋಜನಗಳೆಂದರೆ, ಈ ಶಸ್ತ್ರಕ್ರಿಯೆಗಾಗಿ ತಗಲುವ ಸಮಯ ಅತ್ಯಲ್ಪ. ಬಹಳವೆಂದರೆ ೫ ರಿಂದ ೧೦ ನಿಮಿಷಗಳಷ್ಟಾಗಬಹುದು. ಶಸ್ತ್ರಕ್ರಿಯೆಯಾದ ಎಂಟು ಗಂಟೆಗಳ ನಂತರ ಮನೆಗೆ ಹೋಗಬಹುದು. ಹೆಚ್ಚೆಂದರೆ ಒಂದು ದಿನದ ಮಟ್ಟಿಗೆ ಆಸ್ಪತ್ರೆಯಲ್ಲಿ ಇರಬೇಕಾಗಬಹುದು. ಹೊಲಿಗೆ ಹಾಕುವ, ಬಿಚ್ಚುವ, ಅವಕಾಶವೇ ಇಲ್ಲಿರುವುದಿಲ್ಲ. ಶಸ್ತ್ರಕ್ರಿಯೆ ನಡೆಸಿದ ಜಾಗದಲ್ಲಿ ಮಾತ್ರ ೧ ರಿಂದ ೧.೫ ಸೆಂಟಿಮೀಟರಿನಷ್ಟು ಕಲೆ ಉಳಿಯಬಹುದು.

ಇಲ್ಲಿಯೂ, ಶಸ್ತ್ರಕ್ರಿಯೆಯ ನಂತರ ಸೋಂಕುನಿರೋಧಕ ಔಷಧಿಗಳನ್ನೂ ಚುಚ್ಚುಮದ್ದುಗಳನ್ನೂ ನೀಡುವುದರಿಂದ ಸೋಂಕು ತಗಲುವ ಅಪಾಯವೂ ಕಡಿಮೆ.

ಇದೆಲ್ಲಕ್ಕಿಂತ ಮಿಗಿಲಾಗಿ, ಶಸ್ತ್ರಕ್ರಿಯೆಗೆ ಮೊದಲು ಆ ಮಹಿಳೆಯನ್ನು ಕೂಲಂಕಷವಾಗಿ ಪರೀಕ್ಷಿಸಲಾಗುವುದರಿಂದ ಯಾವುದೇ ಅನಾಹುತಗಳಿಗೂ ಅವಕಾಶವಿರುವುದಿಲ್ಲ. ರೋಗಪೀಡಿತರಿಗೆ ಶಸ್ತ್ರಕ್ರಿಯೆಯನ್ನು ಮಾಡುವುದೇ ಇಲ್ಲ. ಅಂಥವರಿಗೆ ಸಂತಾನ ನಿಯಂತ್ರಣಕ್ಕೆ ಬೇರೆಯೇ ವಿಧಾನಗಳಿವೆ.

Printed and Published by S.K. KATOTE on behalf of Loka shikshana Trust at Samyukta Karnataka Press, Koppikar Road, Hubli-580 020. (Phone: 364303): No. 2, Residency Road, Bangalore-560 025 (Phone: 2213265.)

Managing Editor: K. SHAMARAO
Registered with the Registrar of Newspaper for India under No. 3633/57.

ಲೋಕ ಶಿಕ್ಷಣ ಟ್ರಸ್ಟ್ ಗ್ರಂಥಮಾಲೆಯ ಪ್ರಕಟಣೆಗಳು

ಹುಬ್ಬಳ್ಳಿ-ಬೆಂಗಳೂರು

	ಪುಸ್ತಕದ ಹೆಸರು	ಲೇಖಕರ ಹೆಸರು	ಬೆಲೆ
೧.	ನನಗೆ ನಾನೇ ಮಾದರಿ	ಶ್ರೀ ಬಿ.ಡಿ. ಜತ್ತಿ	ರೂ. ೪೦-೦೦
೨.	ಶ್ರೀ ರಾಮದಾಸರು ಹೇಳಿದ ಕಥೆಗಳು	ಶ್ರೀ ಬಿ.ಡಿ. ಜತ್ತಿ	,, ೧೫-೦೦
೩.	ಕೃಷ್ಣಾವತಾರ ಭಾಗ-೧	ಮೂಲ: ಶ್ರೀ ಕೆ.ಎಂ. ಮುನ್ಷಿ ಅನುವಾದ: ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ	,, ೨೦-೦೦
೪.	ಕೃಷ್ಣಾವತಾರ ಭಾಗ-೨	-"-	,, ೨೫-೦೦
೫.	ಕೃಷ್ಣಾವತಾರ ಭಾಗ-೩	-"-	,, ೨೦-೦೦
೬.	ಕೃಷ್ಣಾವತಾರ ಭಾಗ-೪	-"-	,, ೨೦-೦೦
೭.	ಕೃಷ್ಣಾವತಾರ ಭಾಗ-೫	-"-	,, ೨೫-೦೦
೮.	ಕೃಷ್ಣಾವತಾರ ಭಾಗ-೬	-"-	,, ೨೦-೦೦
೯.	ಕೃಷ್ಣಾವತಾರ ಭಾಗ-೭	-"-	,, ೨೦-೦೦
೧೦.	ಕೃಷ್ಣಾವತಾರ ಭಾಗ-೮	-"-	,, ೨೫-೦೦
೧೧.	ಕೃಷ್ಣಾವತಾರ ಭಾಗ-೯, ೧೦	-"-	,, ೨೦-೦೦
೧೨.	ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳವಳಿ	ಡಾ. ಸೂರ್ಯನಾಥ ಕಾಮತ	,, ೪೫-೦೦
೧೩.	ವಂದೇಮಾತರಂದಿಂದ ಜನಗಣಮನದವರೆಗೆ	ಶ್ರೀ ವಿ.ಎಚ್. ದೇಸಾಯಿ	,, ೫೦-೦೦
೧೪.	ಗೀತಾ ನಿತ್ಯಪಾಠ	ಶ್ರೀ ರಂಗನಾಥ ದಿವಾಕರ	,, ೩-೦೦
೧೫.	ಶ್ರೀ ಕೃಷ್ಣಾವತಾರದ ಕೊನೆಯ ಗಳಿಗೆಗಳು	ಪ್ರೊ. ಕೆ.ಎಸ್. ನಾರಾಯಣಾಚಾರ್ಯ	,, ೨೦-೦೦
೧೬.	ಗಾಂಧೀಜಿ ನಾನು ಕಂಡಂತೆ	ಶ್ರೀ ರಂಗನಾಥ ದಿವಾಕರ	,, ೧೦-೦೦
೧೭.	ನೆನಪಿನಂಗಳದಲ್ಲಿ	ಶ್ರೀ ಜಿ.ಎಂ. ಪಾಟೀಲ	,, ೨೦-೦೦

ವಿ.ಸೂ. ಪುಸ್ತಕ ಮಾರಾಟಗಾರರಿಗೆ ಕನಿಷ್ಠ ೧೦ ಪ್ರತಿಗಳನ್ನು ತರಿಸಿದರೆ ಶೇ. ೨೫ರಷ್ಟು ಕಮೀಷನ್ ಕೊಡಲಾಗುವದು. ಪುಸ್ತಕಗಳು ಬೇಕಾದಲ್ಲಿ ತಕ್ಷಣ ಕೆಳಕಂಡ ವಿಳಾಸಕ್ಕೆ ಎಲ್ಲ ವಿವರಗಳೊಂದಿಗೆ ಡಿ.ಡಿ. ಅಥವಾ ಮನಿಯಾರ್ಡರ್ ಮೂಲಕ ಬರೆದು ತಿಳಿಸುವುದು. ಅಂಚೆ ವೆಚ್ಚ ಪ್ರತ್ಯೇಕ. ವಿ.ಪಿ.ಪಿ. ಸೌಲಭ್ಯ ಇರುವುದಿಲ್ಲ.

ಪ್ರಸಾರಾಂಗ ವ್ಯವಸ್ಥಾಪಕರು

ಸಂಯುಕ್ತ ಕರ್ನಾಟಕ, ಕೊಪ್ಪೀಕರ ರಸ್ತೆ, ಹುಬ್ಬಳ್ಳಿ-೨೦.

ಸಂಯುಕ್ತ ಕರ್ನಾಟಕ, ನಂ. ೨, ರೆಸಿಡೆನ್ಸಿ ರಸ್ತೆ, ಬೆಂಗಳೂರು-೨೫.

KASTURI, Kannada Digest Reg No. KRNG. 43, Licence No. L2120. WPP No. 33 Price Rs. 6-

